TEXT PROBLEM WITHIN THE BOOK ONLY



# ಮಂದಾಕಿನಿ

ಗೋ. ನಾ. ಕರ್ಜಗಿ

೨ ರೂ.

UNIVERSAL
LIBRARY
OU_202354
UNIVERSAL
LIBRARY

**OSMANIA UNIVERSITY LIBRARY**

Call No. K83 K18M Accession No. K 5897

Author [illegible]

Title [illegible] 1945

This book should be returned on or before the date last marked below.

# ಮಂದಾಕಿನಿ

(ಐತಿಹಾಸಿಕ ಕಾದಂಬರಿ)

ಲೇಖಕರು:

**ಗೋ. ನಾ. ಕರ್ಜಗಿ**

(ಸೀಚ ಇನಾಮದಾರ, ಅಲ್ಲಾಹೋ ಅಕಬರ ಮೊದಲಾದ
ಪುಸ್ತಕಗಳ ಕರ್ತರು)

ಪ್ರಕಾಶಕರು:

**ಭಿ. ಪ. ಕಾಳೆ,**

ಶ್ರೀ ಶೇಷಾಚಲ ಗ್ರಂಥಮಾಲೆ,

**೩೦೦ ಮದಿಹಾಳ, ಧಾರವಾಡ**

೨ನೇ ಮುದ್ರಣ

**೧೯೪೫**

ಬೆಲೆ ೨ ರೂ. Price 2 Rs.

# ಪ್ರಕಾಶಕರ ಎರಡು ಮಾತುಗಳು

'ಏಕ ಟಾಕಾವಾಲಾ' ಎಂದು ಬಂಗಾಲ ಪ್ರಾಂತದಲ್ಲಿ ಪ್ರಸಿದ್ಧಿ ಹೊಂದಿದ ಭಾದುಡಿಯ ಅರಸನಾದ ಗಣೇಶನಾರಾಯಣನಿಗೆ ಸಂಬಂಧಿಸಿದ ಕಥಾನಕವಿದು. ಇದರಲ್ಲಾದರೂ "ಅಲ್ಲಾ ಹೋ ಅಕಬರ" ಪುಸ್ತಕದೊಳಗೆ ವರ್ಣಿಸಿದಂತೆ ಹಿಂದೂ-ಮುಸಲ್ಮಾನರ ಐಕ್ಯದ ಸಲುವಾಗಿ ಹೋರಾಡಿದ ಸಂಗತಿಯೇ ಇದೆ.

ಮುಸಲ್ಮಾನರು ಹಿಂದುಸ್ಥಾನವನ್ನು ಪ್ರವೇಶಿಸಿದಾಗಿನಿಂದ ಹಿಂದುಗಳು ತಮ್ಮ ಹುಟ್ಟುಗುಣವಾದ ಪರಮತ ಸಹಿಷ್ಣುತೆಯಿಂದ ಅವರೊಡನೆ ಪ್ರತಿಯೊಂದು ಪ್ರಸಂಗದಲ್ಲಿ ಐಕ್ಯದಿಂದ ನಡೆಯಲು ಪ್ರಯತ್ನಿಸುತ್ತಿದ್ದರೂ, ಅದಕ್ಕೆ ಇಂದಿಗೂ ಯಶಸ್ಸು ದೊರೆತಿಲ್ಲ. ಮುಂದೆಂದು ದೊರೆಯುವದೋ ತಿಳಿಯುವಂತಿಲ್ಲ. ಆದರೂ ನಮ್ಮ ಹಿಂದುಗಳು ಹಿಂದು-ಮುಸಲ್ಮಾನರಲ್ಲಿ ಐಕ್ಯವನ್ನುಂಟು ಮಾಡುವ ಪ್ರಯತ್ನಕ್ಕೆ ಬೇಸರಿಯುವದಿಲ್ಲ!

ಪ್ರಸ್ತುತ ಕಥಾನಕದಲ್ಲಿಯ ಮಂದಾಕಿನಿ, ಕಿರಣಬಾಲೆ, ಗಣೇಶ ನಾರಾಯಣ, ತ್ರಿಪುರಾದೇವಿ, ಜೋನಾಬಖಾನ ಮುಂತಾದ ಸದ್ಗುಣಿಗಳೂ ನಶೀರತ, ಕಿಶೋರಿಮೋಹನ ಮುಂತಾದ ಹೀನಗುಣಿಗಳೂ ವಾಚಕರ ವೃತ್ತಿಸುಧಾರಣೆಗೆ ತಕ್ಕ ವ್ಯಕ್ತಿಗಳಾಗಿವೆ.

ಶ್ರೀ ಶೇಷಾಚಲ ಗ್ರಂಥಮಾಲೆಯ ದ್ವಾರಾ ಇಂಥ ಉತ್ತಮ ಪುಸ್ತಕಗಳನ್ನು ಪ್ರಕಟಿಸಿ ನಾವು ಕನ್ನಡ ವಾಚಕವೃಂದದ ಸೇವೆಯನ್ನು ಯಥಾಶಕ್ತಿ ಮಾಡುತ್ತಿರುವೆವು. ವಾಚಕರ ಪ್ರೋತ್ಸಾಹವು ಹೆಚ್ಚಿದಂತೆ ಪುಸ್ತಕಗಳ ಅಂತರ್ಬಹಿರಂಗಗಳು ಮನಮೋಹಕವಾಗುವಂತೆ ಪ್ರಯತ್ನಿಸುವೆವು.

ಈ ಪುಸ್ತಕವನ್ನು ಬರೆದು ನಿಃಸ್ವಾರ್ಥತೆಯಿಂದ ನಮಗೆ ಕೊಟ್ಟದ್ದಕ್ಕಾಗಿ ನಾವು ಲೇಖಕರಿಗೆ ತುಂಬಾ ಆಭಾರಿಯಾಗಿರುತ್ತೇವೆ.

— **ಪ್ರಕಾಶಕ**

# ಮಂದಾಕಿನಿ.

'ಅಯ್ಯೋ, ಸತ್ತೆನು-ಸತ್ತೆನು, ಯಾರು? ಎಲ್ಲಿರುವಿರಿ? ನನ್ನನ್ನು ರಕ್ಷಿಸಿರಿ.'

"ಇದೇನು, ಯಾರೋ ಸಂಕಟದಲ್ಲಿ ಸಹಾಯ ಬೇಡುತ್ತಿರುವರು. ಇದೇನು ಗೌಡರಾಜ್ಯದ ಪ್ರತಿಧ್ವನಿಯಿರಬಹುದೆ? ಆದಿಶೂರನ ಗೌಡವು! ಬಲ್ಲಾಳಸೇನರ ಗೌಡವು!! ಭಾರತ ದೇಶದ ಲಲಾಟಸ್ವರೂಪ ಗೌಡವು!!! ಮುಸಲ್ಮಾನರಿಂದ ಅಪಮಾನಿತವಾಗಿ, ಕಾತರಸ್ವರದಿಂದ ಮೊರೆ ಇಡುತ್ತಿರಬಹುದೆ? ಈ ರಕ್ಷಣೆಯ ಮೊರೆಯ ಆರ್ತಸ್ವರವು ಸ್ವಾಭಿಮಾನವಿಲ್ಲದ ಹಿಂದೂ ಜನರನ್ನು ಕುರಿತು ಇರಬಹುದೆ?"

ಈ ಸ್ವರವು ಪಾಂಡುವರ್ಧನ ಪಟ್ಟಣದ ಉತ್ತರ ಸೀಮಾಂತರದಲ್ಲಿ ಕೇಳಬಂದಿತು. ಆಗ ರಾತ್ರಿಯ ಪ್ರಥಮ ಪ್ರಹರದ ಆರಂಭದ ಸಮಯವು. ಕಾಳಿಂದೀ ನದಿಯ ದಂಡೆಯ ಮೇಲೆ ಗೌಡ ರಾಜ್ಯದ ಕೀರ್ತಿಯು ಅವಶೇಷವಾದ ಒಂದು ವೀರಗಲ್ಲು ನಿಂತಿತ್ತು. ಅದರ ಹತ್ತರ ಶಸ್ತ್ರಾಸ್ತ್ರಸಜ್ಜಿತನಾದ ಒಬ್ಬ ವೀರ ಯುವಕನು ನಿಂತಿದ್ದನು. ಅವನು ಗಂಭೀರವಾದ ಚಿಂತೆಯಿಂದ ಆತ್ಮಗತ ವಿಚಾರದಲ್ಲಿ ಮೈಮರೆತಿದ್ದನು. ಸಮೀಪದಲ್ಲಿಯೇ ಜೀನು ಹಾಕಿದ್ದ ಆತನ ಕುದುರೆಯು. ನಾಲ್ಕೂ ದಿಕ್ಕಿನಲ್ಲಿ ಶಾಂತತೆಯನ್ನು ಭಂಗಪಡಿಸಿ ಈ ಆರ್ತಸ್ವರವು ಕೇಳಿಸಿತು.

ಆ ವೀರ ಪುರುಷನು ಆ ಕರುಣಾಜನಕ ಸ್ವರವನ್ನು ಕೇಳಿ ಚಮಕಿತನಾದರೂ ಆತ್ಮಗತ ವಿಚಾರದಲ್ಲಿಯೇ, "ಇದೇನು? ವಂಗಮಾತೆಯ ರೋದನಧ್ವನಿಯು ಕೇಳಬರುತ್ತದೆ. ಮಾತೇ, ದುಷ್ಟ ಮುಸಲ್ಮಾನರ ಅತ್ಯಾಚಾರದಿಂದ ಕಾತರಳಾಗಿ, ಶೋಕ ಮಾಡುತ್ತಿರುವಿಯೇನು? ನೀನು ಈ ಧ್ವಂಸಾವಶೇಷ ಗೌಡಭೂಮಿಯಲ್ಲಿ ಅಡಗಿಕೊಂಡಿದ್ದರೂ, ದುಷ್ಟರು ನಿನ್ನ ಮೇಲೆ ಬಲಾತ್ಕಾರವನ್ನು ಮಾಡುತ್ತಿರುವರಲ್ಲವೇ? ಮಾತೆ, ಶಾಂತಳಾಗು! ಇನ್ನು ದುಃಖಿಸಬೇಡ!! ನಾನಂತೂ ಇನ್ನು ಈ ಅತ್ಯಾಚಾರವನ್ನು

ಸಹಿಸಲಾರೆನು. ನಾನು ಈ ಪವಿತ್ರವಾದ ಕಾಳಿಂದೀ ನದಿಯ ದಂಡೆಯ ಮೇಲೆ ಈ ಖಡ್ಗವನ್ನು ಮುಟ್ಟಿ ಪ್ರತಿಜ್ಞೆ ಮಾಡಿರುವದೇನಂದರೆ.."

ಅಷ್ಟರಲ್ಲಿ ಮೇಲಿನಂತೆ ಮತ್ತೆ:—"ಯಾರಾದರೂ ನನ್ನನ್ನು ರಕ್ಷಿಸಿರಿ-ರಕ್ಷಿಸಿರಿ" ಎಂದು ಒದರಿದ್ದು ಕೇಳಬಂತು. ಆಗ ಆ ತರುಣ ಯುವಕನ ತಂದ್ರಾಭಂಗವಾಯಿತು. ಅವನು ನಾಲ್ಕೂ ದಿಕ್ಕಿಗೆ ದಿಟ್ಟಿಸಿ ನೋಡಿ, ನಂತರ ಚಪಲತನದಿಂದ ಹಾರಿ ಕುದುರೆಯ ಮೇಲೆ ಕುಳಿತು, ಯಾವ ದಿಕ್ಕಿನಿಂದ ಆರ್ತಸ್ವರವು ಕೇಳಬಂದಿತೋ, ಆ ದಿಕ್ಕಿನ ಕಡೆಗೆ ತನ್ನ ಕುದುರೆಯನ್ನು ವೇಗದಿಂದ ಓಡಿಸಿದನು. ತುಸು ಹೊತ್ತಿನಲ್ಲಿ ಅವನು ಕಾಳಿಂದೀ ನದಿಯ ದಂಡೆಯ ಮೇಲಿರುವ ಮೇಲುಪ್ಪರಿಗೆಯ ಒಂದು ಹಳೇ ಮನೆಯ ಅಂಗಳಕ್ಕೆ ಬಂದನು. ಅಲ್ಲಿ ಇಬ್ಬರು ತರುಣ ಯುವಕರು ಒಬ್ಬ ಚಿಕ್ಕ ಬಾಲಿಕೆಯ ಶೀರೆಯನ್ನು ಹಿಡಿದು ಎಳೆಯುತ್ತ ಅವಳನ್ನು ಬತ್ತಲೆ ಮಾಡುವ ಪ್ರಯತ್ನದಲ್ಲಿದ್ದರು. ಆ ಬಾಲಿಕೆಯು 'ಅಯ್ಯೋ ರಕ್ಷಿಸಿರಿ! ನನ್ನ ಮಾನ ಉಳಿಸಿರಿ!' ಎಂದು ಚೀರುತ್ತಿದ್ದಳು.

ಆ ಯುವಕರಲ್ಲಿ ಒಬ್ಬನು ಮುಸಲ್ಮಾನನು. ಮತ್ತೊಬ್ಬನು ಹಿಂದುವು. ಇಬ್ಬರ ಉಡಿಗೆ-ತೊಡಿಗೆಗಳೂ ಬೆಲೆಯುಳ್ಳವು. ಇಬ್ಬರ ನಡುವಿನಲ್ಲಿಯ ರತ್ನ ಖಚಿತವಾದ ಒರೆಗಳಲ್ಲಿಯೂ ಖಡ್ಗಗಳು. ಅವರಿಬ್ಬರಲ್ಲಿ ಆ ಮುಸಲ್ಮಾನ ತರುಣನ ಆಡಂಬರವು ಹೆಚ್ಚು ಒಡೆದು ಕಾಣಿಸುತ್ತಿತ್ತು. ಹೌದು, ಅವನೇನು ಸಾಮಾನ್ಯ ಮನುಷ್ಯನೇ? ಯಾವನ ಅತ್ಯಾಚಾರದಿಂದ ಹಿಂದೂ ತರುಣಿಯರು ಅರಣ್ಯ, ಪರ್ವತ, ಗವಿಗಳನ್ನು ಸೇರಿ, ಉಪವಾಸದಿಂದ ಕಾಲಹರಣ ಮಾಡುತ್ತಿದ್ದರೋ, ಆ ಸುಲ್ತಾನ ಪುತ್ರ ನಶೆರಿತ್‌ಶಹನೇ ಅವನು. ಇವನು ಬಂಗಾಲದ ನವಾಬನಾದ ಸೈಫುದ್ದೀನನ ಮಗನು. ಸೈಫುದ್ದೀನನು ಬೇನೆಯಿಂದ ಹಾಸಿಗೆ ಹಿಡಿದಿದ್ದನು. ಅವನು ತನ್ನ ರಾಜ್ಯ ಕಾರಭಾರವನ್ನು ಮಂತ್ರಿಗೆ ಒಪ್ಪಿಸಿ, ಈ ಅತ್ಯಾಚಾರದ ಕೆಲಸವನ್ನು ಮಗನಿಗೆ ಒಪ್ಪಿಸಿದ್ದನು. ಒಂದು ವೇಳೆ ಸೈಫುದ್ದೀನನು ಒಪ್ಪಿಸದಿದ್ದರೂ ನಶೆರಿತನು ತಾನೇ ಆ ಭಾರವನ್ನು ವಹಿಸಿಕೊಂಡಿದ್ದನು.

ನಶೆರಿತನ ಸಂಗಡ ಇದ್ದ ಹಿಂದುವು ಕಿಶೋರಿ ಮೋಹನನು. ಇವನ ವಯಸ್ಸು ೨೪–೨೫ ವರ್ಷಗಳು. ಬಣ್ಣವು ಕೆಂಪದಾದರೂ ಕುರೂಪಿಯು.

ಅವನು ಗೌಡ ರಾಜ್ಯದಲ್ಲಿಯ ಒಬ್ಬ ಶ್ರೀಮಂತ ಗೃಹಸ್ಥನ ಮಗನು. ಇವನಿಗೆ ಭೂ-ಸಂಪತ್ತಿಯು ವಿಶೇಷವಿರದಿದ್ದರೂ, ಧನವಂತನಾದ್ದರಿಂದಲೇ ಸುಲ್ತಾನಪುತ್ರನ ಗೆಳೆಯನಾಗಿದ್ದನು. ಇದುವರೆಗಿನ ಸುಲ್ತಾನಪುತ್ರನ ಪ್ರತಿಯೊಂದು ಪಾಪಕಾರ್ಯದಲ್ಲಿ ಈ ಕಿಶೋರಿ ಮೋಹನನು ಸಮಭಾಗಿಯಾಗಿದ್ದನು.

ಆ ಬಾಲಕಿಯ ಹೆಸರು ಮಂದಾಕಿನಿಯು. ಇವಳು ತನ್ನ ತಂದೆಯ ಸಂಗಡ ತನ್ನ ಭಾವೀ ಪತಿಯ ಮನೆಗೆ ಹೊರಟಿದ್ದಳು. ಪರಿವಾರದಿಂದೊಡಗೂಡಿದ ಆ ಪಾಪಕರ್ಮಿಗಳ ಕಣ್ಣಿಗೆ ಈ ಪಿತಾ-ಪುತ್ರಿಯರು ಬಿದ್ದಕೂಡಲೆ, ನಶೆರಿತನು ಆ ಬಾಲಕಿಯ ತಂದೆಯನ್ನು ಕಾಳಿಂದೀ ನದಿಯಲ್ಲಿ ನೂಕಿಸಿ, ಆ ತರುಣಿಯ ಸತೀತ್ವ ಭಂಗದ ಪ್ರಯತ್ನ ನಡಿಸಿದನು. ಚಿಕ್ಕ ಬಾಲಕಿಯಾದ ಮಂದಾಕಿನಿಯು ಆ ನರಪಿಶಾಚಿಗಳಿಗೆ ಅನೇಕ ಬಗೆಯ ವಿನಯದ ಮಾತುಗಳಿಂದ ಬೇಡಿಕೊಂಡಳು. ಧರ್ಮದ-ದೇವರ ಆಣೆಯನ್ನಿಟ್ಟಳು; ಆದರೆ ಅವರು ಅವಳ ಮಾತಿಗೆ ಕಿವಿಗೊಡಲಿಲ್ಲ. ಕಡೆಗೆ ಅವಳು ಪಂಜರದಲ್ಲಿ ಸಿಕ್ಕ ಹೆಣ್ಣು ಹುಲಿಯಂತೆ ಆವೇಶವನ್ನು ಸಹ ತೋರಿಸಿದಳು; ಆದರೂ ಅದರ ಉಪಯೋಗವಾಗಲಿಲ್ಲ. ಕಡೆಗೆ ಅವಳು ಉಪಾಯಗಾಣದೆ, ಮೇಲಿನಂತೆ ಆರ್ತಸ್ವರದಿಂಡ ಅನ್ಯರ ಸಹಾಯವನ್ನು ಅಪೇಕ್ಷಿಸಿ ಚೀರಿದಳು.

ಆ ಅರಣ್ಯದ ಮಧ್ಯದಲ್ಲಿ ಅವಳ ಕೂಗನ್ನು ಯಾರು ಕೇಳಬೇಕು? ಒಂದು ವೇಳೆ ಕೇಳಿದರೂ ಕೂಡ ನವಾಬಪುತ್ರನ ವಿರುದ್ಧವಾಗಿ ಅವಳಿಗೆ ಸಹಾಯ ಮಾಡುವವರಾದರೂ ಯಾರು? ಕಡೆಗೆ ಅವಳು ಉಟ್ಟ ವಸ್ತ್ರವು ಛಿನ್ನ-ವಿಚ್ಛಿನ್ನವಾಗಿ ಅವಳ ದೇಹದಿಂದ ಬೇರೆಯಾಗುವ ಪ್ರಸಂಗ ಒಂದಿತು. ಇನ್ನು ಈ ನೀಚರು ತನ್ನ ಪಾತಿವ್ರತ್ಯವನ್ನು ಭಂಗಮಾಡುವರೆಂದು ತಿಳಿದು ಅವಳು ಕಾತರಸ್ವರದಿಂದ, "ಯಾರು? ಎಲ್ಲಿರುವಿರಿ? ನನ್ನನ್ನು ರಕ್ಷಿಸಿರಿ" ಎಂದು ಗಟ್ಟಿಯಾಗಿ ಚೀರಿದಳು.

ಅವಳ ಸ್ವರವು ಹವೆಯಲ್ಲಿ ಕೂಡುವಷ್ಟರಲ್ಲೇ ಪ್ರತಿಯಾಗಿ 'ಅಂಜಬೇಡ-ಅಂಜಬೇಡ' ಎಂಬ ಸ್ವರವು ಕೇಳಬಂತು.

ಆಗ ಮೂವರು ಹಿಂದಿರುಗಿ ನೋಡಿದರು. ಕಿಶೋರಿ ಮೋಹನನೂ, ನಶೆರಿತನೂ ದಿಟ್ಟಿಸಿ ನೋಡಲು, ಕಾಲಾಂತಕನಿಗೆ ಸಮಾನನಾದ ಗಣೇಶ

ನಾರಾಯಣನು ಕುದುರೆಯನ್ನು ಓಡಿಸುತ್ತ ತೀರ ಸಮೀಪಕ್ಕೆ ಬಂದನು. ಗಣೇಶನಾರಾಯಣನ ಪರಿಚಯವಿಲ್ಲದವರು ಆ ಗೌಡ ರಾಜ್ಯದಲ್ಲಿಯೇ ಇದ್ದಿಲ್ಲ. ನಶೀರಿತನು ಗಣೇಶನಾರಾಯಣನನ್ನು ತಿರಸ್ಕಾರದಿಂದ ನೋಡ ಹತ್ತಿದನು. ಗಣೇಶನಾರಾಯಣನು ಅದನ್ನು ಲಕ್ಷಿಸದೆ, ಒಮ್ಮೆಲೆ ಕುದುರೆ ಯಿಂದ ಜಿಗಿದು, ಕಿಶೋರೀಮೋಹನನನ್ನು ಕಾಲಿನಿಂದ ಒದ್ದು, ನಶೀರಿತನ ಕುತ್ತಿಗೆಯನ್ನು ಒತ್ತಿ ಹಿಡಿದು ಜೋರಿನಿಂದ ಅಲ್ಲಾಡಿಸಲು, ಅವನ ಬೆಲೆ ಯುಳ್ಳ ಮುಂಡಾಸವು ಗಣೇಶನಾರಾಯಣನ ಕಾಲ ಕೆಳಗೆ ಬಿತ್ತು. ಗಣೇಶ ನಾರಾಯಣನು ಅದನ್ನು ಎಡಗಾಲಿನಿಂದ ತುಳಿದು—"ನಶೀರಿತ್, ಇಂದು ನಿನ್ನ ಶಿರವನ್ನು ಈ ಪ್ರಕಾರ ತುಳಿದರೇ ನನ್ನ ಕ್ರೋಧವು ಶಾಂತವಾಗು ವದು" ಎಂದನು.

ನಶೀರಿತನು ಸಿಟ್ಟಿನಿಂದ ನಡುಗುತ್ತ-ನಡುಗುತ್ತ:—"ಗಣೇಶನಾರಾ ಯಣಾ, ಅದು ಅಸಂಭವವು. ಇಂದು ನಿನ್ನ ಶಿರಸ್ಸೇ ಆ ಪ್ರಕಾರ ತುಳಿಯು ಲ್ಪಡುವದು" ಎಂದನು; ಮತ್ತು ತನ್ನ ಕೊರಳೊಳಗಿನ ಸರದಲ್ಲಿಯ ಸಣ್ಣ ಕೊಳಲನ್ನೂದಿದನು. ಕೂಡಲೆ ಆರು ಮಂದಿ ಸಶಸ್ತ್ರ ಪಠಾಣರು ಅಲ್ಲಿಗೆ ಬಂದರು. ನಶೀರಿತನು ಅವರಿಗೆ ಸಂಕೇತ ಮಾಡಿ, ಗಣೇಶನಾರಾಯಣನನ್ನು ಹಿಡಿದು ಕಟ್ಟಲಿಕ್ಕೆ ತಿಳಿಸಿದನು. ಕೂಡಲೇ ಪಠಾಣರು ಮುಂದುವರಿದರು. ಆಗ ಗಣೇಶನಾರಾಯಣನು ತನ್ನ ಖಡ್ಗದಿಂದ ಅವರು ಮುಂದೆ ಬರುವದನ್ನು ನಿಷೇಧಿಸಿ, ಆ ಬಾಲಕಿಯ ಕಡೆಗೆ ತಿರುಗಿ ನೋಡಿದನು. ಮಂದಾಕಿನಿಯು ಲಜ್ಜೆಯಿಂದ ಮುಖವನ್ನು ಮುಚ್ಚಿಕೊಂಡು ಭೂಮಿಯ ಮೇಲೆ ಡಬ್ಬ ಮಲಗಿದ್ದಳು. ಗಣೇಶನಾರಾಯಣನು:—"ತಂಗೀ, ನೆಲದ ಮೇಲೇಕೆ ಉರುಳಾಡುವಿಯಮ್ಮಾ? ಏಳು," ಎಂದನು. ಮಂದಾಕಿನಿಯು ಏಳಲಿಕ್ಕೆ ಪ್ರಯತ್ನ ಮಾಡಿದಳು; ಆದರೆ ಉಟ್ಟ ವಸ್ತ್ರವು ಹರಿದು ಹೋಗಿ, ಮರ್ಯಾ ದೆಯ ರಕ್ಷಣೆಯ ಮಟ್ಟಿಗೆ ಸಹ ಇರದ್ದರಿಂದ, ನಾಚಿಕೊಂಡು ಮತ್ತೆ ನೆಲ ವನ್ನಪ್ಪಿಕೊಂಡಳು. ಗಣೇಶನಾರಾಯಣನು ಅದನ್ನು ತಿಳಿದು, ತಾನು ಹೊದ್ದಿರುವ ಶಲ್ಲೆಯನ್ನು ಅವಳ ಮೇಲೆ ಚಲ್ಲಲು, ಅವಳು ಅದನ್ನುಟ್ಟು ಕೊಂಡು ಗಣೇಶನಾರಾಯಣನ ಹಿಂದೆ ಬಂದು ನಿಂತುಕೊಂಡಳು.

ಮಂದಾಕಿನಿಗೆ ಇದೀಗ ಹದಿನಾಲ್ಕು ವರ್ಷ. ಅವಳ ರೂಪ-ಯೌವ್ವನ

ಗಳು ಈಗ ತಾನೆ ಮುಂದಡಿಯಿಡಹತ್ತಿದ್ದವು; ಆದರೂ ಅವಳ ಸುಂದರ ರೂಪವು ಜನರನ್ನು ಮೋಹಗೊಳಿಸುವಂತಿತ್ತು; ಆದರೆ ಆಗ ಅವಳ ಸೌಂದರ್ಯವನ್ನುಪಭೋಗಿಸುವದಾಗದ್ದರಿಂದ, ನವಾಬಪುತ್ರ ನಶೆರಿತನು ಕ್ರೋಧದಿಂದ, ತನ್ನ ಸೈನಿಕರಿಗೆ ಮತ್ತೊಮ್ಮೆ:—'ಈ ಕಾಫರನನ್ನು ಸೆರೆ ಹಿಡಿದು ಕಟ್ಟಿರಿ,' ಎಂದು ಆಜ್ಞೆ ಮಾಡಿದನು. ಕೂಡಲೆ ಸೈನಿಕರು ಮುಂದುವರಿದರು.

ಗಣೇಶನಾರಾಯಣ:—ನನ್ನನ್ನು ಸೆರೆ ಹಿಡಿಯಿರಿ; ನಾನು ಅಡ್ಡಿ ಮಾಡುವದಿಲ್ಲ; ಆದರೆ ಸ್ವಲ್ಪ ತಡೆಯಿರಿ. ಈ ಬಾಲಕಿಯನ್ನು ನಿರಾಪದ ಸ್ಥಳದಲ್ಲಿರಿಸಿ ಬರುವೆನು, ಎಂದನು.

ನಶೆರಿತ:—ನೆವ ತೆಗೆದು ಓಡಿ ಹೋಗಬೇಕೆಂದು ಭಾವಿಸಿರುವೆಯೇನು? ಗಣೇಶನಾರಾಯಣ, ಅದು ಅಶಕ್ಯವು. ತಿಳಿಯಿತೇ?

ಗಣೇಶ:—ಓಡುವಂಥ ಹೇಡಿಯಾಗಿದ್ದರೆ ನಾನೇಕೆ ಇಲ್ಲಿಗೆ ಬರಲಿ? ಈ ಬಾಲಕಿಯನ್ನು ಸುರಕ್ಷಿತ ಸ್ಥಳದಲ್ಲಿಡುವವರೆಗೆ ನನ್ನನ್ನು ಸೆರೆಹಿಡಿಯುವ ಸಾಮರ್ಥ್ಯವು ನಿಮ್ಮದಲ್ಲ. ತಿಳಿಯಿತೇ? ಎಂದನು.

ನಶೆರಿತ:—ಎಷ್ಟು ಗರ್ವವೋ ನಿನಗೆ? ಮಾತಿನಿಂದಲೇ ನಮ್ಮೆಲ್ಲರನ್ನು ಮೋಸಗೊಳಿಸಬೇಕೆಂದು ಮಾಡಿರುವಿಯಾ? ಬಾ, ಮುಂದಕ್ಕೆ. ನಿನ್ನ ಸಾಮರ್ಥ್ಯವೆಷ್ಟಿರುವದೆಂಬದನ್ನು ನೋಡುತ್ತೇನೆ, ಎಂದು ಒರೆಯಿಂದ ಖಡ್ಗವನ್ನು ಹಿರಿದನು.

ಗಣೇಶ:—ನಶೆರಿತಶಹಾ, ಯುದ್ಧಕ್ಷೇತ್ರವು ರಂಗಮಹಾಲೆಂದು ಭಾವಿಸಿರುವಿಯೇನು? ಮೂರ್ಖಾ, ಹಿಂದಕ್ಕೆ ಸರಿದು ನಿಲ್ಲು. ಯುದ್ಧದ ತಿಂಡಿಯಿದ್ದರೆ ಮಲ್ಲಯುದ್ಧಕ್ಕೆ ಸಿದ್ಧನಾಗು. ಚಿಕ್ಕ ಬಾಲಕಿಯ ಮೇಲೆ ಶೂರತನವನ್ನು ತೋರಿಸುವ ಹೇಡಿಯಾದ ನೀನು ವೀರನೇ?

ನಶೆರಿತ:—ರಾಜದ್ರೋಹಿ! ಕಾಫರ!! ನಿನ್ನನ್ನು ಶಿಕ್ಷಿಸದೆ ಹಾಗೆಯೇ ಬಿಡುವೆನೆಂದು ತಿಳಿದಿರುವಿಯೇನು? ಬಾ ಮುಂದಕ್ಕೆ ನೋಡೋಣ, ಎಂದು ಗಣೇಶನಾರಾಯಣನ ಮೇಲೆ ಏರಿ ಹೋದನು.

ಗಣೇಶನಾರಾಯಣನು ಅವನ ಆಕ್ರಮಣವನ್ನು ಸಹಜವಾಗಿ ತಪ್ಪಿಸಿಕೊಂಡು, ನಶೆರಿತನ ಕೈಯೊಳಗಿನ ಕತ್ತಿಯನ್ನು ಒಂದೇ ಕಡತದಿಂದ ತುಂಡರಿಸಿದನು. ಗಣೇಶನಾರಾಯಣನ ವೀರಾವೇಶವನ್ನು ನೋಡಿ,

ಕಿಶೋರಿ ಮೋಹನನು ಹಿಂದಕ್ಕೆ ಸರಿದು ನಿಂತನು. ಸೈನಿಕರು ನವಾಬಪುತ್ರನ ರಕ್ಷಣೆಗಾಗಿ ಒಮ್ಮೆಲೆ ಗಣೇಶನಾರಾಯಣನನ್ನು ಮುತ್ತಿದರು.

ಗಣೇಶನಾರಾಯಣನು ಟಣ್ಣನೆ ಜಿಗಿದು ಕುದುರೆಯನ್ನು ಹತ್ತಿ, ಮಂದಾಕಿನಿಗೆ ಹಿಂದೆ ಸರಿದು ನಿಲ್ಲಲು ಸನ್ನೆ ಮಾಡಿದನು. ಮಂದಾಕಿನಿಯು ಸರಿದು ನಿಂತಳು. ನಶೀರಿತನೂ ಕಿಶೋರಿ ಮೋಹನನೂ ಹಿಂದೆ ಸರಿದು ನಿಲ್ಲಲು, ಗಣೇಶನಾರಾಯಣನು ಸೈನಿಕರನ್ನು ಕುರಿತು ಗಟ್ಟಿಯಾಗಿ:—"ಕೇಳಿರಿ, ನವಾಬ ಮತ್ತು ಅವನ ಸೈನಿಕರ ಸಂಗಡ ನಮ್ಮದು ಇದುವರೆಗೂ ವೈರಭಾವವಿಲ್ಲ. ಈಗ ನೀವು ನನ್ನ ಮೇಲೆ ಸಾಗಿ ಬಂದರೆ ಮಾತ್ರ, ನನ್ನ ಆತ್ಮರಕ್ಷಣೆಯ ಸಲುವಾಗಿ ನಿಮ್ಮ ರಕ್ತಪಾತ ಮಾಡುವ ಪ್ರಸಂಗ ಬರುವದು. ಈ ರಕ್ತಪಾತದ ಸಲುವಾಗಿ ನೀವೇ ಅಪರಾಧಿಗಳು" ಎಂದನು.

ಸೈನಿಕರು ಅವನ ಮಾತನ್ನು ಲಕ್ಷ್ಯಕ್ಕೆ ತರಲಿಲ್ಲ. ಗಣೇಶನಾರಾಯಣನು ಒಮ್ಮೆಲೆ ತಿರುಗಿ, ಹಿಂದಿನ ಪಠಾಣರನ್ನು ಒಂದೇ ಹೊಡತದಿಂದ ಯಮಸದನಕ್ಕೆ ಕಳಿಸಿದನು. ನಂತರ ಕೈಯೊಳಗಿನ ಬರ್ಚಿಯಿಂದ ಮತ್ತೊಬ್ಬನ ಹಣೆಗೆ ಗುರಿಯಿಟ್ಟು ಚುಚ್ಚಿದನು. ಅದೇ ಪ್ರಕಾರ ಮತ್ತೊಬ್ಬನನ್ನು ಕೈಯೊಳಗಿನ ಖಡ್ಗದಿಂದ ಪರಲೋಕದ ಹಾದಿಯನ್ನು ಹಿಡಿಸಿದನು. ಮೂವರ ಮರಣದಿಂದ ಉಳಿದ ಮೂವರು ಆವೇಶದಿಂದ ಏರಿ ಬಂದರು. ಗಣೇಶನಾರಾಯಣನು ಚತುರತನದಿಂದ ಅವರ ಆಕ್ರಮಣವನ್ನು ತಪ್ಪಿಸಿಕೊಂಡು, ಮತ್ತೊಬ್ಬನನ್ನು ಪೂರ್ವಜರ ಸನ್ನಿಧಾನಕ್ಕೆ ಕಳುಹಿಸಿದನು ಆಗ ಉಳಿದ ಇಬ್ಬರು ಆತ್ಮರಕ್ಷಣೆಯ ಸಲುವಾಗಿ ಪಲಾಯನ ಸೂಕ್ತವನ್ನು ಹೇಳಿದರು. ನಂತರ ಗಣೇಶನಾರಾಯಣನು ಕಿಶೋರಿ ಮೋಹನನ ಬಳಿಗೆ ಬಂದು:—"ಹೇಡಿ, ಇನ್ನೂ ಯುದ್ಧ ಮಾಡುವ ಅಪೇಕ್ಷೆ ಇರುವದೇನು?" ಎಂದನು. ಕಿಶೋರಿ ಮೋಹನನು ಏನೂ ಮಾತನಾಡದೆ, ನಶೀರಿತನ ಹಿಂದೆ ಹೋಗಿ ನಿಂತನು. ನಶೀರಿತನು ಗಣೇಶನಾರಾಯಣನ ಮುಂದೆ ಬಂದು:—"ಗಣೇಶನಾರಾಯಣಾ!" ಎಂದನು.

ಗಣೇಶ:—ನವಾಬಪುತ್ರ, ಮತ್ತೇನು? ಅಪ್ಪಣೆಯಾಗಲಿ.

ನಶೀರಿತ:—ಈ ಅಪಮಾನವನ್ನು ನಾನು ಕ್ಷಮಿಸುವೆನೆಂದು ಮನಸ್ಸಿನಲ್ಲಿ ಭಾವಿಸಬೇಡ. ತಿಳಿಯಿತೇ?

ಗಣೇಶ:—ಬಾಘುಡಿ ರಾಜಮನೆತನವು ಎಂದೂ ಯಾರಿಗೂ ಕ್ಷಮೆ ಬೇಡಿಲ್ಲ. ತಿಳಿಯಿತೇ ?

ನಶೆರಿತ:—ಇಂದಿನಿಂದ ನಾನು ನಿನ್ನ ಚಿರಶತ್ರುವು. ನೆನಪಿನಲ್ಲಿಡು.

ಗಣೇಶ:—ಏನೂ ಅಡ್ಡಿಯಿಲ್ಲ. ಈ ಗಣೇಶನಾರಾಯಣನು ಎಂದೂ ಯಾರಿಗೂ ಅಂಜುವವನಲ್ಲ. ನಶೆರಿತ್, ನಿನಗೆ ಸಾಧ್ಯವಾದದ್ದನ್ನು ಮಾಡಿಕೋ.

ನಶೆರಿತ:—ಒಳ್ಳೇದು. ಮುಂದೆ ಒಂದು ದಿನ ನಿನಗೆ ಇದರ ಫಲವು ಸಿಗುವದು.

ಗಣೇಶ:—ನಾನು ಯಾವಾಗಲೂ ಸಿದ್ಧನಾಗಿರುವೆನು; ಆದರೆ ನನ್ನ ದುರ್ದೈವವು..ನೀನು ನವಾಬಪುತ್ರನಾಗಿರದಿದ್ದರೆ ಇಂದು ನಿನಗೆ....

ನಶೆರಿತ:—ನನಗೇನು ಮಾಡುತ್ತಿದ್ದಿ ?

ಗಣೇಶ:—ಹಿಂದೂ ಕುಲಸ್ತ್ರೀಯರನ್ನು ಒಯ್ಯುವ ನಿನಗೆ ಯಾವ ಫಲ ಸಿಗುತ್ತಿತ್ತೆಂಬದನ್ನು ತೋರಿಸುತ್ತಿದ್ದೆನು. ಉಪಾಯವಿಲ್ಲ, ಹೀಗೆಂದು ಮಂದಾಕಿನಿಯನ್ನು ಕರೆದುಕೊಂಡು ನಡೆದನು.

## ( ೨ )

ಗಣೇಶನಾರಾಯಣನು ಬಾಘುಡಿ ರಾಜ್ಯದ ಅರಸನು. ಬಾಘುಡಿ ರಾಜ್ಯದ ರಾಜಧಾನಿಯ ಹೆಸರು ಸಪ್ತದುರ್ಗ. ಸಪ್ತದುರ್ಗದ ಸುತ್ತಲೂ ಆಳವಾದ ಕಂದಕವು. ಯಾವಾಗಲೂ ನೀರಿನಿಂದ ತುಂಬಿರುತ್ತಿತ್ತು. ಆ ಕಂದಕಕ್ಕೆ ಚಲನಪಲನವೆಂಬ ಸರೋವರದಿಂದ ನೀರು ಬರುತ್ತಿತ್ತು. ಗಣೇಶನಾರಾಯಣನು ಗೌಡ ರಾಜ್ಯದೊಳಗಿನ ಬಹು ದೊಡ್ಡ ಭಾಗದ ಒಡೆಯನಾದರೂ, ಗೌಡ-ನವಾಬನ ಕೈಕೆಳಗಿನ ಜಹಾಗೀರದಾರನು. ಆಗಿನ ಕಾಲದಲ್ಲಿ ದೊಡ್ಡ ದೊಡ್ಡ ಜಹಾಗೀರದಾರರಿಗೆ ರಾಜ ಮಹಾರಾಜ ಎಂಬ ಬಿರುದುಗಳಿರುತ್ತಿದ್ದವು. ಆ ಪ್ರಕಾರ ಗಣೇಶನಾರಾಯಣನಿಗೂ ರಾಜನೆಂಬ ಉಪನಾಮವು. ಇವನ ಕೈಕೆಳಗೆ ಅನೇಕ ಸಣ್ಣ ಸಣ್ಣ ಜಮೀನದಾರರಿದ್ದರು.

ಗಣೇಶನಾರಾಯಣನು ಬ್ರಾಹ್ಮಣನು. ಇವನು ಹಿಂದುಸ್ಥಾನದಲ್ಲಿ ಪ್ರಸಿದ್ಧರಾದ ಉದಯನಾಚಾರ್ಯರ ವಂಶದವನು. ಈ ಬಾಘುಡೀ ವಂಶವು

"ರೂಪಾಯಿವಾಲಾ" ಎಂಬ ಬಿರುದಿನಿಂದ ಇತಿಹಾಸ ಪ್ರಸಿದ್ಧವಿರುವದು. ಈ ಮನೆತನದವರು ಗೌಡರಾಜನಿಗೆ ಪ್ರತಿವರ್ಷ ಒಂದೇ ರೂಪಾಯಿ ಕಾಣಿಕೆ ಕೊಡುತ್ತಿದ್ದರೆಂದು ತಿಳಿದು, ಇವರಿಗೆ 'ರೂಪಾಯಿವಾಲಾ' ಎಂಬ ಹೆಸರು ಬಿದ್ದಿತ್ತು. ಪ್ರತಿವರ್ಷ ಒಂದೇ ರೂಪಾಯಿ ಕಾಣಿಕೆ ಕೊಟ್ಟರೂ, ಗಣೇಶನಾರಾಯಣನು ನವಾಬನ ಅಧೀನನು. ಸೈಫುದ್ದೀನನು ವೀರ ಗಣೇಶನಾರಾಯಣನಿಗೆ ಖಾನಸಾಹೇಬ ಎಂಬ ಮರ್ಯಾದೆಯ ಬಿರುದನ್ನು ಕೊಟ್ಟು, ಅವನನ್ನು ತನ್ನ ರಾಜಧಾನಿಯಲ್ಲಿ ಇಟ್ಟುಕೊಂಡಿದ್ದನು.

ಸೈಫುದ್ದೀನನು ಗಣೇಶನಾರಾಯಣನನ್ನು ತನ್ನ ರಾಜಧಾನಿಯಲ್ಲಿಟ್ಟು ಕೊಳ್ಳಲಿಕ್ಕೆ ಯೋಗ್ಯ ಕಾರಣಗಳೂ ಇದ್ದವು. ಯಾಕಂದರೆ, ಗಣೇಶನಾರಾಯಣನ ಹತ್ತರ ೧೦ ಸಾವಿರ ಸೈನ್ಯವಿತ್ತು; ಇದಲ್ಲದೆ ಅವನು ಮನಸ್ಸು ಮಾಡಿದ್ದರೆ, ಇನ್ನೂ ಹತ್ತು-ಹದಿನೈದು ಸಾವಿರ ಸೈನ್ಯವನ್ನು ಹಿಡಿಯುವಷ್ಟು ಸಂಪತ್ತಿಯೂ ಅವನಲ್ಲಿತ್ತು. ಆಗಿನ ಕಾಲದಲ್ಲಿ ಇಡೀ ಬಂಗಾಲದಲ್ಲಿರುವ ಪಠಾಣರ ಸಂಖ್ಯೆಯು ೪೦-೫೦ ಸಾವಿರವಿರಬಹುದು. ಕಾರಣ ಗಣೇಶನಾರಾಯಣನು ತನ್ನ ರಾಜ್ಯದಲ್ಲಿ ಸೈನ್ಯವನ್ನು ಹೆಚ್ಚಿಸಿಕೊಂಡು, ಪಠಾಣರ ವಿರುದ್ಧ ಹಿಂದೂರಾಜ್ಯವನ್ನು ಸ್ಥಾಪಿಸಬಹುದೆಂಬ ಸಂಶಯವು ನವಾಬನ ಮನಸ್ಸಿನಲ್ಲಿತ್ತು. ಆದ್ದರಿಂದ ಅವನು ಗಣೇಶನಾರಾಯಣನು ತನ್ನ ಕಣ್ಣೆದುರಿಗಿರುವಂತೆ ಯೋಜನೆ ಮಾಡಿದ್ದನು. ಗಣೇಶನಾರಾಯಣನ ದೇಹವು ಬಲವಾದದ್ದು. ಅವನ ನಿಡಿದಾದ ತೋಳುಗಳೂ, ಉನ್ನತವಾದ ಹಣೆಯೂ, ಉಜ್ವಲ ನಯನಗಳೂ ಅವನ ಶೂರತನವನ್ನು ತೋರಿಸುತ್ತಿದ್ದವು. ಆಗ ಅವನ ವಯಸ್ಸು ಸುಮಾರು ೪೦ ವರ್ಷದ್ದಿತ್ತು.

ಗಣೇಶನಾರಾಯಣನಿಗೆ ಪ್ರಪಂಚದಲ್ಲಿ ಎಲ್ಲ ರೀತಿಯಿಂದಲೂ ಅನುಕೂಲತೆಯಿತ್ತು. ಪತ್ನಿಯಾದ ತ್ರಿಪುರಾಸುಂದರಿಯು ಹೆಸರಿಗೆ ತಕ್ಕಂತೆ ಸುಂದರಳು. ಇದಲ್ಲದೆ ಅವಳ ದೇಶಭಕ್ತಿಯೂ, ಧರ್ಮಪರಾಯಣತೆಯೂ ಇತಿಹಾಸ ಪ್ರಸಿದ್ಧವು. ಇಂಥ ದಂಪತಿಗಳ ಹೊಟ್ಟೆಯಲ್ಲಿ ಹುಟ್ಟಿದ ಯದುನಾರಾಯಣನು ಅಪ್ರತಿಮ ಶೂರನು. ಇವನಿಗೆ ಈಗ ೧೯-೨೦ ವರ್ಷ. ಇದಲ್ಲದೆ ಗೌರಿ ಎಂಬ ಒಬ್ಬ ಮಗಳು. ಈ ಪ್ರಕಾರವಿದ್ದರೂ, ಗಣೇಶನಾರಾಯಣನ ಮನಸ್ಸಿಗೆ ಸುಖ-ಸಮಾಧಾನಗಳಿರಲಿಲ್ಲ. ಅವನು

ಯಾವಾಗಲೂ ಎಲ್ಲಿ ಕೇಳಿದರೂ ಹಿಂದೂಸಜರ ಸಂಪತ್ತಿಯ ಲೂಟಿಯು, ಹಿಂದೂದೇವಾಲಯಗಳನ್ನು ಕೆಡವಿ ಮಶೀದಿಗಳನ್ನು ಕಟ್ಟಿಸಿದ ವಾರ್ತೆಯು, ಹಿಂದೂಸ್ತ್ರೀಯರ ಮಾನಹಾನಿಯು. ಇದನ್ನು ಕೇಳಿ ಕೇಳಿ, ಅವನ ಜೀವವು ತಲ್ಲಣಿಸಿ, ತನ್ನ ಐಶ್ವರ್ಯ-ಸುಖ-ಸಂಪತ್ತುಗಳ ಬಗ್ಗೆ ಅವನಿಗೆ ತಿರಸ್ಕಾರ ಹುಟ್ಟಿತ್ತು.

ಆಗಿನ ಕಾಲದ ಎಲ್ಲ ಪಠಾಣ ಸರದಾರರು ಹಿಂದೂಜನರ ವಿಷಯದಲ್ಲಿ ಅತ್ಯಾಚಾರವನ್ನು ಮಾಡುತ್ತಿದ್ದರು; ಅದರಲ್ಲಿಯೂ ನಶಿರಿತ ಅತ್ಯಾಚಾರವು ವಿಶೇಷವಾಗಿತ್ತು. ಹಿಂದೂ ಸ್ತ್ರೀಯರ ಮಾನಭಂಗವು ಅವನ ಆಟದ ಸಾಮಗ್ರಿಯಾದಂತಾಗಿತ್ತು. ಈಗ ಅವನು ಮಂದಾಕಿನಿಯ ಮೇಲೆ ಅತ್ಯಾಚಾರ ಮಾಡಿದಂತೆ ಪ್ರತಿದಿನವೂ ಅವನು ಒಂದಿಲ್ಲೊಂದು ಕಡೆ ಅತ್ಯಾಚಾರವನ್ನು ನಡಿಸಿರುತ್ತಿದ್ದನು; ಆದರೆ ಮಂದಾಕಿನಿಗೆ ಸಂಕಟಕಾಲದಲ್ಲಿ ಸಹಾಯ ದೊರೆತಂತೆ, ಎಲ್ಲರಿಗೂ ದೊರೆಯುವ ಪುಣ್ಯವೆಲ್ಲಿ ಬರಬೇಕು?

ಗಣೇಶನಾರಾಯಣನು ಮಂದಾಕಿನಿಯನ್ನು ಸಂಗಡ ಕರೆದುಕೊಂಡು ಅವಳ ತಂದೆಯನ್ನು ಹುಡುಕುವದಕ್ಕೆ ಕಾಳಿಂದೀ ನದಿಯ ದಂಡೆ ಹಿಡಿದು ನಡೆದನು; ಮತ್ತು ಅವಳನ್ನು ಕುರಿತು "ನಿಮ್ಮ ಊರು ಯಾವದು?" ಎಂದು ಕೇಳಿದನು.

ಮಂದಾ:—ನಮ್ಮ ಊರು ವಜ್ರಯೋಗಿನಿ ಗ್ರಾಮವು.

ಗಣೇಶ:—ಅದು ಕಾಳಿಂದೀ ನದಿಯ ಆಚೆಯ ದಂಡೆಗಾಯಿತಲ್ಲವೆ?

ಮಂದಾಕಿನಿ:—ಅಹುದು.

ಗಣೇಶ:—ನಿಮ್ಮ ಹೆಸರೇನು?

ಮಂದಾ:—ಮಂದಾಕಿನಿ.

ಗಣೇಶ:—ನೀವು ಎಲ್ಲಿಗೆ ಹೋಗುತ್ತಿದ್ದಿರಿ?

ಮಂದಾ:—ನನ್ನ ಭಾವೀ ಪತಿಯ ಮನೆಗೆ.

ಗಣೇಶ:—ನಿನ್ನ ತವರು ಮನೆಯಲ್ಲಿ ಮತ್ತೆ ಯಾರಿರುವರು?

ಮಂದಾ:—ತಂದೆಯು ಹೊರತು ಬೇರೆ ಯಾರೂ ಇರುವದಿಲ್ಲ.

ಗಣೇಶ:—ಒಳ್ಳೇದು; ನಾನು ನಿನ್ನ ತಂದೆಯ ಶೋಧದ ಸಲುವಾಗಿ ಆದಷ್ಟು ಪ್ರಯತ್ನ ಮಾಡುವೆನೆಂದನು.

ಅವರು ಹಾಗೆಯೇ ಸ್ವಲ್ಪ ಮುಂದಕ್ಕೆ ಹೋಗುವಷ್ಟರಲ್ಲಿ ನದಿಯ ದಂಡೆಯ ಮೇಲೆ ಮೀನ ಹಿಡಿಯುವ ಕೆಲವು ಮೀನಗಾರರಿದ್ದರು. ಅವರು ಇವರಿಗೆ ಒಂದು ಮೃತ ದೇಹವನ್ನು ತೋರಿಸಿ "ನೋಡಿರಿ, ಇವರು ಯಾರು?" ಎಂದು ಕೇಳಿದರು. ಮಂದಾಕಿನಿಯು ಅದು ತನ್ನ ತಂದೆಯ ಮೃತಶರೀರ ವೆಂದು ಗುರ್ತು ಹಿಡಿದಳು; ಮತ್ತು ದುಃಖದಿಂದ ತಂದೆಯ ಮೃತ ಶರೀರದ ಮೇಲೆ ಬಿದ್ದು ದೊಡ್ಡ ಧ್ವನಿಯಿಂದ ಅಳತೊಡಗಿದಳು. ಕೆಲವು ಹೊತ್ತಿನ ಮೇಲೆ ಅವಳು ಒಮ್ಮಿಂದೊಮ್ಮೆಲೆ ಎದ್ದು ನಿಂತಳು. ಯಾವ ಕಣ್ಣುಗಳು ಇದುವರೆಗೆ ಅಶ್ರುಭರಿತವಾಗಿದ್ದವೋ, ಅವು ಈಗ ರುಕ್ಷವಾದವು. ಮೊದಲು ಕಣ್ಣೀರು ಹನಿಗಳಿದ್ದ ಕಣ್ಣಿನ ಕರೆಯ ಪ್ರದೇಶದಲ್ಲಿ ಈಗ ಅಗ್ನಿಯ ಕಣಗಳು ಕಂಡವು. ಅವಳ ಗಂಭೀರಸ್ವರದಿಂದ:— "ಆಯಿತು; ಆಗುವದಾಗಿ ಹೋಯಿತು, ಇನ್ನು ಮಾಡುವದೇನು? ಊರಿಗೆ ಹೋಗೋಣ" ಎಂದಳು.

ಗಣೇಶನಾರಾಯಣನು ಅವಳನ್ನು ಕರಕೊಂಡು ವಜ್ರಯೋಗಿನಿ ಗ್ರಾಮಕ್ಕೆ ಬಂದನು. ಆಗ ಚಂದ್ರನು ತನ್ನ ಧವಲ ಕಿರಣಗಳಿಂದ ಆ ಹಳ್ಳಿ ಯನ್ನು ಶೋಭಾಯಮಾನಗೊಳಿಸಿದ್ದನು. ಇಂಥ ಸಹಸ್ರ ಕಿರಣಗಳ ಕಾಂತಿಯು ಒಟ್ಟುಗೂಡಿದರೂ ಮಂದಾಕಿನಿಗೆ ಆ ರಾತ್ರಿಯು ಅಂಧಕಾರವೇ ಸರಿ. ಅವಳು ದೀನಸ್ವರದಿಂದ "ಇಲ್ಲಿ ನಾನು ಯಾರ ಹತ್ತರ ಇರಬೇಕು?" ಎಂದಳು.

ಗಣೇಶ:—ನಾನು ಆ ವ್ಯವಸ್ಥೆಯನ್ನು ಮಾಡುತ್ತೇನೆ, ಎಂದು ಅಂದು ಆ ಗ್ರಾಮದ ಕುಲಕರ್ಣಿಯನ್ನು ಕರೆಯಿಸಿದನು. ಆ ಗ್ರಾಮದ ಅನೇಕ ಜನರಿಗೆ ಗಣೇಶನಾರಾಯಣನ ಪರಿಚಯವಿತ್ತು. ಆದರಿಂದ ಎಲ್ಲ ಬ್ರಾಹ್ಮಣರೂ ಬಂದರು. ಅವರಿಗೆ ಗಣೇಶನಾರಾಯಣನು ಮಂದಾಕಿನಿಯ ತಂದೆಯ ಮರಣದ ಎಲ್ಲ ಸಂಗತಿಯನ್ನು ತಿಳಿಸಿದನು. ಅದನ್ನು ಕೇಳಿ ಎಲ್ಲರೂ ಕ್ರೋಧಾವೇಶದಿಂದ ಸಿಟ್ಟಿಗೆದ್ದರು.

ಗಣೇಶನಾರಾಯಣನು ಎಲ್ಲರನ್ನು ಶಾಂತಗೊಳಿಸಿ, ಆ ಬಾಲಕಿಯ ಸಂರಕ್ಷಣೆಯ ಭಾರವನ್ನು ಅವರಿಗೆ ಒಪ್ಪಿಸಲು, ಅವರು ಆನಂದದಿಂದ ಒಪ್ಪಿ ಕೊಂಡರು. ಗಣೇಶನಾರಾಯಣನು ಅವಳನ್ನು ಅವಳ ತಂದೆಯ ಮನೆಯ

ಲ್ಲಿಟ್ಟು, ಅವಳ ಸೇವೆಗೆ ಇಬ್ಬರು ದಾಸಿಯರನ್ನು ನಿಯಮಿಸಿ, ಅನುಕೂಲ ಮಾಡಿಕೊಂಡು ಮತ್ತೆ ಬರುವೆನೆಂದು ಹೇಳಿ, ಹೊರಟು ಹೋದನು.

( ೨ )

ಗೌಡರಾಜ್ಯದಲ್ಲಿ ಆದಿಶೂರರ ಚಿಹ್ನವು ಕೊಂಚವೂ ಇರಲಿಲ್ಲ; ಆದರೂ ಒಂದು ಕಾಲಕ್ಕೆ ಅವರ ಐಶ್ವರ್ಯ-ಕೀರ್ತಿಗಳು ಭಾರತದ ತುಂಬ ವ್ಯಾಪಿಸಿದ್ದವು. ಕಾಳಿಂದೀ ನದಿಯ ಉತ್ತರಕ್ಕೆ ಆದಿಶೂರರ ಗೌಡ ರಾಜಧಾನಿಯಿತ್ತು. ಅದೇ ನದಿಯ ದಕ್ಷಿಣ ದಂಡೆಗೆ ಬಲ್ಲಾಳಸೇನರು ಗೌಡರಾಜಧಾನಿಯನ್ನು ಮಾಡಿಕೊಂಡಿದ್ದರು. ಈಗ ಅದು ಬಲ್ಲಾಳವಾಡಿಯೆಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಗೌಡ ರಾಜ್ಯವನ್ನು ಬಖತ್ಯಾರ ಖಿಲಜಿಯು ನಾಲ್ವತ್ತು ಸಾವಿರ ಸೈನ್ಯದೊಡನೆ ಗೆದ್ದುಕೊಂಡಿದ್ದನು. ಮುಂದೆ ಕ್ರಿ. ಶ. ೧೩೪೦ರಲ್ಲಿ ನವಾಬ ಹಾಜಿ ಅಲೀಮುಶಹನು ಗೌಡನಗರದಿಂದ ಸ್ವಲ್ಪ ದೂರದಲ್ಲಿ ಕಾಳಿಂದಿ (ಭಾಗೀರಥಿ)ಯ ದಂಡೆಗೆ ಪಾಂಡುವರ್ಧನ ಗ್ರಾಮವನ್ನು ಕಟ್ಟಿಸಿ, ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಅವನ ಮೊಮ್ಮಗನಾದ ಸೈಫುದ್ದೀನನೇ ಈಗ್ಗೆ ನವಾಬನಾಗಿದ್ದನು. ಪಾಂಡುವರ್ಧನ ಪಟ್ಟಣಕ್ಕೆ ಮುಸಲ್ಮಾನರು ಫಿರೋಜಾಬಾದ ಎಂದು ಕರೆಯುತ್ತಿದ್ದರು. ಸೈಫುದ್ದೀನನು ಫಿರೋಜಾಬಾದದ ನವಾಬನು.

ಮೇಲಿನ ಸಂಗತಿಯು ನಡೆದ ಮರು ದಿವಸ ಮುಂಜಾನೆ ಸೈಫುದ್ದೀನನ ದರಬಾರದಿಂದ ಗಣೇಶನಾರಾಯಣನಿಗೆ ಆಮಂತ್ರಣ ಬಂದಿತು. ಗಣೇಶನಾರಾಯಣನು ನೂರು ಜನ ಶರೀರ ರಕ್ಷಕರೊಂದಿಗೆ ಆನೆಯ ಮೇಲೆ ಕುಳಿತುಕೊಂಡು ದರಬಾರಕ್ಕೆ ಬಂದನು.

ಗಣೇಶನಾರಾಯಣನು ದರಬಾರಕ್ಕೆ ಬಂದು ಅಲ್ಲಿ ನ್ಯಾಯವನ್ನು ಬೇಡುವವರ ಅಂದರೆ, ಅರ್ಜಿಯನ್ನು ಕೊಡತಕ್ಕವರು ನಿಲ್ಲತಕ್ಕ ಸ್ಥಳದಲ್ಲಿ ನಿಂತುಕೊಂಡನು. ದರ್ಬಾರಗೃಹವು ಜನರಿಂದ ತುಂಬಿತ್ತು. ನವಾಬನು ಉಚ್ಚ ಸಿಂಹಾಸನದ ಮೇಲೆ ಕುಳಿತಿದ್ದನು. ಆ ಸಿಂಹಾಸನದ ಹತ್ತರ ಮತ್ತೊಂದು ಆಸನದ ಮೇಲೆ ನಶೆರಿತನು ಕುಳಿತಿದ್ದನು. ಸಿಂಹಾಸನದ ಕೆಳಗೆ ಎಡ-ಬಲ ಮಗ್ಗಲಿಗೆ ಮಂತ್ರಿ-ಸೇನಾಪತಿಗಳು ಕುಳಿತಿದ್ದರು. ಮಂತ್ರಿ

ಗಳು ಕೂಡುವ ಸ್ಥಳದ ಕಡೆ ನ್ಯಾಯಪ್ರಾರ್ಥಿಗಳು ನಿಲ್ಲುವ ಸ್ಥಳವು. ಇನ್ನೊಂದು ಮಗ್ಗಲಿಗೆ ಶ್ರೀಮಂತರೂ, ಪ್ರಜೆಗಳೂ ಕೂಡುವ ಸ್ಥಳವು. ಅದರ ಹಿಂದೆ ಆರೋಪಿಗಳು ನಿಲ್ಲತಕ್ಕ ಪಂಜರವು. ಈ ಪಂಜರದ ಸುತ್ತಲೂ ಶಿಪಾಯಿಗಳ ಕಾವಲು. ಗಣೇಶನಾರಾಯಣನು ಪಂಜರದಲ್ಲಿ ನಿಲ್ಲದೆ, ನ್ಯಾಯಬೇಡತಕ್ಕ ಜನರು ನಿಲ್ಲುವ ಸ್ಥಳದಲ್ಲಿ ಹೋಗಿ, ಒಂದು ಆಸನದಲ್ಲಿ ಕುಳಿತನು. ಇದನ್ನು ನೋಡಿದ ಕೂಡಲೆ ನಶೆರಿತನು:—"ಗಣೇಶನಾರಾಯಣಾ, ನೀನು ಆರೋಪಿಯು. ನ್ಯಾಯಪ್ರಾರ್ಥನೆಯ ಜಾಗೆಯನ್ನು ಬಿಟ್ಟು, ಆರೋಪಿಗಳು ನಿಲ್ಲತಕ್ಕ ಸ್ಥಳದಲ್ಲಿ ಬಂದು ನಿಲ್ಲು" ಎಂದು ಒದರಿ ಹೇಳಿದನು.

ಆದರೂ ಗಣೇಶನಾರಾಯಣನು ಸ್ತಬ್ಧನು. ಆಗ ನಶೆರಿತನು ಮತ್ತೆ ಗಟ್ಟಿಯಾಗಿ—"ಗಣೇಶನಾರಾಯಣಾ, ಅಪರಾಧಿಗಳ ಪಂಜರದಲ್ಲಿ ನಿಲ್ಲು," ಎಂದನು.

ಗಣೇಶ:—ನನ್ನ ಮೇಲೆ ಆರೋಪ ಹೊರಿಸುವ ಅರ್ಜಿದಾರರು ಯಾರು?

ನಶೆರಿತ:—ನಾನು.

ಗಣೇಶ:—ಹಾಗಾದರೆ ನೀನು ಮೊದಲು ನ್ಯಾಯ ಬೇಡತಕ್ಕ ಸ್ಥಳದಲ್ಲಿ ಬಂದು ನಿಲ್ಲು, ಎಂದನು.

ನಶೆರಿತನು ಸುಮ್ಮನಾದನು. ನವಾಬಪುತ್ರರು ಹಿಂದೆ ಯಾರೂ ನ್ಯಾಯಪ್ರಾರ್ಥಿಗಳ ಸ್ಥಳದಲ್ಲಿ ನಿಂತದ್ದು ಅವನ ಸ್ಮರಣೆಗೆ ಒರಲಿಲ್ಲ. ಆದರಿಂದ ಅಲ್ಲಿ ನಿಲ್ಲಲು ಅವನ ಮನಸ್ಸು ಒಪ್ಪಲಿಲ್ಲ. ಆದ್ದರಿಂದ ಅವನು ನಿರುತ್ತರನಾಗಿ ಸುಮ್ಮನಾದನು. ಗಣೇಶನಾರಾಯಣನು ನಶೆರಿತನ ಮನೋಭಾವನೆಯನ್ನು ತಿಳಿದು, "ನಶೆರಿತ್, ಇದುವರೆಗೆ ನೀನೂ ಗೌಡರಾಜ್ಯದ ಒಬ್ಬ ಪ್ರಜೆಯು. ಪ್ರಜೆಗಳಿಗೆ ಯಾವ ಸ್ಥಳದಲ್ಲಿ ನಿಲ್ಲುವ ಹಕ್ಕು ಇರುವದೋ, ನಿನಗೂ ಅಲ್ಲೇ ನಿಲ್ಲುವ ಹಕ್ಕು ಇರುತ್ತದೆ. ಗರ್ವದಿಂದ ಕಾಯಿದೆಯನ್ನು ಉಲ್ಲಂಘಿಸಬೇಡ. ದುರಭಿಮಾನ ಬಿಡು. ನನ್ನ ಮೇಲೆ ಆರೋಪದ ಅರ್ಜಿಯಿದ್ದರೆ ಇಲ್ಲಿ ಬಂದು ನಿಲ್ಲು," ಎಂದನು.

ನಶೆರಿತನು ಏಳಲಿಲ್ಲ. ಸುತ್ತಲೂ ಒಮ್ಮೆ ನೋಡಿದನು. ಎಲ್ಲರ

ದೃಷ್ಟಿಯೂ ತನ್ನ ಕಡೆಗಿತ್ತು. ನವಾಬನು ಇದುವರೆಗೆ ಸುಮ್ಮನಿದ್ದನು. ಇನ್ನು ತಾನು ಮಧ್ಯಸ್ಥಿಕೆಯನ್ನು ಮಾಡದಿದ್ದರೆ ನಿರ್ವಾಹವಿಲ್ಲೆಂದು ತಿಳಿದು ಗಣೇಶನಾರಾಯಣಾ, ನೀನು ರಾಜದ್ರೋಹಿಯು. ಇಂದು ಅದರ ವಿಚಾರಣೆಯಾಗತಕ್ಕದ್ದು.

ಗಣೇಶ:—ಕರ್ತವ್ಯದೃಷ್ಟಿಯಿಂದ ವಿಚಾರಿಸಿದರೆ, ನಾನು ರಾಜದ್ರೋಹಿಯಾಗುವದು ಶಕ್ಯವಿಲ್ಲ. ನಿಜವಾಗಿಯೂ ನಾನು ದೇಶಭಕ್ತನು.

ಸೈಫು:—ನೀನು ರಾಜಸೈನಿಕರ ಕೊಲೆಯನ್ನು ಮಾಡಿರುವಿಯಷ್ಟೇ?

ಗಣೇಶ:—ಹೌದು; ಮಾಡಿರುವೆನು.

ಸೈಫು:—ಏಕೆ ಮಾಡಿದೆ?

ಗಣೇಶ:—ಆತ್ಮರಕ್ಷಣೆಯ ಸಲುವಾಗಿ.

ಸೈಫು:—ಕಾರಣವಿಲ್ಲದೆ ರಾಜಸೈನ್ಯವು ನಿನ್ನ ಮೇಲೆ ಸಾಗಿಬಂತೇ?

ಗಣೇಶ:—ನಶೆರಿತನ ಹೇಳಿಕೆಯ ಪ್ರಕಾರ ಅವರು ನನ್ನ ಮೇಲೆ ಸಾಗಿ ಬಂದರು.

ಸೈಫು:—ನಶೆರಿತನು ಕಾರಣವಿಲ್ಲದೆ ಈ ಪ್ರಕಾರ ಯಾಕೆ ಅಪ್ಪಣೆ ಮಾಡಿದನು?

ಗಣೇಶ:—ಆ ಸಂಗತಿಯನ್ನು ಹೇಳುವದಕ್ಕಾಗಿಯೇ ನಾನು ಇಂದು ನ್ಯಾಯಪ್ರಾರ್ಥಿಗಳ ಸ್ಥಳದಲ್ಲಿ ನಿಂತಿರುವೆನು. ಆದ್ದರಿಂದ ನಶೆರಿತಶಹಾ, ಕೆಳಗಿಳಿದು ಬಾ! ಅಪರಾಧಿಗಳ ಪಂಜರದಲ್ಲಿ ನಿಲ್ಲು ಬಾ!! ಎಂದನು.

ಗಣೇಶನಾರಾಯಣನ ಈ ಸಾಹಸದ, ದರ್ಪದ ಮಾತುಗಳನ್ನು ಕೇಳಿ, ಸಭಿಕರೆಲ್ಲರೂ ದಂಗುಬಡಿದು ನಿಂತರು. ಯಾವ ನಶೆರಿತನ ವಿರುದ್ಧ ಹೋಗಲು ನವಾಬನಿಗೆ ಕೂಡ ಧೈರ್ಯವಿದ್ದಿಲ್ಲವೋ, ಅಂಥ ನಶೆರಿತನ ಮೇಲೆ ಫಿರ್ಯಾದಿಯು. ಈ ವಿಚಿತ್ರ ಸಂಗತಿಯನ್ನು ಕೇಳಿ ಎಷ್ಟೋ ಜನ ಸರದಾರರು ಗಣೇಶನಾರಾಯಣನಿಗೆ ಅಳಿಗಾಲವೆಂದು ಭಾವಿಸಿದರು. ಯಾರು ಬುದ್ಧಿವಂತರಿದ್ದರೋ, ಅವರು ಗಣೇಶನಾರಾಯಣನೇ ಮೊದಲು ಫಿರ್ಯಾದಿಯನ್ನು ತಂದದ್ದರಿಂದ ಗಣೇಶನಾರಾಯಣನು ಸೈಫುದ್ದೀನನ ಕಡೆಗೆ ತಿರುಗಿ—"ಸುಲ್ತಾನಸಾಹೇಬ, ನನ್ನದೊಂದು ಫಿರ್ಯಾದಿಯುರುವದು. ವಿಚಾರಣೆಯಾಗಬೇಕು," ಎಂದನು.

ಸೈಫು:—ಅಪರಾಧಿಯು ಯಾರು ?

ಗಣೇಶ:—ಸುಲ್ತಾನಪುತ್ರ ನಶೆರಿತಶಹಾ.

ಸೈಫು:—ಸುಲ್ತಾನಪುತ್ರನ ವಿರುದ್ಧ ಫಿರ್ಯಾದಿಯನ್ನು ಮಾಡಲು ಬರುವದಿಲ್ಲ.

ಗಣೇಶ:—ಸುಲ್ತಾನ, ನೀವು ನಮ್ಮ ದೇಶದ ಅರಸರು. ನಾವು (ಹಿಂದೂಜನರು) ಅರಸನನ್ನು ದೇವರಂತೆ ಭಾವಿಸುತ್ತೇವೆ. ನೀವು ನಮ್ಮ ಆ ಭಕ್ತಿ-ವಿಶ್ವಾಸಗಳನ್ನು ನಾಶ ಮಾಡಬೇಡಿರಿ. ಪಾಪಕ್ಕೆ ಆಶ್ರಯವನ್ನು ಕೊಡಬೇಡಿರಿ. ಸಿಂಹಾಸನವೂ ರಾಜ್ಯವೂ ಧರ್ಮದ ತಳಹದಿಯ ಮೇಲೆ ಸ್ಥಾಪಿತವಾಗಿರುತ್ತವೆ. ಆದ್ದರಿಂದ ನೀವು ಅನೀತಿಗೆ ಆಶ್ರಯ ಕೊಟ್ಟು, ರಾಜಧರ್ಮದ ಅವಹೇಲನೆ ಮಾಡಬೇಡಿರಿ. ಅದರಿಂದ ರಾಜ್ಯವು ನಾಶ ವಾಗುವದು. ಈ ಗೌಡಸಿಂಹಾಸನದ ಮೇಲೆ ನಿಮಗಿಂತ ಪೂರ್ವದಲ್ಲಿ ಶೂರ, ಪಾಲ, ಸೇನವಂಶದವರು ರಾಜ್ಯವಾಳಿರುವರು. ಪಾಪದ ಸಂಚಯ ವಾದ ಕೂಡಲೆ ಅವರ ರಾಜ್ಯವು ನಾಶವಾಗಿರುವದು. ಆದ್ದರಿಂದ ನಾನು ಕೈ ಮುಗಿದು ಬೇಡಿಕೊಳ್ಳುವದೇನಂದರೆ, ಶೂರ ಪಠಾಣವಂಶದವರಾದ ನೀವು ಪಾಪಕ್ಕೆ ಆಶ್ರಯ ಕೊಡದೆ, ನ್ಯಾಯ ನಿಷ್ಪಕ್ಷಪಾತಗಳ ಮೇಲೆ ರಾಜಸಿಂಹಾಸನವನ್ನು ಕಾಯ್ದುಕೊಳ್ಳಿರಿ; ಅಂದರೆ ಪಠಾಣರ ರಾಜ್ಯವು ಬಂಗಾಲದಲ್ಲಿ ಚಂದ್ರ-ಸೂರ್ಯರಂತೆ ಸ್ಥಿರವಾಗುವದು, ಎಂದನು.

ಸಭೆಯು ನಿಸ್ತಬ್ಧವು! ಸೈಫುದ್ದೀನನು ಚಿಂತಾಮಗ್ನನು. ಕೆಲ ಹೊತ್ತಿನ ಮೇಲೆ ನವಾಬನು ಮೋರೆಯನ್ನು ಮೇಲಕ್ಕೆತ್ತಿ:—"ತಿಳಿಯಿತು. ಗಣೇಶನಾರಾಯಣ ಖಾನ, ನೀವು ರಾಜ್ಯದ ಹಿತಚಿಂತಕರು. ಯಾರು ಸದುಪದೇಶ ಮಾಡುವರೋ, ಅವರು ಮಂತ್ರಿಪದಕ್ಕೆ ಯೋಗ್ಯರು. ಆದ್ದರಿಂದ ಇಂದು ನಿಮ್ಮನ್ನು ಮಂತ್ರಿಪದಕ್ಕೆ ನೇಮಿಸಿರುವೆನು."

ಗಣೇಶ:—ಈ ಸೇವಕನ ಮೇಲೆ ತಮ್ಮ ಕೃಪೆಯು ಬಹಳವಾಯಿತು; ಆದರೆ....

ಸೈಫು:—ಇನ್ನೂ ಏನಾದರೂ ಅಪೇಕ್ಷೆ ಇರುವದೇನು? ಒಳ್ಳೇದು. ಮಹಲಿನಲ್ಲಿ ಭೆಟ್ಟಿಯಾಗಿರಿ, ಮಾತಾಡೋಣ. ಇಂದಿನ ದರ್ಬಾರ ಬರಖಾಸ್ತ! ಎಂದಂದು, ಸಿಂಹಾಸನದಿಂದ ಎದ್ದನು. ಹಿಂದುಗಳೂ, ಮುಸಲ್ಮಾನರೂ

ಗಣೇಶನಾರಾಯಣನೇ ಗೆದ್ದನೆಂದು ಭಾವಿಸಿದರು; ಆದರೆ ಗಣೇಶನಾರಾಯಣನು ಮಾತ್ರ ತಾನು ಸೋತೆನೆಂದು ಭಾವಿಸಿದನು.

ಅವನು (ಮನಸ್ಸಿನಲ್ಲಿ):—ನಾನಿನ್ನು ನಶೆರಿತನ ಚಾಕರಿ ಮಾಡಬೇಕೆ? ಛೀ! ಇದು ಅಶಕ್ಯವು, ಎಂದು ಅಂದುಕೊಂಡು ಹೊರಟನು.

( ೪ )

ಚಿಕ್ಕಂದಿನಲ್ಲಿಯೇ ಕಿಶೋರಿ ಮೋಹನನ ತಂದೆಯು ತೀರಿಕೊಳ್ಳಲು, ಅವನು ಪ್ರಚುರವಾದ ಸಂಪತ್ತಿಗೆ ಒಡೆಯನಾದನು. ಮನೆಯಲ್ಲಿ ಹಿರಿಯರು ಯಾರೂ ಇದ್ದಿಲ್ಲ. ಅವನ ಮನೆಯು ವೇಶ್ಯಾಸ್ತ್ರೀಯರಿಂದ ತುಂಬಿ ಹೋಯಿತು. ಅವನಿಂದ ತ್ಯಜಿಸಲ್ಪಟ್ಟ ಅವನ ಪತ್ನಿಯು ತಾಪ ಸಹಿಸಲಾರದೆ ತಂದೆಯ ಮನೆಗೆ ಹೊರಟು ಹೋದಳು.

"ಈ ಜಗತ್ತಿನಲ್ಲಿ ಯಾರಿಗೆ ಧನವಿರುವದೋ, ಅವರಿಗೆ ಮರ್ಯಾದೆಯುರುವದು." ಕುಕರ್ಮಿಯಾದ ಕಿಶೋರಿಮೋಹನನಿಗೆ ಮುಖಸ್ತುತಿಯ ಸ್ನೇಹಿತರನೇಕರು ಕೂಡಿದರು. ಬಹಳ ಹೇಳುವದೇನು ? ನಶೆರಿತನು ಸಹ ಅವನ ಮನೆಗೆ ಬರಹತ್ತಿದನು. ಒಬ್ಬನ ದುಡ್ಡು, ಮತ್ತೊಬ್ಬನ ಅಧಿಕಾರ; ಇವೆರಡೂ ಸಂಯೋಗವಾಗಿ, ದೇಶದಲ್ಲಿ ಅತ್ಯಾಚಾರದ ಬೇಗೆಯನ್ನು ಹಬ್ಬಿಸಿದವು!

ರಾಜಧಾನಿಯಿಂದ ಸ್ವಲ್ಪ ದೂರ ಕಾಳಿಂದೀ ನದಿಯ ದಂಡೆಯ ಮೇಲೆ ಕಿಶೋರಿ ಮೋಹನನ ವಿಲಾಸಗೃಹವೂ, ಉಪವನವೂ ಇದ್ದವು. ಅವನು ಹಗಲು ರಾಜಧಾನಿಯಲ್ಲಿದ್ದು, ರಾತ್ರಿ ಆ ವಿಲಾಸಭವನದಲ್ಲಿ ಕಾಲಕಳೆಯುತ್ತಿದ್ದನು. ಆ ವಿಲಾಸ ಭವನವು ಸಣ್ಣದಾದರೂ ಸುಂದರವಾಗಿತ್ತು. ಅದರ ಸುತ್ತಲೂ ಇರುವ ಸುಂದರವಾದ ಉಪವನವು ಅನೇಕ ಹೂವಿನ ಗಿಡ-ಬಳ್ಳಿಗಳಿಂದ ಅಲಂಕೃತವಾಗಿತ್ತು.

ಆ ವಿಲಾಸಗೃಹದ ಒಂದು ಕೋಣೆಯಲ್ಲಿ ಕಿಶೋರಿಮೋಹನನು ಕುಳಿತಿದ್ದನು. ಆಗ ಮೂರುಸಂಜೆಯ ಸಮಯ. ಆಕಾಶದಲ್ಲಿ ಅಲ್ಲೊಂದು ಇಲ್ಲೊಂದು ನಕ್ಷತ್ರಗಳು ಕಾಣಿಸಹತ್ತಿದ್ದವು. ಉದ್ಯಾನದಲ್ಲಿ ಅದೇ ಅರಳಿದ ಹೂಗಳ ಸುಗಂಧವು ಸುಳಿಗಾಳಿಯಿಂದ ಎಲ್ಲ ಕಡೆಗೆ ಪಸರಿಸತೊಡ

ಗಿತ್ತು. ಇಂಥ ವೇಳೆಯಲ್ಲಿ ಕಿಶೋರೀಮೋಹನನಿಗೆ ಒಬ್ಬನೇ ಇರುವದು ರುಚಿಸುತ್ತಿದ್ದಿಲ್ಲ. ಆದ್ದರಿಂದ ಮೊದಲೇ ನರ್ತಕಿಯರಿಗೆ ಆಮಂತ್ರಣ ಕೊಟ್ಟಿದ್ದನು; ಆದರೆ ಅವರು ಪಟ್ಟಣದಲ್ಲಿ ವಾಸವಾಡುತ್ತಿದ್ದು, ಅಲ್ಲಿಗೆ ರಾತ್ರಿ ಬರತಕ್ಕವರು. ಇಂದು ಅವರು ಇನ್ನೂ ಬಂದಿದ್ದಿಲ್ಲ. ಅದರಿಂದ ಕಿಶೋರೀಮೋಹನನು ವಿರಕ್ತನಾಗಿದ್ದನು. ಅಷ್ಟರಲ್ಲಿ ಒಬ್ಬ ಸೇವಕನು ಬಂದು, "ಹುಜೂರ, ಹೊರಗೆ ಒಬ್ಬ ಬಾಲಕನು ಬಂದಿದ್ದು, ಅವನು ತಮ್ಮ ದರ್ಶನವನ್ನು ಬಯಸುತ್ತಿರುವನು," ಎಂದನು.

ಕಿಶೋ:—ಅವನು ಏನು ಬಯಸುತ್ತಿರುವನು?

ಸೇವಕ:—ನನಗೆ ಹೇಗೆ ತಿಳಿಯಬೇಕು?

ಕಿಶೋ:—ಅವನ ಹತ್ತರ ಶಸ್ತ್ರಾಸ್ತ್ರಗಳೇನಾದರೂ ಇರುವವೋ?

ಸೇವಕ:—ಇಲ್ಲ.

ಕಿಶೋ:—ಹಾಗಾದರೆ ಅವನನ್ನು ಒಳಗೆ ಕಳುಹಿಸು.

ಸ್ವಲ್ಪ ಹೊತ್ತಿನಲ್ಲಿಯೇ ಒಬ್ಬ ಬಾಲಕನು ಬಾಗಿಲದ ಹತ್ತರ ಬಂದು ನಿಂತನು. ಬಾಲಕನು ಬಹಳೇ ಸುಂದರನು. ಇದೇ ರೂಪವು ಸ್ತ್ರೀಯಳಿಗೆ ಇದ್ದಿತೆಂದರೆ, ಅದು ಹೆಚ್ಚು ಮನೋಹರವಾಗಿ ಕಾಣುತ್ತಿತ್ತು. ಕಿಶೋರೀಮೋಹನನು ಎವೆಯಿಕ್ಕದೆ ಆ ಬಾಲಕನನ್ನು ದಿಟ್ಟಿಸಿ ನೋಡಹತ್ತಿದನು. ಆ ಬಾಲಕನ ಮೈಯಲ್ಲಿ ಕಾವೀಬಣ್ಣದ ಅಂಗಿಯು, ತಲೆಯ ಮೇಲೆ ಪೇಟಾ, ಕಾಲಲ್ಲಿ ಆವಿಗೆಗಳು. ಅವನ ಆ ಉಡಿಗೆ-ತೊಡಿಗೆಗಳು ಹೊಸದಾಗಿ ಕೊಂಡವೆಂಬಂತೆ ಕಾಣುತ್ತಿದ್ದವು ಕಿಶೋರೀಮೋಹನನು ಮನಸ್ಸಿನಲ್ಲಿ 'ಇವನು ಬಾಲಕನಾಗಿರದೆ ಬಾಲಕಿಯಾಗಿದ್ದರೆ. . ಉಪಾಯವಿಲ್ಲ' ಎಂದು ಕೊಂಡು, ಬಹಿರಂಗದಲ್ಲಿ –'ತಮ್ಮಾ, ನಿನಗೇನು ಬೇಕು?' ಎಂದನು.

ಬಾಲಕನು ಅದರ ಉತ್ತರ ಕೊಡದೆ, ಕಿಶೋರಿಮೋಹನರೆಂದರೆ ತಾವೇ ಏನು? ಎಂದು ಕೇಳಿದನು.

ಕಿಶೋ:—ಹೌದು.

ಬಾ:—ತಮ್ಮ ಹತ್ತರ ಸಣ್ಣದೊಂದು ಕೆಲಸವಿರುವದು.

ಕಿಶೋ:—ಅದೇನು?

ಬಾ:—ತಾವು ಬಹಳ ದಯಾವಂತರೆಂದು ಕೇಳಿರುವೆನು.

ಕಿಶೋ:-ಚಲೋದಾಯಿತು. ಮುಂದೆ?

ಬಾ:-ತಾವು ಶ್ರೀಮಂತರು.

ಕಿಶೋ:—ಅದು ನಿಜವು. ಮುಂದೆ?

ಬಾ:—ತಾವು ಪ್ರತಿಷ್ಠೆಯುಳ್ಳವರು; ಅಧಿಕಾರವುಳ್ಳವರು.

ಕಿಶೋ:—ನೀನು ಈ ಚಿಕ್ಕ ವಯಸ್ಸಿನಲ್ಲಿಯೇ ಬಹಳ ಮಾತಾಡಲು ಕಲಿತಿರುವೆ!

ಬಾ:—ಯಾರಿಗೆ ಮಾತಿನ ಪ್ರಯೋಜನವುಂಟೋ, ಅವರು ಕಲಿಯಲೇ ಬೇಕಲ್ಲವೇ?

ಕಿಶೋ:—ಈಗ ನಿನ್ನ ಕೆಲಸವೇನು? ಅದನ್ನು ಹೇಳು.

ಬಾ:—ನಾನು ಬಹಳೇ ಬಡವನು.

ಕಿಶೋ:—ನಿನಗೆ ಹಣವು ಬೇಕೇ?

ಬಾ:—ಬೇಡ.

ಕಿಶೋ:—ಹಾಗಾದರೆ ಏನು ಬೇಡುವೆ?

ಬಾ:—ಆಶ್ರಯವನ್ನು ಬೇಡುವೆನು.

ಕಿಶೋ:—ನಿನ್ನ ಆಪ್ತರಾರಿರುವರು?

ಬಾ:—ಯಾರೂ ಇಲ್ಲ.

ಮಾತಮಾತಾಡುವಷ್ಟರಲ್ಲಿ ಬಾಲಕನ ಕಂಠವು ಬಿಗಿಯಿತು.

ಕಿಶೋ:—ನಿನ್ನ ಊರು ಯಾವದು?

ಬಾ:—ಬಹು ದೂರವಿದೆ.

ಕಿಶೋ:—ಒಳ್ಳೇದು, ಇಂದಿನಿಂದ ನೀನು ನಮ್ಮ ಮನೆಯಲ್ಲಿ ಇರು, ತಿಳಿಯಿತೇ?

ಬಾ:—ತಾವು ಅಂತಃಕರಣವುಳ್ಳವರೆಂದು ಕೇಳಿದ ಮಾತು ಸುಳ್ಳಲ್ಲ.

ಕಿಶೋ:—ನಾನು ಅಂತಃಕರಣಪೂರ್ವಕವಾಗಿ ನಿನಗೆ ಆಶ್ರಯ ಕೊಟ್ಟಿಲ್ಲ.

ಬಾ:—ಹಾಗಾದರೆ ಆಶ್ರಯಕೊಟ್ಟ ಕಾರಣವೇನು?

ಕಿಶೋ:—ಇದರಲ್ಲಿ ನನ್ನ ಸ್ವಾರ್ಥವಿರುವದು.

ಬಾ:-ಸ್ವಾಮೀ, ಇದರಲ್ಲಿಯೂ ಸ್ವಾರ್ಥವೇ? ಯಾವ ಸ್ವಾರ್ಥವದು?

ಕಿಶೋ:—ನಿನ್ನ ಸುಂದರ ಮುಖ ಕಮಲವು ಮೇಲಿಂದ ಮೇಲೆ ನೋಡಲಿಕ್ಕೆ ಸಿಗಬೇಕೆಂದು....

ಬಾಲಕನ ಮುಖವು ಲಜ್ಜೆಯಿಂದ ಆರಕ್ತವಾಯಿತು, ಕಿಶೋರೀ ಮೋಹನನು ಬಾಲಕನನ್ನು ಕುರಿತು:—ನಿನ್ನ ಹೆಸರೇನು? ಎಂದನು.

ಬಾ:—ನನ್ನ ಹೆಸರು ಮನೋಹರ.

ಕಿಶೋ:—ಯೋಗ್ಯವು, ರೂಪಕ್ಕೆ ತಕ್ಕ ಹೆಸರೇ ಇದು. ಇರಲಿ. ನೀನು ಯಾವಾಗಲೂ ನನ್ನ ಸಂಗಡವೇ ಇರತಕ್ಕದ್ದು.

ಬಾ:—ಆಗಲಿ; ಆದರೆ ತಾವು ವೇಶ್ಯಾಸ್ತ್ರೀಯರ ಸಂಗಡ ಇರುವ ವೇಳೆಯನ್ನು ಬಿಟ್ಟು ಉಳಿದ ವೇಳೆಯಲ್ಲಿರುವೆನು.

ಕಿಶೋ:—ಅದೇಕೆ?

ಬಾ:—ಈ ಪೂರ್ವದಲ್ಲಿ ನಿಮ್ಮಂಥ ಮತ್ತೊಬ್ಬ ಧನಿಕನ ಆಶ್ರಯದಲ್ಲಿದ್ದೆನು. ಅವನು ಸಹ ಯಾವಾಗಲೂ ವೇಶ್ಯೆಯರ ಸಹವಾಸದಲ್ಲೇ ಕಾಲ ಕಳೆಯುತ್ತಿದ್ದನು. ಆ ವೇಶ್ಯೆಯರು ನನ್ನ ರೂಪಕ್ಕೆ ಮರುಳಾಗಿ, ನನ್ನಲ್ಲಿ ಪ್ರೇಮ-ಭಿಕ್ಷೆಯನ್ನು ಬೇಡಿದರು. ಈ ಸಂಗತಿಯು ಮನೆಯ ಯಜಮಾನನಿಗೆ ತಿಳಿಯಲು, ಅವನು ನನ್ನನ್ನು ಮನೆಯಿಂದ ಹೊರಗೆ ಹಾಕಿದನು. ಆಗನಿಂದ ನಾನು ಸ್ತ್ರೀಯರ ಸಹವಾಸದಲ್ಲಿ ಒಂದು ಗಳಿಗೆ ಸಹ ಇರಬಾರದೆಂದು ನಿರ್ಧರಿಸಿರುವೆನು.

ಕಿಶೋ:—ನೀನು ಇನ್ನೂ ಬಾಲಕನು. ನಿನ್ನಲ್ಲಿ ಸ್ತ್ರೀಯರ ಪ್ರೇಮ ಭಿಕ್ಷೆಯೋ?

ಬಾ:—ನನಗೆ ಹದಿನಾಲ್ಕು-ಹದಿನೈದು ವರ್ಷಗಳು. ನಾನು ಹುಡುಗನಲ್ಲ.

ಕಿಶೋ:—ಒಳ್ಳೇದು, ನಿನ್ನ ಇಚ್ಛೆಯಂತೆಯೇ ಆಗಲಿ.

ಬಾ:—ನಾನು ಏನೂ ದುಡಿಯದೆ ನಿಮ್ಮ ಅನ್ನವನ್ನು ತಿನ್ನುವವನಲ್ಲ. ನನಗ ಯಾವ ಕೆಲಸ ಬರದಿದ್ದರೂ, ಹಾಡಲಿಕ್ಕೆ ಬರುತ್ತದೆ.

ಕಿಶೋ:—ಹೇಗೋ? ಒಂದು ಪದವನ್ನು ಅನ್ನು, ನೋಡೋಣ.

ಬಾ:—ಬಾಲಕನು ಅಲ್ಲಿದ್ದ ಒಂದು ಸಾರಂಗಿಯನ್ನು ತೆಗೆದುಕೊಂಡು ಒಂದು ಪದವನ್ನು ಅಂದನು. ಗಾಯನವು ಮುಗಿಯುವಷ್ಟರಲ್ಲಿ ಒಬ್ಬ

ಸೇವಕನು ಬಂದು "ಹುಜೂರ, ನವಾಬಪುತ್ರ ನಶೆರಿತಸಾಹೇಬರು ಹೊರಗೆ ಬಂದಿರುವರು," ಎಂದು ಹೇಳಲು, ಕಿಶೋರೀಮೋಹನನು ಅವನನ್ನು ಎದುರಗೊಳ್ಳಲಿಕ್ಕೆ ಹೊರಗೆ ಹೋದನು. ನವಾಬಪುತ್ರನೊಡನೆ ಒಳಗೆ ಬರುವಷ್ಟರಲ್ಲಿ ಆ ಬಾಲಕನು ಅಲ್ಲಿದ್ದಿಲ್ಲ!

( ೫ )

ನಶೆರಿತ್ ಸಾಹೇಬನು ಒಳಗೆ ಬಂದು:—ಮೋಹನರಾವ, ಈಗ ಇಲ್ಲಿ ಹಾಡುತ್ತಿದ್ದವರು ಯಾರು?

ಕಿಶೋ:—ಒಬ್ಬ ಹುಡುಗನು, ಹುಜೂರ.

ನಶೆರಿತ:—ಎಷ್ಟು ಮಧುರ ಕಂಠವದು? ಇಂಥ ಮಧುರ ಗಾಯನವನ್ನು ನಾನು ಕೇಳದೆ ಬಹು ದಿವಸಗಳಾದವು. ಈಗ ಆ ಹುಡುಗನು ಎಲ್ಲಿಗೆ ಹೋದನು?

ಕಿಶೋ:—ನೀವು ಬಂದ ಸುದ್ದಿಯನ್ನು ಕೇಳಿ ಅಂಜಿ ಒಳಗೆ ಹೋಗಿರಬಹುದು.

ನಶೆರಿತ:—ಅಂಜುವ ಕಾರಣವಿಲ್ಲ. ಅವನನ್ನು ಕರೆಯಿರಿ.

ಎಷ್ಟು ಹುಡುಕಿದರೂ ಬಾಲಕನು ಸಿಗಲಿಲ್ಲ. ಸೇವಕರು ನಾಲ್ಕೂ ದಿಕ್ಕಿಗೆ ಹುಡುಕಿ ಬಂದರು. ದ್ವಾರಪಾಲಕರು ನದಿಯ ದಂಡೆಯ ತನಕ ಸಹ ಹೋಗಿ ಬಂದರು. ಎಲ್ಲಿಯೂ ಕಾಣಿಸಲಿಲ್ಲ.

ನಶೆರಿತನು ಕಿಶೋರೀಮೋಹನನ ಕೋಣೆಯಲ್ಲಿದ್ದ ಹಸ್ತಿದಂತದ ಮಂಚದ ಮೇಲೆ ಕುಳಿತನು. ಪಲ್ಲಂಗದ ಮೂರೂಕಡೆಗೆ ಜರದ ನಕ್ಷೆಯನ್ನು ತೆಗೆದ ಮಖಮಲ್ಲಿನ ಪರದೆಯು ಇಳಿಬಿದ್ದಿತ್ತು. ಕೋಣೆಯ ಗೋಡೆಗಳ ಮೇಲೆ ನಾಲ್ಕೂ ಕಡೆಯಲ್ಲಿ ನಗ್ನ ಸ್ವರೂಪದ ಹೆಂಗಳೆಯರ ನಾನಾ ತರದ ವಿಲಾಸದ ಚಿತ್ರಪಟಗಳು. ಅಲ್ಲಲ್ಲಿಗೆ ಆದೇ ಅರಳಿದ ಹೂ-ಗೊಂಚಲಗಳನ್ನು ಬೆಳ್ಳಿಯ ಪುಷ್ಪವಾಟಿಕೆಗಳಲ್ಲಿ ಇಟ್ಟಿದ್ದರು. ಕೋಣೆಯ ತುಂಬ ಹೂಗಳ ಮಧುರ ಸುವಾಸನೆಯು.

ಸ್ವಲ್ಪ ಹೊತ್ತಿನಲ್ಲಿ ಇಬ್ಬರು ನರ್ತಕಿಯರು ಗಾಯನವನ್ನು ಪ್ರಾರಂಭಿ

ಸಿದರು. ಆಗ ನಶೆರಿತನು "ಮೋಹನ, ಗಣೇಶನಾರಾಯಣನ ವಿಷಯು ವನ್ನು ಮರೆತಿರೇನು?"

ಕಿಶೋ:—ನವಾಬಸಾಹೇಬ, ಮರೆತಿಲ್ಲ. ಆ ಗಣೇಶನಾರಾಯಣ ನನ್ನು ಹಿಡಿದು ತಂದು ನಿಮ್ಮ ಮುಂದೆ ನಿಲ್ಲಿಸುವವರೆಗೆ ಆ ಅಪಮಾನವನ್ನು ಮರೆಯುವಂತಿಲ್ಲ.

ನಶೆರಿತ:—ಒಳ್ಳೇದು, ಅವನನ್ನು ಸೆರೆಹಿಡಿದುಕೊಂಡು ಒರಲಿಕ್ಕೆ ಅದೇನು ಯೋಚನೆ ಮಾಡುವಿರಿ?

ಕಿಶೋ:—ನಾನು ಅದೇ ವಿಚಾರದಲ್ಲಿರುವೆನು. ಈಗ ಅವನನ್ನು ಹಿಡಿದು ತರಬೇಕೋ? ಅಥವಾ ಆತನ ಮಗಳಾದ ಗೌರಿಯನ್ನು ಹಿಡಿದು ತರಬೇಕೋ? ಈ ವಿಚಾರದಲ್ಲಿರುವೆನು.

ನಶೆರಿತ:—ಗಣೇಶನಾರಾಯಣನಿಗೆ ಮಗಳಿರುವಳೇ?

ಕಿಶೋ:—ಅಹುದು, ಇರುವಳು. ಬಹಳೇ ಸುಂದರಿಯಾದ ಮಗಳಿರುವಳು.

ನಶೆರಿತ:—ಶಹಬಾಸ! ಶಹಬಾಸ್!! ಹಾಗಾದರೆ ಅವನನ್ನು ಬೇಡ, ಅವನ ಮಗಳನ್ನೇ ಹಿಡಿದು ತರುವಾ; ಅಂದರೆ ಚನ್ನಾಗಿ ಸೇಡು ತೀರಿಸಿ ಕೊಂಡಂತಾಗುವದು.

ಕಿಶೋ:—ಆದರೆ ಗಣೇಶನಾರಾಯಣನು ಇರುವವರೆಗೆ ಈ ಕೆಲಸವು ಅಸಾಧ್ಯವು.

ನಶೆರಿತ:—ಏನು? ನನ್ನ ರಾಜ್ಯದಲ್ಲಿಯ ಒಬ್ಬ ಹೆಂಗಸನ್ನು ಹಿಡಿ ತರುವದು ನನಗೆ ಅಸಾಧ್ಯವೇ?

ಕಿಶೋ:—ಅಸಾಧ್ಯವೇ ಸರಿ. ಅಡವಿಯಲ್ಲಿ ಆ ಜನರ ಕೈಯೊಳಗಿಂದ ಆತನು ಆ ಒಬ್ಬ ಹುಡುಗಿಯನ್ನು ರಕ್ಷಿಸಿಕೊಂಡು ಹೋಗಲಿಲ್ಲವೇ? ಆಗ ನೀವೇ ಅಲ್ಲಿದ್ದಿರಲ್ಲ!

ನಶೆರಿತ:—ಆಗ್ಗೆ ನನ್ನ ಸಂಗಡ ಇದ್ದವರು ಹೇಡಿಗಳು. ಆದ್ದ ರಿಂದಲೇ ಆ ಹುಡುಗಿಯು ನನಗೆ ದೊರೆಯಲಿಲ್ಲ. ಇರಲಿ. ಈಗ ಗಣೇಶ ನಾರಾಯಣನ ಮಗಳನ್ನು ತರುವ ಬಗೆ ಹೇಗೆ?

ಕಿಶೋರಿ:—ಗಣೇಶನಾರಾಯಣನನ್ನು ಸ್ಥಾನಾಂತರ ಮಾಡಿಸಬೇಕು.

ನಶೆರಿತ:—ಅದು ಅಪಕ್ಕೂ ಕಠಿಣವು.

ಕಿಶೋರಿ:—ಅದು ತಮಗೇನೂ ಕಠಿಣವಲ್ಲ. ಅವನು ಈಗ ಮಂತ್ರಿಯಾಗಿದ್ದರೂ ನಿಮ್ಮ ಚಾಕರನು. ನೀವು ಅವನಿಗೆ ನಿಮ್ಮ ರಾಜ್ಯದ ಸೀಮಾಂತರವನ್ನು ನೋಡಿಕೊಂಡು ಬರುವ ನೆವದಿಂದ ದೂರ ಕಳಿಸಬಹುದು. ಆತನು ನಿಮ್ಮ ಅಪ್ಪಣೆಯನ್ನು ಮಾನ್ಯ ಮಾಡಲಿಕ್ಕೇಬೇಕು. ಮಾಡದಿದ್ದರೆ ಆಜ್ಞಾಭಂಗದ ಅಪರಾಧಕ್ಕಾಗಿ ಅವನನ್ನು ಕೈದು ಮಾಡಬಹುದು.

ನಶೆರಿತ:—ಹೌದು; ಇದೊಳ್ಳೇ ಹಂಚಿಕೆಯು. ನಾಳಿನ ದಿವಸ ದರಬಾರದಲ್ಲಿ ಆ ಪ್ರಕಾರ ಗಣೇಶನಾರಾಯಣನಿಗೆ ಆಜ್ಞೆಯನ್ನು ಮಾಡುತ್ತೇನೆ; ಆದರೆ ನೀನು ಅವನ ಮಗಳನ್ನು ತಂದು ಕೊಡುವದೆಂದು..?

ಕಿಶೋರಿ:—ನಾಳೆ ಅವನು ಪ್ರಯಾಣ ಬೆಳಿಸಿದರೆ, ನಾಳೆ ರಾತ್ರಿಯೇ ಆ ಕಾರ್ಯ ಮಾಡುವೆನು; ಆದರೆ ನಿಮ್ಮ ಸಹಾಯವು..

ನಶೆರಿತ:—ಮತ್ತೇನು ನಮ್ಮ ಸಹಾಯ ಬೇಕು?

ಕಿಶೋರಿ:—ಸೈನ್ಯದ ಸಹಾಯವು ಬೇಕು?

ನಶೆರಿತ:—ಇದು ಮಾತ್ರ ವಿಚಾರ ಮಾಡತಕ್ಕ ಮಾತು; ಯಾಕಂದರೆ, ಇಂಥ ಕೆಲಸಕ್ಕೆ ನಾನು ಸೈನ್ಯದ ಸಹಾಯ ಮಾಡಿದ್ದು ಜನರಲ್ಲಿ ತಿಳಿದರೆ, ದರಬಾರದಲ್ಲಿಯ ಸರದಾರರೆಲ್ಲರೂ ನನಗೆ ವಿರೋಧಿಗಳಾಗಬಹುದು. ಏನಾದರೂ ಹಂಚಿಕೆಯಿಂದ ಕೆಲಸ ಮಾಡಬಾರದೇ?

ಕಿಶೋರಿ:—ಹುಜೂರ, ಗಣೇಶನಾರಾಯಣನ ಮನೆಯು ಕಿಲ್ಲೆಯಂತಿರುವದು. ಅಲ್ಲಿ ಸೈನ್ಯವಿಲ್ಲದೆ ಹೋದರೆ, ನಿರಾಶರಾಗಬೇಕಾದೀತು.

ನಶೆರಿತ:—ಎಷ್ಟು ಜನರ ಸಹಾಯ ಬೇಕು?

ಕಿಶೋರಿ:—ಐವತ್ತು ಜನರಾದರೆ ಸಾಕು. ನನ್ನ ಜನರು ಒಂದು ನೂರುಮಂದಿ ಇರುವರು-

ನಶೆರಿತ:—(ವಿಚಾರ ಮಾಡಿ) ಒಳ್ಳೇದು; ಆದರೆ ಅವರು ಸಾದಾ ವೇಷದಿಂದ ಬರುವರು. ಕೆಲಸ ಮಾತ್ರ ಆಗಲಿಕ್ಕೇ ಬೇಕು.

## ( ೬ )

ಮರುದಿವಸ ಮುಂಜಾನೆ ಕಿಶೋರೀಮೋಹನನು ಏಳುವದರೊಳಗೆ ಮನೋಹರನು ಅವನ ಕೋಣೆಯ ಬಾಗಿಲದಲ್ಲಿ ನಿಂತಿದ್ದನು. ಕಿಶೋರೀಮೋಹನನು ಅವನನ್ನು ಕುರಿತು:—“ತಮ್ಮಾ, ನಿನ್ನೆ ನೀನು ಎಲ್ಲಿಗೆ ಹೋಗಿದ್ದಿ?” ಎಂದು ಕೇಳಿದನು. ಅದಕ್ಕೆ ಮನೋಹರನು: “ಹುಜೂರ, ನಾನು ಹೊರಗಿನ ಛಾವಣಿಯಲ್ಲೇ ಮಲಗಿದ್ದೆನೆ”ಂದು ಹೇಳಿದನು; ಆದರೆ ಅವನು ನಶೆರಿತನು ಕುಳಿತ ಪಲ್ಲಂಗದ ಬುಡದಲ್ಲಿ ಕುಳಿತುಕೊಂಡು, ಅವರ ಮಾತುಗಳನ್ನು ಕೇಳಿಕೊಂಡಿದ್ದನು. ಬಳಿಕ ಕಿಶೋರೀಮೋಹನನು ಮನೋಹರನನ್ನುದ್ದೇಶಿಸಿ— ತಮ್ಮಾ, ಇಂದು ನೀನು ನನ್ನ ಸಂಗಡ ದರ್ಬಾರಕ್ಕೆ ಬರುವಿಯುಷ್ಟೇ? ಎಂದು ಕೇಳಲು, ಅವನು ಒಪ್ಪಿಕೊಂಡನು. ಇಬ್ಬರೂ ಉಪಹಾರ ತಕ್ಕೊಂಡು, ದರಬಾರಿಗೆ ಹೋದರು. ಕಿಶೋರೀಮೋಹನನು ಸರದಾರ ಜನರು ಕೂಡತಕ್ಕ ಸ್ಥಳದಲ್ಲಿ ಕುಳಿತುಕೊಂಡನು. ಮನೋಹರನು ಪ್ರಜೆಗಳು ಕೂಡುವಲ್ಲಿ ಕುಳಿತನು. ಸೈಫುದ್ದೀನನು ಅಶಕ್ತತೆಯ ಮೂಲಕ ದರಬಾರಕ್ಕೆ ಬಂದಿರಲಿಲ್ಲ. ನಶೆರಿತನೇ ಅಂದಿನ ದರಬಾರಕ್ಕೆ ಯಜಮಾನನು. ದಿನದ ಕೆಲಸಗಳು ತೀರಿದ ನಂತರ ಅವನು ಗಣೇಶನಾರಾಯಣನನ್ನು ಕುರಿತು—“ಮಂತ್ರಿಗಳೇ, ನೀವು ಇಂದು ಸಂಜೆಯೊಳಗೆ ದೇವಿಕೋಟೆಗೆ ಹೋಗಿ, ಅಲ್ಲಿಯ ವ್ಯವಸ್ಥೆಯನ್ನು ನೋಡಿಕೊಂಡು ಬರತಕ್ಕದ್ದು” ಎಂದು ಹೇಳಲು, ಗಣೇಶನಾರಾಯಣನು ಒಪ್ಪಿಕೊಂಡನು. ಅಂದಿನ ದರಬಾರವು ಮುಗಿಯಿತು.

ದರಬಾರದಿಂದ ಗಣೇಶನಾರಾಯಣನು ತನ್ನ ಮನೆಯ ಕಡೆಗೆ ಹೊರಟನು. ಸ್ವಲ್ಪ ಮುಂದಕ್ಕೆ ಬರಲು, ಅವನ ಸೇವಕನು ಒಂದು ಪತ್ರವನ್ನು ಅವನ ಕೈಯಲ್ಲಿ ಕೊಟ್ಟನು. ಇದನ್ನು ಯಾರು ಕೊಟ್ಟರು? ಎಂದು ಗಣೇಶನಾರಾಯಣನು ಸೇವಕನಿಗೆ ಕೇಳಲು, ಒಬ್ಬ ಅಪರಿಚಿತ ಬಾಲಕನು ಇದನ್ನು ನಿಮ್ಮ ಕಡೆಗೆ ಕೊಡಲಿಕ್ಕೆ ಕೊಟ್ಟನೆಂದು ಹೇಳಿದನು.

ಆ ಪತ್ರದಲ್ಲಿ—“ಇಂದು ರಾತ್ರಿ ನಿಮ್ಮ ಮಗಳಾದ ಗೌರಿಯನ್ನು ಅಪಹರಿಸತಕ್ಕವರಿರುವರು. ಕಾರಣ ಇಂದು ನೀನು ಊರು ಬಿಟ್ಟು ಹೊರಡ

ಬಾರದು." ಎಂದು ಬರೆದಿತ್ತು. ಪತ್ರ ಬರೆದವರ ಹೆಸರು ಅದರಲ್ಲಿ ಇದ್ದಿಲ್ಲ. ಗಣೇಶನಾರಾಯಣನು ಮನಸ್ಸಿನಲ್ಲೇ-"ಈ ಪತ್ರದ ಸಂಗತಿಯು ನಿಜವಿರ ಬಹುದೇ? ಮತ್ತು ನನಗೆ ಇದನ್ನು ಹೀಗೆ ಗುಪ್ತರೀತಿಯಿಂದ ತಿಳಿಸಿದ ನನ್ನ ಹಿತಚಿಂತಕನಾರು?" ಎಂದು ಆಲೋಚಿಸಿ, ಸೇವಕನನ್ನು ಕುರಿತು 'ಈ ಪತ್ರವು ಯಾವಾಗ ನಿನ್ನ ಕೈಗೆ ಬಂದಿತು?' ಎಂದು ಕೇಳಿದನು.

ಸೇವಕನು—ಸ್ವಾಮೀ, ನೀವು ದರಬಾರದೊಳಗೆ ಹೋದ ಕೂಡಲೆ ಒಬ್ಬ ಬಾಲಕನು ಇದನ್ನು ತಂದು ಕೊಟ್ಟನು, ಎಂದು ಹೇಳಿದನು.

ಆಗ ಗಣೇಶನಾರಾಯಣನು ಮನಸ್ಸಿನಲ್ಲಿ—"ಸಸೆರಿತನು ಇಂದಿನ ದರಬಾರದಲ್ಲಿ ನನಗೆ ದೇವೀಕೋಟೆಗೆ ಹೊರಡಲು ಅಪ್ಪಣೆ ಕೊಡುವ ಮೊದಲೇ ಈ ಪತ್ರವು ಬರೆಯಲ್ಪಟ್ಟಿದೆ. ಪತ್ರದಲ್ಲಿ ಗ್ರಾಮತ್ಯಾಗ ಮಾಡ ಬಾರದೆಂದು ಸೂಚನೆಯಿದೆ. ಇದರ ಮೇಲಿಂದ ನನ್ನ ವಿಷಯದಲ್ಲಿ ಗುಪ್ತ ಕಾರಸ್ಥಾನವು ನಡೆದಿರಲಿಕ್ಕೇಬೇಕು." ಎಂದು ತಿಳಕೊಂಡು ಮನೆಗೆ ಹೊರಟನು.

ಗಣೇಶನಾರಾಯಣನ ಮನೆಯು ಊರ ಕಡೆಯ ಭಾಗದಲ್ಲಿದ್ದು, ಮನೆಯ ಸುತ್ತಲೂ ಉದ್ಯಾನವು. ಉದ್ಯಾನದ ಸುತ್ತಲೂ ಎತ್ತರವಾದ ಕಲ್ಲಿನ ಗೋಡೆಯು. ಆದರಾಚೆಗೆ ಆವನ ಸೇವಕರ ಮನೆಗಳು. ಆ ಮನೆ ಗಳಲ್ಲಿರತಕ್ಕ ಚಾಕರರ ಸಂಖ್ಯೆ ಸುಮಾರು ಒಂದು ನೂರಾಗಬಹುದು.

## ( ೭ )

ಗಣೇಶನಾರಾಯಣನ ದಿವಾಣನ ಹೆಸರು ನರಶಿಂಹ ಚಟರ್ಜಿ. ಅವನು ಧೂರ್ತನೂ ಸಾಹಸಿಯೂ ಚತುರನೂ ಇದ್ದನು. ಗಣೇಶನಾರಾಯಣನು ಮನೆಗೆ ಬಂದ ಕೂಡಲೆ ಆ ಪತ್ರವನ್ನು ನರಸಿಂಹನ ಕೈಯಲ್ಲಿ ಕೊಟ್ಟನು. ನರಸಿಂಹನು ಪತ್ರವನ್ನು ಸಂಪೂರ್ಣ ಓದಿದ ಕೂಡಲೆ ಗಣೇಶನಾರಾಯ ಣನು ಅವನನ್ನು ಕುರಿತು-"ಈ ಪತ್ರದಿಂದ ನೀನು ಏನನ್ನು ತರ್ಕಿಸಿದೆ?" ಎಂದನು.

ನರಸಿಂಹ—ಈ ಪತ್ರವನ್ನು ಬರೆದವಳು ಹೆಂಗಸು.

ಗಣೇಶ—ಮತ್ತೆ?

ನರಸಿಂಹ—ಪತ್ರದ ಸಂಗತಿಯೂ ನಿಜವು.

ಗಣೇಶ—ಅದು ಹೇಗೆ?

ನರಸಿಂಹ—ಕಿಶೋರಿಮೋಹನನು ನಿನ್ನಿಸಿಂದ ಜನರ ಸಂಗ್ರಹವನ್ನು ಮಾಡುತ್ತಿರುವನು.

ಗಣೇಶ—ಏನು? ಹಿಂದುವಾದ ಕಿಶೋರಿಮೋಹನನು ಹಿಂದುಗಳ ಸರ್ವನಾಶದ ಪ್ರಯತ್ನ ಮಾಡುವನೇ?

ನರಸಿಂಹ—ಹಿಂದುಗಳ ಈ ಗುಣದಿಂದಲೇ ಸ್ವರಾಜ್ಯವು ನಾಶವಾಗಿರುವದು! ಕಿಶೋರಿಮೋಹನನಿಗೆ ನಶೆರಿತನ ಬೆಂಬಲವಿರುವದು

ಗಣೇಶ—ಸೈಫುದ್ದೀನನು ಜೀವಿಂತನಿರುವ ವರೆಗೆ ನಶೆರಿತನಿಂದ ಇಂಥ ಕೆಲಸಗಳಿಗೆ ಆಸ್ಪದ ದೊರೆಯಲಾರದು.

ನರಸಿಂಹ—ಅಂತರಂಗದಿಂದ ಸಹಾಯ ಮಾಡಿದರೆ ನವಾಬನು ಮಾಡುವದೇನು?

ಗಣೇಶ—ನಾನು ನವಾಬನ ಇಂದಿನ ಹುಕುಮನ್ನು ಅಮಾನ್ಯ ಮಾಡುವದಿಲ್ಲ; ಆದರೆ ದೇಪೀಕೋಟೆಗೆ ಇಂದು ಹೋಗುವದನ್ನು ಬಿಟ್ಟು, ಇಂದಿನ ರಾತ್ರಿ ದುಷ್ಟರಿಗೆ ಯೋಗ್ಯ ಪ್ರಾಯಶ್ಚಿತ್ತವನ್ನು ಕೊಟ್ಟು, ನಾಳೆಗೆ ಹೊರಡುವೆನು.

ನರಸಿಂಹ—ಅದೇಕೆ? ನೀವು ಇಂದೇ ಹೊರಡಿರಿ. ಆ ಕೆಲಸವನ್ನು ಈ ಸೇವಕನು ಮಾಡುವನು.

ಇಷ್ಟರಲ್ಲಿ ಕುಮಾರ ಯದುನಾರಾಯಣನು ಅಲ್ಲಿಗೆ ಬಂದನು. ಅವನಿಗೆ ಈಗ ಇಪ್ಪತ್ತು ವರ್ಷಗಳು. ಇಷ್ಟರಲ್ಲಿಯೇ ಅವನು ಸದ್ವರ್ತನ, ಶೂರತನ, ಸಾಹಸಗಳಲ್ಲಿ ತಂದೆಗೆ ಯೋಗ್ಯ ಮಗನೆಂದು ಖ್ಯಾತಿಯನ್ನು ಪಡೆದಿದ್ದನು. ಅವನು ಕೋಣೆಯಲ್ಲಿ ಬಂದ ಕೂಡಲೆ ತಂದೆಯನ್ನು ಕುರಿತು 'ಅಪ್ಪಾ, ಯಾರಿಗೆ ಯೋಗ್ಯ ಶಿಕ್ಷೆ?' ಎಂದನು.

ಗಣೇಶ—ಕಿಶೋರಿಮೋಹನನಿಗೆ.

ಯದು—ಅವನು ಅಂಥ ಅಪರಾಧವನ್ನೇನು ಮಾಡಿರುವನು?

ಗಣೇಶ—ಇಂದು ರಾತ್ರಿ ಅವನು ನಮ್ಮ ಮನೆಗೆ ಮುತ್ತಿಗೆ ಹಾಕ ತಕ್ಕವನಿರುವನು.

ಯದು—ನಮ್ಮ ಮನೆಗೆ ಮುತ್ತಿಗೆಯೇ? ಇದಕ್ಕೆ ಕಾರಣ?

ಗಣೇಶ—ನಶಿರಿತನ ಅಪ್ಪಣೆಯು.

ಯದು—ಸಿಂಹನ ಮನೆಗೆ ಬಂದ ನರಿಯು ಪಾರಾಗಿ ಹೋಗುವದೆ? ಅಪ್ಪಾ, ಅಗಕ್ಕೆ ಶಿಕ್ಷೆ ಮಾಡಲು ನೀವೇಕೆ? ಆ ಕೆಲಸವನ್ನು ನನಗೆ ಒಪ್ಪಿಸಿರಿ.

ಗಣೇಶ—ಇಂದಿನ ದರಬಾರದಲ್ಲಿ ನಾನು ಇಂದೇ ದೇವೀಕೋಟೆಗೆ ಹೊರಡಬೇಕೆಂದು ಆಜ್ಞೆಯಾಗಿದೆ. ನೀವು ಆ ಕೆಲಸ ಮಾಡುವಂತಿದ್ದರೆ, ನಾನು ಇಂದೇ ಹೊರಡುವೆನು, ಎಂದನು.

ನರಸಿಂಹ—ಯದುನಾರಾಯಣರು ಯಾವ ಚಿಂತೆಯನ್ನೂ ಮಾಡದೆ ಹೋಗಬಹುದೆಂದು ಹೇಳಲು, ಗಣೇಶನಾರಾಯಣನು ನೂರು ಜನ ಅಂಗ ರಕ್ಷಕರೊಡನೆ ಹೊರಟು ಹೋದನು.

## (೮)

ಮಧ್ಯ ರಾತ್ರಿಯ ಸಮಯದಲ್ಲಿ ಕಿಶೋರಿಮೋಹನನು ಗಣೇಶ ನಾರಾಯಣನ ಮನೆಗೆ ಮುತ್ತಿಗೆಯನ್ನು ಹಾಕಿದನು; ಆದರೆ ಅದು ವ್ಯರ್ಥ ವಾಯಿತು. ತೋಟದ ಹೊರಗೋಡೆಯನ್ನು ಹತ್ತಿ ಒಳಗೆ ಹೋದವರಲ್ಲಿ ಒಬ್ಬರೂ ಹಿಂದಿರುಗಿ ಬರಲಿಲ್ಲ. ಕಡೆಗೆ ಕಿಶೋರಿಮೋಹನನು ನಿರಾಶನಾಗಿ, ಗಾಯ ಹೊಂದಿದ ಅನುಚರರೊಂದಿಗೆ ತನ್ನ ಉಪವನದ ಹಾದಿ ಹಿಡಿದನು. ಅವನು ಚಿಂತಾಕ್ರಾಂತನಾಗಿ ಸಾವಕಾಶವಾಗಿ ಹೊರಟಿರಲು, ಒಂದು ಬಾಣವು ಬಂದು ಅವನ ಕುದುರೆಗೆ ತಾಕಿತು. ಅದರಿಂದ ಕುದುರೆಯು ನಿಂತಿತು. ಅಷ್ಟರಲ್ಲಿ ಮತ್ತೊಂದು ಬಾಣವು ಬಂದು ಕುದುರೆಯ ಹೊಟ್ಟೆ ಯೊಳಗೆ ನಡಲು, ಅದು ಉರುಳಿ ನೆಲಕ್ಕೆ ಬಿದ್ದಿತು. ಕೂಡಲೆ ಮೇಲೆ ಕುಳಿತ ಕಿಶೋರಿಮೋಹನನು ನೆಲಕ್ಕೆ ಬಿದ್ದನು; ಆದರೆ ಅವನಿಗೆ ವಿಶೇಷ ಗಾಯವಾಗಲಿಲ್ಲ. ಅವನು ಎದ್ದು ನಿಂತು ಸುತ್ತಲೂ ನೋಡಿದನು; ಏನೂ ಕಾಣಿಸಲಿಲ್ಲ. ಅವನು ಸಮೀಪದಲ್ಲಿಯೇ ಶತ್ರುಗಳಿರುವರೆಂದು ಭಾವಿಸಿ, ಮನಸ್ಸಿನಲ್ಲಿ— "ನಾನೆಂಥ ಮೂರ್ಖನು? ಇಂಥ ಕಾರ್ಯಕ್ಕೆ

ನಮ್ಮಂಥವರು ಬರಲೇ ಬಾರದು. ಒರಿಯು ಸೈನಿಕರನ್ನು ಕಳಿಸಿದ್ದರೆ ನೆಟ್ಟಗಾಗುತ್ತಿತ್ತು, ಎಂದು ಆಲೋಚಿಸುವಷ್ಟರಲ್ಲಿ ಮನೋಹರನ ಸ್ವರವು ಕೇಳಬಂತು.

ಮನೋಹರನು ಇವನ ಹತ್ತಿರವೇ ಸಮೀಪದಲ್ಲಿ ತನ್ನಷ್ಟಕ್ಕೆ ತಾನೇ ಹಾಡುತ್ತ ಹೊರಟಿದ್ದನು. ಕಿಶೋರಿಮೋಹನನು ತನ್ನ ಅವಸ್ಥೆಯನ್ನು ಮರೆತು ಅವನ ಗಾಯನದಲ್ಲಿ ತಲ್ಲೀನನಾದನು. ಅವನ ಗಾಯನವು ಮುಗಿದ ಕೂಡಲೆ ಕಿಶೋರಿಮೋಹನನಿಗೆ ತನ್ನ ಸ್ಥಿತಿಯ ಅರಿವು ಹುಟ್ಟಿ— “ಮನೋಹರಾ” ಮನೋಹರಾ, ಎಂದು ಕೂಗಿದನು.

ಮನೋಹರನು ಗಕ್ಕನೆ ನಿಂತು— ಏನಿದು? ಇಲ್ಲಿ ನಮ್ಮ ಪ್ರಭುವಿನ ಸ್ವರವು ಕೇಳಬರುತ್ತದಲ್ಲ? ಎಂದು ನಾಲ್ಕೂ ದಿಕ್ಕಿಗೆ ಟಕಮಕ ನೋಡ ಹತ್ತಿದನು. ಆಗ ಕಿಶೋರಿಮೋಹನನು—‘ಮನೋಹರಾ, ನಾನಿಲ್ಲಿರುವೆನು,’ ಎಂದನು. ಮನೋಹರನು ಅವನ ಹತ್ತರ ಹೋಗಿ:—ಇದೇನು ಪ್ರಭೋ ತಾವಿಲ್ಲಿರುವಿರಲ್ಲ?

ಕಿಶೋರಿ—ಮನೋಹರಾ, ನೀನಿಲ್ಲಿಗೇಕೆ ಬಂದಿರುವಿ?

ಮನೋ—ಹುಜೂರ, ರಾತ್ರಿ ನಿದ್ದೆ ಹತ್ತದೆ ಇದ್ದಾಗ ಊರ ಹೊರಗೆ ತಿರುಗಾಡುವ ರೂಢಿಯು ನನಗಿರುವದು. ಇಂದು ಸಹ ನಿದ್ದೆ ಹತ್ತಲಿಲ್ಲ. ಕಾರಣ ಅಡ್ಡಾಡುತ್ತ ಇತ್ತ ಬಂದಿರಲು, ಇಲ್ಲಿ ಅಕಸ್ಮಾತ್ತಾಗಿ ತಮ್ಮ ದರ್ಶನವಾಯಿತು. ಮನೋಹರನು ಮುಂದೆ ನೋಡಿ— “ಓಹೋ! ಇದೇನು? ನಿಮ್ಮ ಕುದುರೆಯು ಸತ್ತು ಬಿದ್ದಿರುವದಲ್ಲ! ಸ್ವಲ್ಪ ತಡೆಯಿರಿ; ನಿಮಗೊಂದು ಬೇರೆ ಕುದುರೆಯನ್ನು ತಂದುಕೊಡುವೆನು” ಎಂದು ಹೇಳಿ ಅದೃಶ್ಯನಾದನು.

ಮನೋಹರನು ಅಲ್ಲಿಯೇ ಸಮೀಪದಲ್ಲಿ ಒಂದು ಗಿಡಕ್ಕೆ ತನ್ನ ಕುದುರೆಯನ್ನು ಕಟ್ಟಿ ಬಂದಿದ್ದನು. ಅವನು ಆ ಕುದುರೆಯನ್ನು ಹತ್ತಿ ಕಿಶೋರಿಮೋಹನನ ಹತ್ತರ ಬಾರದೆ, ಗಣೇಶರಾಯನ ಮನೆಯ ಹಾದಿಯನ್ನು ಹಿಡಿದನು. ಸ್ವಲ್ಪ ಮುಂದಕ್ಕೆ ಹೋಗಲು, ಒಬ್ಬ ಕುದುರೆಯ ಸ್ವಾರನು ಭರದಿಂದ ತನ್ನ ಕಡೆಗೆ ಬರುವದನ್ನು ನೋಡಿದನು. ಆ ಸ್ವಾರನು ತನ್ನ ಹತ್ತರ ಬಂದ ಕೂಡಲೆ ಮನೋಹರನು ತನ್ನ ಕುದುರೆಯನ್ನು ಅಡ್ಡ

ನಿಲ್ಲಿಸಿ, ಆತನ ಮಾರ್ಗವನ್ನು ಪ್ರತಿಬಂಧ ಮಾಡಿದನು. ಅದನ್ನು ನೋಡಿದ ಕೂಡಲೆ ಆ ಸ್ವಾರನು ಆವೇಶದಿಂದ ಒರೆಯೊಳಗಿನ ಕತ್ತಿಯನ್ನು ಹಿರಿಯಲು ಮನೋಹರನು ಗಟ್ಟಿಯಾಗಿ ನಗಹತ್ತಲು, ಆ ಸ್ವಾರನಿಗೆ ಆಶ್ಚರ್ಯವಾಯಿತು. ಆಗ ಆ ಸ್ವಾರನು—'ಏಕೆ ನಗುತ್ತೀ?' ಎಂದು ಕೇಳಲು, ಮನೋಹರನು—"ತಾವು ಒಬ್ಬ ನಿಃಶಸ್ತ್ರ ಬಾಲಕನ ಮೇಲೆ ತೋರಿಸುವ ಶೂರತನವನ್ನು ಕಂಡು ನಗೆ ಬಂದಿತು" ಎಂದು ಹೇಳಿದನು. ಸ್ವಾರನು ಸ್ವಲ್ಪ ಮುಂದಕ್ಕೆ ಬಂದು ಪರೀಕ್ಷಿಸಲು ತನಗೆ ದಾರಿಯನ್ನು ಪ್ರತಿಬಂಧಿಸಿದವನು ನಿಜವಾಗಿಯೂ ಬಾಲಕನು; ಮತ್ತು ನಿಃಶಸ್ತ್ರನು ಎಂಬದು ಕಂಡುಬರಲು, ಖಡ್ಗವನ್ನು ಒರೆಗಾಣಿಸಿ-ತಮ್ಮಾ, ನೀನು ಯಾರು? ಎಂದು ಕೇಳಿದನು.

ಬಾಲಕ—ನಾನು ಮನೂಲಾಲ ಠಾಕೂರ. ನೀವು ಯಾರು?

ಸ್ವಾರನು—ನಾನು ನರಸಿಂಹ ಚಟರ್ಜಿ, ಗಣೇಶನಾರಾಯಣನ ದಿವಾಣನು.

ಬಾಲಕ—ಓಹೋ! ಹಾಗಾದರೆ ನಾನು ನಿಮ್ಮ ಕಡೆಗೇ ಹೊರಟಿದ್ದೆನು, ಎಂದು ಅವನಿಗೆ ಮಾರ್ಗವನ್ನು ಕೊಟ್ಟನು.

ನರಸಿಂಹ—ಯಾಕೆ, ನನ್ನ ಕಡೆಗೆ ನಿನ್ನ ಕೆಲಸವೇನು?

ಬಾಲಕ—ಇಂದಿನ ಪ್ರಸಂಗದ ಮುಖ್ಯ ಆರೋಪಿಗೆ ಏನೂ ಶಿಕ್ಷೆ ಬೇಡವೆ?

ನರಸಿಂಹ—ಯಾವ ಪ್ರಸಂಗ?

ಬಾಲಕ—ನಿಮ್ಮ ಮನೆಯನ್ನು ಮುತ್ತಿದ ಪ್ರಸಂಗ.

ನರಸಿಂಹನು ದಿಟ್ಟಿಸಿ ನೋಡಿ—ಈಗ ನಾನು ಕಿಶೋರಿಮೋಹನನನ್ನು ಹುಡುಕಲಿಕ್ಕೆ ಹೊರಟಿರುವೆನು.

ಬಾಲಕ—"ನಡೆಯಿರಿ; ನಾನು ನಿಮ್ಮನ್ನು ಆತನ ಹತ್ತಿರವೇ ಕರೆದು ಕೊಂಡು ಹೋಗುವೆನು."

ನರಸಿಂಹ—ಅವನೆಲ್ಲಿರುವನು?

ಬಾಲಕ—ಇಲ್ಲಿಯೇ ಸಮೀಪದಲ್ಲಿ ಒಂದು ಗಿಡದ ಹತ್ತರ ಬಿದ್ದು ಕೊಂಡಿರುವನು

ನರಸಿಂಹ—ಏನು, ಗಾಯ ಹೊಂದಿರುವನೇ?

ಬಾಲಕ--ಅವನಿಗೇನೂ ಗಾಯವಾಗಿಲ್ಲ; ಆದರೆ ಆತನ ಕುದುರೆಯು ಮಾತ್ರ ಸತ್ತಿರುವದು.

ನರಸಿಂಹ--ಈ ದಿಕ್ಕಿಗೆ ನಮ್ಮ ಸೈನಿಕರು ಬಂದಿಲ್ಲ; ಅಂದ ಬಳಿಕ ಅವನ ಕುದುರೆಯನ್ನು ಕೊಂದವರಾರು?

ಬಾಲಕ—'ನಾನು ಕೊಂದೆನು.'

ನರಸಿಂಹ—'ನೀನು ಕೊಲ್ಲಲು ಕಾರಣವೇನು ?'

ಬಾಲಕ—'ಅವನು ಓಡಿ ಹೋಗಲು ಆಸ್ಪದವಾಗಬಾರದೆಂದು.'

ನರಸಿಂಹ—"ಇದರಲ್ಲಿ ನಿನ್ನ ಸ್ವಾರ್ಥವೇನಿರುವದು ? '

ಬಾಲಕ—"ನಾನು ಅದನ್ನೆಲ್ಲ ನಿಮ್ಮ ಹತ್ತರ ಹೇಳಲಿಕ್ಕೆ ಬಂದಿಲ್ಲ. ಅವನನ್ನು ನಿಮಗೆ ತೋರಿಸುವ ಕೆಲಸ ಮಾತ್ರ ನನ್ನದು."

ನರಸಿಂಹ—" ನೀನು ಮೋಸಗಾರನೇಕೆ ಆಗಿರಬಾರದು? ನಿನ್ನ ಮಾತನ್ನು ಹೇಗೆ ನಂಬಬೇಕು ? "

ಬಾಲಕ—"ನನ್ನ ಉದ್ದೇಶವು ಬೇರೆಯಾಗಿದ್ದರೆ, ನಿಮ್ಮ ಕುದುರೆಯ ಗತಿಯೂ ಅವನ ಕುದುರೆಯಂತೆ ಆಗುತಿತ್ತು. ನನ್ನ ಬಿಲ್ಲಿನ ಗುರಿಯು ಎಂದೂ ತಪ್ಪದು."

ನರಸಿಂಹ—ಈ ಚಿಕ್ಕ ವಯಸ್ಸಿನಲ್ಲಿ ನೀನು ಬಿಲ್ಲಿನ ವಿದ್ಯೆಯನ್ನು ಚನ್ನಾಗಿ ಕಲಿತಿರುವಿಯಾ?

ಬಾಲಕ—ಕಲಿಯದಿದ್ದರೆ ಉಪಾಯವಿಲ್ಲ. ನಿಮ್ಮಂಥ ಶೂರ ಹಿಂದುಗಳ ಕಣ್ಣೆದುರಿಗೆ ಹಿಂದೂ ಜನರ ಧನ-ಮಾನಗಳ ಹಾನಿಯೂ, ಹಿಂದೂ ಕುಲಸ್ತ್ರೀಯರ ಮಾನಹಾನಿಗಳೂ ಆದರೂ ಕೂಡ ನೀವು ಮುಸಲ್ಮಾನರ ಸಂಗಡ ಶಸ್ತ್ರ ಹಿಡಿಯಲು ಹಿಂದು ಮುಂದೆ ನೋಡುವಿರಿ. ಅಂದ ಬಳಿಕ ನಮ್ಮಂಥ ಬಾಲಕರು ಶಸ್ತ್ರಾಸ್ತ್ರ ವಿದ್ಯೆಯನ್ನು ಕಲಿಯದಿದ್ದರೆ ಉಪಾಯವಿಲ್ಲ.

ನರಸಿಂಹ--ನೀನು ಮುಸಲ್ಮಾನರನ್ನು ಈ ದೇಶದಿಂದ ಹೊರಗೆ ಹಾಕಬೇಕೆಂದು ಇಚ್ಛಿಸುವಿಯೋ ? ಅದರ ಸಲುವಾಗಿಯೇ ಶಸ್ತ್ರಾಸ್ತ್ರಗಳ ಅಭ್ಯಾಸವೇ ?

ಬಾಲಕ—"ಸ್ವಾಮಿ, ನಾನು ಅದನ್ನು ಆತ್ಮರಕ್ಷಣೆಯ ಸಲುವಾಗಿ

ಕಲಿತಿರುವೆನು. ಇಷ್ಟೇ ಅಲ್ಲ, ಯಾರು ಹಿಂದೂ ಕುಲಕ್ಕೆ ಕಲಂಕಸ್ವರೂಪ ರಿರುವರೋ, ಅಂಥ ಹೇಡಿಗಳನ್ನು ಕೊಲ್ಲುವದೂ ನನ್ನ ಉದ್ದೇಶವು.''

ನರಸಿಂಹ—'ಇರಲಿ. ನನಗೆ ಕಿಶೋರಿಮೋಹನನನ್ನು ತೋರಿಸು.'

ಬಾಲಕ—ತೋರಿಸುವೆನು; ಆದರೆ ನನ್ನದೊಂದು ಹೇಳತಕ್ಕ ಮಾತಿರುವದು. ಅದೇನಂದರೆ, ನಾನು ಮುಂದೆ ಹೋಗಿ ನನ್ನ ಕುದುರೆಯನ್ನು ಅವನಿಗೆ ಕೊಡುವೆನು. ಅವನು ಇದನ್ನು ಹತ್ತಿಕೊಂಡು ಹೊರಡುವಷ್ಟರಲ್ಲಿ ನೀವು ಬಂದು ಆತನನ್ನು ಹಿಡಿಯಬೇಕು; ಕಾರಣ ನಾನು ಸ್ವಲ್ಪ ಮುಂದೆ ಹೋಗುವೆನು; ನೀವು ಹಿಂದಿನಿಂದ ಬನ್ನಿರಿ.

ನರಸಿಂಹ—'ತಮ್ಮಾ, ನಿನ್ನ ಉದ್ದೇಶವಾದರೂ ಏನು?'

ಬಾಲಕ—ನಾನು ಕಿಶೋರಿಮೋಹನನ ಸೇವಕನು. ಈಗ ಅವನಿಗೆ ಕುದುರೆಯನ್ನು ತಂದುಕೊಡುವದಾಗಿ ಹೇಳಿ ಇತ್ತ ಬಂದಿರುವೆನು. ಕಾರಣ ನೀವು ಹಿಂದಿನಿಂದ ಬರಬೇಕು. ನನ್ನ ವಿಶ್ವಾಸಘಾತುಕತನವು ಅವನಿಗೆ ತಿಳಿಯಬಾರದಾಗಿದೆ.

ನರಸಿಂಹ—"ಹಾಗಾದರೆ ನೀನು ಸ್ವಾಮಿಘಾತುಕಿಯು–ವಿಶ್ವಾಸಘಾತುಕಿಯು"

ಬಾಲಕ—"ಅಷ್ಟೇ ಏಕೆ? ನಾನು ಮಾಡಲಾರದ ಪಾಪಕಾರ್ಯಗಳು ಜಗತ್ತಿನಲ್ಲಿಲ್ಲ."

ನರ—'ಸರಿ. ಸರಿ. ನೀನು ಮನುಷ್ಯ ಕುಲಕ್ಕೆ ಒಪ್ಪತಕ್ಕವನಲ್ಲ.'

ಬಾಲಕ—'ದಿವಾಣರೇ, ಇದರೊಳಗೇನು? ನೀವೂ ವಿಶ್ವಾಸಘಾತುಕಿಗಳು'

ನರಸಿಂಹನು ಹುಬ್ಬುಗಂಟಿಕ್ಕಿ–'ಏನು, ನಾನು ವಿಶ್ವಾಸಘಾತುಕನೇ?'

ಬಾಲಕ—'ಒಮ್ಮೆ ಏಕೆ, ನೀವು ವಿಶ್ವಾಸಘಾತುಕಿಗಳೆಂದು ಸಾವಿರ ಸಾರೆ ಅನ್ನುತ್ತೇನೆ; ನೀವು ವಿಶ್ವಾಸಘಾತುಕಿಗಳಷ್ಟೇ ಅಲ್ಲ, ರಾಜದ್ರೋಹಿಗಳೂ ಆಗಿರುತ್ತೀರಿ.'

ನರಸಿಂಹ—'ಯಾಕೆ, ನಾಲಿಗೆಯನ್ನು ಸಡಿಲುಬಿಟ್ಟೆ? ಯಾರ ಕೂಡ ಮಾತಾಡುವಿಯೆಂಬದು ಗೊತ್ತಿರುವದೇ?'

ಬಾಲಕ—ನಿಜವನ್ನು ಹೇಳಿದರೆ ಸಿಟ್ಟೇಕೆ?

ನರಸಿಂಹ—ಮನಬಂದಂತೆ ಬೊಗಳಬೇಡ.

ಬಾಲಕ—ನಾನು ಸುಳ್ಳು ಮಾತಾಡತಕ್ಕವನಲ್ಲ. ನೀವು ನವಾಬನ ವಿರುದ್ಧ ಗುಪ್ತ ಕಾರಸ್ಥಾನ ನಡೆಯಿಸಿಲ್ಲವೇ? ಶಸ್ತ್ರಾಸ್ತ್ರಗಳ ಸಂಗ್ರಹ ಮಾಡಿ ಹಿಂದೂ ಸಾಮರ್ಥ್ಯವನ್ನು ಬೆಳೆಯಿಸುವ ವಿಚಾರ ಮಾಡಿಲ್ಲವೇ? ಈಗ ಆ ಮಾತುಗಳಿಂದ ಉಪಯೋಗವೇನು? ಕಿಶೋರಿಮೋಹನನ್ನು ತೋರಿಸುತ್ತೇನೆ. ನಡೆಯಿರಿ ನನ್ನದಿನ್ನೊಂದು ಪ್ರಾರ್ಥನೆಯಿರುವದು.

—'ಅದೇನು?'

ಬಾಲಕ—'ಕಿಶೋರಿಮೋಹನನು ನಿಮ್ಮ ಕೈಗೆ ಸಿಕ್ಕನೆಂದರೆ, ನೀವು ಅವನನ್ನು ಕೊಲ್ಲುವದಿಲ್ಲವೆಂದು ವಚನ ಕೊಡಿರಿ.'

ನರ—ಅವನು ನಿನ್ನ ಶತ್ರುವು. ಅಂದ ಬಳಿಕ ನೀನು ಅವನ ಜೀವ ದಾನವನ್ನೇಕೆ ಬೇಡುವಿ?'

ಬಾಲಕ—'ಶತ್ರುವೆಂತಲೇ ಅವನ ಜೀವದಾನ ಬೇಡುವೆನು. ಅವನನ್ನು ಪೀಡಿಸಿ ಪೀಡಿಸಿ ಕೊಲ್ಲಬೇಕಾಗಿದೆ.'

ನರ—'ಒಳ್ಳೇದು, ಹಾಗೆಯೇ ಆಗಲಿ. ನೀನು ಮುಂದೆ ನಡೆ.'

ಮನೋಹರನು ಅಲ್ಲಿಂದ ಹೊರಟು ಕಿಶೋರಿಮೋಹನನ ಹತ್ತರ ಬಂದು ತನ್ನ ಕುದುರೆಯನ್ನು ಅವನಿಗೆ ಕೊಟ್ಟನು. ಕಿಶೋರಿಮೋಹನನು ಅವನ ಮಾರ್ಗವನ್ನೇ ನೋಡುತ್ತಿದ್ದನು. ಮನೋಹರನು ಒಡೆಯನನ್ನು ಕುರಿತು:—ದಣಿಯರೇ, ಬಹು ದೂರದಲ್ಲಿ ಕುದುರೆಯ ಖುರಸಪ್ಪಳವು ಕೇಳಬರುತ್ತದೆ; ಬೇಗನೆ ಓಡಿರಿ, ಎಂದನು. ಆಗ ಕಿಶೋರಿಮೋಹನನು—ತಮ್ಮಾ, ನೀನು ಹೇಗೆ ಬರುವೆ? ಎಂದನು.

ಮನೋಹರ—ನಾನು ನಡೆದು ಬರುವೆನು. ನೀವು ಮೊದಲು ಹೊರಡಿರಿ, ಎಂದನು.

ಕಿಶೋರಿಮೋಹನನು ಕುದುರೆಯನ್ನು ಹತ್ತುವಷ್ಟರಲ್ಲಿಯೇ ನರಸಿಂಹನು ಅಲ್ಲಿಗೆ ಬಂದು, ಅವನನ್ನು ಝಾಡಿಸಿ ಒದ್ದು ಕರ್ಕಶಸ್ವರದಿಂದ—ಎಲೈ ಹಿಂದೂ ಕುಲಾಂಗಾರನೇ, ಇಂಥ ಹೀನ ಕೆಲಸ ಮಾಡಲಿಕ್ಕೆ ನಿನಗೆ ನಾಚಿಕೆ ಬರಲಿಲ್ಲವೆ? ಹಿಂದೂ ರಕ್ತದಿಂದ ನನ್ನ ಖಡ್ಗವನ್ನು ಕಲಂಕಿತ

ಮಾಡುವಂತಿಲ್ಲ; ಇಲ್ಲದಿದ್ದರೆ ಇಷ್ಟೊತ್ತಿಗೆ ನಿನ್ನನ್ನು ಯಮಸದನಕ್ಕೆ ಕಳಿಸುತ್ತಿದ್ದೆನು, ಎಂದನು.

ಕಿಶೋರಿಮೋಹನನು ಮನಸ್ಸಿನಲ್ಲಿ— ನರಸಿಂಹನು ಖಡ್ಗವನ್ನು ಹಿರಿಯುವಂತಿಲ್ಲ. ಇದೊಳ್ಳೇ ಸುಸಂಧಿಯು, ಎಂದು ಭಾವಿಸಿ, ತನ್ನ ಖಡ್ಗವನ್ನು ಹಿರಿದು ನರಸಿಂಹನ ಮೇಲೆ ಏರಿ ಹೋದನು. ನರಸಿಂಹನು ಆ ಗಿಡದ ಒಂದು ಟೊಂಗೆಯನ್ನು ಮುರಿದುಕೊಂಡು ಅವನಿಗೆ ಎದುರಾದನು. ಸಲ್ಪ ಹೊತ್ತಿನಲ್ಲಿ ಕಿಶೋರಿಮೋಹನನ ಕತ್ತಿಯು ನೆಲಕ್ಕೆ ಬಿತ್ತು. ನರಸಿಂಹನು ಅವನನ್ನು ನೆಲಕ್ಕೆ ಕೆಡವಿ, ಅವನ ಎದೆಯ ಮೇಲೆ ಕುಳಿತನು. ಆಗ ಕಿಶೋರಿಮೋಹನನು–ಮನೋಹರಾ, ಮನೋಹರಾ, ಬಾ. ನನ್ನ ಸಹಾಯಕ್ಕೆ ಬಾ, ಎಂದು ಕೂಗಿದನು. ಆಗ ಮನೋಹರನು—ಹುಜೂರ, ಸ್ವಲ್ಪ ತಡೆಯಿರಿ. ಈಗ ನಿಮ್ಮ ಸಹಾಯಕ್ಕೆ ಸೈನ್ಯವನ್ನು ತರುತ್ತೇನೆ, ಎಂದು ಅಂದು, ಸಮೀಪದಲ್ಲಿಯ ಒಂದು ಗಿಡಕ್ಕೆ ಮರೆಯಾದನು.

ಅಷ್ಟರಲ್ಲಿ ೧೦-೧೨ ಜನ ಮುಸಲ್ಮಾನ ಸೈನಿಕರು ಅಕಸ್ಮಾತ್ತಾಗಿ ಅಲ್ಲಿಗೆ ಬಂದರು. ನರಸಿಂಹನಿಗೆ ಓಡಿ ಹೋಗಲಿಕ್ಕೆ ಆಸ್ಪದ ಸಿಗಲಿಲ್ಲ. ಅವರು ಕಿಶೋರಿಮೋಹನನ್ನು ಗುರ್ತಿಸಲು, ಅವರಿಗೆ ನಶೆರಿತಶಹನ ಹೆಸರು ಹೇಳಿ, ನರಸಿಂಹನನ್ನು ಸೆರೆ ಹಿಡಿಸಿಕೊಂಡು ತನ್ನ ಉಪವನಕ್ಕೆ ಹೊರಟನು. ಕಿಶೋರಿಮೋಹನನು ಮನಸ್ಸಿನಲ್ಲಿ—ಈ ಸೈನ್ಯದ ಸಹಾಯವನ್ನು ಮನೋಹರನೇ ಕಳಿಸಿದನೆಂದು ಭಾವಿಸಿದನು. ಮನೋಹರನು ಅಕಸ್ಮಾತ್ತಾಗಿ ಒದಗಿದ ಈ ಪ್ರಸಂಗವನ್ನು ನೋಡಿ ವಿರಕ್ತನಾಗಿ ಸಾವಕಾಶವಾಗಿ ಹೊರಟು ಹೋದನು.

ಇತ್ತ ಯದುನಾರಾಯಣನು ೨-೩ ದಿವಸ ನಾಲ್ಕೂ ದಿಕ್ಕಿನಲ್ಲಿ ನರಸಿಂಹನ ಶೋಧ ಮಾಡಿದನು. ಕಡೆಗೆ ನಿರುಪಾಯನಾಗಿ, ತಾಯಿಯಾದ ತ್ರಿಪುರಾದೇವಿಯ ಹತ್ತರ ಬಂದನು.

ತ್ರಿಪುರಾದೇವಿಗೆ ಈಗ ೩೫-೩೬ ವರ್ಷಗಳು. ತಾರುಣ್ಯದ ತೇಜವು ಅವಳ ದೇಹದಲ್ಲಿ ತುಂಬಿ ಹೊರಚೆಲ್ಲುತ್ತಿತ್ತು. ಅವಳ ರೂಪವು ಎಲ್ಲರ ಚಿತ್ತವನ್ನೂ ಆಕರ್ಷಣೆ ಮಾಡುವಂತೆ ಇದ್ದರೂ, ಅವಳ ದೈವೀತೇಜಸ್ಸಿನಿಂದ ಅವಳನ್ನು ನೋಡಿದವರ ಮನಸ್ಸಿನಲ್ಲಿ ಭಕ್ತಿಯು ಉದ್ರೇಕವಾಗಿ,

ವಿನಯದಿಂದ ತಲೆಬಾಗಿಸುವಂತೆ ಮನಸ್ಸುಂಟಾಗುತ್ತಿತ್ತು. ಪಾಪಿಷ್ಠ ಹೃದಯದವರಿಗಂತೂ ಅವಳ ಮುಖವನ್ನು ನೋಡುವ ಧೈರ್ಯವೇ ಆಗುತ್ತಿದ್ದಿಲ್ಲ. ಯದುನಾರಾಯಣನು ತಾಯಿಗೆ ಎಲ್ಲ ಸಂಗತಿಯನ್ನು ಹೇಳಲು, ಅವಳು:— ಮಗು ನೀನಿದನ್ನು ಇಷ್ಟು ದಿವಸ ಏಕೆ ಹೇಳಲಿಲ್ಲ ವೆಂದಳು.

ಯದು—ಅವ್ವಾ, ನಾನು ನರಸಿಂಹನ ಸಹಾಯಕ್ಕೆ ಜನರನ್ನು ಕಳಿಸ ಬೇಕಾಗಿತ್ತು; ಕಳಿಸಲಿಲ್ಲ. ಅವನು ತಿರುಗಿ ಬರಬಹುದೆಂದು ನಂಬಿಕೆ ಇತ್ತು. ಈ ತಪ್ಪಿನ ಸಲುವಾಗಿ ನಿನಗೆ ತಿಳಿಸಲಿಲ್ಲ.

ತ್ರಿಪುರಾ—ಆಯಿತು. ಪಶ್ಚಾತ್ತಾಪದಿಂದ ಫಲವು ಬೇರೆ ಸಿಗುವ ದಿಲ್ಲವಷ್ಟೇ?

ಯದು—'ಇನ್ನು ಮುಂದೆ ಏನು ಮಾಡಬೇಕು?'

ತ್ರಿಪುರಾ—"ನೀವು ಎಲ್ಲೆಲ್ಲಿ ಹುಡುಕಿದಿರಿ?"

ಯದು—"ಈ ಪಾಂಡುವರ್ಧನದ ನಾಲ್ಕೂ ದಿಕ್ಕಿಗೆ ಶೋಧ ಮಾಡಿ ಸಿದೆನು."

ತ್ರಿಪುರಾ—"ಕಿಶೋರಿಮೋಹನನ ಉಪವನದಲ್ಲಿ?"

ಯದು—'ಇಲ್ಲ.'

ತ್ರಿಪುರಾ—ಅವನು ಅಲ್ಲಿಯೇ ಇರಬಹುದೆಂಬ ಸಂಶಯವು ನನಗೆ ಬರುತ್ತದೆ.

ಯದು—'ಹಾಗಾದರೆ ನಾನು ಈಗ ಸಲ್ತಾನನ ಕಡೆಗೆ ಹೋಗಿ ಬರುತ್ತೇನೆ.'

ತ್ರಿಪುರಾ—'ಅಲ್ಲಿಗೇಕೆ?'

ಯದು—ನವಾಬನಿಗೆ ಹೇಳಿ ದಿವಾಣನನ್ನು ಬಿಡಿಸಿಕೊಂಡು ಬರುವೆನು.

ತ್ರಿಪುರಾ—ಮಗು, ನೀನು ತಪ್ಪುತಿಳಕೊಂಡಿರುವಿ. ನವಾಬನು ನ್ಯಾಯಪ್ರಿಯನಾಗಿದ್ದರೆ ಈ ವರೆಗೆ ನಸೆರಿತನ ಅನೇಕ ಅತ್ಯಾಚಾರಗಳಿಗೆ ಆಶ್ರಯ ಕೊಡುತ್ತಿದ್ದಿಲ್ಲ.

ಯದು—"ಅವ್ವಾ, ನಸೆರಿತನ ಅತ್ಯಾಚಾರಗಳು ನವಾಬನಿಗೆ ತಿಳಿಯ ದಂತೆ ಆಗುತ್ತಿದ್ದರೆ ಅವನೇನು ಮಾಡಬೇಕು? ಸೈಫುದ್ದೀನನು ನ್ಯಾಯಪ್ರಿಯ ನಾಗಿರದಿದ್ದರೆ ನಸೆರಿತನು ನಮ್ಮನ್ನು ಸುಲಕೊಂಡು ಕಳಿಸುತ್ತಿದ್ದನು."

ತ್ರಿಪುರಾ—''ನೀನಿನ್ನೂ ಬಾಲಕನು. ರಾಜನೀತಿಯು ನಿನಗೆ ತಿಳಿಯದು. ಈಗಿನ ಸುಲ್ತಾನ ಸೈಫುದ್ದೀನನು ತನ್ನ ತಂದೆಯಾದ ಗೈಸುದ್ದೀನನಿಗೆ ವಿಷ ಕೊಟ್ಟು ಕೊಂದು ನವಾಬನಾಗಿರುವನು. ಗೈಸುದ್ದೀನನು ತನ್ನ ತಂದೆಯಾದ ಶಿಕಂದರನ ಕೊಲೆ ಮಾಡಿಸಿ ಬಾದಶಹನಾಗಿದ್ದನು. ತಮ್ಮ ಚರಿತ್ರೆಯ ಭಯದಿಂದ ಸೈಫುದ್ದೀನನೂ ತನ್ನ ಮಗನಾದ ನಸೆರಿತನೂ ತನ್ನನ್ನು ಕೊಂದು ಪಟ್ಟಕ್ಕೆ ಕೂಡಬಹುದೆಂದು ಶೂರ ಗಣೇಶನಾರಾಯಣರಿಗೆ ಆಶ್ರಯ ಕೊಟ್ಟಿರುವನು. ಇದರಲ್ಲಿ ನವಾಬನ ರಾಜನೀತಿಯೆಂದರೆ, ರಾಜಾ ಗಣೇಶನಾರಾಯಣರೂ ನಸೆರಿತಶಹನೂ ಹೆಚ್ಚು ಪ್ರಬಲರಾಗದೆ ತನ್ನ ಅಂಕಿತದಲ್ಲಿರಬೇಕೆಂಬ ಸ್ವಾರ್ಥವು. ಅವನೇನೂ ನ್ಯಾಯಪ್ರಿಯತೆಗಾಗಿ ನಮ್ಮನ್ನು ಇಲ್ಲಿಟ್ಟುಕೊಂಡಿಲ್ಲ.

ಯದು—ಪಿತೃ ಘಾತುಕಿಗಳಾದ ಈ ಪಠಾಣರ ರಾಜ್ಯವು ಎಂದು ನಾಶವಾಗುವದು?

ತ್ರಿಪುರಾ—ನಾಶವು ಸೃಷ್ಟಿಯ ಕ್ರಮವು; ಅಂದಬಳಿಕ ಪಠಾಣರ ರಾಜ್ಯವು ನಾಶವಾಗತಕ್ಕದ್ದೇ.

ಯದು—ಇವರ ನಾಶದ ನಂತರ ಅರಸರಾಗತಕ್ಕವರು ಯಾರು?

ತ್ರಿಪುರಾ—ಈ ಭಾರತವು ನಮ್ಮದು. ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು ಇರುತ್ತದೆ. ನಮ್ಮಲ್ಲಿ ಐಕ್ಯವುಂಟಾಗದಂತೆ ಮಾಡುವದೇ ಪರದೇಶದವರ ಧ್ಯೇಯವು ಕಾರಣ ಯಾವಾಗ್ಗೆ ನಮ್ಮಲ್ಲಿ ಐಕ್ಯವುಂಟಾಗುವದೋ ಆಗ ನಾವೇ ಅರಸರಾಗತಕ್ಕವರು.

ಯದು—ಅವ್ವಾ, ಹಿಂದೂ-ಮುಸಲ್ಮಾನರಲ್ಲಿ ನಿಜವಾಗಿ ಐಕ್ಯವುಂಟಾಗಲಿಕ್ಕಿಲ್ಲವೇನು?

ತ್ರಿಪುರಾ—ಅದು ಶಕ್ಯವಿಲ್ಲ. ಈ ಬಗ್ಗೆ ನಿನ್ನ ಹಡೆದವರು ಒಂದೇಸವನೆ ಪ್ರಯತ್ನ ನಡೆಯಿಸಿರುವರು. ನಾನು ಹೇಳಿದ ಮಾತು ಅವರ ಮನಸ್ಸಿಗೆ ಬಂದಿಲ್ಲ. ಅದರ ಫಲವು ದೇಶದಲ್ಲಿಯ ನಿರಪರಾಧಿ ಹಿಂದುಗಳ ಪೀಡನೆಯೇ ಸರಿ.

ಯದು—ದಿವಾಣಜಿಯವರ ಬಿಡುಗಡೆಯ ಸಲುವಾಗಿ ನಾನು ಈಗ ಏನು ಮಾಡಬೇಕು?

ತ್ರಿಪುರಾ—ಅನ್ಯರ ಸಹಾಯವನ್ನು, ಅದರಲ್ಲಿಯೂ ಮುಸಲ್ಮಾನರ

ಸಹಾಯವನ್ನು ಇಚ್ಛಿಸಬೇಡ. ಈ ಬಗ್ಗೆ ನವಾಬನ ಸಹಾಯವನ್ನಿಚ್ಛಿಸದೆ ಪ್ರಯತ್ನ ಮಾಡು. ಸಾಧ್ಯವಾಗದಿದ್ದರೆ ಮುಂದಿನ ವಿಚಾರವು.

( ೯ )

ಕಿಶೋರಿಮೋಹನನು ದಿವಾಣ ನರಸಿಂಹನನ್ನು ಒಂದು ಆಳವಾದ ಬಾವಿಯಲ್ಲಿ ಇರಿಸಿದ್ದನು. ಅದು ಬಹಳ ಆಳವಿದ್ದು ಅಲ್ಲಿ ಸ್ವಲ್ಪ ಸಹ ಬೆಳಕಿದ್ದಿಲ್ಲ. ದಿನಾಲು ಅವನಿಗೆ ಮೇಲಿನಿಂದಲೇ ಮನೋಹರನು ಅನ್ನವನ್ನು ಚೆಲ್ಲುತ್ತಿದ್ದನು. ಆ ಬಾವಿಯು ಅಗಲವಿತ್ತು. ನಟ್ಟನಡುವೆ ಎತ್ತರವಾದ ಕಟ್ಟೆ ಇದ್ದು, ಸುತ್ತಲೂ ನೀರು. ನರಸಿಂಹನು ಆ ಕಟ್ಟೆಯ ಮೇಲೆ ಕುಳಿತು ಕಾಲಕಳೆಯಹತ್ತಿದನು. ಅಲ್ಲಿಂದ ಪಾರಾಗಲು ಮಾರ್ಗವೇ ಇದ್ದಿಲ್ಲ ಅವನು ಎಷ್ಟು ಗಟ್ಟಿಯಾಗಿ ಚೀರಿದರೂ ಕೂಡ ಸ್ವರವು ಮೇಲಕ್ಕೆ ಕೇಳಿಸದಷ್ಟು ಆಳವಾದ ಬಾವಿಯು ಅದಾಗಿತ್ತು.

ಒಂದು ದಿನ ರಾತ್ರಿ ಮೇಲಿನಿಂದ ಏನೋ ಬಿದ್ದ ಸಪ್ಪಳವಾಗಲು, ನರಸಿಂಹನು ಎಚ್ಚತ್ತು ನೋಡಲು ಮೇಲಿನಿಂದ ಹಗ್ಗ ಕಟ್ಟಿದ ಒಂದು ತೊಟ್ಟಿಲವನ್ನು ಕೆಳಗೆ ಬಿಟ್ಟಿದ್ದರು. ತೊಟ್ಟಿಲದಲ್ಲಿ ಒಂದು ದೀಪವಿದ್ದು ಅದರ ಹತ್ತರ ಒಂದು ಪತ್ರವೂ ಇತ್ತು. ಆ ಪತ್ರದಲ್ಲಿ—

"ದಿವಾಣಜೀ, ನೀವು ಸಂಶಯ ತೆಗೆದುಕೊಳ್ಳದೆ ತೊಟ್ಟಿಲದಲ್ಲಿ ಕುಳ್ಳಿರಿ; ನಾನು ಮೇಲಕ್ಕೆ ಜಗ್ಗುತ್ತೇನೆ." ನಿಮ್ಮ

ವಿಶ್ವಾಸಘಾತುಕನಾದ ಬಾಲಕ.

ಪತ್ರವನ್ನು ಓದಿ ನರಸಿಂಹನಿಗೆ ಬಹಳ ಆಶ್ಚರ್ಯವಾಯಿತು, ಯಾಕಂದರೆ ಗಣೇಶನಾರಾಯಣನಿಗೆ ಹಿಂದಕ್ಕೆ ಊರು ಬಿಟ್ಟು ಹೊರಡಬೇಡವೆಂದು ಬರೆದ ಪತ್ರವೂ ಈ ಪತ್ರವೂ ಒಬ್ಬರ ಬರಹದಂತೆಯೇ ಭಾಸವಾಯಿತು; ಆದರೆ ಈ ಪತ್ರದಲ್ಲಿಯ ವಿಶ್ವಾಸಘಾತಕ ಬಾಲಕನೆಂದರೆ, ತನಗೆ ಕಿಶೋರಿಮೋಹನನನ್ನು ತೋರಿಸಿದ ಹುಡುಗನು. ಗಣೇಶನಾರಾಯಣನ ಪತ್ರವನ್ನು ಬರೆದವರು ಹೆಂಗಸೆಂದು ನರಸಿಂಹನು ತರ್ಕಿಸಿದ್ದನು. ಈಗ ಮಾತ್ರ ಅವನು ಈ ಎರಡೂ ಪತ್ರಗಳನ್ನು ಬರೆದವರು ಒಬ್ಬರೇ ಎಂದು ಭಾವಿಸಿದನು; ಮತ್ತು ಅವನು ಮನಸ್ಸಿನಲ್ಲಿ ಗಂಡಸರ ಅಕ್ಷರಗಳು ಹೆಂಗಸರಂತೆ ಯಾಕಾಗಬಾರದೆಂದು ಕಲ್ಪಿಸಿಕೊಂಡನು. ಏನೇ ಆಗಲಿ, ಈ ಪತ್ರ ಬರೆ

ದವನಂತೂ ನನ್ನ ಹಿತಚಿಂತಕನು. ಈ ಪತ್ರದಂತೆ ನಡೆಯಲು ಅಡ್ಡಿಯಿಲ್ಲ ವೆಂದು ತೊಟ್ಟಿಲದಲ್ಲಿ ಕುಳಿತನು. ಬಹಳ ಹೊತ್ತಾದರೂ ತೊಟ್ಟಿಲವು ಅಲ್ಲೇ ಅಲ್ಲಾಡಿತು. ಮೇಲಕ್ಕೆ ಎಳೆಯಲ್ಪಡಲಿಲ್ಲ. ಆಗ ಅವನು ಆ ಬಾಲಕನೊಬ್ಬನಿಂದಲೇ ತನ್ನನ್ನು ಎಳೆಯುವದಾಗಲಿಲ್ಲವೆಂದು ಭಾವಿಸಿ, ನಿರಾಶನಾದನು.

ಮನೋಹರನು ತನ್ನ ಯಾವತ್ತೂ ಶಕ್ತಿಯನ್ನುಪಯೋಗಿಸಿ ಎಳೆಯಲು ಪ್ರಯತ್ನಿಸಿದನು ಸಾಧ್ಯವಾಗಲಿಲ್ಲ. ಕಡೆಗೆ ಅವನು ಅಶ್ವಶಾಲೆಗೆ ಹೋಗಿ ಒಂದು ಕುದುರೆಯನ್ನು ಬಿಚ್ಚಿಕೊಂಡು ಬಂದು ಅದಕ್ಕೆ ಹಗ್ಗವನ್ನು ಕಟ್ಟಿ ಎಳೆಯಿಸಲಿಕ್ಕೆ ಪ್ರಯತ್ನ ಮಾಡಿದನು; ಆದರೆ ಕುದುರೆಯು ಸರಳ ವಾಗಿ ಮುಂದಕ್ಕೆ ನಡೆಯದೆ. ಮುಂಗಾಲುಗಳನ್ನು ಮೇಲಕ್ಕೆತ್ತಿ ಗಟ್ಟಿಯಾಗಿ ಹೇಷಾರವವನ್ನು ಮಾಡಿತು. ಆಗ ಮನೋಹರನು ಗಾಬರಿಯಾಗಿ ಅದನ್ನು ಬಿಚ್ಚಿ ಬಿಟ್ಟನು. ಕುದುರೆಯ ಗದ್ದಲಕ್ಕೆ ಕಿಶೋರಿಮೋಹನನಿಗೆ ಎಚ್ಚರ ವಾಗಲು ಆತನು ೩-೪ ಜನರನ್ನು ಕರಕೊಂಡು ಅತ್ತಕಡೆಗೇ ಬಂದನು. ಮನೋಹರನು ಅಲ್ಲಿಂದ ಓಡಿ ಹೋಗುವ ಪ್ರಯತ್ನವನ್ನು ಮಾಡಲಿಲ್ಲ. ಕಿಶೋರಿಮೋಹನನು ಅವನನ್ನು ಕುರಿತು: ಮನೋಹರ, ಬಾವಿಯ ಹತ್ತರ ಯಾಕೆ ಕುಳಿತಿರುವಿ? ಎಂದು ಕೇಳಿದನು.

ಮನೋ:—ನಿಮ್ಮ ಕಾವಲುಗಾರರೆಲ್ಲರೂ ವೈಗಳ್ಳರು; ಆದ್ದರಿಂದ ನಾನಿಲ್ಲಿ ನಿಲ್ಲಬೇಕಾಯಿತು.

ಕಿಶೋ:—ಹೌದು; ಒಬ್ಬರೂ ಇಲ್ಲವಲ್ಲ! ಅವರೆಲ್ಲಿಗೆ ಹೋಗಿರುವರು?

ಮನೋ:—ಮಲಗಲು ಹೋಗಿರಬಹುದು. ನನಗೂ ನಿದ್ದೆ ಬರ್ರು ತ್ತಿತ್ತು; ಆದರೆ ಕುದುರೆಯ ಒದರಾಟಕ್ಕೆ ಎದ್ದು ಇಲ್ಲಿಗೆ ಒಂದೆನು. ನಾನು ಬರದಿದ್ದರೆ ಬಂದಿಯು ಪಾರಾಗಿ ಹೋಗುತ್ತಿದ್ದನು.

ಕಿಶೋ—ಅದು ಹೇಗೆ?

ಮನೋ—ಕುದುರೆಯು ಒದರಿದ್ದು ಕೇಳಲಿಲ್ಲವೇನು?

ಕಿಶೋ—ಅದನ್ನು ಕೇಳಿಯೇ ಇತ್ತ ಬಂದೆನು.

ಮನೋ—ಇಬ್ಬರು ಕುದುರೆಯ ಸ್ವಾರರು ಓಡಿ ಹೋದದ್ದನ್ನು ನೀವು ನೋಡಲಿಲ್ಲವೇ? ಅವರು ಬಂದಿಯನ್ನು ಬಿಡಿಸಿಕೊಂಡು ಹೋಗಲು ಬಂದಿದ್ದರು. ತೊಟ್ಟಿಲಕ್ಕೆ ಹಗ್ಗವನ್ನು ಸಹ ಕಟ್ಟಿ ಒಳಗೆ ಬಿಟ್ಟಂತೆ ಕಾಣಿ

ಸುವದು. ಅಷ್ಟರಲ್ಲಿ ನಾನು ಬಂದೆನು, ಎಂದು ಹಗ್ಗದ ಕಡೆಗೆ ಕೈ ಮಾಡಿ ತೋರಿಸಿದನು.

ಕಿಶೋರಿಮೋಹನನು ಮುಂದೆ ಬಂದು ನೋಡಿ—ವಾಹವ್ವಾ! ಮನೋಹರ, ನಿನ್ನ ಉಪಕಾರವು ಬಹಳವಾಯಿತು. ಹಿಂದಕ್ಕೆ ನರಸಿಂಹನ ಕೈಗೆ ಸಿಕ್ಕಾಗ ನೀನು ಸೈನ್ಯ ಕಳಿಸಿದ್ದರಿಂದ ಪಾರಾದೆನು. ಈಗ ಬಂದಿಯು ಓಡಿ ಹೋಗಿದ್ದರೆ, ಸುಲ್ತಾನನಿಗೆ ಮೋರೆಯನ್ನು ತೋರಿಸುವದು ಕಠಿಣವಿತ್ತು, ಎಂದು ಅಂದು, ಕಾವಲುಗಾರರನ್ನು ಕರೆಯಿಸಿ, ಅವರಿಗೆ ಸಿಟ್ಟು ಮಾಡಿ ಮನೆಯೊಳಗೆ ಹೋದನು.

ಮರುದಿವಸ ಯದುನಾರಾಯಣನು ೨೫ ಜನರನ್ನು ಕರೆದುಕೊಂಡು ಕಿಶೋರಿಮೋಹನನ ಉಪವನವನ್ನು ಮುತ್ತಿದನು. ಕಿಶೋರಿಮೋಹನನು ಅಂಜಿ ಊರೊಳಗೆ ಓಡಿ ಹೋದನು. ಮನೋಹರನ ಮನಸ್ಸು ಊರಲ್ಲಿ ಹೋಗುವದಿದ್ದಿಲ್ಲ; ಆದರೆ ಒಡೆಯನ ಅತಿ ಜುಲುಮೆಯ ಸಲುವಾಗಿ ಅವನೂ ಪಟ್ಟಣವನ್ನು ಸೇರಿದನು. ಯದುನಾರಾಯಣನು ಆ ಉಪವನವನ್ನು ಎಷ್ಟು ಸೂಕ್ಷ್ಮವಾಗಿ ಹುಡುಕಿದರೂ ಅಲ್ಲಿ ನರಸಿಂಹನು ಸಿಗಲಿಲ್ಲ. ನಿರಾಶನಾಗಿ ತನ್ನ ಮನೆಗೆ ಬಂದನು.

## ( ೧೦ )

ಚಳಿಗಾಲದ ಮೂರು ಸಂಜೆಯ ಸಮಯವು; ಆದೇ ಮೂಡುತ್ತಿರುವ ಚಂದ್ರಮನು ನವಾಬನ ಅಂತಃಪುರದ ಉದ್ಯಾನದಲ್ಲಿ ಹಣಕಿ ನೋಡುತ್ತಿದ್ದನು. ಉದ್ಯಾನದಲ್ಲಿಯ ಮಲ್ಲಿಗೆ ಮೊಗ್ಗೆಗಳು ಅರಳ ತೊಡಗಿದಂತೆ, ಆಕಾಶದಲ್ಲಿ ನಕ್ಷತ್ರಗಳೂ ಮೂಡ ತೊಡಗಿದ್ದವು. ಆ ನವಾಬನ ಉದ್ಯಾನವು ಪೃಥ್ವಿಯ ಸೌಂದರ್ಯವನ್ನೇ ಹೀರಿಕೊಂಡಿತ್ತು. ಹೆಚ್ಚು ವರ್ಣಿಸುವದೇನು? ಆ ಉದ್ಯಾನವು ನಂದನವನದ ಪ್ರತಿಬಿಂಬವಾಗಿತ್ತು. ಆದರೂ ನಂದನವನದಲ್ಲಿರದ ಪದಾರ್ಥವು ಆ ಉದ್ಯಾನದಲ್ಲಿತ್ತು. ಅದೇನಂದರೆ, ಸ್ವರ್ಗದಲ್ಲಿ ಸಹ ಇರದಂಥ ಸುಂದರ ಯುವತಿಯೋರ್ವಳು ಆಗ ಆ ಉದ್ಯಾನ ಮಧ್ಯದಲ್ಲಿರುವ ಲತಾಮಂಟಪದಲ್ಲಿ ಕುಳಿತಿದ್ದಳು. ಅವಳ ವಯಸ್ಸು ಸುಮಾರು ೧೪–೧೫ ವರ್ಷ. ಅವಳ ಯೌವನವು ಇನ್ನೂ ಪೂರ್ಣಾವಸ್ಥೆಗೆ ಬಂದಿದ್ದಿಲ್ಲ. ಶುಕ್ಲಾಷ್ಟಮಿಯ ಚಂದ್ರನಂತೆ, ಸಂಧ್ಯಾಕಾಲದ ಮಲ್ಲಿಗೆಯ ಮೊಗ್ಗೆಯಂತೆ ಅವಳ ಯೌವನವು ಪೂರ್ಣಾವಸ್ಥೆಗೆ ಮುಟ್ಟಿದ್ದಿಲ್ಲ. ಅವಳು

ಸೈಫುದ್ದೀನನ ಚಿಕ್ಕ ಹೆಂಡತಿಯ ಮಗಳು. ಅವಳ ಹೆಸರು 'ಮರಿಯಮ ಬೇಗಮ.' ಮರಿಯಮಳು ಅವಿವಾಹಿತಳು. ಅವಳ ಲಗ್ನವನ್ನು ನಶೆರಿತನ ಸಂಗಡ ಮಾಡಬೇಕೆಂದು ಸೈಫುದ್ದೀನನ ಮನಸ್ಸಿತ್ತು. ಈ ವಿಚಾರಕ್ಕೆ ಮರಿಯಮಳ ಒಪ್ಪಿಗೆಯಿದ್ದಿಲ್ಲ. ಸೈಫುದ್ದೀನನು ತನ್ನ ಜೀವಕ್ಕಿಂತ ಮರಿಯಳನ್ನು ಹೆಚ್ಚು ಪ್ರೀತಿಸುತ್ತಿದ್ದ ಕಾರಣ, ಅವಳ ಮನಸ್ಸಿನ ವಿರುದ್ಧವಾಗಿ ವಿವಾಹ ಮಾಡಲು ನವಾಬನ ಮನಸ್ಸಿದ್ದಿಲ್ಲ. ಮರಿಯಮಳಿಗೆ ಪಾಪದ ಕಲ್ಪನೆಯು ಕೂಡ ಗೊತ್ತಿದ್ದಿಲ್ಲ. ಈ ಅಪೂರ್ವ ಸುಂದರಿಯ ಮೇಲೆ ನಶೆರಿತನ ಮೋಹವು ಬಹಳವಿತ್ತು; ಆದರೆ ಅವಳು ತನ್ನನ್ನು ಪ್ರೀತಿಸುವದಿಲ್ಲೆಂಬದು ಅವನಿಗೆ ಗೊತ್ತಿತ್ತು. ಆದರೂ ಅವನು ಅವಳ ಆಶೆಯನ್ನು ಬಿಟ್ಟಿದ್ದಿಲ್ಲ. ಅನುಕೂಲ ಸಮಯವನ್ನು ನಿರೀಕ್ಷಿಸುತ್ತಿದ್ದನು.

ಅಂತಃಪುರದ ಉದ್ಯಾನದಲ್ಲಿ ನಶೆರಿತಶಹನಿಗೆ ಸಹ ಬೇಕಾದ ಹಾಗೆ ಪ್ರವೇಶಮಾಡುವ ಅಧಿಕಾರವಿದ್ದಿಲ್ಲ. ಉದ್ಯಾನದ ಸುತ್ತಲೂ ಎತ್ತರವಾದ ಕಲ್ಲಿನ ಗೋಡೆಯು. ಬಾಗಿಲಲ್ಲಿ ಸಶಸ್ತ್ರ ಪಠಾಣರ ಕಾವಲು. ಮರಿಯಮಳು ತನ್ನ ಸಖಿಯಾದ ಲತೀಫೆಯೊಂದಿಗೆ ಒಂದು ಲತಾಮಂಟಪದಲ್ಲಿ ಕುಳಿತು ಆಕಾಶದಲ್ಲಿಯ ಚಂದ್ರನ ಕಡೆಗೆ ನೋಡುತ್ತಿದ್ದಳು; ಅಥವಾ ಚಂದ್ರನೇ ಲತಾಪುಷ್ಪದ ಸಂದಿಯೊಳಗಿಂದ ಆ ಮರಿಯಮಳನ್ನು ನೋಡುತ್ತಿದ್ದನೆನ್ನಬಹುದು. ಮರಿಯಮಳು ಮತ್ತು ಚಂದ್ರನು ಈ ಇಬ್ಬರಲ್ಲಿ ಯಾರು ಸುಂದರರೆಂಬುದನ್ನು ಹೇಳುವದು ಕಠಿಣವಾಗಿತ್ತು; ಯಾಕಂದರೆ ಸೌಂದರ್ಯವು ವಸ್ತುಗಳಲ್ಲಿರದೆ ನೋಡುವವನ ಕಣ್ಣುಗಳಲ್ಲಿರುವದು. ನಾವು ಚಿಕ್ಕಂದಿನಲ್ಲಿ ಚಂದ್ರನಿಗೆ ಸುಂದರನೆನ್ನುತ್ತೇವೆ. ತಾರುಣ್ಯದಲ್ಲಿ ಸ್ತ್ರೀಯರಿಗೆ ಸುಂದರರೆನ್ನುತ್ತೇವೆ. ಅದೇ ಮುಪ್ಪಿನಲ್ಲಿ ಆ ಎರಡು ವಸ್ತುಗಳಿಗೂ ಸುಂದರತ್ವದ ಮಾನ ಕೊಡುವದಿಲ್ಲ. ಮರಿಯಮಳು ಕ್ಷಣಕಾಲ ಚಂದ್ರನ ಕಡೆಗೆ ನೋಡಿ, ದಾಸಿಯನ್ನು ಕುರಿತು—'ಲತೀ, ಚಂದ್ರನು ಪ್ರತಿದಿವಸ ಉದಯವಾಗುವದಿಲ್ಲವೇಕೆ ?' ಎಂದಳು.

ಲತೀ—'ಬೇಗಮ ನೀವು ದಿನಾಲು ಉದ್ಯಾನಕ್ಕೇಕೆ ಬರುವದಿಲ್ಲ? '

ಮರಿ—'ನಿನ್ನ ಮಾತು ಅಸಂಗತವು.'

ಲತೀ—ಅಸಂಗತವಲ್ಲ. ಆಕಾಶದಲ್ಲಿ ಅಸಂಖ್ಯ ನಕ್ಷತ್ರಗಳಿದ್ದಂತೆ ಈ ಉದ್ಯಾನದಲ್ಲಿ ಅನೇಕ ಪುಷ್ಪಗಳಿವೆ. ಆಕಾಶದಲ್ಲಿ ಚಂದ್ರನ ಉದಯವು;

ಇಲ್ಲಿ ನಿಮ್ಮ ಆಗನುಸವು. ನಕ್ಷತ್ರಗಳಿಂದ ಸುತ್ತುಗಟ್ಟಿದ ಚಂದ್ರನ ಮತ್ತು ಪುಷ್ಪವೇಷ್ಟಿತೆಯರಾದ ನೀವು ಈ ಇಬ್ಬರಲ್ಲಿ ಯಾರು ಸುಂದರರೆಂಬದನ್ನು ನೀವೇ ಹೇಳಿರಿ.

ಮರಿ—ಛೀ! ಬಿಡು. ಚಂದ್ರನ ಸಂಗಡ ನನ್ನ ಹೋಲಿಕೆಯು?

ಲತೀ—ಬೇಗಮು, ಚಂದ್ರಮನಿಗಿಂತ ನೀವು ಶ್ರೇಷ್ಠರು. ಯಾಕಂದರೆ ಚಂದ್ರನ ರೂಪವನ್ನು ನೋಡಿ ಜನರು ಮೈ ಮರೆಯುವದಿಲ್ಲ; ಆದರೆ ನಿಮ್ಮ ರೂಪವನ್ನು ನೋಡಿ ಪುರುಷರು ಮೈ ಮರೆಯುವರು. ಚಂದ್ರಮನಿಂದ ಜನರಿಗೆ ಕೆಡಕಾಗುವದಿಲ್ಲ; ಆದರೆ ನಿಮ್ಮಿಂದ ಜನರ ಸರ್ವಸ್ವವೂ ನಾಶ ವಾಗುವದು.

ಮರಿ—ಏನು, ನಾನು ಜನರ ಸರ್ವಸ್ವವನ್ನು ನಾಶ ಮಾಡತಕ್ಕವಳೇ?

ಲತಿ—ಹೌದು. ಚಂದ್ರನಿಂದ ಕೆಡಕಿಲ್ಲವೆಂದು ಭಾವಿಸಿ ಅವನ ಮುಖಕ್ಕೆ ಅವಗುಂಠನವಿಲ್ಲ; ಆದರೆ ನಿಮ್ಮ ಮುಖ ನೋಡಿದರೆ ಸಾಕು; ಜನರ ನಾಶವಾಗುವದೆಂದು ತಿಳಿದು, ನಿಮ್ಮ ಮುಖಚಂದ್ರಮನಿಗೆ ಅವ ಗುಂಠನವಿರುವದು.

ಮರಿ—ಲತೀಫೆ, ನಾನು ಈ ವರೆಗೆ ಯಾರ ನಾಶವನ್ನು ಮಾಡಿರುವೆನು?

ಲತೀ—ಬೇಗಮು, ಈಗ ಇಬ್ಬರ ನಾಶವನ್ನು ಮಾಡಿರುವಿರಿ. ಒಬ್ಬನು ನಶೀರಿತಶಹಾ. ಈಗ ನವಾಬಪುತ್ರನ ಹೃದಯದಲ್ಲಿ ವಾಸನಾಥಲವು ಪ್ರಜ್ವ ಲಿಸಹತ್ತಿರುವದು. ಇನ್ನೊಬ್ಬನು ಯದುನಾರಾಯಣನು. ಯದುನಾರಾ ಯಣನ ಹೃದಯದಲ್ಲಿ ವಾಸನೆಯು ಪ್ರಬಲವಿರದಿದ್ದರೂ ಈಗ ಅವನು ಆತ್ಮಾ ಹಾರನಾಗಿ ಸಾತ್ವಿಕ ಪ್ರೇಮದಿಂದ ನಿಮ್ಮನ್ನು ಪ್ರೀತಿಸುವನು. ಕಡೆಗೆ ಅವನೂ ಒಂದು ದಿವಸ ಈ ಪ್ರೇಮಾನಲದಲ್ಲಿ ಹತಾಶಹೃದಯನಾಗಿ ದೇಹ ವನ್ನರ್ಪಿಸತಕ್ಕವನೇ.

ಮರಿ—ಕುಮಾರನು ಹತಾಶನಾಗುವದೇಕೆ? ನಾನು ಅವನ ದಾಸಿಯು.

ಲತೀ—ನಿಮ್ಮ ಈ ಪ್ರೇಮವೇ ಅವನಿಗೆ ಮೃತ್ಯುವು. ಬೇಗಮ ಸಾಹೇಬ, ನಿಮ್ಮೊರ್ವರ ಮಿಲನವು ಶಕ್ಯವಿರುವದೇ? ವಿಚಾರ ಮಾಡಿ ನೋಡಿರಿ.

ಮರಿ—'ಅದೇಕಶಕ್ಯವು?'

ಲತೀ—ಯದುನಾರಾಯಣನು ಕಾಫರನು. ಅವನ ಸಂಗಡ ನವಾಬ ಪುತ್ರಿಯ ವಿವಾಹವು ಹೇಗೆ ಶಕ್ಯವು?

ಮರಿ—ಧರ್ಮವೆಂದರೇನು? ಹೃದಯದ ಇಚ್ಛೆಯೇ ಧರ್ಮವಲ್ಲವೇ?

ಲತೀ—ಬೇಗಮುಸಾಹೇಬ, ನಾನು ವಿನಯದಿಂದ ಹೇಳಿಕೊಳ್ಳುವದೇನಂದರೆ, ನೀವು ಕುಮಾರ ಯದುನಾರಾಯಣನ ಮಂಗಲವನ್ನು ಬಯಸುತ್ತಿದ್ದರೆ, ಅವನ ದರ್ಶನದ ಇಚ್ಛೆಯನ್ನು ಸಹ ಮಾಡಬೇಡಿರಿ; ಯಾಕಂದರೆ, ನಶೆರಿತನ ಗುಪ್ತ ಚರರು ಯಾವಾಗಲೂ ಎಲ್ಲ ಕಡೆಗೂ ತಿರುಗುತ್ತಿರುವರು.

ಮರಿ—ಈ ಉದ್ಯಾನದಲ್ಲಿ ಬರಲು ಬೇರೆಯವರಿಗೆ ಸಾಧ್ಯವಿಲ್ಲ. ಒಂದು ವೇಳೆ ಇದ್ದರೂ ಕುಮಾರನಿಗೇನು ಭಯ? ಲತೀಫಾ, ಕುಮಾರನು ಇಂದು ಇಲ್ಲಿಗೆ ಬರಲಿಕ್ಕಿಲ್ಲವೇನು? ಹೌದು, ಬರುವ ಬಗೆ ಹೇಗೆ? ಈ ಉದ್ಯಾನದ ಸುತ್ತಲೂ ಎತ್ತರವಾದ ಗೋಡೆಯು. ಹೊರಗೆ ಸಶಸ್ತ್ರ ಕಾವಲು. ಅದರಿಂದ ಇಲ್ಲಿ ಇರುವೆ ಕೂಡ ಬರಲಿಕ್ಕೆ ಆಸ್ಪದವಿಲ್ಲ.

ಲತೀ—ಇರುವೆ ಬಾರದಂಥ ಸ್ಥಳದಲ್ಲಿ ಪ್ರೇಮಿಗಳು ಬರುವರು. ಆ ವಿಷಯವೇ ಅಂತಹದು.

ಮರಿ—ಲತೀಫಾ, ನನ್ನ ಸಲುವಾಗಿ ಅವರು ಇಷ್ಟು ಸಾಹಸ ಪಡಬಹುದೇ?

ಅಷ್ಟರಲ್ಲಿ ಮಂಟಪದ ಹೊರಗಿನಿಂದ ಹೌದು. ಮರಿಯಮ, ನಿನ್ನ ಸಲುವಾಗಿ ನಾನು ಬೇಕಾದಂಥ ಕಾರ್ಯವನ್ನು ಮಾಡಬಲ್ಲೆನು, ಎಂಬ ಶಬ್ದವು ಕೇಳ ಬಂತು. ಇಬ್ಬರೂ ಚಮಕಿತರಾಗಿ ಆ ಕಡೆಗೆ ನೋಡಲು, ನಿಜವಾಗಿಯೂ ಕುಮಾರನು ಅಲ್ಲಿಗೆ ಬಂದಿದ್ದನು.

ಆ ಸ್ವಚ್ಛವಾದ ಬೆಳದಿಂಗಳಲ್ಲಿ ಇಬ್ಬರೂ ಪ್ರೇಮಿಗಳು ಒಬ್ಬರನ್ನೊಬ್ಬರು ನೋಡುತ್ತ ನಿಂತರು. ಹೃದಯದಲ್ಲಿ ಪ್ರೇಮವು. ಕಣ್ಣುಗಳಲ್ಲಿ ಆನಂದದ ತೇಜವು. ಇಬ್ಬರೂ ವೈ ಮರೆತು ಸುಮ್ಮನೆ ನೋಡಹತ್ತಿದರು. ಒಬ್ಬರ ಬಾಯಿಂದಲೂ ಮಾತು ಹೊರಡಲಿಲ್ಲ. ಆಗ ದಾಸಿಯು ಯದುನಾರಾಯಣನನ್ನು ಕುರಿತು—ಕುಮಾರ, ನೀವು ಇಲ್ಲಿಗೆ ಹೇಗೆ ಬಂದಿರಿ? ಎಂದಳು.

ಯದು—ಗೋಡೆಯನ್ನು ಹತ್ತಿ.

ಲತೀ—ತಿರುಗಿ ಹೊರಗೆ ಹೋಗುವ ಬಗೆ ಹೇಗೆ?

ಯದು—ಬಂದ ಹಾದಿಯಿಂದ,

ಲತೀ—ಹಾಗಾದರೆ ತೀವ್ರ ಹೊರಟು ಹೋಗಿರಿ. ನಶೆರಿತನ ಗುಪ್ತ ಚರರು ಎಲ್ಲ ಕಡೆಗೂ ಇರುವರು.

ಯದು—ಒಳ್ಳೇದು. ಮರಿಯುನಳನ್ನು ಕಣ್ತುಂಬ ನೋಡಿ ಹೋಗುವೆನು, ಎಂದು ಕ್ಷಣಕಾಲ ತಡೆದು, ನಂತರ-ಮರಿಯುನ, ನಾನು ಹೋಗಿ ಬರುತ್ತೇನೆ.

ಮರಿ—ಕುಮಾರ, ಇನ್ನೂ ಸ್ವಲ್ಪ ತಡೆ; ನಾನು ನಿನ್ನನ್ನು ಇನ್ನೂ ಪೂರಾ ನೋಡಿಲ್ಲ.

ಲತೀ—ನವಾಬಪುತ್ರೀ ಅನಂತಕಾಲ ನೋಡಿದರೂ ನಿನಗೆ ತೃಪ್ತಿ ಆಗಲಿಕ್ಕಿಲ್ಲ. ಕುಮಾರನು ಹೋಗಲಿ ಬಿಡು. ಅವನ ಜೀವಕ್ಕೆ ಮುಳುವಾಗಬೇಡ.

ಮರಿ—ನೀನು ಬಹಳೇ ನಿರ್ದಯಳು. ನಾನು ಇವನ ಜೀವಕ್ಕೆ ಮುಳುವೇ? ನಾನು ತಂದೆಗೆ ಹೇಳಿ, ಕುಮಾರನನ್ನೇ ವಿವಾಹವಾಗುವೆನು. ತಂದೆ ಮಾಡುವದೇನು?

ಲತೀ—ನಿಮ್ಮ ತಂದೆ ಮಾಡುವದೇನೇ? ಕುಮಾರನ ಜೀವ ಹರಣ ಮಾಡುವನು. ಕುಮಾರ, ಇನ್ನು ನೀನು ಹೊರಡು, ಎಂದಳು.

ಕುಮಾರನು ಅಲ್ಲಿಂದ ಹೊರಟು ಹೋದನು. ಸ್ವಲ್ಪ ಹೊತ್ತಿನಲ್ಲಿ ನಶೆರಿತನ ಸೇವಕರು ಕುಮಾರನನ್ನು ಹಿಡಿದುಕೊಂಡು ಹೋದರೆಂಬ ಸುದ್ದಿಯನ್ನು ಲತೀಫೆಯು ಮರಿಯುನಳಿಗೆ ಹೇಳಿದಳು.

## ( ೧೧ )

ಸುಮಾರು ನಾಲ್ಕು ತಾಸು ರಾತ್ರಿಯಾಗಿದೆ. ಕಿಶೋರಿಮೋಹನನ ಉಪವನದ ಮಂದಿರದಲ್ಲಿ ನಶೆರಿತನೂ ಕಿಶೋರಿಮೋಹನನೂ ಕುಳಿತು ಕೊಂಡಿರುವರು. ನಶೆರಿತನು ಇಂದು ಬಹಳ ಆನಂದದಲ್ಲಿದ್ದನು; ಯಾಕಂದರೆ ನೈಪುದ್ದೀನನು ಇಂದಿನ ದರಬಾರದಲ್ಲಿ ನಶೆರಿತನಿಗೆ ಪ್ರತಿನಿಧಿಪದವನ್ನು ಕೊಟ್ಟಿದ್ದನು. ಆದರಿಂದ ಅವನನ್ನು ಕುರಿತು ಕಿಶೋರಿಮೋಹನನು— 'ಹುಜೂರ, ಇಂದಿನಿಂದ ನೀವೇ ನವಾಬರು'

ನಶೆ—'ಹೌದು.'

ಕಿಶೋ—ಹಾಗಾದರೆ ನನ್ನದೊಂದು ನ್ಯಾಯದ ಅರ್ಜಿಯಿರುವದು.

ಅದೇನಂದರೆ, ನಿನ್ನೆ ಯದುನಾರಾಯಣನು ನಮ್ಮ ಉಪವನದಲ್ಲಿ ಹೊಕ್ಕು ಲೂಟಿ ಮಾಡಿಕೊಂಡು ಹೋಗಿರುವನು.

ನಸೆ—ಸಭೆಯಲ್ಲಿ ನ್ಯಾಯ ಬೇಡಿದರೆ ವಿಚಾರ ಮಾಡುವೆನು, ಎಂದನು.

ಕಿಶೋ—ಇಲ್ಲಿ ಒಬ್ಬ ಕೈದಿಯು ಇರುವನು.

ನಸೆ—ಬಹಳ ಚಲೋದಾಯಿತು.

ಇಷ್ಟರಲ್ಲಿ ನಶೆರಿತನ ಒಬ್ಬ ಚಾರನು ಬಂದು—ಹುಜೂರ, ಯದು ನಾರಾಯಣನನ್ನು ಸೆರೆ ಹಿಡಿದಿರುವೆವು, ಎಂದನು.

ನಸೆ—ಆ ಕೆಲಸವೇನೂ ಮಹತ್ವದ್ದಲ್ಲ. ಈಗ ನಾನು ನವಾಬನು. ಬೇಕಾದವರನ್ನ ಸೆರೆ ಹಿಡಿಯುವ ಅಧಿಕಾರವು ನನಗಿರುವದು.

ಸೇವಕ—ಹುಜೂರ, ನಾವು ಕಾರಣವಿಲ್ಲದೆ ಕೈದು ಮಾಡಿಲ್ಲ. ಅವನು ಅಂತಃಪುರದ ಉದ್ಯಾನದ ಗೋಡೆಯಿಂದ ಇಳಿದುಬರುವಾಗ ಸೆರೆ ಹಿಡಿದಿರುತ್ತೇವೆ.

ನಶೆರಿತನಿಗೆ ಆ ವಿಚಾರವು ಹೊಳೆಯಿತು. ಅವನು ಮನಸ್ಸಿನಲ್ಲಿ ಮರಿಯನ್ನಳು ಯದುನಾರಾಯಣನನ್ನು ಪ್ರೀತಿಸುವ ಕಾರಣ, ನನ್ನನ್ನು ಉಪೇಕ್ಷಿಸಿರುವಳು. ಯದುನಾರಾಯಣನೆಂದರೆ, ನಮ್ಮ ರಾಜ್ಯದಲ್ಲಿಯ ಒಬ್ಬ ಪ್ರಜೆಯು; ಮೇಲಾಗಿ ಕಾಫರನು. ಒಳ್ಳೇದು. ಮರಿಯನ, ಯದು ನಾರಾಯಣನನ್ನು ಹಿಡಿದು ತರಿಸಿ, ನಿನ್ನ ಎದುರಿಗೆ ಕಣ್ಣು ಕಿತ್ತಿಸಿ ಕೈ ಕಾಲುಗಳನ್ನು ಕಡಿಸಿ ಜೀವಂತ ಸಮಾಧಿ ಮಾಡಿಸುವೆನು. ಆಗ ನಿನಗೆ ನನ್ನ ಸಾಮರ್ಥ್ಯವು ತಿಳಿಯುವದು, ಎಂದು ಅಂದುಕೊಂಡು, ಸೇವಕನನ್ನು ಕುರಿತು—"ಈಗ ಅವನನ್ನು ಎಲ್ಲಿ ಇಟ್ಟಿರುವಿರಿ?" ಎಂದನು.

ಸೇವಕ—ಕಿಲ್ಲೆಯಲ್ಲಿ ಇಟ್ಟಿರುವೆವು.

ನಶೆರಿತ—ಕಿಲ್ಲೆಯು ಪ್ರತಿಷ್ಠಿತ ಕೈದಿಗಳ ಸಲುವಾಗಿ ಇಂಥವರನ್ನು ಅಲ್ಲಿಡುವ ಕಾರಣವಿಲ್ಲ. ಕಾರಣ ಅವನನ್ನು ಪಟ್ಟಣದಲ್ಲಿರುವ ಸಾಮಾನ್ಯ ಜೇಲಿನಲ್ಲಿಯೇ ಇಡಿರಿ. ಅವನು ಕಳ್ಳರು ಕಾಕರೊಂದಿಗೆ ಇರಲಿಕ್ಕೇ ಯೋಗ್ಯನು.

ಸೇವಕ—ಓಡಿ ಹೋದರೆ?

ನಶೆ—ಎಲ್ಲಿಗೆ ಹೋಗುವನು? ಪಾತಾಳದಲ್ಲಿ ಹೋದರೂ ಕೂಡ ಹಿಡಿದು ತರಿಸುವೆನು, ಎಂದು ಹೇಳಲು, ಸೇವಕನು ಹೊರಟು ಹೋದನು.

ಸೇವಕನು ಹೋದ ಕೂಡಲೆ ಕಿಶೋರಿಮೋಹನನು— ನವಾಬ ಸಾಹೇಬ, ಇನ್ನು ಗಣೇಶನಾರಾಯಣನೊಬ್ಬನು ಉಳಿದನು.

ನಶಿ—ಈಗ ನರಸಿಂಹ-ಯದುನಾರಾಯಣ ಇವರಿಬ್ಬರ ಕಥೆಯು ಮುಗಿಯಿತಷ್ಟೇ? ಇನ್ನು ಗಣೇಶನಾರಾಯಣನ ಸರತಿಯು.

ಕಿಶೊ—ಅದು ಸಾಮಾನ್ಯವಾದ ಕೆಲಸವಲ್ಲ.

ನಶಿ—ಕಿಶೋರಿಮೋಹನ, ಮಣ್ಣಿನ ಕೊಡದಂತೆ ಅವನನ್ನು ಕ್ಷಣದಲ್ಲಿ ಚೂರು ಚೂರು ಮಾಡುವೆನು, ಎಂದು ಆವೇಶದಿಂದ ನುಡಿದನು.

ಇಷ್ಟರಲ್ಲಿ ಹೊರಗಿನಿಂದ—'ಗಣೇಶನಾರಾಯಣನ ನಾಶವು ಕಠಿಣವು' ಎಂಬ ಶಬ್ದವು ಕೇಳಬಂತು. ಆಗ ಅವರು ಬಾಗಿಲ ಕಡೆಗೆ ನೋಡಲು, ಅಲ್ಲಿ ಒಬ್ಬ ಫಕೀರನು ನಿಂತಿದ್ದನು. ಅವನು ಗೌಡರಾಜ್ಯದಲ್ಲಿ ಪ್ರಸಿದ್ಧನಾದ 'ಕುತುಬ ಅಲ್‌ಉಲಮು'ನು. ನಶೆರಿತನು, ಅವನನ್ನು ಗುರ್ತಿಸಿ, ಮರ್ಯಾದೆಯಿಂದ ಸಲಾಂ ಮಾಡಿ, ಎದ್ದುನಿಂತನು. ಆಗಿನ ಕಾಲದಲ್ಲಿ ಫಕೀರರಿಗೆ ಬಹಳ ಮರ್ಯಾದೆಯಿತ್ತು. ಫಕೀರನು ನಶೆರಿತನನ್ನು ಕುರಿತು— 'ನವಾಬ ಪುತ್ರ, ನಿನಗೆ ಏನೂ ಭಯವಿಲ್ಲ. ದೇವರು ನಿನ್ನ ಮೇಲೆ ಪ್ರೀತನಾಗಿರುವನು.' ಎಂದನು.

ನಶಿ—ಪ್ರಭೋ, ಹಾಗಾದರೆ ನಾನು ಸಿಂಹಾಸನದ ಮೇಲೆ ಎಂದು ಕೂಡುವೆನು.

ಫಕಿರ—ಕೂಡುವಿ! ಕೂಡುವಿ!! ಆದರೆ ಗಣೇಶನಾರಾಯಣನು ಜೀವಂತನಾಗಿರುವ ತನಕ ಮಾತ್ರ ಆಗದು. ಕಾರಣ ಅವನ ಮರಣದ ಆಲೋಚನೆ ಮಾಡಿರಿ.

ನಶಿ—ಈಗ ನಾವು ಅದೇ ಆಲೋಚನೆಯಲ್ಲಿದ್ದೆವು.

ಫಕಿ—ಏನು ಆಲೋಚನೆ ಮಾಡಿದಿರಿ?

ನಶಿ—ಅವನನ್ನು ಸೆರೆ ಹಿಡಿಯುವ ವಿಚಾರ.

ಫಕಿ—ನೀವು ಅಪರಾಧವಿಲ್ಲದೆ ಅವನನ್ನು ಸೆರೆ ಹಿಡಿದರೆ, ಗೌಡ ರಾಜ್ಯದಲ್ಲಿಯ ಎಲ್ಲ ಹಿಂದೂ ಪ್ರಜೆಗಳು ಸಿಟ್ಟಿಗೇಳುವರು. ಇಷ್ಟೇ ಅಲ್ಲ, ಭಾದುಡೀ, ಸಾತೋಡ ಮೊದಲಾದ ಹಿಂದೂ ರಾಜ್ಯದೊಳಗಿನ ಸೈನಿಕರು ಒಂದಾಗಿ ಗೌಡವನ್ನು ಆಕ್ರಮಿಸುವರು.

ನಶಿ—ಹಾಗಾದರೆ ಇದಕ್ಕೆ ಉಪಾಯವು?

ಫಕೀ—ಗಣೇಶನಾರಾಯಣನು ಈಗ ದೇವಿಕೋಟೆಯ ಕಿಲ್ಲೆಯಲ್ಲಿರುವನು. ನೀವು ಇಲ್ಲಿಂದ ಸೈನ್ಯವನ್ನು ಕಳುಹಿಸಿ ದೇವಿಕೋಟೆಯಲ್ಲಿರುವ ಮಹಮ್ಮಾಯಿಯ ಗುಡಿಯನ್ನು ಕೆಡವಿಸುವ ಉದ್ಯೋಗ ಮಾಡಿರಿ. ಅದು ಹಿಂದೂ ಜನರ ಪ್ರಸಿದ್ಧ ದೇವಾಲಯವು. ಅಲ್ಲಿರುವ ಗಣೇಶನಾರಾಯಣನು ಈ ಪ್ರಸಂಗದಲ್ಲಿ ಸುಮ್ಮನಿರದೆ, ಈ ಕೆಲಸಕ್ಕೆ ಎದುರುನಿಂತು ಹೋರಾಡುವನು. ಆ ಯುದ್ಧದಲ್ಲಿ ಗಣೇಶನು ಸತ್ತರೆ ನೆಟ್ಟಗಾಗುವದು. ಗೆದ್ದರೆ ರಾಜನ ಹುಕುಮಿಗೆ ಎದುರು ವರ್ತಿಸಿದ ಅಪರಾಧವನ್ನು ಹೊರಿಸಿ ಕಾರಾಗೃಹದಲ್ಲಿರಿಸಲು ಬರುವದು.

ನಶೆ—ಅವನು ನಮ್ಮ ಸೈನಿಕರ ಸಂಗಡ ಯುದ್ಧಕ್ಕೆ ನಿಲ್ಲದಿದ್ದರೆ?

ಫಕಿ—ಅವನು ಹಿಂದೂ ಧರ್ಮದ ಮತ್ತು ಹಿಂದೂ ಜಾತಿಯ ಅಭಿಮಾನಿಯು. ಯುದ್ಧ ಮಾಡುವದು ನಿಶ್ಚಯವು. ಇನ್ನು ನಾನು ಹೋಗಿ ಬರುತ್ತೇನೆ.

ನಶೆ—"ಪ್ರಭುಗಳು ಮತ್ತೆ ಯಾವಾಗ ಭೆಟ್ಟಿಯನ್ನು ಕೊಡುವುದು."

ಫಕಿ—"ಯೋಗ್ಯ ಪ್ರಸಂಗದಲ್ಲಿ"

ಫಕೀರನು ಹೋದನಂತರ ನಶೆರಿತನು—"ಕಿಶೋರಿಮೋಹನ, ಗಣೇಶನಾರಾಯಣನು ನವಾಬನ ಸೈನ್ಯದ ಸಂಗಡ ಯುದ್ಧಕ್ಕೆ ನಿಲ್ಲಬಹುದೇನು?"

ಕಿಶೋ—ನಾನೇ ಆತನಾಗಿದ್ದರೆ ಎಂದೂ ಯುದ್ಧದ ಹವ್ಯಾಸಕ್ಕೆ ಹೋಗುತ್ತಿದ್ದಿಲ್ಲ. ದೇವರ ಗುಡಿಯು ಹಾಳಾದರೆ ನಾವು ಗಂಡಾಂತರದಲ್ಲಿ ಬೀಳುವ ಕಾರಣವೇನು ? ಗಣೇಶನಾರಾಯಣನು ಯುದ್ಧಕ್ಕೆ ನಿಂತರೆ ಬುದ್ಧಿಗೇಡಿಯೆಂದು ಹೇಳಬಹುದು. ಏನೇ ಆಗಲಿ, ಮೂವರ ಅವತಾರವೂ ಸಮಾಪ್ತಿಯಾಗುವದು ; ಆದರೂ ಇನ್ನೊಬ್ಬರು ಉಳಿದರು.

ನಶೆ—ಮತ್ತೆ ಯಾರು ?

ಕಿಶೋ—ಗಣೇಶನಾರಾಯಣನ ಹೆಂಡತಿಯಾದ ತ್ರಿಪುರಾದೇವಿಯ ದರ್ಪವು ಬಹಳ. ಈಗ ಮಗನು ಸೆರೆ ಸಿಕ್ಕ ಸುದ್ದಿಯು ತಿಳಿದ ಕೂಡಲೆ ಅವಳು ಕ್ರೋಧದಿಂದ ವಿದ್ರೋಹಾಗ್ನಿಯನ್ನು ಪ್ರಜ್ವಲಿಸುವಳು.

ನಶೆ—ಒಬ್ಬ ಸ್ತ್ರೀಯಳ ಸಲುವಾಗಿ ಅಂಜಿಕೆಯೇ ?

ಕಿಶೋ—ಅವಳು ಸಾಮಾನ್ಯಳಲ್ಲ. 'ಸಿಂಹಿಣಿಯು'

ನಶೆ—ಅವಳ ವ್ಯವಸ್ಥೆಯನ್ನೂ ಮಾಡೋಣ. ನೀನು ನಾಳಿನ ದರ

ಬಾರದಲ್ಲಿ ಯದುನಾರಾಯಣನು ನಿನ್ನ ಉದ್ಯಾನಕ್ಕೆ ಬಂದು ಲೂಟಿ ಮಾಡಿಕೊಂಡು ಹೋಗಿರುವ ಫಿರ್ಯಾದಿಯನ್ನು ಕೊಡು. ಅದರ ನೆಪದಿಂದ ಗಣೇಶನಾರಾಯಣನ ಮನೆಗೆ ಕಾವಲಿಡುವೆನು.

ಕಿಶೋ—ಇದು ಬಹಳೇ ಹಿತವಾದ ಯುಕ್ತಿಯು.

ನಶೆ—ನೀನು ಇನ್ನೊಂದು ಕಾರ್ಯ ಮಾಡಬೇಕು.

ಕಿಶೋ—ಮತ್ತೇನು ನವಾಬಸಾಹೇಬ?

ನಶೆ—ದೇವೀಕೋಟೆಯಲ್ಲಿ ನಮ್ಮ ಸೈನ್ಯವು ಸ್ವಲ್ಪವಿರುವದು. ನೀನು ಇಲ್ಲಿಂದ ಇನ್ನೂ ಕೆಲವು ಸೈನ್ಯವನ್ನು ತೆಗೆದುಕೊಂಡು ಹೋಗಿ ನಾವು ಕೊಟ್ಟ ಆಜ್ಞಾಪತ್ರವನ್ನು ಕಿಲ್ಲೇದಾರನಿಗೆ ತೋರಿಸಿ, ಅವನ ಸಹಾಯದಿಂದ ದೇವೀಕೋಟೆಯನ್ನು ನೆಲಸಮ ಮಾಡಬೇಕು; ಮತ್ತು ಯಾವ ಉಪಾಯದಿಂದಲೇ ಆಗಲಿ, ಗಣೇಶನಾರಾಯಣನ ಮರಣವು ಅಥವಾ ಕೈಸೆರೆಯು ಆಗಬೇಕು.

ಕಿಶೋರಿಮೋಹನನ ಉತ್ಸಾಹವು ಕಡಿಮೆಯಾಯಿತು. ಅವನು ಕುಗ್ಗಿದ ಧ್ವನಿಯಿಂದ—"ಗುಡಿಯನ್ನು ಕೆಡಹುವ ಈ ಕೆಲಸಕ್ಕೆ ನನ್ನನ್ನು.."

ನಶೇರಿತನು ನಡುವೇ ಬಾಯಿ ಹಾಕಿ—"ಹೌದು. ಮೋಹನ ಸರದಾರ, ನೀವೇ ಹೋಗಬೇಕು. ಇಂಥ ಮಹತ್ವದ ಕೆಲಸಕ್ಕೆ ನಿಮ್ಮಂಥ ನಂಬಿಗೆಯ ಮಿತ್ರರನ್ನು ಬಿಟ್ಟರೆ ಮತ್ತಾರನ್ನು ಕಳಿಸಬೇಕು?

ಕಿಶೋರಿ—ನಿಮ್ಮ ಅಪ್ಪಣೆಯು ಶಿರಸಾವಮಾನ್ಯವು.

ನಶೆ—ಗುಡಿಯನ್ನು ನೆಲಸಮ ಮಾಡಿದರೆ ಕೆಲಸವು ಪೂರ್ಣವಾಗಲಿಲ್ಲ. ಒಳಗಿರುವ ದೇವಿಯ ಮೂರ್ತಿಯನ್ನು ತಂದು ಹಿಂದೂ ಜನರ ಮುಂದೆ ಚೂರು ಚೂರು ಮಾಡಬೇಕು; ಅಂದರೆ ಮೂಢ ಗಣೇಶನಾರಾಯಣನ ಕ್ರೋಧವು ಉದ್ದೀಪ್ತವಾಗುವದು. ಇದಕ್ಕಾಗಿ ನೀವು ನಾಳೆಗೇ ಹೊರಡತಕ್ಕದ್ದು, ಎಂದನು.

ನಂತರ ನಶೆರಿತನು ಹೊರಡಲು ಎದ್ದನು. ಕಿಶೋರಿಮೋಹನನು ಅವನನ್ನು ತಲೆಬಾಗಿಲದ ವರೆಗೆ ಕಳಿಸಲಿಕ್ಕೆ ಹೊರಟನು. ಮನೋಹರನು ಇದುವರೆಗೆ ನಶೆರಿತನು ಕುಳಿತ ಪಲ್ಲಂಗದ ಬುಡಕ್ಕೆ ಕುಳಿತು ಅವರ ಈ ಎಲ್ಲ ಮಾತುಗಳನ್ನು ಕೇಳಿಕೊಂಡಿದ್ದನು. ಅವರ ಹಿಂದಿನಿಂದ ಅವನೂ ಅಲ್ಲಿಂದೆದ್ದು ಮುಂದಿನ ಕಾರ್ಯಕ್ಕೆ ಹೊರಟನು.

## ( ೧೨ )

ಮಧ್ಯರಾತ್ರಿಯು ಮೀರಿ ಹೋಗಿದೆ. ಚರಾಚರ ವಸ್ತುಗಳೆಲ್ಲವೂ ನಿಸ್ತಬ್ಧವು. ಇಂಥ ವೇಳೆಯಲ್ಲಿ ಒಬ್ಬ ಚಿಕ್ಕ ಬಾಲಿಕೆಯು ಗಣೇಶನಾರಾಯಣನ ಹೆಬ್ಬಾಗಿಲ ಮುಂದೆ ಬಂದು ನಿಂತಳು. ಅವಳನ್ನು ಕುರಿತು ದ್ವಾರರಕ್ಷಕನು—ನೀನು ಯಾರು? ಇಲ್ಲೇನು ಕೆಲಸವಿದೆ? ಎಂದನು.

ಬಾಲಿಕೆ—ರಾಣಿ ತ್ರಿಪುರಾದೇವಿಯನ್ನು ಕಾಣಬೇಕಾಗಿದೆ.

ದ್ವಾ. ಪಾ.—ಕೆಲಸವೇನು? ಮೊದಲು ಹೇಳು.

ಬಾಲಿಕೆ—ಸಹಾಯ ಬೇಡಲು ಬಂದಿರುವೆನು.

ದ್ವಾ. ಪಾ.—ಇಂಥ ಮಧ್ಯ ರಾತ್ರಿಯಲ್ಲಿ ಸಹಾಯವೆ?

ಬಾಲಿಕೆ—ನಾನು ಬಹಳ ಸಂಕಟದಲ್ಲಿರುವೆನು. ಬೇಗ ಒಳಗೆ ಬಿಡು.

ದ್ವಾ. ಪಾ.—ನಿನಗೆಂಥ ಸಂಕಟವಿದ್ದರೂ ಈ ರಾತ್ರಿಯಲ್ಲಿ ನಾನು ಬಾಗಿಲು ತೆರೆಯುವದಿಲ್ಲ.

ಬಾಲಿಕೆ—ನೀನು ಹಿಂದುವಿದ್ದು, ಹಿಂದುಗಳಿಗೆ ಆಶ್ರಯ ಕೊಡಲಾರೆಯಾ?

ದ್ವಾ. ಪಾ.—ನಿನ್ನ ದೊಡ್ಡಿಸ್ತಿಕೆಯ ಮಾತುಗಳನ್ನು ಕೇಳಲು ಸಮಯವಿಲ್ಲ. ಈಗ ಎಲ್ಲ ಕಡೆಗೂ ಮುಸಲ್ಮಾನರ ಅತ್ಯಾಚಾರವು ನಡೆದಿರುವದು. ನಿನ್ನ ಹಿಂದೆ ಯಾವನಾದರೊಬ್ಬ ಮುಸಲ್ಮಾನ ಸರದಾರನೇಕಿರಬಾರದು? ಏನಾದರೊಂದು ಪೇಚು ನನ್ನ ಮೇಲೆ ಬಂದೀತು. ಬಾಗಿಲ ತೆರೆಯುವದಿಲ್ಲ. ಇಲ್ಲಿಂದ ತ್ರೀವ ಹೊರಡು.

ಬಾಲಿಕೆ—ಸುಮ್ಮನೆ ವೇಳೆಯನ್ನು ಕಳೆಯಬೇಡ. ನಾನು ಕುಮಾರ ಯದುನಾರಾಯಣನ ಹತ್ತರ ಬಂದಿರುವೆನು. ಅವನು ನನ್ನ ಹಾದಿಯನ್ನು ನೋಡುತ್ತ ಕುಳಿತಿರಬಹುದು. ಈಗ ನೀನು ಪ್ರತಿಬಂಧ ಮಾಡಿದುದು ಅವನಿಗೆ ತಿಳಿದರೆ, ನಾಳೆ ನೀನೇ ಶಿಕ್ಷೆಯನ್ನು ಅನುಭವಿಸತಕ್ಕವನು.

ದ್ವಾರಪಾಲಕನು ಮನಸ್ಸಿನಲ್ಲಿ-ಹೆಣ್ಣು ಹುಡುಗೆಯರು ಯಾವಾಗಲೂ ಕುಮಾರನ ಹೆಸರು ಹೇಳಿ ಬೇಕಾದಾಗ ಇಲ್ಲಿಗೆ ಬರುವರು. ಇದಕ್ಕೆ ನಾನು ಮಾಡತಕ್ಕದ್ದೇನು? ಎಂದು ಯೋಚಿಸಿ, ಬಾಗಿಲು ತೆರೆದನು.

ಆ ಬಾಲಿಕೆಗೆ ಒಳಗೆ ಎಲ್ಲಿ ಹೋಗಬೇಕೆಂಬುದೇ ತಿಳಿಯಲಿಲ್ಲ. ಅವಳು

ಎಂದೂ ಅಲ್ಲಿಗೆ ಬಂದವಳಲ್ಲ. ಒಳಗಿನ ಮನೆಯ ಎಲ್ಲ ಬಾಗಿಲುಗಳೂ ಮುಚ್ಚಲ್ಪಟ್ಟಿದ್ದವು. ಅವಳು ಅತ್ತ ಇತ್ತ ಸುಳಿದಾಡಹತ್ತಿದಳು. ಆ ಮನೆಯ ಬಲಭಾಗದಲ್ಲಿ ಯಾರೋ ನಿಂತಂತೆ ಭಾಸವಾಗಲು, ಅವಳು ಆ ಕಡೆಗೆ ಹೊರಟಳು. ಮುಂದೆ ಹೋಗಿ ನೋಡಲು ಒಬ್ಬ ಸ್ತ್ರೀಯು! ಆಗ ಆ ಬಾಲಿಕೆಯು—"ನೀನಾರು?" ಎಂದಳು. ಅದಕ್ಕೆ ಉತ್ತರವೇ ಬರಲಿಲ್ಲ. ಆ ಸ್ತ್ರೀಯು ಕತ್ತಲಲ್ಲಿ ನಿಂತಿದ್ದರೂ ಕೂಡ ಅವಳ ತೇಜವು ಒಡೆದು ಕಾಣಿಸುತ್ತಿತ್ತು. ಆ ಸ್ತ್ರೀಯೂ ಸಹ ಸ್ವಲ್ಪ ಮುಂದೆ ಬಂದು, ಬಾಲಿಕೆಯನ್ನು ಕುರಿತು—"ನೀನಾರು, ಹೇಳು" ಎಂದಳು.

ಬಾಲಿಕೆ—"ನಾನು ರಾಣಿ ತ್ರಿಪುರಾದೇವಿಯ ಭೆಟ್ಟಿಗೆ ಬಂದಿರುವೆನು."

ಸ್ತ್ರೀ—'ಕೆಲಸವೇನಿರುವದು?'

ಬಾಲಿಕೆ—"ಅದನ್ನು ಅನ್ಯರ ಮುಂದೆ ಹೇಳುವಂತಿಲ್ಲ. ಕ್ಷಮಿಸಬೇಕು."

ಸ್ತ್ರೀ—"ನಾನೇ ತ್ರಿಪುರಾದೇವಿ."

ಬಾಲಿಕೆಯು ದಿಟ್ಟಿಸಿ ನೋಡಿ—ನೀವೇ ತ್ರಿಪುರಾದೇವಿಯವರೇ?

ಸ್ತ್ರೀ—ಹೌದು,

ಬಾಲಿಕೆ—ನೀವು ಈಗ ಕುಮಾರ ಯದುನಾರಾಯಣನ ಮಾರ್ಗ ಪ್ರತೀಕ್ಷೆ ಮಾಡುತ್ತ ನಿಂತಿರುವದಾಗಿ ತೋರುತ್ತದೆ.

ತ್ರಿಪುರಾದೇವಿಯು ಹುಬ್ಬುಗಂಟಿಕ್ಕಿ—ನನ್ನ ವಿಚಾರದ ಗೊಡವೆಯು ನಿನಗೇಕೆ? ನೀನು ಬಂದ ಕೆಲಸವೇನಿರುವದು ಹೇಳು.

ಬಾಲಿಕೆ—ಆ ಸಂಗತಿಯನ್ನು ಇಲ್ಲಿಯೇ ಬೈಲಿನಲ್ಲಿ ಹೇಳಬೇಕೇನು?

ತ್ರಿಪುರಾ—ಯಾಕೆ? ಗುಪ್ತ ಸಂಗತಿಯಿರುವದೇ?

ಬಾಲಿಕೆ—ಹೌದು.

ತ್ರಿಪುರಾ—"ಹಾಗಾದರೆ ಒಳಗೆ ಬಾ" ಎಂದು ಅವಳನ್ನು ಮನೆಯೊಳಗೆ ಕರೆದುಕೊಂಡು ಹೋದಳು. ತ್ರಿಪುರಾದೇವಿಯು ಬೆಳಕಿನಲ್ಲಿ ಅವಳ ಮುಖವನ್ನು ದಿಟ್ಟಿಸಿ ನೋಡಿ—"ನಿನ್ನ ಹೆಸರೇನು?"

ಬಾಲಿಕೆ—ಈಗ ನನ್ನ ಪರಿಚಯವನ್ನು ಕೊಡುವಂತಿಲ್ಲ.

ತ್ರಿಪುರಾ—ಹಾಗಾದರೆ ಇಲ್ಲಿಗೇಕೆ ಬಂದಿರುವಿ?

ಬಾಲಿಕೆ—"ನಿಮ್ಮ ಮೇಲೆ ಈಗ ಒದಗುತ್ತಿರುವ ವಿಪತ್ತಿನ ಸೂಚನೆಯನ್ನು ಕೊಡುವದಕ್ಕೆ."

ತ್ರಿಪುರಾ—ನಮಗೆ ವಿಪತ್ತಿ? ನಮ್ಮ ಮೇಲೆ ಸಾವಿರಾರು ಸಂಕಟಗಳು ಬಂದರೂ ಚಿಂತೆಯಿಲ್ಲ; ಆದರೆ ಯಾರ ಹೆಸರು ಕೂಡ ತಿಳಿಯದೋ ಅಂಥವರ ಮಾತನ್ನು ಕೇಳಲು ನಾನು ಸಿದ್ಧಳಿಲ್ಲ.

ಬಾಲಿಕೆ—ರಾಣಿಯವರೇ, ನನ್ನ ಪರಿಚಯವನ್ನಿಷ್ಟೇ ಹೇಳುವೆನಲ್ಲ- "ರಾಜಾ ಗಣೇಶನಾರಾಯಣರು ನನ್ನ ಪಿತೃಸಮಾನರು. ತ್ರಿಪುರಾದೇವಿಯು ತಾಯಿಯು."

ತ್ರಿಪುರಾ—ನನ್ನ ಮಗಳಾದರೆ ಪರಿಚಯವನ್ನು ಹೇಳಲು ಭಯವೇಕೆ?

ಬಾಲಿಕೆ—ಮಾತೆಯ ಮುಂದೆ ಹೇಳಲು ಭಯವಿಲ್ಲ; ಆದರೆ ನನ್ನ ಚರಿತ್ರೆಯನ್ನು ಕೇಳಿ ತಮ್ಮಲ್ಲಿ ತಿರಸ್ಕಾರ ಹುಟ್ಟೀತೆಂಬ ಭಯವು.

ತ್ರಿಪುರಾ—ನನ್ನ ಮಗಳ ಚರಿತ್ರೆಯು ತಿರಸ್ಕಾರ ಉತ್ಪನ್ನವಾಗುವಂತೆ ಇರುವ ಸಂಭವವಿಲ್ಲ; ಮತ್ತು ನನ್ನ ತಿರಸ್ಕಾರದಿಂದ ನಿನಗಾಗುವ ಹಾನಿಯಾದರೂ ಏನು?

ಬಾಲಿಕೆ—ಹಾಗೆಂದರೆ ಹೇಗೆ? ಈ ದೇಹವು ನಿಮ್ಮಿಂದ ಕೊಳ್ಳಲ್ಪಟ್ಟದ್ದು.

ತ್ರಿಪುರ—ನಾನಂತು ನಿನಗೆ ಎಂದೂ ಉಪಕಾರ ಮಾಡಿದ ಸ್ಮರಣೆಯಿಲ್ಲ.

ಬಾಲಿಕೆ—ನೀವು ಮಾಡಿರದಿದ್ದರೂ ರಾಜಗಣೇಶನಾರಾಯಣರು ಮಾಡಿರುವರು. ನನ್ನ ಹೆಸರು ಮಂದಾಕಿನಿಯು. ನಾನು ಈ ಮೊದಲೊಮ್ಮೆ ನನ್ನ ತಂದೆಯ ಸಂಗಡ ನನ್ನ ಭಾವೀ ಪತಿಯ ಮನೆಗೆ ಹೊರಟಿದ್ದೆನು. ನನ್ನ ಲಗ್ನದ ನಿಶ್ಚಯದ ಕೆಲಸವು ಆಗಿತ್ತು. ನಾನು ತಂದೆಯ ಕೂಡ ಹೊರಟಾಗ ನೀಚ ನಶೆರಿತಶಹನೂ ಅವನಿಗಿಂತ ಹೆಚ್ಚು ಪಾಪಿಷ್ಠನಾದ ಆವನ ಮಿತ್ರನೊಬ್ಬ ಹಿಂದುವೂ ಕೂಡಿ ನನ್ನ ತಂದೆಯನ್ನು ಕಾಲಿಂದೀ ನದಿಯಲ್ಲಿ ನೂಕಿ ಕೊಂದರು. (ಹೇಳಹೇಳುತ್ತ ಅವಳ ಎರಡೂ ಕಣ್ಣುಗಳು ನೀರಿನಿಂದ ತುಂಬಿದವು.) ಇಷ್ಟರಿಂದ ಆ ನರಾಧಮರು ಶಾಂತರಾಗದೆ, ಬಲಾತ್ಕಾರದಿಂದ ನನ್ನ ಪಾತಿವ್ರತ್ಯ ಭಂಗದ ಪ್ರಯತ್ನ ನಡೆಯಿಸಿದರು. ಆಗ ಗಣೇಶನಾರಾಯಣರು ಆಕಸ್ಮಾತ್ತಾಗಿ ಅಲ್ಲಿಗೆ ಬಂದು ಅವರ ಕೈಯೊಳಗಿಂದ ನನ್ನನ್ನು ಪಾರು ಮಾಡಿದರು.

ತ್ರಿಪುರ (ಕ್ರೋಧದಿಂದ)—ಬಂಗಾಲದೊಳಗಿಂದ ಈ ದುಷ್ಟರು ಎಂದು ಹಾಳಾಗಿ ಹೋಗುವರೋ ಏನೋ?

ಮಂದಾಕಿನಿ—ಅವರನ್ನು ಹಾಳು ಮಾಡುವ ಕಾರ್ಯಭಾರವನ್ನು ನಾನು ವಹಿಸಿರುವೆನು.

ತ್ರಿಪುರ—ನೀನು ಒಬ್ಬ ಸಾಮಾನ್ಯ ಚಿಕ್ಕ ಹುಡುಗೆಯು; ಅವರಿಗೇನು ಮಾಡುವಿ?

ಮಂದಾಕಿನಿ—ತಾಯಿ, ಈ ಸಣ್ಣ ಹುಡುಗೆಯು ಏನು ಮಾಡುವಳೆ? ಮುಂದೆ ಒಂದು ದಿವಸ ಈ ಚಿಕ್ಕ ಹುಡುಗೆಯೇ ನಶಿರಿತ ಹಾಗೂ ಕಿಶೋರಿಮೋಹನ ಇವರ ಸರ್ವನಾಶ ಮಾಡಿದ ಸಂಗತಿಯನ್ನು ಕೇಳುವಿರಿ.

ತ್ರಿಪುರ—ಅವರಿಬ್ಬರು ಸತ್ತರೆ ಈ ಅತ್ಯಾಚಾರವು ಇಲ್ಲದಂತಾಗುವದೇ? ಈ ವಂಗರಾಜ್ಯದಲ್ಲಿ ಅಂಥ ಸಾವಿರಾರು ನಶಿರಿತಶಹ, ಕಿಶೋರಿಮೋಹನರು. ಪ್ರತಿದಿವಸ ಅನೇಕ ಅತ್ಯಾಚಾರಗಳನ್ನು ನಡೆಯಿಸಿರುವರು. ಅವರೆಲ್ಲರನ್ನು ನಾಶಗೊಳಿಸುವವರಾರು?

ಮಂದಾಕಿನಿ—ಉಳಿದ ನೀಚರ ಗೊಡವೆಯು ನನಗೇಕೆ? ನಾನು ಈ ಇಬ್ಬರು ದುಷ್ಟರ ಭಾರವನ್ನು ಮಾತ್ರ ವಹಿಸಿಕೊಂಡವಳು; ಉಳಿದವರ ಸಂಬಂಧವು ನನಗಿಲ್ಲ.

ತ್ರಿಪುರ—ಉಳಿದವರ ಸಂಬಂಧವು ನಿನಿಗೇಕಿಲ್ಲ? ನೀನು ಹಿಂದು ವಲ್ಲವೇ?

ಮಂದಾಕಿನಿ—ನಾನು ಹಿಂದುವಲ್ಲವೆಂದೇ ಭಾವಿಸಿರಿ.

ತ್ರಿಪುರ—ಯಾರ ಹೃದಯದಲ್ಲಿ ಕೃತಜ್ಞತೆಯಿರುವದೋ, ಅವರು ಎಂದೂ ಹಿಂದುತ್ವ-ಮನುಷ್ಯತ್ವಗಳಿಂದ ವರ್ಜಿತರಾಗಿರುವದಿಲ್ಲ. ಅವರು ಮಾತೃಭೂಮಿಯನ್ನು ಪ್ರೀತಿಸುವರು.

ಮಂದಾಕಿನಿ—ನಾನು ಮಾತೃಭೂಮಿಯನ್ನೇನೂ ಪ್ರೀತಿಸುವದಿಲ್ಲ.

ತ್ರಿಪುರ—ಹಾಗಾದರೆ ನೀನು ಪ್ರೀತಿಸುವುದೇನು?

ಮಂದಾಕಿನಿ—"ಸೇಡು, ಸೇಡು!" ಅದೇ ನನ್ನ ಇಚ್ಛಿತ ಪ್ರೀತಿ ವಸ್ತುವು; ಅದೇ ಸ್ವರ್ಗವು.

ತ್ರಿಪುರ—ಮಗಳೇ, ದ್ವೇಷಾಗ್ನಿಯನ್ನು ನೊಂದಿಸಿ ದೇಶ ಸೇವೆಯ ವ್ರತವನ್ನು ಕೈಕೊಳ್ಳು.

ಮಂದಾಕಿನಿ—ಈ ಜೀವವಿರುವವರೆಗೂ ಆ ಅಗ್ನಿಯು ಶಾಂತ ವಾಗುವದಿಲ್ಲ.

ತ್ರಿಪುರ—ನಿನ್ನ ಆಪ್ತೇಷ್ಟರು ಯಾರಿರುವರು ?

ಮಂದಾಕಿನಿ:—ನನಗೆ ಯಾರೂ ಇಲ್ಲ. ತಂದೆಯೊಬ್ಬನು ಇದ್ದನು. ಅವನ ಸಂಗತಿಯನ್ನು ಮುಂಚೆಯೇ ಹೇಳಿರುವೆನು. ಇನ್ನು ನನಗೆ ಗೊತ್ತು ಮಾಡಿದ ಪತಿಗೆ ಮುಸಲ್ಮಾನರು ನನ್ನ ಅಂಗಸ್ಪರ್ಶ ಮಾಡಿದ ಸಂಗತಿಯು ತಿಳಿಯಲು, ಅವನೂ ನನ್ನನ್ನು ನಿರಾಕರಿಸಿದನು.

ತ್ರಿಪುರ—ಹಾಗಾದರೆ ಮನೆಯಲ್ಲಿ ಒಬ್ಬಳೇ ಇರುವಿಯೇನು?

ಮಂದಾ—ಈಗ ನಾನು ಮನೆಯಲ್ಲಿಲ್ಲ.

ತ್ರಿ—ಎಲ್ಲಿರುವಿ ?

ಮಂದಾ—ಕಿಶೋರಿಮೋಹನನ ಉಪವನದಲ್ಲಿ, ಅವನ ಆಶ್ರಯ ದಲ್ಲಿರುವೆನು.

ತ್ರಿ—ಹಾಗಾದರೆ ನೀನು ಪಾಪಿಷ್ಠಳು. ಪಾಪ ಮಾರ್ಗವನ್ನು ಹಿಡಿದಿರುವಿಯಷ್ಟೇ? ಇಲ್ಲದಿದ್ದರೆ ನೀಚ ಕಿಶೋರಿಮೋಹನನ ಮನೆಯಲ್ಲಿ ಆದೇಕಿರುತ್ತಿದ್ದೆ? ಮತ್ತು ಅಲ್ಲಿ ಇದ್ದರೆ ನಿನ್ನ ಶೀಲವು ಹೇಗೆ ರಕ್ಷಣೆ ಯಾದೀತು.

ಮಂದಾ—ತಾಯೀ, ನಾನು ಅಲ್ಲಿ ಈ ವೇಷದಿಂದ ಇಲ್ಲ. ಬಾಲಕನ ವೇಷದಿಂದಿರುತ್ತೇನೆ.

ತ್ರಿ—ಇಷ್ಟೆಲ್ಲ ಮಾಡಿ ಅಲ್ಲಿರುವ ಉದ್ದೇಶವೇನು ?

ಮಂದಾ—ನರೇಂದ್ರಸಿಂಹ ಹಾಗು ಕಿಶೋರಿಮೋಹನ ಇವರ ಸರ್ವ ನಾಶವಾಡುವದೇ ನನ್ನ ಧ್ಯೇಯವು. ನಾನು ಅಲ್ಲಿದ್ದು ಅವರ ಪ್ರತಿ ಯೊಂದು ಕಾರ್ಯಗಳಿಗೆ ವಿಘ್ನಗಳನ್ನುಂಟು ಮಾಡುವೆನು. ಅವರ ಪ್ರತಿ ಯೊಂದು ಕಾರ್ಯದಲ್ಲಿ ನಿರಾಶೆಯನ್ನುಂಟುಮಾಡಿಸಿ ಪೀಡಿಸಿ, ಪೀಡಿಸಿ ಕೊಲ್ಲುವೆನು.

ತ್ರಿ(ಮನಸ್ಸಿನಲ್ಲಿ)—ಈ ಸ್ತ್ರೀಯಳ ಕೋಮಲ ಹೃದಯವು ಈಗ ಪಿಶಾಚಿಯ ಹೃದಯವಾಗಿದೆ, ಎಂದು ಅಂದುಕೊಂಡು (ಪ್ರತ್ಯಕ್ಷವಾಗಿ) ನಿನ್ನ ಸಂಗತಿಯನ್ನು ಕೇಳಿ ತಿರಸ್ಕಾರ ಹುಟ್ಟಿದರೂ ನೀನು ದಯೆಗೆ ಪಾತ್ರಳು.

ಮಂದಾ—ರಾಣೀ, ತ್ರಿಪುರಾದೇವಿ, ನಾನು ಈಗ ಯಾರ ದಯೆ ಯನ್ನೂ ಯಾಚಿಸುವವಳಲ್ಲ. ಈ ಪೃಥ್ವಿಯೇ ನನಗೆ ಧಿಃಕಾರ ಮಾಡಲಿ; ನನಗೆ ಬೇರೊಂದು ನರಕವೇ ನಿರ್ಮಾಣವಾಗಲಿ; ಆದರೆ ನಾನು ನನ್ನ ಸಂಕಲ್ಪವನ್ನು ಬಿಡತಕ್ಕವಳಲ್ಲ.

ತ್ರಿ—ನಿನ್ನಂಥ ದೃಢ ಸಂಕಲ್ಪವೂ ತೇಜವೂ ದೇಶಹಿತದ ಕಾರ್ಯದಲ್ಲುಪಯೋಗಿಸಲ್ಪಟ್ಟರೆ....

ಮಂದಾ—ನಿಮ್ಮ ದೇಶ, ಹಿಂದುತ್ವ, ಸ್ವದೇಶಾಭಿಮಾನ ಇವೆಲ್ಲವೂ ರಸಾತಳಕ್ಕೆ ಹೋಗಲಿ; ಅದರ ಚಿಂತೆಯನ್ನು ನಾನು ಮಾಡುವವಳಲ್ಲ. ನನ್ನ ಜೀವನದ ಆಶೆಯು ಬಯಕೆಗಳೆಲ್ಲವೂ ದಾವಾನಲದಲ್ಲಿ ದಗ್ಧವಾಗಿ ಹುರುಪಳಿಸಿ ಹೋಗಿವೆ. ರಾಣೀ. ನಿನಗೆ ನನ್ನ ನಿರಾಶ ಹೃದಯದ ಕಲ್ಪನೆಯು ಹೇಗಾಗಬೇಕು? ಈಗ ನಿನ್ನ ಮಗನನ್ನು ಮುಸಲ್ಮಾನರು ಸೆರೆಯಲ್ಲಿರಿಸಿರುವರು. ನಿನ್ನ ಪತಿಯನ್ನು ಕೊಲ್ಲುವ ಸಂಚು ನಡಿಸಿರುವರು; ಮತ್ತು ನಿನ್ನ ಮಗಳನ್ನು ಅಪಹರಿಸಿಕೊಂಡು ನಶರಿತನ ಅಂತಃಪುರಕ್ಕೆ ಒಯ್ಯುವರು ಎಂಬ ಸಂಗತಿಯನ್ನು ಯಾರಾದರೂ ನಿನಗೆ ಹೇಳಿದರೆ ಆಗ ನಿನ್ನ ಸ್ವದೇಶಾಭಿಮಾನ, ಹಿಂದುತ್ವ ಮೊದಲಾದ ವಿಚಾರಗಳು ಉಳಿಯುವವೇ? ನೀನು ಸೇಡು ತೀರಿಸಿಕೊಳ್ಳುವ ವಿಚಾರವನ್ನು ಮಾಡಲಿಕ್ಕಿಲ್ಲವೇ? ಎಂದಳು.

ಅಷ್ಟರಲ್ಲಿ ಒಬ್ಬ ದಾಸಿಯು ಬಂದು 'ರಾಣಿಯವರೇ, ಕುಮಾರನನ್ನು ನಶರಿತನ ಅನುಚರರು ಸೆರೆಹಿಡಿದುಕೊಂಡು ಹೋಗಿರುವರಂತೆ' ಎಂಬ ಸುದ್ದಿಯನ್ನು ಹೇಳಿದಳು. ತ್ರಿಪುರಾದೇವಿಯು ಮನಸ್ಸಿನ ಆವೇಗವನ್ನು ಬಿಗಿಹಿಡಿದು ಮಂದಾಕಿನಿಯನ್ನು ಕುರಿತು:–"ನೀನು ಇದೇ ಸಂಗತಿಯನ್ನು ಹೇಳಲು ಬಂದಿದ್ದಿಯಷ್ಟೇ?

ಮಂದಾಕಿನಿ—ಇಷ್ಟೇ ಅಲ್ಲ; ಇನ್ನೂ ಹೇಳತಕ್ಕ ಮಾತುಗಳಿವೆ.

ತ್ರಿಪುರಾ—ಅದೇನು ಹೇಳು.

ಮಂದಾಕಿನಿ—ದೇವೀಕೋಟಿಗೆ ಹೋಗಿರುವ ರಾಜಾ ಗಣೇಶನಾರಾಯಣನನ್ನು ಅಲ್ಲಿಯೇ ನಾಶಮಾಡುವ ಪ್ರಯತ್ನವೂ ನಡೆದಿರುವದು.

ರಾಣಿ—ಮತ್ತೆ?

ಮಂದಾ—ನಿಮ್ಮ ಮನೆಗೆ ಕಾವಲಿಟ್ಟು ನಿಮ್ಮ ಮಗಳಾದ ಗೌರಿಯನ್ನು ನವಾಬಪುತ್ರನ ವಿಲಾಸಮಂದಿರಕ್ಕೆ......

ರಾಣಿ (ಕ್ರೋಧದಿಂದ ಕಿಯವಿನ್ನು ಮುಚ್ಚಿಕೊಂಡು)— ಸಾಕು, ಸಾಕು. ಮುಂದಿನ ಸಂಗತಿಯು ಬೇಡವೆಂದು ಹೇಳಿ ಕ್ಷಣಕಾಲ ಸುಮ್ಮನಿರಲು, ಮಂದಾಕಿನಿಯು ರಾಣಿಯನ್ನು ಕುರಿತು:–ಇದಲ್ಲದೆ ಬೇರೆ ಕೆಲವು ಸಂಗತಿಗಳೂ ಹೇಳತಕ್ಕವಿವೆ.

ರಾಣಿ—ಮತ್ತೇನು ?

ಮಂದಾಕಿನಿ—ನಿಮ್ಮ ದಿವಾಣ ನರಸಿಂಗನು ಕಿಶೋರಿಮೋಹನನ ಹಾಳು ಬಾವಿಯಲ್ಲಿರುವನು. ನಾಳೆ ದೇವೀಕೋಟೆಗೆ ಅರಸನ ಸೈನ್ಯವೂ, ಕಿಶೋರಿಮೋಹನನೂ ಹೋಗುವರು; ಮತ್ತು ಕುಮಾರನನ್ನು ರಾಜಧಾನಿಯಲ್ಲಿರುವ ಸಾಧಾರಣ ಸೆರೆಮನೆಯಲ್ಲಿ ಕಳ್ಳರು, ಕಾಕರನ್ನಿಡುವ ಸ್ಥಳದಲ್ಲಿ ಅವರ ಸಂಗಡಲೇ ಇಟ್ಟಿರುವರು.

ರಾಣಿ—ವಿಚಾರ ಮಾಡಿದರೆ ನೀನು ನಿಜವಾಗಿಯೂ ದೇಶದ ಹಿತಚಿಂತಕಳು.

ಮಂದಾ—ರಾಣೀ, ನಿನ್ನ ವಿಚಾರವು ತಪ್ಪು. ಈಗ ನಾನು ಈ ಸಂಗತಿಯನ್ನು ಹೇಳುವದರಿಂದ ನಿಮಗೆ ಉಪಕಾರವಾದರೂ, ಅದು ನನ್ನ ಸ್ವಾರ್ಥಕ್ಕಾಗಿ. ಇದರಲ್ಲಿ ನನ್ನ ಸ್ವಾರ್ಥವೇನಂದರೆ:— ನೀವು ನಿರಾಪದರಾಗಿ ಉಳಿದರೆ, ನವಾಬ ನಶೀರಿತಪಹ ಮತ್ತು ಕಿಶೋರಿಮೋಹನ ಇವರು ಪ್ರತಿಯೊಂದು ಕಾರ್ಯದಲ್ಲಿ ನಿರಾಶರಾಗುವರು. ಅವರನ್ನು ನಿರಾಶೆಗೊಳಿಸುವದೂ ಪೀಡೆಪಡಿಸುವದೂ ನನ್ನ ಇಚ್ಛಿತವು. ಮಾತೆ, ಇನ್ನು ನಾನು ಹೋಗಿಬರುತ್ತೇನೆ, ಎಂದು ಹೊರಟಳು.

## ( ೧೩ )

ಕಿಶೋರಿಮೋಹನನು ಎರಡುನೂರು ಜನ ರಾಹುತರೊಂದಿಗೆ ದೇವೀಕೋಟೆಗೆ ಹೊರಟನು. ಅವನು ಹೊರಡುವಾಗ ಸೂರ್ಯಾಸ್ತಕ್ಕೆ ೨–೩ ತಾಸು ಅವಕಾಶವಿತ್ತು. ಅವನು ೮–೧೦ ಮೈಲು ಮಾರ್ಗಕ್ರಮಣ ಮಾಡಿದ ನಂತರ ಒಂದು ಅನುಕೂಲವಾದ ಸ್ಥಳವನ್ನು ನೋಡಿಕೊಂಡು ಅಲ್ಲಿ ಪಾಳಯವನ್ನು ಹಾಕಿದನು. ಮರು ದಿವಸ ಮುಂಜಾನೆ ನಸುಕಿನಲ್ಲಿ ಎದ್ದು ಹೊರಡುವ ಸಿದ್ಧತೆ ಮಾಡಬೇಕೆನ್ನುವಷ್ಟರಲ್ಲಿ ಒಬ್ಬ ಸ್ವಾರನು ಬಂದು-"ಹುಜೂರ, ೭–೮ ಕುದುರೆಗಳ ಕಾಲು ನರಗಳನ್ನು ಯಾರೋ ಕೊಯ್ದಿರುವರು. ಅವು ನಡೆಯಲಿಕ್ಕೆ ಬರುವಂತಿಲ್ಲನೆಂದನು. ಕಿಶೋರಿಮೋಹನನು ಆ ಕುದುರೆಗಳ ಹತ್ತರ ಹೋಗಿ ನೋಡಲು, ಆ ಎಲ್ಲ ಕುದುರೆಗಳಿಗೂ ಒಂದೇ ಸ್ಥಳದಲ್ಲಿ ಒಂದೇ ಬಗೆಯ ಗಾಯಗಳಾಗಿದ್ದವು. ಅದನ್ನು ನೋಡಿ ಅವನು ವಿಸ್ಮಯಗೊಂಡು ಈ ಪ್ರಕಾರ ಯಾರು ಮಾಡಿರಬಹುದು? ಎಂದು ಆಲೋಚಿಸ

ತೊಡಗಿದನು; ಆದರೆ ಅವನಿಗೆ ಏನೂ ತೋಚಲಿಲ್ಲ. ಅವನು ಹಾಗೆಯೇ ಪಯಣವನ್ನು ಮುಂದೆ ಸಾಗಿಸಿದನು. ಮರುದಿವಸ ಅವನು ೧೦–೧೨ ಹರದಾರಿಯನ್ನು ನಡೆದು ಒಂದು ಮಾವಿನ ತೋಪಿನ ಹತ್ತಿರ ರಾತ್ರಿಯಲ್ಲಿ ವಸತಿ ಮಾಡಿದನು. ಮರುದಿವಸ ಬೆಳಗಾಗುವದರೊಳಗೆ ಹಿಂದಿನ ರಾತ್ರಿಯಂತೆ ೨೦–೨೫ ಕುದುರೆಗಳ ಕಾಲಿಗೆ ಗಾಯವಾದ ಸಂಗತಿಯು ಕಿಶೋರಿಮೋಹನನಿಗೆ ತಿಳಿಯಲು, ಅವನು ಬಹು ಯೋಚನೆಗೊಂಡನು. ಆ ಎಲ್ಲ ಕುದುರೆಗಳೂ ನಿರುಪಯೋಗವಾದದ್ದರಿಂದ ಮುಂದಿನ ಮಾರ್ಗಕ್ರಮಣವು ಬಂದಾಯಿತು. ಅವನು ಮುಂದೆ ಏನು ಮಾಡಬೇಕೆಂದು ಆಲೋಚಿಸುತ್ತಿರುವಷ್ಟರಲ್ಲಿ ಅವನ ಹಿಂದೆ ನಿಂತ ಮನೋಹರನು–"ಖಾವಿಂದ, ಈ ಕೆಲಸವನ್ನು ಗಣೇಶನಾರಾಯಣನು ಮಾಡಿಸಿರಬಹುದೇನು?" ಎಂದು ಕೇಳಿದನು. ಗಣೇಶನಾರಾಯಣನ ಹೆಸರು ಕೇಳಿದ ಕೂಡಲೆ ಕಿಶೋರಿಮೋಹನನ ಎದೆಯು ಧಡಧಡನೆ ಒಡೆದುಕೊಳ್ಳಹತ್ತಿತು; ಮುಖವು ನಿಸ್ತೇಜವಾಯಿತು.

ಮನೋಹರನು ಮನಸ್ಸಿನಲ್ಲಿ:—"ಇಂದು ಕುದುರೆಗಳನ್ನು ಗಾಯಗೊಳಿಸಿರುವೆನು. ಪ್ರಸಂಗದಲ್ಲಿ ಮನುಷ್ಯರ ಕೊಲೆಯನ್ನು ಸಹ ಮಾಡುವೆನು. ಏನೇ ಆಗಲಿ, ಹೊಸ ಕುದುರೆಗಳು ಬರುವವರೆಗೆ ಇವರಿಗೆ ದೇವೀಕೋಟೆಯನ್ನು ಮುಟ್ಟಲಿಕ್ಕೆ ಎರಡು ದಿವಸ ತಡವಾಗುವದು. ಅಷ್ಟರಲ್ಲಿ ತ್ರಿಪುರಾ ರಾಣಿಯು ಗಣೇಶನಾರಾಯಣನ ಸಹಾಯಕ್ಕೆ ಬಂದೇ ಬರುವಳು" ಎಂದುಕೊಂಡನು.

ಕಿಶೋರಿಮೋಹನನು ರಾಜಧಾನಿಗೆ ಹೇಳಿಕಳಿಸಿ ಹೊಸ ಕುದುರೆಗಳು ಬಂದ ಬಳಿಕ ದೇವೀಕೋಟೆಗೆ ಬಂದು ತಲ್ಪಿದನು. ಈ ದೇವೀಕೋಟೆಯು ಬಹು ಪ್ರಾಚೀನ ಪಟ್ಟಣವು. ಮಹಾಭಾರತ ಕಾಲಕ್ಕಿಂತಲೂ ಆ ಪಟ್ಟಣವು ಪೂರ್ವದ್ದೆಂದು ಜನರು ಹೇಳುವರು. ಖಿಲಜಿ ಮನೆತನದವರು ಮೊದಲು ಈ ಪಟ್ಟಣವನ್ನೇ ರಾಜಧಾನಿಯನ್ನು ಮಾಡಿಕೊಂಡಿದ್ದರಂತೆ.

ದೇವೀಕೋಟೆಯ ಪಟ್ಟಣದ ಒಂದು ತುದಿಗೆ ಕಿಲ್ಲೆಯು. ಮತ್ತೊಂದು ತುದಿಗೆ ವಿಸ್ತೀರ್ಣವಾದ ದೇವೀಗುಡಿಯು. ಗುಡಿಯ ಹಿಂದೆ ದಟ್ಟವಾದ ಅಡವಿಯು. ಎಡಕ್ಕೆ ದೊಡ್ಡ ಪುಷ್ಕರಣಿಯು. ಬಲಗಡೆಗೆ ಸುಂದರವಾದ ಹೂದೋಟವು.

ಆ ಪಟ್ಟಣದಲ್ಲಿ ಹಿಂದೂ ಜನರ ಸಂಖ್ಯೆ ವಿಶೇಷವಿದ್ದರೂ ಮುಸಲ್ಮಾ

ನರ ಸಂಖ್ಯೆಯೇನೂ ಕಡಿಮೆಯಿದ್ದಿಲ್ಲ. ಪಟ್ಟಣದಲ್ಲಿ ಅಲ್ಲಲ್ಲಿಗೆ ನೂತನವಾದ ಮಸೀದೆಗಳು ಶೋಭಿಸುತ್ತಿದ್ದವು. ಹಿಂದೂಜನರ ಮುಖ್ಯ ದೇವರ ಗುಡಿಯೆಂದರೆ, ದೇವಿಯ ಗುಡಿಯು ಅಲ್ಲಿ ವಾಸಮಾಡತಕ್ಕ ಹಿಂದೂ-ಮುಸಲ್ಮಾನರಲ್ಲಿ ವೈರಭಾವವಿದ್ದಿಲ್ಲ. ಎಲ್ಲರೂ ಆನಂದದಿಂದ ಸ್ನೇಹದಿಂದ ಕಾಲಹರಣ ಮಾಡುತ್ತಿದ್ದರು. ಜಾತಿದ್ವೇಷಕ್ಕೆ ಎಲ್ಲಿಯೂ ಆಸ್ಪದವಿದ್ದಿಲ್ಲ. ಇಂಥ ವೇಳೆಯಲ್ಲಿ ಕಿಶೋರಿಮೋಹನನು ದೇವಿಯ ಮಂದಿರವನ್ನು ನೆಲಸಮ ಮಾಡಲಿಕ್ಕೆ ಅಲ್ಲಿಗೆ ಬಂದನು. ದೇವೀಕೋಟೆಯ ಕಿಲ್ಲೇದಾರನಿಂದ ನವಾಬನ ಕಡೆಗೆ ಬರತಕ್ಕ ಹಣವೂ ಬಂದಿದ್ದಿಲ್ಲ. ಕೋಟೆಯನ್ನು ರಿಪೇರಿ ಮಾಡಿಸುವ ಕೆಲಸವೂ ಆಗಿದ್ದಿಲ್ಲ. ನಶೆರಿತ್‌ಶಹನು ಸುಮ್ಮನೆ ಗಣೇಶನಾರಾಯಣನನ್ನು ಅಲ್ಲಿಗೆ ಕಳುಹಿಸಿದ್ದನು. ಗಣೇಶನಾರಾಯಣನ ಮನಸ್ಸಿನಲ್ಲಿ ಅತ್ಯಾಚಾರಿಯಾದ ನಶೆರಿತನು ತನ್ನ ಮನೆಯ ಜನರ ವಿಷಯದಲ್ಲಿ ಯಾವ ಕುತಂತ್ರಗಳನ್ನು ನಡೆಸಿರುವನೋ ಎಂಬ ಭೀತಿಯು ಇದ್ದೇ ಇತ್ತು. ಅವನು ಆ ಚಿಂತೆಯ ಭಾರವನ್ನು ದೇವರಿಗೊಪ್ಪಿಸಿ ನವಾಬನ ಆಜ್ಞೆಯಂತೆ ಇಲ್ಲಿಗೆ ಬಂದಿದ್ದನು. ಅವನು ಪಟ್ಟಣದ ಒಂದು ಭವ್ಯವಾದ ಮೇಲುಪ್ಪರಿಗೆಯ ಮನೆಯಲ್ಲಿ ಇಳಿದುಕೊಂಡಿದ್ದನು; ಮತ್ತು ಯಾವಾಗಾದರೂ ಕಿಲ್ಲೆಯೊಳಗೆ ಹೋಗಿ ಕಿಲ್ಲೇದಾರನ ಹತ್ತಿರ ಮಾತುಕಥೆಗಳನ್ನಾಡುತ್ತ ಹೊತ್ತುಗಳೆಯುತ್ತಿದ್ದನು.

ದೇವೀಕೋಟೆಯ ಕಿಲ್ಲೇದಾರನಾದ ಜೋನಾಬಖಾನನು ಮನುಷ್ಯಕುಲಕ್ಕೆ ರತ್ನದಂತೆ ಇದ್ದನು. ಹಿಂದೂ-ಮುಸಲ್ಮಾನರಿಬ್ಬರೂ ಅವನನ್ನು ಒಮ್ಮನಸ್ಸಿನಿಂದ ಪ್ರೀತಿಸುತ್ತಿದ್ದರು. ಮನುಷ್ಯತ್ವವೂ, ದಯೆಯೂ ಯಾರಲ್ಲಿರುವದೋ ಅವನನ್ನು ಯಾರು ಪ್ರೀತಿಸಲಿಕ್ಕಿಲ್ಲ? ಹಿಂದುಗಳಂತೂ ಮೊದಲೇ ಗುಣಲುಬ್ಧರು. ಜೋನಾಬಖಾನನು ಹಿಂದೂ-ಮುಸಲ್ಮಾನರನ್ನು ಸಮದೃಷ್ಟಿಯಿಂದ ನೋಡುತ್ತಿದ್ದನು ಅವನು ರಾಮ-ರಹಿಮರಲ್ಲಿ ಭೇದವೆಣಿಸಿದ್ದಿಲ್ಲ; ಆದ್ದರಿಂದ ಗಣೇಶನಾರಾಯಣನು ಅವನನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಗಣೇಶನಾರಾಯಣನು ಒಮ್ಮೆ ಅವನನ್ನು ಕುರಿತು— "ಖಾನಸಾಹೇಬ, ನೀವು ಈ ಪ್ರಾಂತದ ಅರಸರಾಗಲಿಕ್ಕೆ ತಕ್ಕವರು" ಎಂದನು.

ಜೋನಾಬ—ಏನು, ನವಾಬನನ್ನು ಕೊಂದು ನಾನು ಅರಸನಾಗಬೇಕೆ? ಛೀ! ಛೀ!! ಇದು ಅಸಂಗತವು.

ಗಣೇಶ—ಖಾನಸಾಹೇಬ, ನವಾಬನನ್ನು ಕೊಂದು ಅಲ್ಲ. ನಶಿರಿತನನ್ನು ಕೊಂದು; ಯಾಕಂದರೆ ಇನ್ನು ಸ್ವಲ್ಪ ಕಾಲದಲ್ಲಿಯೇ ಗೌಡ ಸಿಂಹಾಸನವು ಶೂನ್ಯವಾಗುವದು ನೀವು ಪ್ರಯತ್ನ ಪಟ್ಟರೆ ನಿಮಗೆ ಸಾಧ್ಯವಿದೆ.

ಜೋನಾಬ—ಪ್ರತ್ಯಕ್ಷ ಪೈಗಂಬರನು ಬಂದು ಆಜ್ಞೆ ಮಾಡಿದರೂ ಸಹ ನಾನು ರಾಜದ್ರೋಹಿಯಾಗಿ ಇಡೀ ಹಿಂದುಸ್ಥಾನದ ಬಾದಶಹನಾಗೆಂದರೂ ಅವನ ಆಜ್ಞೆಯನ್ನು ಮನ್ನಿಸುವದಿಲ್ಲ, ಎಂದನು.

ಗಣೇಶ—ಜೋನಾಬಖಾನ, ಗೌಡಸಿಂಹಾಸನಕ್ಕೆ ಕೂಡಲು ಯೋಗ್ಯರೆಂದರೆ, ಇಂದಿಗೆ ನೀವೊಬ್ಬರೇ. ಇಡೀ ರಾಜ್ಯದ ತುಂಬ ಹುಡುಕಿದರೂ ನಿಮ್ಮ ಹೊರ್ತು ಯಾರೂ ನನಗೆ ಯೋಗ್ಯರು ಕಾಣಿಸಲೊಲ್ಲರು.

ಜೋನಾಬ—ಹಿಂದೂ ಜನರೆದುರಿಗೆ ನಾನು ಯೋಗ್ಯನೇ. ನನ್ನಂಥ ನೂರಾರು ಜೋನಾಬಖಾನರು ಹಿಂದೂ ಜನರ ಮನೆ ಮನೆಯಲ್ಲಿ ಹೊರಡುವರು ರಾಜಾ.

ಗಣೇಶ—ಖಾನಸಾಹೇಬ, ನಾನು ಇದುವರೆಗೆ ಯಾರಿಗೂ ತಲೆಬಾಗಿದವನಲ್ಲ. ನಿಮ್ಮ ಗುಣಕ್ಕೆ ಲುಬ್ಧನಾಗಿ ನಿಮಗೊಬ್ಬರಿಗೆ ತಲೆಬಾಗಿರುವೆನು. ನೀವು ಪಠಾಣ ಜನಾಂಗಕ್ಕೆ ಅಲಂಕಾರಸ್ವರೂಪರು, ಎಂದನು.

ಒರಬರುತ್ತ ಇಬ್ಬರ ಸ್ನೇಹವು ಬೆಳೆಯುತ್ತ ನಡೆಯಿತು.

ಕಿಶೋರಿಮೋಹನನು ದೇವೀಕೋಟೆಗೆ ಬಂದನಂತರ ಸ್ವಲ್ಪಹೊತ್ತು ವಿಶ್ರಾಂತಿಯನ್ನು ಅನುಭವಿಸಿ ಅನಂತರದಲ್ಲಿ ಜೋನಾಬಖಾನನ ದರ್ಶನಕ್ಕೆ ಬಂದನು. ಇಬ್ಬರೂ ಒಬ್ಬರನ್ನೊಬ್ಬರು ಅಭಿನಂದಿಸಿದ ತರುವಾಯ ಕಿಶೋರಿಮೋಹನನು—"ಕಿಲ್ಲೇದಾರ ಸಾಹೇಬ, ಗೌಡನವಾಬನಾದ ನಶಿರಿತಶಹನು ನನ್ನನ್ನು ನಿಮ್ಮ ಹತ್ತಿರ ಕಳಿಸಿರುವನು." ಎಂದನು.

ಜೋನಾಬ—ನಾನು ನವಾಬನ ಸೇವಾನುಸೇವಕನು. ಏನು ಆಜ್ಞೆಯಿದೆ? ಹೇಳಬೇಕು.

ಕಿಶೋ—ತಾವು ನವಾಬನ ಸ್ವಾಮಿನಿಷ್ಠ ಸೇವಕರು. ಪಠಾಣ ರಾಜ್ಯದ ಹಿತಚಿಂತಕರು. ಆದ್ದರಿಂದ ಪಠಾಣರ ರಾಜ್ಯವನ್ನು ನಿಷ್ಕಂಟಕ ಮಾಡುವ ಭಾರವನ್ನು ನಿಮ್ಮ ಕಡೆಗೊಪ್ಪಿಸಿರುವರು.

ಜೋನಾ—ಈ ಸೇವಕನು ನವಾಬನ ಅಪ್ಪಣೆಯನ್ನು ಪಾಲಿಸಲಿಕ್ಕೆ ಸಿದ್ಧನಿರುವನು.

ಕಿಶೋ—ಬಹಳೇ ಚಲೋದಾಯಿತು. ನಿಮಗೆ ಗಣೇಶನಾರಾಯಣನ ಪರಿಚಯವಿರುವದಷ್ಟೇ?

ಜೋನಾ—ಏನು? ನೀವು ರಾಜಾ ಗಣೇಶನಾರಾಯಣಖಾನರ ವಿಷಯವನ್ನಲ್ಲವೇ ಕೇಳುವದು?

ಕಿಶೋ—ಅಹುದು.

ಜೋ—ನನಗೆ ಅವರ ಪರಿಚಯವು ಚನ್ನಾಗಿದೆ. ಅವರ ಪರಿಚಯವಿಲ್ಲದವರು ಈ ಪ್ರಾಂತದಲ್ಲಿ ಯಾರಿರುವರು?

ಕಿಶೋ—ಅವನು ನಿಮ್ಮ ಈ ಪಟ್ಟಣದಲ್ಲಿ ಇರುವನಷ್ಟೇ?

ಜೋ—ಅಹುದು.

ಕಿಶೋ—ನವಾಬನು ಬಹಳ ವಿಚಾರದಿಂದಲೂ ಅನುಭವದಿಂದಲೂ ಗಣೇಶನಾರಾಯಣನೇ ಪಠಾಣರಾಜ್ಯದ ಹಿತಶತ್ರುವೆಂದು ನಿರ್ಧರಿಸಿರುವನು.

ಜೋ—ಅದು ಅಶಕ್ಯವು. ನನಗಂತೂ ರಾಜಾ ಗಣೇಶನಾರಾಯಣನೇ ಪಠಾಣ ರಾಜ್ಯದ ಆಧಾರಸ್ತಂಭವೆಂದು ತಿಳಿಯುತ್ತದೆ.

ಕಿಶೋ—ನಾನು ನಿಮ್ಮ ಅಭಿಪ್ರಾಯವನ್ನು ಕೇಳಲಿಲ್ಲ.

ಜೋ—ಕೇಳದಿದ್ದರೂ ನನ್ನ ಸ್ವಂತ ಅಭಿಪ್ರಾಯವನ್ನು ಹೇಳುವ ಹಕ್ಕು ನನಗಿರುತ್ತದೆ.

ಕಿಶೋ—ಸೇವಕರಿಗೆ ಆ ಅಧಿಕಾರವು ಬರಲಾರದು.

ಜೋ—ನಿಮ್ಮ ಸಂಗಡ ಮಾತು ಬೆಳಿಸಿ ಉಪಯೋಗವೇನು? ಬಂದ ಕೆಲಸವೇನು ಹೇಳಿರಿ.

ಕಿಶೋ—ಮುಖ್ಯ ಮಾತೆಂದರೆ ಗಣೇಶನಾರಾಯಣನ ಕೊಲೆಯನ್ನು ಮಾಡಿಸಿ ಪಠಾಣರಾಜ್ಯದ ಕಂಟಕವನ್ನು ದೂರ ಮಾಡುವದವಶ್ಯವು.

ಜೋನಾಬಖಾನನು ಕುಳಿತ ಸ್ಥಳದಿಂದೆದ್ದು (ವಿಕಟಸ್ವರದಿಂದ) ಏನು? ಏನೆನ್ನುವಿರಿ? ಸರದಾರ ಕಿಶೋರಿಮೋಹನರಾವ! ಯಾರ ಕೊಲೆಯನ್ನು ಮಾಡಬೇಕೆನ್ನುವಿರಿ?

ಕಿಶೋರಿ (ಕೆಮ್ಮಿ ಗಂಟಲವನ್ನು ಸರಿಮಾಡಿಕೊಂಡು)— ಗಣೇಶನಾರಾಯಣನು ಬದುಕಿರುವವರೆಗೆ ಪಠಾಣರಾಜ್ಯಕ್ಕೆ ಹಿತವಿಲ್ಲ. ಆದ್ದರಿಂದ ಅವನನ್ನು ಗುಪ್ತವಾಗಿ ಕೊಲ್ಲಿಸುವದು ಅವಶ್ಯವು.

ಜೋನಾ (ಮುಖವು ಸಿಟ್ಟಿನಿಂದ ಕೆಂಪಾಯಿತು.)—ಆವೇಶದಿಂದ

ಮೈಯಲ್ಲಿ ಕಂಪನವು ಹುಟ್ಟಿತು. ಸಿಂಹನ ಆಯಾಲುಗಳಂತಿರುವ ಉದ್ದವಾದ ಅವನ ಗಡ್ಡಗಳು ನೆಟ್ಟಗಾದವು. ಅವನು ದವಡೆಯನ್ನು ಕಚ್ಚಿ-ಕಿಶೋರಿಮೋಹನರಾವ, ಏನು ಮಾಡಲಿ? ನೀವು ನವಾಬನ ಪ್ರತಿನಿಧಿಯಾಗಿ ಬಂದಿರುವಿರಿ. ಇಲ್ಲದಿದ್ದರೆ ಮತ್ತೆ ಯಾರಾದರೂ ಈ ಪ್ರಕಾರದ ಮಾತುಗಳನ್ನು ಈ ಜೋನಾಬಖಾನನ ಮುಂದೆ ಆಡಿದ್ದರೆ ಇದುವರೆಗೆ ಜೀವಿಸಿರುವದೇ ಅಶಕ್ಯವಾಗಿತ್ತು.

ಕಿಶೋ—ನಿರರ್ಥಕ ಸಿಟ್ಟಿನ ಉಪಯೋಗವೇನು? ಕಿಲ್ಲೇದಾರ ಸಾಹೇಬ, ನವಾಬನ ಆಜ್ಞೆಯನ್ನು ಪಾಲಿಸಬೇಕಲ್ಲವೇ?

ಜೋ—ಈ ಜೋನಾಬಖಾನನು ಜೀವಂತವಿರುವವರೆಗೆ ಈ ಪಟ್ಟಣದಲ್ಲಿರುವ ಗಣೇಶನಾರಾಯಣನ ಒಂದು ಕೂದಲನ್ನು ಸಹ ಮುಟ್ಟುವ ತ್ರಾಣವು ಯಾರದೂ ಅಲ್ಲ. ತಿಳಿಯಿತೆ ಸರದಾರ ಸಾಹೇಬ?

ಕಿಶೋರಿ—ಹಾಗಾದರೆ ನವಾಬನ ಆಜ್ಞೆಯನ್ನು ಉಲ್ಲಂಘನ ಮಾಡುವಿರಷ್ಟೆ?

ಜೋನಾ—ನನಗೆ ಈ ಪ್ರಕಾರದ ನವಾಬನ ಹುಕುಮು ಇರುವದಿಲ್ಲ.

ಕಿಶೋ—ಹಾಗಾದರೆ ಈ ಹುಕುಮನ್ನು ತೆಗೆದುಕೊಳ್ಳಿರಿ.

ಜೋನಾಬ—ಅದನ್ನು ತೆಗೆದುಕೊಳ್ಳುವ ಇಚ್ಛೆಯೂ ನನಗಿರುವದಿಲ್ಲ. ಆ ಹುಕುಮು ಮೋಸದ್ದು.

ಕಿಶೋ—ಏನು, ನಾನು ಮೋಸದ ಹುಕುಮು ತಂದಿರುವೆನೆಂದು ನಿಮ್ಮ ಕಲ್ಪನೆಯಿರುವದೇ?

ಜೋನಾಬ—ಹೌದು. ನವಾಬ ಸೈಫುದ್ದೀನನು ಜೀವಂತನಿರುವವರೆಗೆ ಗಣೇಶನಾರಾಯಣನನ್ನು ಕೊಲ್ಲುವ ಆಜ್ಞೆಯನ್ನು ಈ ಜೋನಾಬಖಾನನಿಗೆ ಮಾಡುವದಿಲ್ಲವೆಂದು ನನ್ನ ದೃಢನಂಬಿಗೆಯುಂಟು.

ಕಿಶೋ—ನಿಮ್ಮ ಗ್ರಹಿಕೆಯು ತಪ್ಪು. ಈ ಹುಕುಮನ್ನು ನೋಡಿದರೆ ನಿಮಗೆ ಖಾತ್ರಿಯಾಗುವದು. ಎಂದು ಹುಕುಮನ್ನು ಜೋನಾಬಖಾನನ ಕೈಯಲ್ಲಿ ಕೊಟ್ಟನು. ಜೋನಾಬಖಾನನು ಅದನ್ನು ಹರಿದು ಚೂರು ಚೂರು ಮಾಡಿ—ಈ ಹುಕುಮು ಕೃತ್ರಿಮವೆಂದು ನಾನು ಮೊದಲೇ ಹೇಳಿರುವೆನೆಂದನು.

**ಕಿಶೋ—ಯೋಗ್ಯ ಮಾಡಿದಿರಿ! ನೀವು ನವಾಬನ ಹುಕುಮನ್ನು**

ಹೇಗೆ ಮನ್ನಿಸಿದಿರೆಂಬುದನ್ನು ನವಾಬನಿಗೆ ಹೋಗಿ ಹೇಳುತ್ತೇನೆ ಕಿಲ್ಲೇದಾರ ಸಾಹೇಬ.

ಜೋನಾಬ—ಅವಶ್ಯವಾಗಿ ಹೇಳಿರಿ, ಎಂದನು.

ಕಿಶೋರಿಮೋಹನನು ಕೆಲ ಕಾಲ ವಿಚಾರಿಸಿ ನಂತರ ಜೋನಾಬಖಾನನನ್ನು ಕುರಿತು—ಅರಸನ ಎರಡನೇ ಅಪ್ಪಣೆಯೊಂದಿರುವದೆಂದನು.

ಜೋನಾ—"ಮತ್ತೇನು ಅಪ್ಪಣೆ?"

ಕಿಶೋರಿ—ನನಗೆ ಸಹಾಯ ಮಾಡುವ ಕುರಿತು.

ಜೋನಾ—ಯಾವ ಕಾರ್ಯದಲ್ಲಿ?

ಕಿಶೋ—ಇಲ್ಲಿಯ ದೇವೀ ಮಂದಿರವನ್ನು ನೆಲಸಮ ಮಾಡುವ ಕಾರ್ಯದಲ್ಲಿ.

ಜೋನಾಬಖಾನನು ಕೈಗಳಿಂದ ಕಿವಿಗಳನ್ನು ಮುಚ್ಚಿಕೊಂಡು—ತೋಬಾ, ತೋಬಾ, ಯಾ ಅಲ್ಲಾ, ಇಂಥ ಮಾತುಗಳನ್ನು ಕೇಳುವ ಇಚ್ಛೆಯೂ ನನಗಿಲ್ಲವೆಂದನು.

ಕಿಶೋ—ನೀವು ನನಗೆ ಸಹಾಯ ಮಾಡತಕ್ಕವರೋ-ಇಲ್ಲವೋ, ಸ್ಪಷ್ಟವಾಗಿ ಹೇಳಿರಿ.

ಜೋನಾಬಖಾನನು ಅವನ ಮಾತಿಗೆ ಕಿವಿಗೊಡದೆ—ಇಬ್ರಾಹಿಮ! ಇಬ್ರಾಹಿಮ!! ಎಂದು ಕೂಗಿದನು. ಇಬ್ರಾಹಿಮನು ಜೋನಾಬಖಾನನ ಕೈಯೊಳಗಿನ ಮುಖ್ಯ ಸೇನಾಪತಿಯು. ಅವನು ಶೂರನೂ ಸಾಹಸಿಯೂ ಇದ್ದನು. ಅವನು ಈ ಮೊದಲು ನಶೀರಿತನ ಪಾಪಕಾರ್ಯಗಳಿಗೆ ಸಹಾಯ ಮಾಡಿ ಈ ಅಧಿಕಾರವನ್ನು ಸಂಪಾದಿಸಿದ್ದನು. ಅವನಿಗೆ ಯಾವ ಧರ್ಮದ ಮೇಲೆಯೂ ನಂಬಿಗೆ ಇದ್ದಿಲ್ಲ; ಆದರೂ ಹಿಂದೂ ಧರ್ಮದ ಹೆಸರು ಕೇಳಿದರೆ ಸಿಟ್ಟಿಗೇಳುತ್ತಿದ್ದನು. ಅದರ ಕಾರಣವು ಯಾರಿಗೂ ಗೊತ್ತಿದ್ದಿಲ್ಲ. ಅವನು ಈ ಪೂರ್ವದಲ್ಲಿ ಹಿಂದೂ ಜನರಿಂದ ಅನೇಕ ಉಪಕಾರ ಹೊಂದಿದ್ದನು.

ತರುಣನಾದ ಇಬ್ರಾಹಿಂಖಾನನು ಬಂದು ಜೋನಾಬಖಾನನ ಎದುರಿಗೆ ವಿನಯದಿಂದ ನಿಂತುಕೊಂಡನು. ಜೋನಾಬಖಾನನು ಅವನನ್ನು ಕುರಿತು-ಇಬ್ರಾಹಿಮ, ನನ್ನ ಖಡ್ಗವನ್ನು ತೆಗೆದುಕೋ. ನಾನು ನಿನ್ನ ಕೈದಿಯು, ಎಂದನು.

ಇಬ್ರಾಹಿಮನು ಆಶ್ಚರ್ಯದಿಂದ:—ನೀವು ಕೈದಿಗಳೇ? ಇದು

ಎಂದಿಗೂ ಶಕ್ಯವಾದ ಮಾತಲ್ಲವೆಂದನು. ಜೋನಾಬಖಾನನು ತನ್ನ ಖಡ್ಗವನ್ನು ಅವನ ಕೈಯಲ್ಲಿ ಕೊಟ್ಟು—ಇಬ್ರಾಹಿಮ, ನಾನು ನವಾಬನ ಅಪ್ಪಣೆಯನ್ನು ಅಮಾನ್ಯ ಮಾಡಿರುವೆನು; ಕಾರಣ ಕೈದಿಯನ್ನಾಗಿ ಮಾಡು.

ಇಬ್ರಾ-ನೀವು ನವಾಬನ ಅಪ್ಪಣೆಯನ್ನು ಮೀರುವದು ಶಕ್ಯವೇ ಇಲ್ಲ.

ಜೋನಾಬಖಾನನು ಕಿಶೋರಿಮೋಹನನ ಕಡೆಗೆ ಕೈ ಮಾಡಿ ತೋರಿಸಿ ಇಬ್ರಾಹಿಮ, ಬೇಕಾದರೆ ಇವರನ್ನು ಕೇಳು. ನಾನು ರಾಜದ್ರೋಹಿಯು. ಕಿಶೋರಿಮೋಹನರಾವ, ಈ ಕ್ಷಣದಿಂದ ಇಬ್ರಾಹಿಮನು ಕಿಲ್ಲೇದಾರನು. ನಿಮ್ಮಂಥ ನಾಯಿ-ಹಂದಿಗಳ ಕೂಡ ಮಾತಾಡುವ ಇಚ್ಛೆಯು ನನಗಿಲ್ಲ. ಏನು ಮಾಡಲಿ? ಉಪಾಯವಿಲ್ಲ. ನೀನು ನವಾಬನ ಪ್ರತಿನಿಧಿಯು. ಇಲ್ಲದಿದ್ದರೆ ಹಿಂದೂ ಕುಲದಲ್ಲಿ ಹುಟ್ಟಿದಂಥವನು. ಹಿಂದೂ ದೇವರ ಗುಡಿ ನೆಲಸಮ ಮಾಡಲಿಕ್ಕೆ ಬಂದದ್ದು ತಿಳಿದ ಕ್ಷಣದಲ್ಲಿಯೇ ಅವನ ತಲೆಯನ್ನು ಎಡಗಾಲಿನಿಂದ ಮೆಟ್ಟಿ, ಅವನನ್ನು ನರಕಕ್ಕೆ ಕಳಿಸುತ್ತಿದ್ದೆನು. ಉಪಾಯವಿಲ್ಲವೆಂದು ಅಂದು ಆ ಕೋಣೆಯಿಂದ ಹೊರಬಿದ್ದು ಹೋದನು.

## ( ೧೪ )

ಮಧ್ಯರಾತ್ರಿಯ ಸಮಯಕ್ಕೆ ಫಿರೋಜಾಬಾದ ಪಟ್ಟಣದ ಸಾಧಾರಣ ಸೆರೆಮನೆಯ ಬಾಗಿಲ ಹತ್ತರ ೧೬-೧೭ ವರ್ಷದ ಸಾದಾ ವೇಷದ ಒಬ್ಬ ಬಾಲಿಕೆಯು ಬಂದು ಕಾವಲುಗಾರನನ್ನು ಕುರಿತು—"ಸರದಾರ ಸಾಹೇಬ, ಸೆರೆಮನೆಯ ಬಾಗಿಲವನ್ನು ಸ್ವಲ್ಪ ತೆರೆಯಬಾರದೆ?" ಎಂದಳು.

ಕಾವಲುಗಾರ—ನಿನ್ನ ಹುಕುಮಿನ ಮೇಲಿಂದ ನಾನು ಬಾಗಿಲ ತೆರೆಯಬೇಕೆ? ಬಹಳ ಚಲೋ ಮಾತು ಹೇಳುವಿ.

ಬಾಲಕಿ—ನಿನಗೆ ಏನು ಬೇಕೋ ಅದನ್ನು ಕೊಡುವೆನು. ಕ್ಷಣಕಾಲ ನನ್ನನ್ನು ಒಳಗೆ ಬಿಡು.

ಕಾವಲ—ನೀನು ಬಹಳೇ ದೊಡ್ಡ ಮನುಷ್ಯಳು; ಬೇಡಿದ್ದನ್ನು ಕೊಡತಕ್ಕವಳೇ?

ಬಾಲಕಿ—ಶಿಪಾಯಿ ಸಾಹೇಬ, ಹಾಗೆನ್ನಬೇಡ. ನಿನಗೇನು ಬೇಕು? ಬೇಡು, ಕೊಡುವೆನು.

ಕಾವಲ—ಕೊಡುವಿಯಾ? ಹಾಗಾದರೆ ನನಗೆ ೧೦ ಆಸರಫೀ

(ಬಂಗಾರದ ನಾಣ್ಯ)ಗಳನ್ನು ಕೊಡು. ಅಷ್ಟು ಆದರೆ ನನ್ನ ಲಗ್ನದ ಕೆಲ ಸವೇ ಆಗುವದು.

ಬಾಲಕಿ—ಒಳ್ಳೇದು, ಹಿಡಿ; ಎಂದು ಅಂದು ಆವನ ಕೈಯಲ್ಲಿ ೧೦ ಆಸರಫೀಗಳನ್ನು ಎಣಿಸಿ ಕೊಟ್ಟಳು.

ಕಾವಲುಗಾರನು ಅವುಗಳನ್ನು ತಕ್ಕೊಂಡು ಆಶ್ಚರ್ಯದಿಂದ ಆ ಬಾಲಕಿಯ ಕಡೆಗೆ ನೋಡಲು, ಅವಳು ಬುರಕೆಯನ್ನು ಧರಿಸಿದ್ದರಿಂದ ಅವಳ ಮುಖವು ಕಾಣಿಸಲಿಲ್ಲ. ಆಗ ಅವನು ಅವಳನ್ನು ಕುರಿತು:—ಇವು ನಿನಗೆಲ್ಲಿ ದೊರೆತವು? ಎಂದನು.

ಬಾಲಕಿ—ನಮ್ಮ ಅವ್ವನು ಕೊಟ್ಟಿರುವಳು, ಎಂದಳು.

ಕಾವಲುಗಾರನು ಬಾಗಿಲವನ್ನು ತೆರೆದು ಆವಳಿಗೆ ಒಳಗೆ ಹೋಗಲಿಕ್ಕೆ ಹೇಳಿದನು.

ಬಾಲಕಿಯು ಬಾಗಿಲದಲ್ಲಿ ಬಂದು ನಿಂತಳು. ಒಳಗೆ ಸಂಪೂರ್ಣ ಕತ್ತಲೆಯು. ಅವಳಿಗೆ ಒಳಗಿನ ಹಾದಿಯೂ ಗೊತ್ತಿದ್ದಿಲ್ಲ. ಅದರಿಂದ ಅವಳು ಆ ಕಾವಲುಗಾರನನ್ನು ಕುರಿತು:-ನನಗೆ ಒಳಗೆ ಹೋಗುವ ಹಾದಿಯು ಗೊತ್ತಿಲ್ಲವೆಂದಳು.

ಕಾವಲ—ನೀನು ಯಾರ ಹತ್ತರ ಹೋಗಬೇಕೆಂದು ಬಂದಿರುವಿ?

ಬಾಲಕಿ—ಕುಮಾರ ಯದುನಾರಾಯಣನ ಹತ್ತರ.

ಕಾವಲ—ಅಲ್ಲಿ ಹೋಗುವದು ಕಠಿಣವು.

ಬಾಲಕಿ—ನೀನು ಬಂದು ಆ ಸ್ಥಳವನ್ನು ತೋರಿಸಬಾರದೇ; ನಿನಗೆ ಇನ್ನೂ ಕೆಲವು ಇನಾಮು ಕೊಡುವೆನು.

ಕಾವಲ—ಮತ್ತೆ ಹತ್ತು ಆಸರಫಿಗಳನ್ನು ಕೊಡುವಿಯಾ?

ಬಾಲಕಿ—ಕೊಡುವೆನು, ಎಂದಳು.

ಇಬ್ಬರೂ ಬಹಳ ಸುತ್ತರಿದು ಒಂದು ಕೋಣೆಗೆ ಬಂದರು. ಅಲ್ಲಿಯ ಕಾವಲುಗಾರನಿಗೆ ಈಗ ಬಂದ ಕಾವಲುಗಾರನು ಏನೋ ಸಂಕೇತ ಮಾಡಿ, ಒಂದು ಆಸರಫೀಯನ್ನು ತೋರಿಸಲು, ಅವನು ಒಳಗೆ ಬಿಟ್ಟನು.

ಕಲ್ಲಿನ ಸಣ್ಣ ಕೋಣೆಯು. ಅಲ್ಲಿ ಒಂದು ಮಣ್ಣಿನ ಪಣತಿಯಲ್ಲಿ ಮಂದವಾದ ದೀಪವು ಉರಿಯುತ್ತಿತ್ತು. ಒಬ್ಬ ಯುವಕನು ಬಾಗಿಲ ಕಡೆಗೆ

ಬೆನ್ನು ಮಾಡಿ ಅಲ್ಲಿಯ ಒಂದು ಹರಕು ಕಂಬಳಿಯ ಮೇಲೆ ಮಲಗಿಕೊಂಡಿದ್ದನು. ಆ ಬಾಲಿಕೆಯು ಅವನ ಹತ್ತಿರ ಹೋಗಿ ನಿಂತು ಕುಮಾರ ಎಂದಳು. ಯದುನಾರಾಯಣನಿಗೆ ಗಾಢನಿದ್ರೆಯು ಹತ್ತಿತ್ತು. ನಿದ್ದೆಯಲ್ಲಿ ಅವನಿಗೆ ಸ್ವಪ್ನವು ಬಿದ್ದಿದ್ದು ಅವನು ಸ್ವಪ್ನದಲ್ಲಿಯೇ ನಗುತ್ತಿದ್ದನು. ಬಾಲಿಕೆಯು ತನ್ನ ಅವಗುಂಠನವನ್ನು ತೆಗೆದು ಕುಮಾರನನ್ನು ಕಣ್ತುಂಬ ನೋಡತೊಡಗಿದಳು. ನಂತರ ಮತ್ತೆ—'ಕುಮಾರ' ಎಂದಳು.

ಯದುನಾರಾಯಣನ ನಿದ್ರಾಭಂಗವಾಯಿತು. ಅವನು ಕಣ್ದೆರೆದು ನೋಡಲು, ಎದುರಿಗೆ ಮರಿಯುನಳು ನಿಂತಿದ್ದಳು. ಆಗ ಅವನು ಉತ್ಕಂಠೆಯಿಂದ "ಮರಿಯುನ! ಮರಿಯುನ!!" ಎಂದನು.

ಮರಿ—ಮತ್ತೇನು ಕುಮಾರ?

ಯದು—ನೀನು ನಿಜವಾಗಿಯೂ ಮರಿಯುನ್ನಳೇ?

ಮರಿ—ಹೌದು. ನಾನು ಯದುಕುಮಾರನ ದಾಸಾನುದಾಸಿಯಾದ ಮರಿಯುನ್ನಳೇ.

ಯದು—ಹಾಗಾದರೆ ನಾನು ಎಲ್ಲಿ ಇರುವೆನು?

ಮರಿ—ಕಾರಾಗೃಹದಲ್ಲಿ.

ಕುಮಾರನು ಮರಿಯುನಳ ಕೈಯನ್ನು ಹಿಡಿದು:-ಪ್ರಿಯೇ, ಮರಿಯುನ, ನೀನು ಇಂಥ ನರಕಸದೃಶ ಸ್ಥಳದಲ್ಲಿ ಏಕೆ ಬಂದೆ?

ಮರಿ—ಯಾವ ಸ್ಥಳದಲ್ಲಿ ನನ್ನ ಹೃದಯೇಶ್ವರನಿರುವನೋ ಆ ಸ್ಥಳವು ನನಗೆ ಸ್ವರ್ಗಸಮಾನವಲ್ಲವೇ?

ಯದು—ಮರಿಯುನ, ನೀನು ನನ್ನನ್ನು ಬಂಧಮುಕ್ತ ಮಾಡಲು ಬಂದಿರುವಿಯೇನು?

ಮರಿ—ಕುಮಾರ, ಆ ಸಾಮರ್ಥ್ಯವು ನನ್ನಲ್ಲಿಲ್ಲ.

ಯದು—ನನ್ನನ್ನು ಬಿಡುಗಡೆ ಮಾಡಲು ಬಂದಿದ್ದರೆ ನನ್ನ ಮನಸ್ಸಿಗೆ ಬಹಳ ವ್ಯಥೆಯಾಗುತ್ತಿತ್ತು; ಯಾಕಂದರೆ ಹಾಗೆ ಮಾಡುವದರಿಂದ ನೀನು ಪಿತೃದ್ರೋಹಿಯೂ ವಿಶ್ವಾಸಘಾತಕಿಯೂ ಆಗುತ್ತಿದ್ದಿ. ಯಾವಳು ಸ್ನೇಹಮಯ ತಂದೆಯ ವಿಶ್ವಾಸಘಾತಕಳೋ, ಅವಳು ಪತಿದ್ರೋಹಿಯಾಗುವದೇನು ಆಶ್ಚರ್ಯ?

ಮರಿ—ನನ್ನ ಪತಿಯೇ, ಕುಮಾರ, ನನ್ನ ಸ್ವಾಮಿ ಯಾರು?

ಯದು— ನಾನೇ ನಿನ್ನ ಪತಿಯು; ನೀನೇ ನನ್ನ ಪತ್ನಿಯು.

ಮರಿ—ನಿನ್ನ ಪತ್ನಿಯಾಗುವ ಪುಣ್ಯವು ನನ್ನ ದೈವದಲ್ಲಿಲ್ಲ.

ಯದು—ಯಾಕೆ ಮರಿಯುನ, ಹಾಗೇಕೆ ಅನ್ನುವಿ? ನಾನು ಇಲ್ಲಿಂದ ಬಿಡುಗಡೆ ಹೊಂದಿದ ಮೇಲೆ ನನ್ನ ತಂದೆ-ತಾಯಿಗಳಿಗೆ ಹೇಳಿಕೊಂಡು ನಿನ್ನನ್ನೇ ಲಗ್ನಮಾಡಿಕೊಳ್ಳುವೆನು.

ಮರಿ—ಕುಮಾರ, ಅದು ಶಕ್ಯವಿಲ್ಲ.

ಯದು—ಯಾಕೆ ಮರಿಯುನ, ಹಾಗೇಕೆ ಹೇಳುವಿ? ಕಾರಣವೇನು?

ಮರಿ—ಪ್ರಸಂಗದಲ್ಲಿ ಆ ಕಾರಣವನ್ನು ಹೇಳುವೆನು.

ಯದು—ಹಾಗಾದರೆ ಮರಿಯುನ, ನನ್ನ ಹೊರತು ಬೇರೆ ಯಾರನ್ನೂ ವಿವಾಹ ಮಾಡಿಕೊಳ್ಳುವದಿಲ್ಲವೆಂದು ಪ್ರತಿಜ್ಞೆ ಮಾಡು.

ಮರಿ—ಕುಮಾರ, ನನ್ನ ಮಾತಿನ ಮೇಲೆ ನಂಬಿಗೆಯಿಲ್ಲವೆ?

ಯದು—ಇಲ್ಲ; ಮರಿಯುನ, ಹಾಗೇನೂ ಭಾವಿಸಬೇಡ. ನಿನ್ನ. ಪ್ರತಿಜ್ಞೆಯನ್ನು ಕೇಳಿದರೆ ನನ್ನ ಮನಸ್ಸಿಗೆ ಸಮಾಧಾನವಾಗುತ್ತದೆಯಷ್ಟೆ?

ಮರಿ—ಹೀಗೋ? ಹಾಗಾದರೆ ಕೇಳು. ನಾನು ಸರ್ವಸಾಕ್ಷಿಯಾದ ದೇವರನ್ನು ಸ್ಮರಿಸಿ ಪ್ರತಿಜ್ಞೆ ಮಾಡುವದೇನಂದರೆ, ನಿನ್ನ ಹೊರತು ಬೇರೆ ಯಾರನ್ನೂ ವಿವಾಹವಾಗುವದಿಲ್ಲ.

ಸ್ವಲ್ಪ ಹೊತ್ತಿನಲ್ಲಿ ಮರಿಯುನಳು ಕಾರಾಗೃಹದಿಂದ ಹೊರಗೆ ಬಂದಳು.

## ( ೧೫ )

ಮಂದಾಕಿನಿಯು ಹೋದನಂತರ ತ್ರಿಪುರಾದೇವಿಯು ವಿಚಾರಮಗ್ನಳಾಗಿ ಕಿಡಿಕೆಯ ಹತ್ತರ ಬಂದು ನಿಂತಳು. ಬೆಳಗಾಗಲು ಇನ್ನೂ ಎರಡು ತಾಸು ರಾತ್ರಿ ಇತ್ತು. ಆಗ ಅವಳು ಏನನ್ನೋ ಭಾವಿಸಿ-ಗೋವಿಂದಾ, ಎಂದಳು.

ಗೋವಿಂದನು ವೃದ್ಧ ಸೈನಿಕನು. ಅವನು ೪೦ ವರ್ಷಗಳಿಂದ ಇವರ ಮನೆಯಲ್ಲಿದ್ದನು. ಈಗ ಅವನಿಗೆ ೬೦ ವರ್ಷಗಳಾದರೂ ಅವನ ಬಾಹುಗಳಲ್ಲಿ ಬಹಳ ಸಾಮರ್ಥ್ಯವಿತ್ತು. ಅವನು ಬಂದ ಕೂಡಲೆ ತ್ರಿಪುರಾದೇವಿಯು—ಗೋವಿಂದಾ ನಾನು ಸಪ್ತದುರ್ಗಕ್ಕೆ ಹೋಗುವೆನು, ಎಂದಳು.

ಗೋ—ಯಾವಾಗ?

ತ್ರಿ—ಈಗಲೆ ಹೊರಡುವೆನು. ನಾಪಿನಿಂದ ಇಂದೇ ಸಪ್ತದುರ್ಗ ವನ್ನು ಮುಟ್ಟಬೇಕಾಗಿದೆ.

ಗೋ—ತಾಯಿ; ಆದರೆ ಕುಮಾರನು ಬಂದಿಯಾಗಿರುವನು. ಅವ ನನ್ನು ಶತ್ರುಗಳ ಹತ್ತಿರ ಬಿಟ್ಟು ಹೋಗುವಿರೇನು?

ತ್ರಿ—ಗೋವಿಂದಾ, ಹೋಗದ ಹೊರತು ಅನ್ಯ ಮಾರ್ಗವಿಲ್ಲ.

ಗೋ—ತಾಯಿ, ಅಂಥ ಸಂಕಟವೇನು ಬಂದಿರುವದು?

ತ್ರಿ—ದೇವೀಕೋಟೆಯಲ್ಲಿ ಅವರು ಸಂಕಟದಲ್ಲಿ ಸಿಕ್ಕಿರುವರು.

ಗೊ—ಏನು? ಮಹಾರಾಜರು ಸಂಕಟದಲ್ಲಿ ಸಿಕ್ಕಿರುವರೆ? ತಾಯಿ, ಹಾಗಾದರೆ ಮೊದಲು ದೇವೀಕೋಟೆಗೆ ಹೋಗೋಣ.

ತ್ರಿ—ಗೋವಿಂದಾ, ದೇವೀಕೋಟೆಗೆ ಹೋಗುವ ಮೊದಲು ಸಪ್ತ ದುರ್ಗಕ್ಕೆ ಹೋಗಬೇಕಾಗಿದೆ. ನೀನು ಇಲ್ಲಿ ಇದ್ದು ಮೊದಲು ದಿವಾಣರ ಬಿಡುಗಡೆ ಮಾಡಬೇಕಾಗಿದೆ. ಮೊದಲು ನನ್ನ ಹೊರಡುವ ಸಿದ್ಧತೆ ಮಾಡು. ನಿನಗೆ ಎಲ್ಲವನ್ನೂ ತಿಳಿಸಿರುವೆನು, ಎಂದಳು. ಗೋವಿಂದನು ಹೊರಟು ಹೋದನು.

ಸ್ವಲ್ಪ ಹೊತ್ತಿನಲ್ಲಿ ತ್ರಿಪುರಾದೇವಿಯು ಮಗಳನ್ನೂ ೨೫ ಜನ ಅಂಗ ರಕ್ಷಕರನ್ನೂ ಕರಕೊಂಡು ಸಪ್ತದುರ್ಗಕ್ಕೆ ಬಂದಳು. ಅಲ್ಲಿಗೆ ಬಂದನಂತರ ಅಲ್ಲಿಯ ಮುಖ್ಯ ಕಾರಭಾರಿಯನ್ನು ಕರೆಯಿಸಿ—ನನಗೆ ಇಂದೇ ೫ ಸಾವಿರ ಸೈನ್ಯವು ಬೇಕು, ಎಂದಳು.

ಕಾರಭಾರಿಯು ವಿನಯದಿಂದ—"ಒಂದೇ ದಿನದಲ್ಲಿ ಇಷ್ಟು ಸೈನ್ಯ ಕೂಡಿಸುವದು ಶಕ್ಯವಿಲ್ಲ. ३–४ ದಿವಸಗಳಲ್ಲಿ ಕೂಡಿಸಿ ಕೊಡುವೆನೆಂದನು. ಆಗ ತ್ರಿಪುರಾದೇವಿಯು ಒಳ್ಳೇದು, ಹಾಗೆಯೇ ಆಗಲಿ. ಈಗ ಎಷ್ಟು ಸೈನ್ಯವು ದೊರಕುವದು? ಎಂದಳು. ಆಗ ಕಾರಭಾರಿಯು ಈಗ ೫–೬ ನೂರು ಸೈನಿಕರು ಸಿಗುವರು, ಎಂದನು.

ತ್ರಿ—ಇನ್ನೂ ಒಂದು ಸಹಾಯವು ಬೇಕು.

ಕಾರಭಾ—ಮತ್ತೇನು?

ತ್ರಿ—ಒಂದು ಸಾವಿರ ಲಾಠಿಯವರು.

ಕಾರಭಾರಿ—ಒಳ್ಳೇದು; ತಾಯಿ ಇಷ್ಟೆಲ್ಲ ಸಿದ್ಧತೆಯು ಏತಕ್ಕೆ?

ತ್ರಿ—ನಾನು ತೀರ್ಥ-ಯಾತ್ರೆಗೆ ಹೊರಡುವೆನು.

ಕಾರಭಾರಿಯು ಏನೂ ಮಾತಾಡದೆ ಹೊರಟು ಹೋದನು.

( ೧೬ )

"ಸೇನಾಪತಿ ಇಬ್ರಾಹಿಮಖಾನ."

"ಯಾರು, ಸರದಾರ ಸಾಹೇಬರೇನು ?"

"ಅಹುದು. ನಾನು ಕಿಶೋರಿ ಮೋಹನರಾಯನು."

"ಒಳಗೆ ಬರಬೇಕು."

ಕಿಶೋರಿ—"ಕಿಲ್ಲೇದಾರರೇ, ಬೆಳಗಾಗಲು ಬಂದಿರುವದು."

ಇಬ್ರಾ—"ನಾನು ಸಿದ್ಧನಾಗಿರುವೆನು."

ಕಿಶೋರಿ—ನಿಮಗೆ ಒಂದು ಮಾತು ಕೇಳತಕ್ಕದ್ದಿರುವದು. ಅದೇನಂದರೆ, ದೇವಿಯ ಗುಡಿಯನ್ನು ಕೆಡವತಕ್ಕವರು ಯಾರು ?

ಇಬ್ರಾ—"ಅಗು ತಮಗೇ ಗೊತ್ತು. ಯುದ್ಧದ ಪ್ರಸಂಗ ಬಂದರೆ, ಯುದ್ಧ ಮಾಡುವ ಕೆಲಸ ಮಾತ್ರ ನಮ್ಮದು. ನಾವು ಸೈನಿಕರು.

ಕಿಶೋ—ಸೈನಿಕರು ಗುಡಿ ಕೆಡಹುವ ಕೆಲಸ ಮಾಡಬಾರದೇಕೆ ?

ಇಬ್ರಾ—ಆ ಕೆಲಸವು ಕೂಲಿಯ ಜನರದು; ಸೈನಿಕರದಲ್ಲ.

ಕಿಶೊ—ಹಾಗಾದರೆ ಕೆಲವು ಕೂಲಿಯವರು ಬೇಕು. ಅದನ್ನು ಸಹಾ ಹಿಂದೂ ಕೂಲಿಯಾಳುಗಳು ಮಾಡಲಿಕ್ಕಿಲ್ಲ. ಮುಸಲ್ಮಾನ ಕೂಲಿ..

ಇಬ್ರಾ—ಅದೇಕೆ, ಹಿಂದುಗಳೇಕೆ ಮಾಡಬಾರದು ? ನೀವೂ ನಿಮ್ಮ ಅನುಚರರೂ ಇರುವಿರಲ್ಲ? ಎನ್ನಲು, ಕಿಶೋರಿಮೋಹನನ ಮುಖವು ಬಾಡಿತು. ಆದರೂ ಅವನು ಆ ಭಾವವನ್ನು ತೋರಗೊಡದೆ, ನಗುತ್ತ— "ಖಾನಸಾಹೇಬ, ನಮ್ಮಂಥ ರಾಜನಿಷ್ಠ ಹಿಂದುಗಳೆಷ್ಟು ಜನರು ಹೊರಡುವರು ? ಇರಲಿ. ಕಿಲ್ಲೇದಾರರೇ, ನಿಮ್ಮ ಸೈನ್ಯವೆಷ್ಟಿರುವದು ?"

ಇಬ್ರಾ—ಏಳುನೂರು ಜನ.

ಕಿಶೊ—ನನ್ನ ಸಂಗಡ ೨೦೦ ಜನರಿರುವರು. ಅಂತೂ ಈ ೯ ನೂರು ಜನರು ಎಷ್ಟು ಹಿಂದೂ ಜನರನ್ನು ಎದುರಿಸಬಹುದು?

ಇಬ್ರಾ—೯ ಸಾವಿರ ಜನರನ್ನು ಎದುರಿಸುವರು.

ಕಿಶೊ—ಉತ್ತಮವು. ಕಿಲ್ಲೇದಾರಸಾಹೇಬ, ಮುಖ್ಯವಾಗಿ ನಾವು ಯಾರ ಮೇಲೆ ಲಕ್ಷ್ಯವಿಡಬೇಕೆಂಬದನ್ನು ಮರೆಯುವಂತಿಲ್ಲ.

ಇಬ್ರಾ—ಮರೆಯುವದು ಹೇಗೆ? ರಾಜಾ ಗಣೇಶನಾರಾಯಣನನ್ನು ಸೆರೆ ಹಿಡಿಯಬೇಕಲ್ಲವೇ? ಇರಲಿ. ಆ ಗುಡಿಯನ್ನು ಕೆಡಹುವ ಆಳುಗಳ ವಿಚಾರವನ್ನೇನು ಮಾಡಿದಿರಿ?

ಕಿಶೊ—ಈಗ ನಾನು ಹೋಗಿ ಊರಲ್ಲಿ ಡಂಗುರವನ್ನು ಹೊಡಿಸುವೆನು. ಅದರಿಂದ ಎರಡು ಕೆಲಸಗಳು ಸಾಧಿಸುವವು. ಅವೇನಂದರೆ, ನಮಗೆ ಕೂಲಿಯ ಜನರು ಸಿಗುವರು; ಮತ್ತು ನಾವು ಗುಡಿಯನ್ನು ನೆಲಸಮ ಮಾಡುವ ಸಂಗತಿಯು ಗಣೇಶನಾರಾಯಣ ಮೊದಲಾದ ಪ್ರಮುಖ ಹಿಂದುಗಳಿಗೆ ತಿಳಿಸಿದಂತೆಯೂ ಆಗುವದು.

ಇಷ್ಟರಲ್ಲಿ ಜೋನಾಬಖಾನನು ಆ ಕೋಣೆಯಲ್ಲಿ ಬಂದನು. ಮನೋಹರನೂ ಅವನ ಹಿಂದಿನಿಂದ ಬಂದನು. ಜೋನಾಬಖಾನನ ಮೈಮೇಲೆ ಸೇನಾಪತಿಯ ವಸ್ತ್ರಾಭರಣಗಳೂ ಆಯುಧಗಳೂ ಇರದೆ, ಅವನು ಫಕೀರರಂತೆ ಒಂದು ಸಾದಾ ಕಫನಿಯನ್ನು ಮಾತ್ರ ಧರಿಸಿದ್ದನು. ಅವನು ಬಂದ ಕೂಡಲೆ ಇಬ್ರಾಹಿಮನು ಮರ್ಯಾದೆಯಿಂದ ಎದ್ದು ನಿಂತನು. ಕಿಶೋರಿ ಮೋಹನನಿಗೆ ಮಾತ್ರ ಅವನು ಬಂದದ್ದು ಸರಿದೋರಲಿಲ್ಲ. ಅದರಿಂದ ಅವನು ಆ ಕೋಣೆಯಿಂದ ಹೊರಬಿದ್ದನು.

ಜೋ—ಇಬ್ರಾಹಿಮಖಾನ, ನನ್ನದೊಂದು ಪ್ರಾರ್ಥನೆಯುಂಟು.

ಇಬ್ರಾ—ತಾವು ಹಾಗೇಕೆ ಮಾತಾಡುವಿರಿ? ನಾನು ನಿಮ್ಮ ಸೇವಕನು. ಕಾರಣ ಪ್ರಾರ್ಥನೆಯೆನ್ನದೆ, ಅಪ್ಪಣೆ ಎಂದೆನ್ನಿರಿ.

ಜೋ—ಇಲ್ಲ. ಇಬ್ರಾಹಿಮಖಾನ, ನೀನು ಸ್ವತಂತ್ರನು-ಕಿಲ್ಲೇದಾರನು. ನನಗೆ ಇನ್ನು ಕೈಯಲ್ಲಿ ಶಸ್ತ್ರ ಧರಿಸುವ ಇಚ್ಛೆಯಿಲ್ಲ; ಆದ್ದರಿಂದ ನವಾಬನ ಆಜ್ಞೆಯನ್ನು ತೆಗೆದುಕೊಂಡು ಮಕ್ಕಾಕ್ಕೆ ಹೋಗಬೇಕೆಂದು ಗೊತ್ತು ಮಾಡಿರುವೆನು.

ಹಿಂದೆ ನಿಂತ ಮನೋಹರನು—"ತಾವು ಹೋದರೆ ಈ ಹಿಂದುಗಳಿಂದ-ಗಣೇಶನಾರಾಯಣನ ಕೈಯೊಳಗಿಂದ ಪಠಾಣ ರಾಜ್ಯವನ್ನು ರಕ್ಷಿಸುವವರು ಯಾರು? ಎಂದನು.

ಜೋನಾಬಖಾನನು ಆತ್ಮಗತ ವಿಚಾರದಲ್ಲಿ ಮಗ್ನನಾದ್ದರಿಂದ ಯಾರು ಮಾತಾಡಿದರೆಂಬದು ತಿಳಿಯಲಿಲ್ಲ. ಅದರಿಂದ ಅವನು—"ಇಬ್ರಾಹಿಮ, ಪಠಾಣ ರಾಜ್ಯವನ್ನು ರಕ್ಷಿಸುವದು ಅಶಕ್ಯವೇ ಸರಿ; ಯಾಕಂದರೆ ಈಗ

ಹಿಂದೂ ಜನರ ಶಾಂತತಾ ವೃತ್ತಿಯು ಭಂಗವಾಗಿ, ಅವರು ಉಚ್ಛೃಂಖಲರಾಗಹತ್ತಿರುವರು.

ಇಬ್ರಾ—ಏನು? ಇಷ್ಟು ಸೈನ್ಯದಿಂದ ಅಶಿಕ್ಷಿತ-ಹೇಡಿ ಹಿಂದುಗಳನ್ನು ಸೋಲಿಸುವದಾಗಲಿಕ್ಕಿಲ್ಲವೇ ? ಒಬ್ಬ ಪಠಾಣನೆಂದರೆ ೧೦ ಜನ ಹಿಂದುಗಳ ಸಮಾನನು.

ಜೋನಾ—ಯಾತರ ಮೇಲಿಂದ ಪಠಾಣರು ಹಿಂದುಗಳನ್ನು ಸೋಲಿಸುವರೆಂದು ನಾನು ಹೇಳಲಿ ? ನೀವೇ ಮೊದಲು ಅನ್ಯಾಯ-ಅತ್ಯಾಚಾರ ಮಾಡಿ, ನಿಮ್ಮ ಶಕ್ತಿಯ ಅಪವ್ಯಯ ಮಾಡಿಕೊಳ್ಳಹತ್ತಿರುವಿರಿ. ನಿಮಗೆ ನೀತಿಯ ಬಲವಂತೂ ಸಿಗಲಾರದು. ನೀವು ಮಾಡುವ ಅನ್ಯಾಯ-ಅತ್ಯಾಚಾರಗಳಿಂದ ಹಿಂದೂ ಜನರ ಬಾಹುಗಳಲ್ಲಿಯ ಶಕ್ತಿಯು ಹೆಚ್ಚಾಗುತ್ತಿದೆ.

ಇಬ್ರಾ—ನಿಮ್ಮ ಮಾತುಗಳ ಅರ್ಥವು ನನಗೆ ತಿಳಿಯಲಿಲ್ಲ.

ಜೋ—ಇಬ್ರಾಹಿಮುಖಾನ, ಮದಾಂಧರಿಗೆ ಹೇಗೆ ತಿಳಿಯಬೇಕು ? ಯಾವ ದಿವಸ ನಿಮಗೆ ಹಿಂದುಗಳ ಸಂಗಡ ಪ್ರೇಮದಿಂದಲೂ ಐಕ್ಯದಿಂದಲೂ ನಡೆಯಬೇಕೆಂಬುದು ತಿಳಿಯುವದೋ ಅಂದಿನ ದಿನವೇ ಈ ಮಾತು ನಿಮಗೆ ತಿಳಿಯುವದು. ಪ್ರಜೆಗಳ ಸುಖ-ಸಮಾಧಾನಗಳು ಅರಸರ ಶಕ್ತಿಯು; ಪ್ರಜೆಗಳ ಅಸಂತೋಷವೇ ರಾಜನ ನಿರ್ಬಲತೆಯು.

ಇಬ್ರಾ—ಏನು ? ಹಿಂದುಗಳು ನಮ್ಮ ಮಿತ್ರರೆ? ಯಾರು ಹಗಲು-ರಾತ್ರಿ ನಮ್ಮ ಅಹಿತವನ್ನು ಬಯಸುವರೋ ಅವರು ಮಿತ್ರರೇ?

ಜೋನಾಬ—ಹಿಂದುಗಳು ಯಾವಾಗಲೂ ನಮ್ಮ ಅಹಿತಚಿಂತನೆಯನ್ನು ಮಾಡುವರೆಂದು ನಿನಗೆ ಹೇಳಿದವರಾರು ?

ಇಬ್ರಾ—ಎರಡನೆಯವರೇಕೆ ಹೇಳಬೇಕು ? ಅವರು ಮಾಡುವ ಕೆಲಸಗಳಿಂದ ತಿಳಿಯುವದಿಲ್ಲವೆ ?

ಜೋನಾ—ನೀನು ತಪ್ಪು ತಿಳಿದಿರುವಿ. ಹಿಂದುಗಳಲ್ಲಿ ಒಕ್ಕಟ್ಟು ಇಲ್ಲ. ಆದ್ದರಿಂದ ನಾವು ಈ ದೇಶದಿಂದ ಹೊರಗೆ ಹೋದರೂ ಮತ್ತೆ ಯಾರಾದರೂ ಬಂದು ತಮ್ಮನ್ನು ಆಳುವರೆಂದು ಅವರು ತಿಳಿದಿರುವರು. ಕಾರಣ ಅವರಿಗೆ ನಮ್ಮನ್ನು ಹೊರಗೆ ಹಾಕುವ ಇಚ್ಛೆಯಿಲ್ಲ.

ಇಬ್ರಾ—ಹಾಗಾದರೆ ಅವರು ಸ್ವರಾಜ್ಯ-ಸ್ವಾತಂತ್ರ್ಯಗಳನ್ನು ಇಚ್ಛಿಸುವದಿಲ್ಲವೆ ?

ಜೋನಾ—ಸ್ವರಾಜ್ಯವು ಯಾರಿಗೆ ಬೇಡ! ಆದರೆ ಹಿಂದುಗಳು ತಮ್ಮ ಹೆಂಡಿರು-ಮಕ್ಕಳ ಸಲುವಾಗಿ ಜೀವ ಕೊಡಲು ಸಿದ್ಧರಾದಂತೆ, ದೇಶದ ಸಲುವಾಗಿ ಎರಡು ಕಣ್ಣೀರು ಹನಿಗಳನ್ನು ಸಹ ಸುರಿಸಲಾರರು. ಅನಿವಾರ್ಯ ಪ್ರಸಂಗವೊದಗಿ, ಹೆಂಡಿರು-ಮಕ್ಕಳ ಮೇಲೆ ಅನ್ಯರು-ಅನ್ಯಾಯ ಅತ್ಯಾಚಾರಗಳನ್ನು ಮಾಡಿದರೆ ಮಾತ್ರ ಅವರು ಜೀವದ ಹಂಗುದೊರೆದು ನಿಲ್ಲುವರು. ಈ ವಿಚಾರವು ಗೊತ್ತಿದ್ದರಿಂದಲೇ ಗಣೇಶನಾರಾಯಣನು ತಾನು ರಾಜ್ಯತ್ವವನ್ನು ಅಪೇಕ್ಷಿಸದೆ, ನಮಗೆ ಸಿಂಹಾಸನವನ್ನು ಕೊಟ್ಟಿರುವನು.

ಇಬ್ರಾ—ನಮಗೆ ಅರಸೊತ್ತಿಗೆಯನ್ನು ಕೊಟ್ಟವನು ಗಣೇಶನಾರಾಯಣನೇ ಏನು?

ಜೋ—ಗಣೇಶನಾರಾಯಣನಲ್ಲಿ ಗೌಡ ಸಿಂಹಾಸನದ ಮೇಲೆ ಕೂಡುವ ಯೋಗ್ಯತೆಯು ಇರುತ್ತದೆ. ಆದರೆ ಅವನು ಸ್ವದೇಶಾಭಿಮಾನವಿಲ್ಲದ ಈ ಹೇಡಿ ಜನರ ಅರಸನಾಗಲು ಮನಸ್ಸಿಲ್ಲದವನು. ಅವನಿಗೆ ಬೇಕಾಗಿರುವದು ಪ್ರಜೆಗಳ ಸುಖ-ಶಾಂತಿಗಳು. ಅದ್ದರಿಂದ ನೀವು ಅವರನ್ನು ಪ್ರೀತಿಸಿದರೆ, ಅವನು ಆ ಜನ್ಮ ಪಠಾಣರ ಗುಲಾಮನಾಗಿ ನಡೆಯುವನು; ಆದರೆ ನೀವು ನಿಜವನ್ನು ತಿಳಿಯದೆ, ಅವನನ್ನು ಪೀಡಿಸುತ್ತಿರುತ್ತೀರಿ. ಅವನು ಒಮ್ಮೆ ಪ್ರತಿಸ್ಪರ್ಧಿಯಾಗಿ ನಿಂತರೆ, ಪಠಾಣರ ರಾಜ್ಯವು...."

ಇಬ್ರಾ—ಈಗ ಗಣೇಶನಾರಾಯಣನು ಹಿಂದೂ ಜನರಿಗೆ ಉತ್ತೇಜನ ಕೊಟ್ಟು ಹಿಂದೂ ರಾಜ್ಯವನ್ನು ಸ್ಥಾಪಿಸುವ ಹವಣಿಕೆಯಲ್ಲಿರುವನು. ಅವನು ಹಿಂದೂ ಜನರಿಗೆ ಶಸ್ತ್ರಾಸ್ತ್ರ-ಅನ್ನಗಳನ್ನು ಪೂರೈಸಿಕೊಡಹತ್ತಿರುವನು. ಅಂದಬಳಿಕ ಇಂಥ ಶತ್ರುವನ್ನು ನಿರ್ಮೂಲ ಮಾಡದೆ ಬಿಟ್ಟರೆ....

ಜೋ—ಅದೇನೆ ಇರಲಿ, ಇಬ್ರಾಹಿಮ, ನನ್ನದೊಂದು ವಿನಂತಿಯಿದೆ.

ಇಬ್ರಾ—ಅದೇನು ಸರದಾರ?

ಜೋ—ನಾನು ಒಮ್ಮೆ ನವಾಬನ ಭೆಟ್ಟಿಗೆ ಹೋಗಬೇಕಾಗಿದೆ. ಅದಕ್ಕೆ ನಿನ್ನ ಅಪ್ಪಣೆಯು ಬೇಕು; ಯಾಕಂದರೆ ನಾನು ಈಗ ನಿನ್ನ ಬಂದಿಯು.

ಇಬ್ರಾ—ನೀವು ಬೇಕಾದಲ್ಲಿಗೆ ಹೋಗಬಹುದು. ಯಾರೂ ನಿಮ್ಮನ್ನು ಪ್ರತಿಬಂಧಿಸುವದಿಲ್ಲ, ಎಂದು ಹೇಳಿ, ಆ ಕೋಣೆಯಿಂದ ಹೊರಬಿದ್ದನು. ಮೋಹನನೂ ಅವನ ಹಿಂದೆಯೇ ಹೊರಬಿದ್ದನು.

ಇಬ್ರಾಹಿಮನು ಅವನನ್ನು ನೋಡಿ—ನೀನು ಯಾರು? ಎಂದನು.

ಮನೋ—ನಾನು ಕಿಶೋರಿಮೋಹನನ ಸೇವಕನು.

ಇಬ್ರಾ—ನನ್ನ ಕಡೆಗೇನು ಕೆಲಸ?

ಮನೋ—ಎರಡು ಗಾಡಿ ತುಂಬ ಬರ್ಚಿಗಳು ಬೇಕು.

ಇಬ್ರಾ—ಯಾತಕ್ಕೆ?

ಮನೋ—ನಮ್ಮ ಒಡೆಯರಿಗೆ ಬೇಕಾಗಿವೆಯಂತೆ.

ಇಬ್ರಾ—ನಿಮ್ಮ ಸರದಾರರು ಇಷ್ಟೊತ್ತಿನವರೆಗೆ ಇಲ್ಲಿಯೇ ಇದ್ದರು; ಅವರು ನನಗೇಕೆ ಹೇಳಲಿಲ್ಲ.

ಮನೋ—ಬಹಳ ಕೆಲಸದಲ್ಲಿ ಮರೆತಿರಬಹುದು.

ಇಬ್ರಾ—ನನಗೆ ನಿನ್ನ ಮಾತಿನಲ್ಲಿ ನಂಬಿಗೆಯಿಲ್ಲ.

"ಸರದಾರಸಾಹೇಬ, ಈ ಗುರ್ತಿನ ಉಂಗುರವನ್ನು ನೋಡಿರಿ"ಎಂದು ಮನೋಹರನು ಕಿಶೋರಿಮೋಹನನ ಹೆಸರನ್ನು ಉರ್ದು ಭಾಷೆಯಲ್ಲಿ ಕೆತ್ತಿದ್ದ ಉಂಗುರವೊಂದನ್ನು ತೋರಿಸಿದನು. ಅದನ್ನು ನೋಡಿ ಇಬ್ರಾಹಿಮನು—ಒಳ್ಳೇದು; ಅವುಗಳನ್ನು ನನ್ನ ಜನರ ಸಂಗಡ ಕಳಿಸುವೆನು, ಎಂದನು.

ಅಂದು ಅರುಣೋದಯ ಸಮಯದಲ್ಲಿ ಗಣೇಶನಾರಾಯಣನು ತ್ರಿಪುರಾ ರಾಣಿಯವರಿಂದ ಅದೇ ಬಂದ ಪತ್ರವನ್ನು ಓದುವದರಲ್ಲಿ ಮಗ್ನನಾಗಿದ್ದನು. ಆ ಪತ್ರದಲ್ಲಿಯ ವಿಷಯವು—"ನಾನು ಗೌರಿಯನ್ನು ಕರೆದುಕೊಂಡು ಸಪ್ತ ದುರ್ಗಕ್ಕೆ ಬಂದಿರುವೆನು. ಯಾಕೆ ಬಂದಿರುವೆನೆಂಬ ಕಾರಣವನ್ನು ಹೇಳುವ ಮನಸ್ಸಿಲ್ಲದಿದ್ದರೂ ಹೇಳದೆ ಹೊರ್ತು ಗತಿಯಿಲ್ಲ. ಪ್ರಿಯರಾಜರೇ, ನಿಮ್ಮ ಪ್ರಿಯ ಪುತ್ರ ಯದುನಾರಾಯಣನು ಕಾರಾಗೃಹವನ್ನು ಸೇರಿರುವನು. ನಿಮ್ಮ ದಿವಾಣ ನರಸಿಂಹನು ಕಿಶೋರಿಮೋಹನನ ಹಾಳು ಬಾವಿಯಲ್ಲಿ ಒಗೆಯಲ್ಪಟ್ಟಿರುವನು; ಇಷ್ಟೇ ಅಲ್ಲ, ಗೌಡ ನಗರದಲ್ಲಿಯ ನಿಮ್ಮ ಅರಮನೆಯು ರಾಜಸೈನ್ಯದಿಂದ ಮುತ್ತಲ್ಪಟ್ಟಿದೆ. ಇದಲ್ಲದೆ, ನೀವೂ ಸಂಕಟಗ್ರಸ್ತರು. ನಿಮ್ಮಲ್ಲಿ ಕಿಶೋರಿಮೋಹನನು ಯಾಕೆ ಬಂದಿರುವನೆಂಬುದು ಗೊತ್ತಿರುವದೇ? ಅವನು ಅಲ್ಲಿಯ ದೇವೀ ಗುಡಿಯನ್ನು ನೆಲಸಮ ಮಾಡಲಿಕ್ಕೆ ಬಂದಿರುವದಿಷ್ಟೇ ಅಲ್ಲ, ನಿಮ್ಮನ್ನು ಸಂಹಾರ ಮಾಡಲಿಕ್ಕೂ ಬಂದಿರುವನು. ಪತಿದೇವ, ಶೀಘ್ರದಲ್ಲಿಯೇ ದೇವೀಕೋಟೆಗೆ ಬರುತ್ತೇನೆ. ನಾನು ಬರುವವರೆಗೆ ದೇವಿಯ ಮಂದಿರವನ್ನು ಕಾಪಾಡಿರಿ.

ನಿಮ್ಮ ಚರಣ ದಾಸಿ,
ತ್ರಿಪುರಾ"

ಪತ್ರವನ್ನು ಪೂರ್ಣ ಓದಿದ ಕೂಡಲೆ ಗಣೇಶನಾರಾಯಣನ ಕ್ರೋಧವು ಉಕ್ಕೇರಿತು. ಅವನು ದವಡೆಯನ್ನು ಕಚ್ಚಿ, ತನ್ನಲ್ಲಿ ತಾನೇ--ನಶ್ವರಶಹಾ, ಈಗ ನಡೆದಿರುವ ಅತ್ಯಾಚಾರದಿಂದ ನೀನು ತೃಪ್ತನಾಗಲಿಲ್ಲವೇನು? ಮತ್ತೆ ಹಿಂದೂ ಜನರ ಈ ಪವಿತ್ರ ದೇವೀಗುಡಿಯ ನಾಶವೇ? ಇನ್ನು ಶಾಂತಿಯನ್ನು ತಾಳಿ ಫಲವಿಲ್ಲ. ಇದಕ್ಕೆ ಪ್ರತಿಯಾಗಿ ಶಸ್ತ್ರ ಹಿಡಿಯುವದೇ ಕ್ಷಮೆಯು. ಆತ್ಮರಕ್ಷಣೆಯ ಸಲುವಾಗಿ, ಹಿಂದೂ ಧರ್ಮ ರಕ್ಷಣೆಯ ಸಲುವಾಗಿ ಶಸ್ತ್ರವನ್ನು ಹಿಡಿಯತಕ್ಕದ್ದೇ ಯೋಗ್ಯವು, ಎಂದನು.

ಇಷ್ಟರಲ್ಲಿ ಒಬ್ಬ ಸೇವಕನು ಬಂದು--"ಮಹಾರಾಜ, ಬಾಗಿಲಲ್ಲಿ ಒಬ್ಬ ಸಂನ್ಯಾಸಿಯು ಬಂದಿದ್ದು, ಅವನು ನಿಮ್ಮ ಭೆಟ್ಟಿಯನ್ನು ಇಚ್ಛಿಸುವನು" ಎಂದನು. ಗಣೇಶನಾರಾಯಣನು ಅವನನ್ನು ಮನೆಯ ಮುಂದಿನ ತೋಟಕ್ಕೆ ಕರೆದುಕೊಂಡು ಬರಲಿಕ್ಕೆ ತಿಳಿಸಿ, ತೋಟವನ್ನು ಹೊಕ್ಕನು.

ಸ್ವಲ್ಪ ಹೊತ್ತಿನಲ್ಲಿ ಒಬ್ಬ ಸಂನ್ಯಾಸಿಯು ಬಂದನು. ಅವನು ಜಟಾಧಾರಿಯಿದ್ದು ಕೌಪೀನವನ್ನು ಧರಿಸಿದ್ದನು. ಅವನ ಕೊರಳಲ್ಲಿ ರುದ್ರಾಕ್ಷಿಯ ಮಾಲೆಗಳೂ, ನಿಡಿದಾದ ಗಡ್ಡಗಳೂ ಇದ್ದು, ಮೈ ಮೇಲಿನ ಭಸ್ಮವು ನೋಡುವ ಜನರಲ್ಲಿ ವಿನಯವನ್ನೂ ಭಕ್ತಿಯನ್ನೂ ಹುಟ್ಟಿಸುವಂತೆ ಇದ್ದಿತು. ಅವನನ್ನು ನೋಡಿ ಗಣೇಶನಾರಾಯಣನು ಸಾಷ್ಟಾಂಗ ನಮಸ್ಕಾರ ಮಾಡಿ--

ಸ್ವಾಮಿ ತಾವು ಬಂದ ಕಾರಣವೇನು? ಆಜ್ಞೆ ಮಾಡೋಣವಾಗಬೇಕು, ಎಂದನು.

ಸಂನ್ಯಾಸಿ--ಮುಸಲ್ಮಾನರು ಆದಿಶಕ್ತಿಯ ಗುಡಿಯನ್ನು ನೆಲಸಮ ಮಾಡುವ ಉದ್ಯೋಗವನ್ನು ಹೂಡಿದ್ದರೂ ನೀನು ಇನ್ನೂ ನಿಶ್ಚಿಂತೆಯಿಂದಲೇ ಇರುವಿಯಲ್ಲ?

ಗಣೇಶ--ಅವರು ಇಂದೇ ಆ ಕೆಲಸವನ್ನು ಆರಂಭ ಮಾಡುವರೆಂದು ನಾನು ಭಾವಿಸಿದ್ದಿಲ್ಲ. ಆಗಲಿ ಪ್ರಭೋ, ದೇವರ ಸಹಾಯವಿಲ್ಲದೆ ಇಂಥ ಕೆಲಸಗಳಲ್ಲಿ ನಾನೊಬ್ಬನೇ ಮಾಡುವದೇನು?

ಸಂನ್ಯಾಸಿ--ಏನು ಮಾಡಲಿಕ್ಕೆ ಆಗದಿದ್ದರೂ, ದೇವರ ಗುಡಿಯ ಎದುರಿಗೆ ಪ್ರಾಣವನ್ನು ಅರ್ಪಿಸಲಿಕ್ಕಾದರೂ ಬರುವದಿಲ್ಲವೇ? ಹೋಗು,

ತೀವ್ರ ಹೊರಡು. ಹಿಂದೂ ಜನರು ದೇವರ ಸಲುವಾಗಿ ಪ್ರಾಣವನ್ನು ಕಳೆದುಕೊಳ್ಳುವರೆಂಬದನ್ನು ಜಗತ್ತಿನ ನಿದರ್ಶನಕ್ಕೆ ತಂದು ಕೊಡು.

ಗಣೇ—ತಮ್ಮ ಅಪ್ಪಣೆಯು ಮಾನ್ಯವು. ಇದೋ, ಹೊರಟೆನು.

ಸಂನ್ಯಾ—ಹೋಗು ಈಗಲೆ ಹೋಗು. ಯಾವ ವೇಷದಲ್ಲಿರುವೆಯೋ ಹಾಗೆಯೇ ಹೊರಡು. ಸಿದ್ಧತೆ ಮಾಡಿಕೊಳ್ಳುವದು ಸಹ ಬೇಡ. ನಿನಗೇ ಕಾರ್ಯದಲ್ಲಿ ಯಶಶ್ಸು ಸಿಗುವದೆಂದು ಆಶೀರ್ವಾದ ಮಾಡುವೆನು.

ಗಣೇಶ—ಪ್ರಭೋ, ತಾವಾರು? (ದಿಟ್ಟಿಸಿ ನೋಡಿ) ತಿಳಿಯಿತು. ಗುರ್ತಿಸಿದೆನು. ಫಕೀರಸಾಹೇಬ, ಸಲಾಂ. ಇದುವರೆಗೆ ನಿಮ್ಮನ್ನು ಗುರ್ತಿಸದೆಯಿದ್ದ ಅಪರಾಧವನ್ನು ಕ್ಷಮಿಸಿರಿ. ಭಾರತ ವಿಖ್ಯಾತ ಧರ್ಮ ಚೂಡಾಮಣಿ ಕುತುಬ ಉಲ್ಆಲಮ ಫಕೀರಸಾಹೇಬರು ಈ ಕ್ಷುದ್ರ ಕಾಫರನ ಮನೆಯನ್ನು ತಮ್ಮ ಪಾದಸ್ಪರ್ಶದಿಂದ ಪವಿತ್ರ ಮಾಡುವರೆಂದು ನಾನು ಭಾವಿಸಿದ್ದಿಲ್ಲ.

ಸಂನ್ಯಾ—ಗಣೇಶನಾರಾಯಣ, ನಿನ್ನ ತೀಕ್ಷ್ಣಬುದ್ಧಿಯನ್ನು ನೋಡಿ ಬಹಳ ಸಂತೋಷ ಹೊಂದಿದೆನು.

ಗಣೇಶ—ತಮ್ಮ ಕೃಪಾಕಟಾಕ್ಷವು ನನ್ನ ಮೇಲೆ ಬಹಳವಾಯಿತು; ಆದರೆ ಫಕೀರಸಾಹೇಬರು ಇಲ್ಲಿಗೆ ಬಂದ ಕಾರಣವು?

ಸಂನ್ಯಾ—ಮುಸಲ್ಮಾನರು ಗುಡಿಯನ್ನು ನೆಲಸಮ ಮಾಡಲು ಹೊರಟ ಸಂಗತಿಯನ್ನು ನಿನಗೆ ತಿಳಿಸಲಿಕ್ಕೆ.

ಗಣೇ—ಇಷ್ಟೇ ಅಲ್ಲದೆ, ನನ್ನನ್ನು ಮೃತ್ಯುವಿನ ಮುಖದಲ್ಲಿ ದೂಡುವದಕ್ಕೆ ಬಂದಿರಬಹುದು. ಏನೇ ಆಗಲಿ, ಈಗ ಈ ಗಣೇಶನಾರಾಯಣನು ಅದಕ್ಕೆ ಅಂಜುವವನಲ್ಲ. ಹಿಂದೂ ಧರ್ಮದ ಹೆಸರಿನಿಂದ ಯಾವನು ನನ್ನನ್ನು ಕರೆಯುವನೋ, ಅವನು ಹಿಂದುವೇ ಆಗಲಿ—ಮುಸಲ್ಮಾನನೇ ಆಗಲಿ, ಅವನ ಆಜ್ಞೆಯನ್ನು ಶಿರಸಾವಹಿಸುವೆನು.

ಸಂನ್ಯಾ—ಶಹಬಾಶ್! ಗಣೇಶನಾರಾಯಣಾ, ನೀನೇ ಧನ್ಯನು, ಹಿಂದೂ ಕುಲತಿಲಕನು.

ಗಣೇ—ನನ್ನನ್ನು ಹಿಂದೂ ಕುಲತಿಲಕನೆಂದು ತಿಳಿಯಿರಿ; ಇಲ್ಲವೇ ಪಠಾಣ ಕುಲಕಂಟಕನೆಂದು ತಿಳಿಯಿರಿ. ಫಕೀರಸಾಹೇಬ, ನವಾಬ ಸೈಫುದ್ದೀನನು ಜೀವಂತನಿರುವವರೆಗೆ ನಾನು ಶಸ್ತ್ರ ಹಿಡಿಯಬಾರದೆಂದು ನಿರ್ಧರಿಸಿ

ದ್ದೆನು; ಆದರೆ ಇಂದು ಹಿಡಿಯುವ ಪ್ರಸಂಗ ಬಂತು. ಈ ಮನುಷ್ಯ ಕೊಲೆಯ ಅಪರಾಧಕ್ಕೆ ನೀವೇ ಕಾರಣರು.

ಸಂನ್ಯಾ—ನಾನು ಕಾರಣನೇ? ನಿಮ್ಮ ಯುದ್ಧ ಮುಂತಾದ ರಾಜ ಕಾರಣಗಳ ಸಂಬಂಧವು ಈ ಫಕೀರನಿಗೇಕೆ?

ಗಣೇ—ಫಕೀರಸಾಹೇಬ, ನಾನು ಬಾಲಕನಲ್ಲ. ನನ್ನ ಸುತ್ತಲೂ ಈ ಕಪಟ ಜಾಲವನ್ನು ಹೂಡುವ ಚಾಲಕರಾರೆಂಬುದು ನನಗೆ ತಿಳಿದಿದೆ. ನಶೆರಿತನ ಮಂದ ಬುದ್ಧಿಗೆ ಇದೆಲ್ಲ ಕಾರಸ್ಥಾನವು ಹೊಳೆಯತಕ್ಕದ್ದಲ್ಲ. ಇರಲಿ. ಫಕೀರಸಾಹೇಬ, ನಾನು ನಗನಗುತ್ತ ಆನಂದದಿಂದ ನನ್ನ ಪ್ರಾಣವನ್ನು ಕೊಡಲಿಕ್ಕೆ ಸಿದ್ಧನು; ಆದರೆ ದೇವೀ ಗುಡಿಯನ್ನು ಧ್ವಂಸ ಮಾಡಗೊಡುವ ದಿಲ್ಲ. ಫಕೀರಸಾಹೇಬ, ನಾನೇ ನಿಮ್ಮ ವಾಂಛಿತವು. ನಾನೊಬ್ಬನು ನಿಮ್ಮ ಆಧೀನವಾದರೆ, ಮುಂದಿನ ಈ ರಕ್ತಪಾತ ಪ್ರಸಂಗವನ್ನು ಮಾಡು ವದಿಲ್ಲವೇ?

ಸಂನ್ಯಾ—ಆ ಸಂಗತಿಯು ನನಗೆ ಗೊತ್ತಿಲ್ಲ. ಕಿಶೋರಿಮೋಹನನಿಗೆ ಗೊತ್ತು.

ಗಣೇ—ಎಲ್ಲವೂ ನಿಮ್ಮ ಕೈಯಲ್ಲಿದೆ. ನೀವು ಹೇಳಿದಂತೆ ಕಿಶೋರಿ ಮೋಹನನು ಕೇಳುವನು. ಆಗಲಿ. ಗುಡಿಯ ಮುಂದೆ ಇನ್ನೊಮ್ಮೆ ಈ ಮಾತನ್ನು ಎಲ್ಲರ ಸಮಕ್ಷಮ ವಿಚಾರಿಸುವೆನು. ನೀವು ಹೋಗಿರಿ, ಎಂದನು.

ಕುತುಬ ಉಲ್‌ಆಲಮ ಫಕೀರನಿಗೆ ಬಂಗಾಲದಲ್ಲಿ ಬಹಳ ಮರ್ಯಾದೆ ಇತ್ತು. ಗಣೇಶನಾರಾಯಣನ ಹತ್ತರ ತಾನು ಬಂದದ್ದು ಅವನಿಗೆ ಅಪಮಾನ ವಾದಂತಾಗಿ, ತಾನು ಈ ಪ್ರಕಾರ ಮಾಡಿದ್ದು ವಿಹಿತವಾಗಲಿಲ್ಲವೆಂದು ತಿಳಿದುಕೊಂಡನು.

ಗಣೇಶನಾರಾಯಣನು ದೇವೀಕೋಟಿಗೆ ಬರುವಾಗ ೨೫ ಜನ ಅಂಗ ರಕ್ಷಕರನ್ನು ಮಾತ್ರ ಕರೆದುಕೊಂಡು ಬಂದಿದ್ದನು. ಈಗ ಅಷ್ಟೇ ಜನರ ಸಹಾಯದಿಂದ ಸಾವಿರಾರು ಜನ ಮುಸಲ್ಮಾನರ ಸಂಗಡ ಕಾದಬೇಕಾ ಯಿತು; ಆದರೂ ಅವನು ಅಂಜಲಿಲ್ಲ. ಆ ೨೫ ಜನರು ಅವನ ಕೈಯಲ್ಲಿ ನುರಿತವರಾಗಿದ್ದರು. ಫಕೀರನು ಹೋದನಂತರ ಗಣೇಶನಾರಾಯಣನು ತನ್ನ ಸೈನಿಕರಿಗೆ ಶಸ್ತ್ರಾಸ್ತ್ರವನ್ನು ಸಜ್ಜುಗೊಳಿಸಲಿಕ್ಕೆ ಹೇಳಿದನು.

ಗಣೇಶನಾರಾಯಣನು ರಾಜಮಾರ್ಗದಲ್ಲಿ ಬಂದು ನಿಂತನು. ಅಲ್ಲಿ

ಒಬ್ಬ ಹಿಂದೂ ಬಾಲಕನು ಕುದುರೆಯನ್ನು ಹತ್ತಿಕೊಂಡು ಹಿಂದೂ ಜನರ ಮನೆ-ಮನೆಗೆ ಹೋಗಿ: "ಯಾರ ದೇಹದಲ್ಲಿ ಹಿಂದೂ ರಕ್ತವಿರುವದೋ ಅವರು ತಡಮಾಡದೆ ಸಿದ್ಧರಾಗಿರಿ. ಮುಸಲ್ಮಾನರು ನಿಮ್ಮ ಪವಿತ್ರ ದೇವಿಯ ಗುಡಿಯನ್ನು ಕೆಡವಿ, ಮೂರ್ತಿಯನ್ನು ಒಡೆಯುವರು." ಎಂದು ಚೀರುತ್ತ ನಡೆದಿದ್ದನು. ಅವನ ಕೂಗು ಕೇಳಿದ ಪ್ರತಿಯೊಬ್ಬ ಹಿಂದೂ ಮನುಷ್ಯನು ಓಡುತ್ತ ರಾಜಮಾರ್ಗಕ್ಕೆ ಬರಹತ್ತಿದನು. ಆ ಬಾಲಕನು ಆ ಜನರಿಗೆ ಕೈ ಮಾಡಿ ಗುಡಿಯ ಕಡೆಗೆ ಹೋಗಲು ತೋರಿಸಿ: "ಹೋಗಿರಿ, ಓಡಿರಿ; ನಿಮ್ಮ ಮಾತೃದೇವಿಯ ಹೆಸರಿನಿಂದ-ಹಿಂದೂ ಧರ್ಮದ ಹೆಸರಿನಿಂದ ನಾನು ನಿಮ್ಮನ್ನು ಕರೆಯಹತ್ತಿರುವೆನು. ನಾನು ಹಿಂದೂ ಧರ್ಮದ-ಹಿಂದೂ ದೇಶದ ಸ್ವಯಂಸೇವಕನು" ಎಂದು ಹೇಳುತ್ತಿದ್ದನು.

ಇದನ್ನು ನೋಡಿ ಗಣೇಶನಾರಾಯಣನಿಗೆ ಆಶ್ಚರ್ಯವಾಯಿತು. ಆಗ ಅವನು ಆ ಹುಡುಗನ ಹತ್ತರ ಹೋಗಿ:—"ತಮ್ಮಾ, ನೀನಾರು? ಹಿಂದೂ-ಮುಸಲ್ಮಾನರ ದ್ವೇಷಾಗ್ನಿಯನ್ನು ಏಕೆ ಪ್ರಜ್ವಲಗೊಳಿಸುತ್ತಿರುವಿ?" ಎಂದನು.

ಆ ಹುಡುಗನು ತಿರುಗಿ ನೋಡಿದನು. ಆಗಲೇ ಪರಿಚಯವು ಹತ್ತಿತು. ಅವನು ಕುದುರೆಯಿಂದ ನೆಲಕ್ಕೆ ಧುಮುಕಿ, ಗಣೇಶನಾರಾಯಣನ ಎರಡೂ ಕಾಲುಗಳನ್ನು ಹಿಡಿದುಕೊಂಡು: 'ಅಪ್ಪಾ, ನಾನು ನಿಮ್ಮ ಕಡೆಗೇ ಬರಲಿಕ್ಕೆ ಹೊರಟಿದ್ದೆನು.'

ರಾಜನು ಆಶ್ಚರ್ಯದಿಂದ:—ಯಾಕೆ? ನನ್ನ ಕಡೆಗೇನು ಕೆಲಸ? ನೀನು ಯಾರು?

ಬಾ—ಮನೆಯೊಳಗೆ ನಡೆಯಿರಿ. ನಾನು ಎಲ್ಲವನ್ನೂ ಹೇಳುವೆನು, ಎಂದನು.

ಇಬ್ಬರೂ ನಡುಮನೆಗೆ ಬಂದರು. ಬಾಲಕನು—ಯಾಕೆ? ನನ್ನ ಗುರುತು ಹತ್ತಲಿಲ್ಲವೆ? ಎಂದನು.

ಗಣೇಶನಾರಾಯಣನು ದಿಟ್ಟಿಸಿ ನೋಡಿ—ಓಹೋ! ಪರಿಚಯವು ಹತ್ತಿತು. ನೀನು ಮಂದಾಕಿನಿಯು! ಆದರೆ ಇದೇನು ವೇಷ? ಇಲ್ಲಿಗೇಕೆ ಬಂದಿರುವೆ?

ಬಾ—ಅದನ್ನು ಹೇಳಲು ಅವಕಾಶವಿಲ್ಲ.

ಗಣೇ—ನನ್ನ ಕಡೆಗೆ ಕೆಲಸವೇನಿತ್ತು?

ಬಾ—ನಿಮ್ಮನ್ನು ಎಚ್ಚರಿಸಲಿಕ್ಕೆ. ನಾಲ್ಕೂ ದಿಕ್ಕಿನಿಂದ ಮುಸಲ್ಮಾನರು ನಿಮ್ಮನ್ನು ಆಕ್ರಮಣ ಮಾಡಲಿರುವರು. ಕಾರಣ ನೀವು ಇಲ್ಲಿಂದ ಪಾರಾಗಿ ಓಡಿ ಹೋಗುವದೇ ವಿಹಿತವು.

ಗಣೇ—ಯಾವ ಬಾಲಕಿಯು ಪತಿರಿತನ ಕೈಯೊಳಗಿಂದ ನನ್ನ ಸಹಾಯದಿಂದ ಪಾರಾಗಿರುವಳೋ, ಅವಳ ಬಾಯಿಂದ ನನ್ನನ್ನು ಕುರಿತು ಇಂಥ ಓಡಿ ಹೋಗೆನ್ನುವ ಹೇಡಿ ಮಾತುಗಳೇ?

ಮಂದಾ—ನಾನು ಆ ಪ್ರಕಾರವಾಗಿ ಹೇಳಲು ನಿಮ್ಮ ಕಡೆಗೆ ಬಂದಿಲ್ಲ. ಅದೇ ವಿಚಾರವು ನಿಜವಿದ್ದರೆ, ಹಿಂದೂ ಜನರಿಗೆ ಉತ್ತೇಜನ ಕೊಟ್ಟು ಅವರನ್ನು ಗುಡಿಯ ಹತ್ತರ ಒಟ್ಟುಗೂಡಿಸುವ ಕೆಲಸವನ್ನೇಕೆ ಮಾಡುತ್ತಿದ್ದೆನು.

ಗಣೇ—ಮಂದಾಕಿನಿ! ಜನರನ್ನು ಕೂಡಿಸಿ ಮಾಡುವದೇನು? ಆಯುಧಗಳಿಲ್ಲದ ಹಿಂದುಗಳು ಮಾಡುವದೇನು?

ಮಂದಾ—ರಾಜಾ, ನಾನು ಶಸ್ತ್ರಗಳ ವ್ಯವಸ್ಥೆಯನ್ನೂ ಮಾಡಿದೆನು. ಈಗ ಎರಡು ಗಾಡಿ ಬರ್ಚಿಗಳು ಕಿಶೋರಿಮೋಹನನ ಕಡೆಗೆ ಹೊರಟಿವೆ. ನೀವು ನಾಲ್ಕೆಂಟು ಜನರನ್ನು ಕಳಿಸಿ, ಅವುಗಳನ್ನು ನಿಮ್ಮ ಕೈವಶ ಮಾಡಿಕೊಳ್ಳಿರಿ. ಈ ಸಂಗತಿಯನ್ನು ಹೇಳಲಿಕ್ಕೆಂದೇ ಇತ್ತ ಬಂದಿದ್ದೆನು. ಎಂದು ಹೇಳಿ, ಅಲ್ಲಿಂದ ಹೊರಟಳು.

## ( ೧೭ )

ದೇವೀಗುಡಿಯ ಸುತ್ತಲೂ ಎತ್ತರವಾದ ಕಲ್ಲಿನ ಗೋಡೆಯು. ಅದರ ಮಹಾದ್ವಾರವು ಗಟ್ಟಿಮುಟ್ಟಾದದ್ದು. ಕಿಶೋರಿಮೋಹನನು ಸೈನ್ಯವನ್ನು ತೆಗೆದುಕೊಂಡು ಬಂದು ಒಂದು ನಿಟ್ಟಿನಲ್ಲಿ ಸುಮ್ಮನೆ ನಿಂತಿದ್ದನು. ಗಣೇಶನಾರಾಯಣನು ತನ್ನ ಅನುಚರರೊಂದಿಗೆ ಗುಡಿಯ ಮಹಾದ್ವಾರದ ಹತ್ತರ ಬಂದ ಕೂಡಲೆ ಅವನನ್ನು ಒಮ್ಮೆಲೆ ಮುತ್ತಬೇಕೆಂದು ಕಿಶೋರಿಮೋಹನನ ವಿಚಾರವಿತ್ತು. ಕಾರಣ ಸ್ವಲ್ಪ ಜನರನ್ನು ತನ್ನ ಹತ್ತರ ಇಟ್ಟುಕೊಂಡು, ಉಳಿದವರನ್ನು ಗುಡಿಯ ಹಿಂದಿನ ಅರಣ್ಯದಲ್ಲಿ ಕಾಣದಂತೆ ಇರಿಸಿದ್ದನು. ಇಬ್ರಾಹಿಮನ ೭೦೦ ಜನ ಸೈನಿಕರು ಇವನ ಸೈನ್ಯವನ್ನು ಇನ್ನೂ ಕೂಡಿದ್ದಿಲ್ಲ.

ಮಹಾದ್ವಾರದಿಂದ ಒಳಗೆ ಹೋದರೆ ವಿಸ್ತಾರವಾದ ಪೌಳಿಯು.

ಅವರಲ್ಲಿ ಸುತ್ತಲೂ ಪೂಜಾರಿಗಳ ಹಾಗೂ ದೇವರ ಸಾಮಾನುಗಳನ್ನಿಡುವ ಸಣ್ಣ ಮನೆಗಳು. ನಟ್ಟನಡುವೆ ದೇವಿಯ ಮುಖ್ಯ ಗುಡಿಯು. ಕಿಶೋರಿ ಮೋಹನನು ಮಹಾದ್ವಾರದ ಎದುರಿಗಿರುವ ದೀಪಸ್ತಂಭದ ಹತ್ತರ ಏನೋ ವಿಚಾರಮಾಡುತ್ತ ಸುಮ್ಮನೆ ಅಡ್ಡಾಡುತ್ತಿದ್ದನು. ಅಷ್ಟರೊಳಗೆ ಅವನಿಗೆ ಕುದುರೆಯ ಹೆಜ್ಜೆಯ ಸಪ್ಪಳವು ಕೇಳಬರಲು, ಮುಖವನ್ನು ಎತ್ತಿ ನೋಡಿ ದನು. ಮನೋಹರನು ಕುದುರೆಯನ್ನು ಓಡಿಸುತ್ತ ಆ ಕಡೆಗೆ ಬರುತ್ತಿ ದ್ದನು. ಅವನು ಹತ್ತರ ಬಂದ ಕೂಡಲೆ ಕಿಶೋರಿಮೋಹನನು ಅವನನ್ನು ಕುರಿತು—ಮಗೂ, ಇಷ್ಟೊತ್ತಿನವರೆಗೆ ಎಲ್ಲಿ ಇದ್ದೆ? ಎಂದನು.

ಮನೋ—ಪಟ್ಟಣದಲ್ಲಿ ಓಣಿ-ಓಣಿಗಳೊಳಗೆ ತಿರುಗಾಡಿದೆನು.

ಕಿಶೋ—ಅದೇಕೆ?

ಮನೋ—ಎಲ್ಲ ಹಿಂದೂ ಜನರಿಗೆ ಸುದ್ದಿಯನ್ನು ಮುಟ್ಟಿಸಿದೆನು. ಆದರಿಂದ ಗಣೇಶನಾರಾಯಣನಿಗೆ ತಾನೇ ಸುದ್ದಿ ಹತ್ತುವದು.

ಕಿಶೋ—ನೀನೇಕೆ ಹೋದೆ? ನಾನು ಡಂಗುರ ಹೊಡೆಯಲಿಕ್ಕೆ ಕಳಿಸಿರುವೆನು.

ಮನೋ—ಡಂಗುರದವನು ಪ್ರಾಣಭಯದಿಂದ ಹಿಂದೂ ಜನರ ಓಣಿ ಯಲ್ಲಿ ಹೋಗದೆ, ಮುಸಲ್ಮಾನರ ವಸತಿಯಿದ್ದ ಕಡೆಗೆ ಮಾತ್ರ ಡಂಗುರ ಸಾರಿದನು.

ಕಿಶೋ—ಹಾಗಾದರೆ ಗಣೇಶನಾರಾಯಣನಿಗೆ ಈ ಸುದ್ದಿ ಹತ್ತುವದು ಕಠಿಣವು.

ಅಷ್ಟರಲ್ಲಿ ಹಿಂದಿನಿಂದ ನಾನು ಗಣೇಶನಾರಾಯಣನಿಗೆ ಸುದ್ದಿಯನ್ನು ಮುಟ್ಟಿಸಿರುವೆನು, ಎಂದು ಯಾರೋ ಅನ್ನಲು, ಕಿಶೋರಿಮೋಹನನು ತಿರುಗಿ ನೋಡಿದನು. ಫಕೀರ ಕುತುಬ ಉಲ್ ಆಲಮನು ಅಲ್ಲಿಗೆ ಬಂದನು. ಕಿಶೋರಿಮೋಹನನು ವಿನಯದಿಂದ ಬೊಗ್ಗಿ ಅವನಿಗೆ ಮೂರು ಸಾರೆ ಸಲಾಂ ಮಾಡಿ:—ತಾವು ಗಣೇಶನಾರಾಯಣನಿಗೆ ಸುದ್ದಿಯನ್ನು ಮುಟ್ಟಿಸಿದ್ದರಿಂದ ಕೆಲಸವು ಹಗುರಾಯಿತು, ಎಂದನು.

ಫಕೀರ—ಸರದಾರ, ಕಾರ್ಯವು ಪೂರ್ಣವಾಗುವದು ಕಠಿಣವು. ಏನೇ ಆಗಲಿ, ಈಗ ನೀವು ಆರಂಭಮಾಡಿದ ಕಾರ್ಯವನ್ನು ಪೂರ್ತಿಗೊಳಿಸ ಲಿಕ್ಕೇಬೇಕು. ಎಷ್ಟು ವಿಘ್ನಗಳು ಒದಗಿದರೂ ಅಂಜದೆ ಈ ಗುಡಿಯನ್ನು

ನೆಲಸಮ ಮಾಡಿ, ಇಲ್ಲಿ ಒಂದು ಮಶೀದೆಯನ್ನು ಕಟ್ಟಿಸಬೇಕು. ಈಗ ಹಾಗೆಯೇ ನೋಡಿದರೆ ಹಿಂದೂ-ಮುಸಲ್ಮಾನ ಜನರೀರ್ವರೂ ನೀವು ಗಣೇಶನಾರಾಯಣನಿಗೆ ಬೆದರಿ ಹಿಂದಿರುಗಿದಿರೆನ್ನುವರು.

ಕಿಶೋ—ತಮ್ಮ ಅಪ್ಪಣೆಯು ನನಗೆ ಶಿರಸಾವಂದ್ಯವು.

ಫಕೀರ—ಅದೋ ನೋಡು, ಹಿಂದೂ ಜನರು ಹಿಂಡುಗಟ್ಟಿಕೊಂಡು ಹೇಗೆ ಬರುತ್ತಿರುವರು? ನಾನು ಇನ್ನು ಮುಸಲ್ಮಾನ ಜನವಸತಿಯಿದ್ದ ಓಣಿಗೆ ಹೋಗಿ ಅವರನ್ನು ಪ್ರೋತ್ಸಾಹಗೊಳಿಸುವೆನು, ಎಂದು ಹೇಳಿ ಹೋದನು. ಫಕೀರನು ಹೋದ ನಂತರ ಮನೋಹರನು ಕಿಶೋರಿ ಮೋಹನನನ್ನು ಕುರಿತು:—ಸರಕಾರ, ನಾನು ನಿಮ್ಮ ಸಲುವಾಗಿ ಕೆಲವು ಆಯುಧಗಳನ್ನು ಸಂಪಾದಿಸಿಕೊಂಡು ಬಂದಿರುವೆನು. ನೀವು ಅವುಗಳನ್ನು ಪಟ್ಟಣದಲ್ಲಿಯ ಮುಸಲ್ಮಾನ ಪ್ರಜೆಗಳಿಗೆ ಕೊಡಿರಿ; ಅಂದರೆ ಅವರ ಬೆಂಬಲವು ಸಿಗುವದು, ಎಂದನು.

ಕಿಶೋ—ನೀನು ಶಸ್ತ್ರಾಸ್ತ್ರಗಳನ್ನು ಹೇಗೆ ದೊರಕಿಸಿದೆ?

ಮನೋ—ನೀವು ಈ ಮೊದಲು ನನಗೆ ಒಂದು ಉಂಗುರವನ್ನು ಕೊಟ್ಟಿದ್ದಿರಲ್ಲವೆ? ಅದನ್ನು ಇಬ್ರಾಹಿಮಖಾನನಿಗೆ ತೋರಿಸಿ, ನೀವು ಬರ್ಚಿಗಳನ್ನು ಬೇಡಿದರೆಂದು ಹೇಳಿದೆನು ಅವನು ಎರಡು ಗಾಡಿ ತುಂಬ ಬರ್ಚಿಗಳನ್ನು ಈಗಲೆ ಕಳಿಸುವನು.

ಕಿಶೋರಿಮೋಹನನು ಆನಂದದಿಂದ-ಮನೂ, ನಿನ್ನ ಬುದ್ಧಿ ಕೌಶಲ್ಯವನ್ನು ಎಷ್ಟು ಹೊಗಳಿದರೂ ತೀರದು; ಆದರೆ ಒಂದು ಮಾತನ್ನು ಯೋಚಿಸಬೇಕಾಗಿದೆ. ಅದೇನಂದರೆ, ನೀನು ಹಿಂದುವಾಗಿ ಹಿಂದೂ ಜನರ ಸರ್ವನಾಶಕ್ಕೆ ಅದೇಕೆ ಸಿದ್ಧನಾಗಿರುವೆ?

ಮನೋ—ಪ್ರಭೋ, ನಾನು ಹಿಂದೂ, ಮುಸಲ್ಮಾನ ಎಂಬ ಯಾವ ಜಾತಿಯನ್ನೂ ನೋಡುವದಿಲ್ಲ. ಮುಖ್ಯವಾಗಿ ನಿಮ್ಮ ಹಿತವನ್ನೇ ನೋಡತಕ್ಕವನು. ನೀವು ಅವಲಂಬಿಸಿದ ಜಾತಿ-ಗೋತಿಗಳನ್ನೇ ನಾನೂ ಅವಲಂಬಿಸತಕ್ಕವನು.

ಕಿಶೋ (ಉಬ್ಬಿನಿಂದ)—ಹೌದು. ಮನೂ, ನಿನ್ನಂತೆ ನಾನೂ ನಿನ್ನನ್ನೇ ಪ್ರೀತಿಸತಕ್ಕವನು.

ಮನೋ—ಪ್ರಭೋ, ಇರಲಿ. ನೀವು ಹಿಂದುಗಳಿದ್ದು, ಹಿಂದುಗಳ ದ್ವೇಷವನ್ನೇಕೆ ಮಾಡುತ್ತಿರುವಿರಿ?

ಕಿಶೋ—ಮನೂ, ಅದರಲ್ಲಿ ನನ್ನ ಸ್ವಾರ್ಥವಿದೆ. ನಶಿರಿತಶಹನು ನನಗೆ ವಜೀರ ಪದವಿಯನ್ನು ಕೊಡುವೆನೆಂದು ಹೇಳಿರುವನು: ಆದರೆ ಗಣೇಶನಾರಾಯಣನು ಏನು ಕೊಡಬಲ್ಲನು? ನೀನೇ ಹೇಳು.

ಮನೋ—ಹೌದು. ನೀವು ವಜೀರರಾದರೆ ನನಗೂ ಹಿತವಿದೆ; ಆದರೆ ಪ್ರಭುಗಳು ಧರ್ಮದ ಮಬ್ಬಿಗೆ ಬಿದ್ದು, ಈ ಗುಡಿಯನ್ನು ನೆಲಸಮ ಮಾಡುವ ಕಾರ್ಯದಲ್ಲಿ ಎಲ್ಲಿ ಹಿಂತೆಗೆಯುವರೋ? ಎಂಬ ಭೀತಿಯು ನನಗಿರುವದು.

ಕಿಶೋ—ಮನೂ! ಧರ್ಮವೆಂಬುದು ದುರ್ಬಲ ಮನಸ್ಸಿನವರ ಕಲ್ಪನೆಯು ಮಾತ್ರ. ಈ ಕಿಶೋರಿಮೋಹನನು ಯಾವ ಧರ್ಮವನ್ನೂ ಯಾವ ದೇವರನ್ನೂ ನಂಬತಕ್ಕವನಲ್ಲ. (ಎದುರಿಗೆ ನೋಡಿ) ಅಗೋ ನೋಡು, ಹಿಂದುಗಳು ಈ ಕಡೆಗೇ ಬರುತ್ತಿರುವರು. ಅಕೋ, ಆ ಕುದುರೆಯ ಮೇಲೆ ಕುಳಿತು ಇತ್ತ ಕಡೆ ಬರತಕ್ಕವನು ಗಣೇಶನಾರಾಯಣನಾಗಿ ತೋರುತ್ತಾನೆ.

## (೧೮)

ಗಣೇಶನಾರಾಯಣನು ದೂರಿನಿಂದ ನೋಡಲು, ಮುಸಲ್ಮಾನರು ಸ್ವಲ್ಪ ಜನರು ಮಾತ್ರ ಗುಡಿಯ ಮುಂದೆ ಸುಮ್ಮನೆ ಅಡ್ಡಾಡುವದು ಕಂಡಿತು. ಗುಡಿಯನ್ನು ಕೆಡಹುವ ಕಾರ್ಯವು ಪ್ರಾರಂಭವಾಗಿದ್ದಿಲ್ಲ. ಆದ್ದರಿಂದ ಅವನು ಮುಂದೆ ಹೋಗದೆ, ಅಲ್ಲಿಯೇ ಒಂದು ಗಿಡದ ಬುಡದಲ್ಲಿ ನಿಂತನು. ಅವನ ಸಂಗತ ೫-೬ ಸಾವಿರ ಹಿಂದೂ ಜನರು ಕೈಯಲ್ಲಿ ಬಡಿಗೆಗಳನ್ನು ಹಿಡಿದುಕೊಂಡು ಬಂದಿದ್ದರು. ಅವರನ್ನು ನೋಡಿ ಕಿಶೋರಿಮೋಹನನು ಮನಸ್ಸಿನಲ್ಲಿ:—ಈ ಜನರಿಗೆ ಈ ಆಯುಧಗಳೆಲ್ಲಿ ದೊರೆತವು? ಎಂದು ಆಲೋಚಿಸತೊಡಗಿದನು. ಮನೋಹರನು ಮನಸ್ಸಿನಲ್ಲಿ:—ಶಹಬ್ಬಾಶ! ನಶಿರಿತಶಹನ ಸೈನ್ಯದ ಶಸ್ತ್ರಾಸ್ತ್ರಗಳು ಕಡೆಗೆ ಗಣೇಶನಾರಾಯಣನ ಅನುಚರರಿಗೆ ಸಿಗುವಂತೆ ಮಾಡಿದೆನಲ್ಲ? ಎಂದು ತನ್ನನ್ನು ತಾನೇ ಹೊಗಳಿಕೊಂಡನು.

ಗಣೇಶನಾರಾಯಣನು ಮುಂದೆ ಬಾರದೆ, ದೂರ ನಿಂತದ್ದನ್ನು ನೋಡಿ

ಕಿಶೋರಿಮೋಹನನು ಗುಡಿಯನ್ನು ಕೆಡಹುವ ಉದ್ಯೋಗಕ್ಕೆ ಸಿದ್ಧನಾದನು. ಅಷ್ಟರಲ್ಲಿ ಊರೊಳಗಿಂದ ಗುದ್ದಲಿ, ಸಲಿಕೆ, ಹಾರಿ, ಸುತ್ತಿಗೆ, ಕೊಡತಿ ಮೊದಲಾದ ಅನೇಕ ಸಾಮಾನುಗಳು ಅಲ್ಲಿಗೆ ಬಂದವು; ಮತ್ತು ಎರಡು ಗಾಲಿಯ ಬಂಡಿಯ ಮೇಲೆ ಹೇರಲ್ಪಟ್ಟಿದ್ದ ಒಂದು ದೊಡ್ಡ ಸುತ್ತಿಗೆಯೂ ಬಂದಿತು. ಅದನ್ನು ಹಿಂದಿನಿಂದ ತಿರುವಲು, ಅದು ಬೇಕಾದಂಥ ಪದಾರ್ಥಕ್ಕೆ ಅಪ್ಪಳಿಸುವಂತೆ ಯಂತ್ರರಚನೆ ಮಾಡಿತ್ತು. ಕಿಶೋರಿಮೋಹನನು ಆ ಸಾಹಿತ್ಯಗಳನ್ನು ತಂದು ಬಾಗಿಲಿಗೆ ಹಚ್ಚಿದನು.

ಆಗ ಗಣೇಶನಾರಾಯಣನು ಮುಂದಕ್ಕೆ ಬಂದು-"ಗುಡಿಯ ಮುಂದೆ ಇದೇನು ಗದ್ದಲವು?" ಎಂದು ಕೇಳಿದನು.

ಕಿಶೋರಿಮೋಹನನು ಮುಂದೆ ಬಂದು—ನಾವು ಗುಡಿಯನ್ನು ಕೆಡವ ತಕ್ಕವರಿರುತ್ತೇವೆ.

ಗಣೇಶ—ಇದು ಯಾರ ಸಂಪತ್ತಿಯೆಂದು ತಿಳಿದು ಇದನ್ನು ನೀವು ನಾಶಪಡಿಸುತ್ತೀರಿ?

ಕಿಶೋ-ಇದು ನವಾಬನ ಸಂಪತ್ತಿಯು. ಅವನೇ ಇದರ ಮಾಲಕನು.

ಗಣೇ—ಅಲ್ಲ; ಇದು ನವಾಬನದಲ್ಲ. ಹಿಂದುಗಳ ಸಂಪತ್ತಿಯು. ಹಿಂದುಗಳೇ ಇದರ ಮಾಲಕರು; ಆದ್ದರಿಂದ ನಾನು ಇದನ್ನು ನಾಶಮಾಡಗೊಡುವದಿಲ್ಲ.

ಕಿಶೋ—ಸಾಮರ್ಥ್ಯವಿದ್ದರೆ ರಕ್ಷಿಸಿಕೋ.

ಗಣೇ—ಅದಕ್ಕೆ ಸಿದ್ಧನೇ ಇರುವೆನು; ಆದರೆ ಒಂದು ಪ್ರಶ್ನೆಯನ್ನು ಮಾಡುತ್ತೇನೆ. ನೀನು ಈ ಕೆಲಸವನ್ನು ಯಾರ ಹುಕುಮಿನಿಂದ ಮಾಡಲು ಬಂದಿರುವಿ?

ಕಿಶೋ—ನವಾಬನ ಅಪ್ಪಣೆಯ ಮೇರೆಗೆ.

ಗಣೇ-ಸುಳ್ಳು. ನವಾಬನು ಈ ಪ್ರಕಾರ ಎಂದೂ ಹುಕುಂ ಕೊಡುವ ಸಂಭವವಿಲ್ಲ. ನವಾಬ ಸೈಫುದ್ದೀನನು ಸ್ವತಃ ಬರೆದ ಅಕ್ಷರಗಳನ್ನು ತೋರಿಸು; ಅಂದರೆ ನಾನು ನಿಮಗೆ ಮಾರ್ಗವನ್ನು ಕೊಡುವೆನು.

ಕಿಶೋ—ನವಾಬನೇ ಸ್ವತಃ ಹುಕುಮನ್ನು ಕೊಡುವ ಕಾರಣವಿಲ್ಲ. ನವಾಬನ ಪ್ರತಿನಿಧಿಯಾದ ನಶಿರಿತಶಹರು ಕೊಟ್ಟಿರುವರು.

ಗಣೇ—ಪ್ರತಿನಿಧಿಯ ಆಜ್ಞೆಯನ್ನು ನಾನು ಮನ್ನಿಸುವದಿಲ್ಲ.

ಕಿಶೋ—ನೀನು ಮನ್ನಿಸಬೇಡ; ನಾನು ಮನ್ನಿಸತಕ್ಕವನು.

ಗಣೇ—ಕಿಶೋರಿಮೋಹನ, ವಿಚಾರ ಮಾಡು. ಹಿಂದು ವಂಶದಲ್ಲಿ ಹುಟ್ಟಿದ ನೀನು ಈಗ ಮಾಡುವ ಕಾರ್ಯವು ನಿನಗೆ ಒಪ್ಪುವದೋ?

ಕಿಶೋ—ನಾನು ನವಾಬನ ಸೇವಕನು. ಒಡೆಯನ ಅಪ್ಪಣೆಯ ಮುಂದೆ ನನ್ನ ಧರ್ಮವು ಹೆಚ್ಚಿನದಲ್ಲ.

ಗಣೇ—ನಾನೂ ನವಾಬನ ಸೇವಕನು. ಸೇವಕನಾದವನು ಧರ್ಮಕ್ಕೆ ತಿಲಾಂಜಲಿಯನ್ನು ಕೊಡಬೇಕೆ? ಆಗಲಿ. ಕಿಶೋರಿಮೋಹನ, ಕಡೆಗೆ ಇಷ್ಟು ಮಾತಾದರೂ ಕೇಳು. ಈ ಗುಡಿಯನ್ನು ನೆಲಸಮ ಮಾಡುವ ಕಾರ್ಯವನ್ನು ಇನ್ನೆರಡು ದಿವಸ ತಡೆದು ಆರಂಭಮಾಡು.

ಕಿಶೋ—ಅದೇಕೆ?

ಗಣೇ—ನಾನು ಅಷ್ಟರಲ್ಲಿ ನಿಶ್ಚಯವಾಗಿಯೂ ನವಾಬನಿಂದ ಈ ಕೆಲಸ ಮಾಡಬಾರದಾಗಿ ಆಜ್ಞೆಯನ್ನು ತಂದು ತೋರಿಸುವೆನು.

ಕಿಶೋ—ವಿಲಂಬ ಮಾಡಲು ನನಗೆ ಅಪ್ಪಣೆಯಿಲ್ಲ.

ಗಣೇಶನಾರಾಯಣನು ಮುಖವನ್ನು ಕೆಳಗೆ ಮಾಡಿ ಕ್ಷಣಕಾಲ ಏನೋ ವಿಚಾರ ಮಾಡಿ, ನಂತರ ಸುತ್ತಲೂ ನೋಡಿದನು. ಕಿಶೋರಿಮೋಹನನ ಸೈನಿಕರು ತನ್ನನ್ನು ಸುತ್ತುವರೆದು ನಿಂತಿದ್ದರು. ಆಗ ಗಣೇಶನಾರಾಯಣನು ಗಂಭೀರ ಸ್ವರದಿಂದ:—ಕಿಶೋರಿಮೋಹನ, ಈಗ ನೀನು ಯಾವ ಉದ್ದೇಶದ ಸಲುವಾಗಿ ಈ ಕೆಲಸಕ್ಕೆ ಬಂದಿರುವೆಯೆಂಬುದು ನನಗೆ ಗೊತ್ತಿರುವದು. ನಿನ್ನ ಉದ್ದೇಶವು ಸಾರ್ಥಕವಾದರೆ, ಈ ಗುಡಿಯ ಧ್ವಂಸ ಕಾರ್ಯವನ್ನು ನಿಲ್ಲಿಸುವೆಯಷ್ಟೇ?

ಕಿಶೋ—ಮಂದಿರಧ್ವಂಸವೇ ನನ್ನ ಮುಖ್ಯ ಕಾರ್ಯವು.

ಗಣೇ—ಸುಳ್ಳು ಹೇಳುತ್ತೀ. ನೀವು ನನ್ನನ್ನು ಸೆರೆ ಹಿಡಿದುಕೊಂಡು ಹೋಗಲು ಬಂದಿರುತ್ತೀರಿ. ನೀವು ದೇವಿಯ ಗುಡಿಯ ಧ್ವಂಸಕಾರ್ಯವನ್ನು ಕೈಕೊಂಡರೆ, ಗಣೇಶನಾರಾಯಣನು ಆ ಕೆಲಸಕ್ಕೆ ಎದುರು ನಿಂತು, ಪ್ರಾಣವನ್ನು ಕೂಡ ಕಳೆದುಕೊಳ್ಳುವನು; ಅಥವಾ ಸೆರೆಸಿಗುವನು, ಎಂಬ ಆಲೋಚನೆ ಮಾಡಿ, ಈ ಕಾರಸ್ಥಾನವನ್ನು ಹೂಡಿರುವಿರಿ. ಕಿಶೋರಿಮೋಹನ, ನೀನು ನನ್ನನ್ನು ಸೆರೆಹಿಡಿದುಕೊಂಡು ಹೋಗಬೇಕೆಂದಿದ್ದರೆ ನನ್ನನ್ನು

ಕೊಲೆ ಮಾಡು. ನಾನು ಆನಂದದಿಂದ ಸಿದ್ಧನಿರುವೆನು; ಆದರೆ ಈ ಪೈಶಾಚಿಕ ಕೃತ್ಯವನ್ನು ಮಾತ್ರ ಮಾಡಬೇಡ.

ಕಿಶೋರಿಮೋಹನನಿಗೆ ಮುಂದೆ ಏನು ಮಾಡಬೇಕೆಂಬುದು ತಿಳಿಯಲಿಲ್ಲ. ಅವನು ಸುತ್ತಲೂ ನೋಡಿದನು. ಫಕೀರ ಕುತುಬ ಉಲ್ ಆಲಮನು ಎಲ್ಲಿಯೂ ಕಾಣಿಸಲಿಲ್ಲ. ಕಡೆಗೆ ಅವನು ತನ್ನ ಸೈನಿಕರ ಕಡೆಗೆ ನೋಡಿದನು. ಪಾಪ! ಅವರೇನು ಹೇಳಬೇಕು? ಆದರೆ ಅಷ್ಟರಲ್ಲಿ ಅವನ ಹಿಂದೆ ನಿಂತ ಮನೋಹರನು:—"ನಾವು ಬಂದ ಕಾರ್ಯವನ್ನೇ ಮಾಡತಕ್ಕವರು; ಮಂದಿರವನ್ನು ನೆಲಸಮ ಮಾಡತಕ್ಕವರು," ಎಂದು ಒದರಿದನು. ಅವನು ಜನರ ಗದ್ದಲಗಲ್ಲಿ ಮುಖವನ್ನು ಕೆಳಗೆ ಮಾಡಿಕೊಂಡು ಈ ಮಾತನಾಡಿದ್ದರಿಂದ ಜನರಿಗೆ ಯಾರು ಮಾತನಾಡಿದರೆಂಬುದು ತಿಳಿಯಲಿಲ್ಲ. ಮನೋಹರನ ಮಾತಿನ ಪ್ರತಿಧ್ವನಿಯೋ ಎಂಬಂತೆ ಕಿಶೋರಿಮೋಹನನು:–"ನಾವು ಬಂದ ಕೆಲಸವನ್ನೇ ಮಾಡತಕ್ಕವರು; ಉಳಿದ ವಿಚಾರ ಮಾಡುವ ಅಧಿಕಾರವು ನಮಗಿಲ್ಲವೆ"ಂದನು.

ಗಣೇ—ನನ್ನ ಪ್ರಾಣವನ್ನು ತಕ್ಕೊಂಡು ಈ ಕಾರ್ಯ ಬಿಡಲು ಮನಸ್ಸಿಲ್ಲವೇ?

ಕಿಶೋ—ಇಲ್ಲ.

ಗಣೇ—ಹಾಗಾದರೆ ಸಾಮರ್ಥ್ಯವಿದ್ದರೆ ಕಾರ್ಯಸಾಫಲ್ಯವನ್ನು ಹೊಂದು; ನೋಡುತ್ತೇನೆ, ಎಂದು ಕುದುರೆಯನ್ನು ಮುಂದಕ್ಕೆ ನೂಕಿ, ಗುಡಿಯ ಬಾಗಿಲಿಗೆ ಬಂದು ನಿಂತನು. ಅವನ ಹಿಂದಿನಿಂದ ೫-೬ ಸಾವಿರ ಹಿಂದೂ ಜನರೂ ಬಂದು ನಿಂತರು.

ಕಿಶೋರಿಮೋಹನನು ತನ್ನ ಇನ್ನೂರು ಜನರಿಂದ ಇಷ್ಟು ಜನ ಹಿಂದೂ ಜನರನ್ನು ಎದುರಿಸುವದು ಶಕ್ಯವಿಲ್ಲವೆಂದು ತಿಳಿದು, ಇಬ್ರಾಹಿಮನ ಮಾರ್ಗ ನಿರೀಕ್ಷಿಸುತ್ತ ನಿಂತನು.

## ( ೧೯ )

ಹಿಂದೂ ಜನರು ಆಯುಧಗಳನ್ನು ಧರಿಸಿ ಗುಂಪುಗುಂಪಾಗಿ ಗುಡಿಯ ಕಡೆಗೆ ಹೋಗುವದನ್ನು ನೋಡಿ ಫಕೀರ ಕುತುಬ್ ಉಲ್ ಆಲಮನು ಪಠಾಣ ರಾಜ್ಯಕ್ಕೆ ದಾಳಿ ಬಂತೆಂದು ತಿಳಿದನು. ವೀರ ಗಣೇಶನಾರಾಯಣನು ಕ್ಷಣದಲ್ಲಿಯೇ ಪಠಾಣರನ್ನು ನಿರ್ಮೂಲ ಮಾಡುವನೆಂದು ಗ್ರಹಿಸಿ, ಅವನು ಮನಸ್ಸಿ

ಸಲ್ಲಿ ಯಾವುದೊಂದು ಯುಕ್ತಿಯಿಂದ ಹಿಂದೂ ಜನರನ್ನು ಇಲ್ಲಿಂದ ಬೇರೆ ಕಡೆಗೆ ಹೋಗುವಂತೆ ಮಾಡಿದರೆ ಗಣೇಶನಾರಾಯಣನನ್ನು ಸೋಲಿಸುವದು ಶಕ್ಯವಾಗುವದು, ಎಂದು ಯೋಚಿಸಿದನು. ಆತನು ಗುಡಿಯಿಂದ ಹೊರಟು ಮುಸಲ್ಮಾನ ವಸತಿಯಿದ್ದ ಓಣಿಗೆ ಹೊರಟನು. ಪ್ರಸಿದ್ಧ ಮುಸಲ್ಮಾನ ಸಾಧುವಾದ ಈ ಫಕೀರನ ಪರಿಚಯವು ಎಲ್ಲ ಮುಸಲ್ಮಾನರಿಗೂ ಇತ್ತು. ಅವನು ಓಣಿಯಲ್ಲಿ ನಿಂತು:—"ಮುಸಲ್ಮಾನ ಬಂಧುಗಳೇ, ಪೈಗಂಬರರ ಅನುಯಾಯಿಗಳೇ, ನಿಮಗೆ ಸ್ವರ್ಗವು ದೊರೆಯಬೇಕಾಗಿದ್ದರೆ, ಇಸ್ಲಾಮಿ ಧರ್ಮವನ್ನು ಹಬ್ಬಿಸುವ ಇಚ್ಛೆಯಿದ್ದರೆ, ಕುರಾನದ ಮೇಲೆ ನಂಬಿಗೆ ಇದ್ದರೆ, ಕಾಫರರಾದ ಹಿಂದುಗಳನ್ನು ಸಿಕ್ಕಲ್ಲಿ ಕೊಲೆ ಮಾಡಿರಿ. ಅವರ ಮನೆ-ಮಾರುಗಳನ್ನು ಲೂಟಿ ಮಾಡಿರಿ. ಮೂರ್ತಿ ಪೂಜಕರ ಮೂರ್ತಿಗಳನ್ನು ನಾಶ ಮಾಡಿ ವೀರಸ್ವರ್ಗವನ್ನು ಹೊಂದಿರಿ, ಎಂದು ಕೂಗಹತ್ತಿದನು. ಕೂಡಲೆ ಉತಾವಳಿ ಸ್ವಭಾವದ ಮುಸಲ್ಮಾನರು ಆವೇಶಗೊಂಡು, ಹಿಂದುಗಳ ಓಣಿಯನ್ನು ಹೊಕ್ಕರು.

ಯುದ್ಧ ಮಾಡುವ ಸಾಮರ್ಥ್ಯವಿದ್ದ ಬಹುತರ ಹಿಂದೂಜನರು ಗುಡಿಯ ರಕ್ಷಣೆಗೆ ಹೋಗಿದ್ದರು. ಮನೆಯಲ್ಲಿದ್ದ ಒಬ್ಬೊಬ್ಬ ಪುರುಷರು ಮೈ ಮರೆತು ಕುಳಿತಿದ್ದರು. ಈ ವರೆಗೆ ಆ ಪಟ್ಟಣದಲ್ಲಿ ಹಿಂದೂ ಮುಸಲ್ಮಾನರು ಒಬ್ಬರಿಗೊಬ್ಬರು ಚಿಚಾ, ಮಾಮಾ, ದಾದಾ, ಭಾಯಿ ಎಂದು ಪ್ರೇಮದಿಂದ ವರ್ತಿಸುತ್ತಿದ್ದ ಕಾರಣ ಅವರಲ್ಲಿ ಮನಸಾ ದ್ವೇಷಭಾವವಿದ್ದಿಲ್ಲ. ಅಕಸ್ಮಾತ್ ಹಬ್ಬಿದ ಈ ಬೇಗೆಯು ಅವರ ಪ್ರೀತಿಯ ಬಂಧನವನ್ನು ಸುಟ್ಟು ಬೂದಿ ಮಾಡುವದೆಂಬದು ಅವರಿಗೇನು ಗೊತ್ತು? ಡೊಣ್ಣೆ, ಕೋಲು, ಬರ್ಚಿ ಮುಂತಾದ ಸಮಯಕ್ಕೆ ಸಿಕ್ಕ ಆಯುಧಗಳನ್ನು ತೆಗೆದುಕೊಂಡು, ಮುಸಲ್ಮಾನರು ಹಿಂದೂಜನರ ಮನೆಗಳನ್ನು ನುಗ್ಗಿದರು. ಎಲ್ಲಿ ನೋಡಿದಲ್ಲಿ ಹೊಡಿ, ಬಡಿ, ಕೊಲ್ಲು ಮುಂತಾದ ಮುಸಲ್ಮಾನರ ಗುಲ್ಲೂ, ಹಿಂದೂ ನಾರಿಯರ ಬಾಲಕರ ಮುದುಕರ ಆರ್ತಸ್ವರವೂ ಕೇಳಬರಹತ್ತಿತು. ಹಿಂದೂ ಜನರ ಮನೆಯಲ್ಲಿಯ ಬೆಲೆಯುಳ್ಳ ಸಾಮಾನುಗಳು ಲೂಟಿ ಮಾಡಲ್ಪಟ್ಟವು. ಒಂದು ಮನೆಯಲ್ಲಿ ಒಬ್ಬ ಬ್ರಾಹ್ಮಣ ವಿಧವೆಯು ಶಿವಪೂಜೆಯನ್ನು ಮಾಡುತ್ತ ಕುಳಿತಿದ್ದಳು. ಮುಸಲ್ಮಾನರು ಅವಳನ್ನು ಹಿಡಿದೆಳೆದು ಮೂರ್ತಿಯನ್ನು ಬಿಸುಟಿದರು. ಆಗ ತೇಜಸ್ವಿನಿಯಾದ ಅವಳು ಹತ್ತರದ ತಂಬಿಗೆ

ಯಿಂದ ಒಬ್ಬ ಪಠಾಣನ ತಲೆಗೆ ಕಸುವಿನಿಂದ ಅಪ್ಪಳಿಸಿದಳು. ಒಂದು ಕಡೆಗೆ ಒಬ್ಬ ವೈಶ್ಯ ತರುಣಿಯು ಕಾಯಿಪಲ್ಲೆಯನ್ನು ಹೆಚ್ಚುತ್ತ ಕುಳಿತಿದ್ದಳು. ಒಬ್ಬ ಪಠಾಣನು ಅವಳ ಸೆರಗನ್ನು ಹಿಡಿದು ಜಗ್ಗಲು, ಅವಳು ಕೈಯೊಳಗಿನ ಈಳಿಗೆಯಿಂದಲೇ ಅವನಿಗೆ ಮೋಕ್ಷವನ್ನು ಕೊಡಿಸಿದಳು. ಈ ಪ್ರಕಾರ ಒಂದೆರಡು ಕಡೆಗೆ ಮಾತ್ರ ಹಿಂದೂ ನಾರಿಯರು ಅಕಸ್ಮಾತ್ತಾಗಿ ರಕ್ಷಣೆ ಹೊಂದಿದರು. ಎಷ್ಟೋ ಸಣ್ಣ ಕೂಸುಗಳು ಸ್ತನಪಾನ ಮಾಡುವಾಗ ಎಳೆಯಲ್ಪಟ್ಟು ಮರಣ ಹೊಂದಿದವು. ಹಿಂದೂ ಜನರಿಗೆ ಅಮೌಲ್ಯವೆಂದೆನಿಸುವ ಶಾಲಿಗ್ರಾಮಗಳೂ ಶಿವಲಿಂಗಗಳೂ ಮುಸಲ್ಮಾನರ ಕೈಗೆ ಸಿಕ್ಕ ಕೂಡಲೆ, ಅವರು ಅವುಗಳನ್ನು ತುಳಿದು ಚರಂಡಿಗಳಿಗೆ ಬೀಸಿ ಒಗೆಯುತ್ತಿದ್ದರು. ಆಗ ಅವರು ಇದುವರೆಗೆ ತಮ್ಮ ತಂದೆಯಂತೆ ಭಾವಿಸಿದ ಜೋನಾಜ ಖಾನನಿಗೆ ಈ ಸಂಗತಿಯನ್ನು ತಿಳಿಸಬೇಕೆಂದು ಅವನ ಮನೆಯ ಕಡೆಗೆ ಹೊರಟರು. ಕೆಲವರು ಗಣೇಶನಾರಾಯಣನ ಕಡೆಗೆ ಹೊರಟರು.

ಆಗ ಗಣೇಶನಾರಾಯಣನು ಒರೆಯಿಂದ ಕತ್ತಿಯನ್ನು ಹಿರಿದು ಕೊಂಡು ಗುಡಿಯ ಮಹಾದ್ವಾರದ ಮುಂದೆ ನಿಂತುಕೊಂಡಿದ್ದನು. ಹಿಂದುಗಳ ಈ ದುರ್ದೆಶೆಯನ್ನು ಕೇಳಿ ಅವನು ಬಹಳ ಕಳವಳಗೊಂಡನು; ಆದರೆ ಗುಡಿಯ ಬಾಗಿಲವನ್ನು ಬಿಟ್ಟು ಹೋಗುವಂತಿದ್ದಿಲ್ಲ. ಆಗ ಅವನಿಗೆ ಆ ಫಕೀರನೇ ಇದೆಲ್ಲ ಅತ್ಯಾಚಾರವನ್ನುಂಟು ಮಾಡಿದವನೆಂಬದು ತಿಳಿಯಿತು. ಬಳಿಕ ಅವನು ಅಲ್ಲಿ ಕೂಡಿದ ಹಿಂದೂ ಜನರನ್ನು ಕುರಿತು:—ನೀವು ಪಟ್ಟಣದಲ್ಲಿ ಹೋಗಿ ನಿಮ್ಮ ನಿಮ್ಮ ಮನೆ-ಮಾರು, ಹೆಂಡಿರು-ಮಕ್ಕಳನ್ನು ರಕ್ಷಿಸಿಕೊಳ್ಳಿರಿ, ಎಂದನು.

ಅವರಲ್ಲಿ ಒಬ್ಬನು—ಪ್ರಭೋ, ತಾವು ಅತ್ಯಾಚಾರ, ಕೊಲೆ, ಸುಲಿಗೆ ಮಾಡಬಾರದೆಂದು ಹೇಳಿದ್ದೀರಿ. ಈಗ ಹೋಗಿ ನಮ್ಮ ರಕ್ಷಣೆ ಮಾಡಿಕೊಳ್ಳುವಾಗ, ಮುಸಲ್ಮಾನರನ್ನು ಕೊಲ್ಲುವ ಪ್ರಸಂಗ ಬರುವದಿಲ್ಲವೆ ?

ಗಣೇಶ—ಆತ್ಮರಕ್ಷಣೆಯ ಸಲುವಾಗಿ ಬೇಕಾದ್ದನ್ನು ಮಾಡಿರಿ; ಆದರೆ ನಿರ್ಬಲ ಮುಸಲ್ಮಾನ ಹೆಂಗಸರ ಹಾಗು ಹುಡುಗರ ಮೇಲೆ ಅತ್ಯಾಚಾರ ಮಾಡಬೇಡಿರಿ; ಮತ್ತು ಯಾವ ಹಿಂದುವು ತನ್ನ ಸ್ವಜನರನ್ನು ರಕ್ಷಿಸಿಕೊಳ್ಳದೆ ಹೇಡಿಯಂತೆ ಓಡಿಹೋಗಲು ಯತ್ನಿಸುವನೋ, ಅವನಿಗೂ ಯೋಗ್ಯ ಪ್ರಾಯಶ್ಚಿತ್ತ ಕೊಡಿರಿ, ಎಂದನು.

ಮತ್ತೊಬ್ಬನು—ನಿಮ್ಮನ್ನೊಬ್ಬರನ್ನೇ ಬಿಟ್ಟು ನಾವು ಪಟ್ಟಣದಲ್ಲಿ ಹೋಗಬೇಕಾಗುವದಲ್ಲವೆ?

ಗಣೇಶ—೨೦೦ ಜನರು ಮಾತ್ರ ಗುಡಿಯ ರಕ್ಷಣೆಯ ಸಲುವಾಗಿ ಉಳಿದು ಮಿಕ್ಕವರು ಹೋಗಿರಿ, ಎಂದನು. ಬಳಿಕ ಹೆಚ್ಚಿನ ಜನರು ಊರ ಕಡೆಗೆ ಹೊರಟರು.

ಇತ್ತ ಜೋನಾಬಖಾನನು ಕುದುರೆಯನ್ನು ಹತ್ತಿಕೊಂಡು ರಾಜಧಾನಿಗೆ ಹೋಗಲು ಸಿದ್ಧನಾಗಿದ್ದನು. ಹಿಂದೂ ನಾರಿಯರು ಗೋಳಿಡುತ್ತ ಅವನನ್ನು ಬಂದು ಮುತ್ತಿದರು. ಆಗ ಅವನು: "ಅವ್ವಗಳಿರಾ, ನಾನೇನು ಮಾಡಲಿ? ಈಗ ನಾನು ನಿಮ್ಮ ಅಧಿಕಾರಿಯಲ್ಲ!" ಎಂದನು.

ಅವರಲ್ಲಿ ಒಬ್ಬಳು—ನೀವು ನಮಗೆ ತಂದೆಯ ಸಮಾನರು. ನೀವೇ ನಮ್ಮ ಅಧಿಕಾರಿಗಳು. ಉಳಿದವರ ಪರಿಚಯವು ನಮಗಿಲ್ಲ. ನೀವು ನಮ್ಮನ್ನು ರಕ್ಷಿಸದೆ ಹೀಗೆ ಹೊರದೂಡಿದರೆ, ಮುಂದೆ ನಮ್ಮ ಗತಿಯೇನು? ಅಂದಳು.

ಜೋನಾ—ಈಗ ನಾನೂ ನಿಮ್ಮಂತೆಯೇ ಒಬ್ಬ ಸಾಮಾನ್ಯ ಪ್ರಜೆಯು!

ಮತ್ತೊಬ್ಬಳು—ನೀವು ಸಾವಿರ ಮಾತುಗಳನ್ನು ಹೇಳಿದರೂ ನಾವು ಕೇಳತಕ್ಕವರಲ್ಲ. ನೀವೇ ನಮ್ಮ ತಂದೆ; ನೀವೇ ನಮ್ಮ ದೈವತವು.

ಜೋನೋಬಖಾನನ ಕುತ್ತಿಗೆಯ ಶಿರಗಳು ಬಿಗಿದವು. ಅವನು ಉದ್ರೇಕದಿಂದ—"ಹಾಗಾದರೆ ನಡೆಯಿರಿ. ನನ್ನ ಪ್ರಾಣಕೊಟ್ಟಾದರೂ ನಿಮ್ಮ ಸಂಕಟವನ್ನು ದೂರ ಮಾಡಲು ಪ್ರಯತ್ನಿಸುವೆನೆ"ಂದು ಕುದುರೆಯನ್ನು ತಿರುಗಿಸಿ ಪಟ್ಟಣಪಲ್ಲಿ ಬಂದನು. ಪಟ್ಟಣದಲ್ಲಿ ಹಿಂದೂ ಗಂಡಸರ ಸಂಖ್ಯೆಯು ತೀರ ಕಡಿಮೆಯಿದ್ದು, ಮುಸಲ್ಮಾನರು ಹಿಂದೂ ತರುಣಿಯರ ಮೇಲೆ ಅನೇಕ ಅಸಹ್ಯ ಅತ್ಯಾಚಾರಗಳನ್ನು ನಡೆಸಿದ್ದರು. ಸ್ತ್ರೀಯರ ಆರ್ತಸ್ವರ, ಚಿಕ್ಕ ಮಕ್ಕಳ ರೋದನಸ್ವರಗಳಿಂದ ಪಟ್ಟಣವು ಕೀಸರಿಟ್ಟಿತ್ತು. ಜೋನಾಬಖಾನನು ಹಿಂದೂ ಸ್ತ್ರೀಯರನ್ನು ಎಳೆದುಕೊಂಡು ಹೋಗುವ ಒಬ್ಬ ಪಠಾಣನ ಮುಂದೆ ಬಂದು ನಿಂತು:—ಭಾಯಿ, ಈಗ ಸ್ವಲ್ಪ ಹೊತ್ತಿನ ಮುಂಚೆ ನೀನು ತಾಯಿ, ಅಕ್ಕ, ತಂಗಿಯರಂತೆ ನಡೆದುಕೊಂಡವರ ಮೇಲೆ ನಿಷ್ಕಾರಣವಾಗಿ ಹೀಗೆ ಅತ್ಯಾಚಾರ ಮಾಡುವದು ಯೋಗ್ಯವೇ? ಎಂದನು. ಆ ಪಠಾಣನು ಜೋನಾಬಖಾನನನ್ನು ನೋಡಿದ ಕೂಡಲೆ ನಾಚಿ,

ತಲೆಬೊಗ್ಗಿಸಿಕೊಂಡು ಅಲ್ಲಿಂದ ಸುಮ್ಮನೆ ಹೊರಟು ಹೋದನು. ಅಷ್ಟರಲ್ಲಿ ದೂರದಿಂದ:—ಮುಸಲ್ಮಾನ ಬಂಧುಗಳೇ, ಸ್ವರ್ಗವು ಬೇಕಾಗಿದ್ದರೆ ಕಾಫರರನ್ನು ಕೊಲ್ಲಿರಿ, ಎಂದು ಫಕೀರನು ಒದರುತ್ತಿದ್ದನು. ಜೋನಾಬಖಾನನು ಅವನ ಹತ್ತರ ಹೋಗಿ, ಸಲಾಂ ಮಾಡಿ:—"ಫಕೀರಸಾಹೇಬ, ನೀವು ಬಲ್ಲವರು; ಕಾಫರರನ್ನು ಕೊಂದರೆ ಸ್ವರ್ಗವು ಸಿಗುವದೇ?" ಎಂದು ಕೇಳಿದನು.

ಫಕೀರ—ಯಾರು ಮೂರ್ತಿಪೂಜೆಯನ್ನು ಮಾಡುವರೋ ಅವರು ನಾಸ್ತಿಕರು. ಅವರನ್ನು ಕೊಂದರೆ ಸ್ವರ್ಗವು ದೊರೆಯಲಿಕ್ಕೇಬೇಕು.

ಜೋ—ಪ್ರಭುಗಳು ಕ್ಷಮಿಸಬೇಕು. ಹಿಂದೂ-ಮುಸಲ್ಮಾನರನ್ನು ನಿರ್ಮಿಸಿದ ದೇವರು ಒಬ್ಬನೇ ಅಲ್ಲವೇ? ಹೆಸರು ಬೇರೆ ಇದ್ದರೂ ಧರ್ಮವು ಒಂದೇ ಅಲ್ಲವೇ?

ಫ—ಹಾಗೆಂದಿಗೂ ಆಗದು. ಹುಲಿಯನ್ನೂ ಆಡನ್ನೂ ಒಂದೇ ದೇವರು ನಿರ್ಮಿಸಿದ್ದರೂ, ಹುಲಿಯು ಆಡನ್ನು ಮುರಿದು ತಿನ್ನತಕ್ಕದ್ದೇ ದೇವರ ಸಂಕೇತವು. ಆದ್ದರಿಂದ ನಾನು ಮನಃಪೂರ್ವಕ ಇಸ್ಲಾಮೀ ಧರ್ಮದ ಸೇವೆಯನ್ನು ಮಾಡುತ್ತಿರುವೆನು, ಎಂದನು. ಅಷ್ಟರಲ್ಲಿ ಗುಡಿಯ ಕಡೆಯಿಂದ ಅಸಂಖ್ಯ ಹಿಂದೂ ಜನರು ಓಡುತ್ತ ಚೀರುತ್ತ ಆ ಕಡೆಗೆ ಬಂದರು. ಆಗ ಆ ಎಲ್ಲ ಹಿಂದುಗಳ ಕೈಯಲ್ಲೂ ಬರ್ಚಿಗಳಿದ್ದವು; ಆದರೆ ಮುಸಲ್ಮಾನರ ಕೈಯಲ್ಲಿ ಮಾತ್ರ ಬಡಿಗೆ, ಕೋಲುಗಳ ಹೊರ್ತು ಯಾವ ಆಯುಧಗಳೂ ಇದ್ದಿಲ್ಲ. ಕ್ಷಣದಲ್ಲಿ ಅಸ್ತ್ರಧಾರಿಗಳಾದ ಹಿಂದುಗಳ ಮುಂದೆ ಪಠಾಣರು ನಿಲ್ಲದೆ, ದಾರಿ ಸಿಕ್ಕ ಕಡೆಗೆ ಓಡಹತ್ತಿದರು. ಎಲ್ಲ ಹಿಂದುಗಳೂ ಇತ್ತ ಕಡೆಗೆ ಬಂದದ್ದರಿಂದ ಗಣೇಶನಾರಾಯಣನೊಬ್ಬನೇ ಆಡನೆಂದು ತಿಳಿದು ಫಕೀರನು ಹಿಗ್ಗಿ, ಆ ಕಡೆಗೆ ಹೊರಟನು.

## ( ೨೦ )

ಹಿಂದೂ ಜನರು ಊರಲ್ಲಿ ಹೋದದ್ದನ್ನು ನೋಡಿ ಕಿಶೋರಿಮೋಹನನಿಗೆ ಧೈರ್ಯ ಬಂದಿತು. ಆಗ ಅವನು:—ಗಣೇಶನಾರಾಯಣಾ, ಈಗ ನಿನಗೆ ಸಹಾಯ ಮಾಡುವರಾರು? ಎಂದನು.

ಗಣೇಶ—ನನಗೆ ನನ್ನ ಸ್ವಂತ ಜೀವದ ವಿಷಯಕ್ಕೆ ಮಮತೆ ಇದ್ದರೆ

ನಾಶೀ ಕಾರ್ಯಕ್ಕೆ ಸಿದ್ಧನಾಗುತ್ತಿದ್ದಿಲ್ಲ; ಇದಲ್ಲದೆ ನಿನ್ನ ಕೈ ಸೆರೆಯಾಗಲು ಒಪ್ಪಿಕೊಳ್ಳುತ್ತಿದ್ದಿಲ್ಲ.

ಕಿಶೋ—ಇಂದು ನೀನು ಗುಡಿಯ ರಕ್ಷಣೆಗೆ ಬಾರದಿದ್ದರೆ ಜನರು ಹೇಡಿಯೆಂದು ಅನ್ನುವರೆಂಬ ಕಲ್ಪನೆಯಿಂದಲೇ ನೀನು ಯುದ್ಧಕ್ಕೆ ಸಿದ್ಧನಾಗಿರುವಿ. ನೀನು ಮನಮುಟ್ಟಿ ಈ ಕೆಲಸವನ್ನು ನಿರ್ವಹಿಸಿಲ್ಲ.

ಗಣೇ—ನನ್ನ ಮನಸ್ಸಿನಲ್ಲಿಯ ವಿಚಾರವು ನಿನ್ನಂಥ ಧರ್ಮದ್ರೋಹಿಗೆ ಹೇಗೆ ಕಲ್ಪನೆಯಾಗಬೇಕು?

ಕಿಶೋ—ರಾಜದ್ರೋಹಿಯಾದವನು ಧರ್ಮದ್ರೋಹಿಯಲ್ಲವೇ?

ಗಣೇ—ನಾನು ರಾಜದ್ರೋಹಿಯಲ್ಲ; ಅತ್ಯಾಚಾರಿಯಾದ ನಶಿರಿತನ ದ್ರೋಹಿಯು ಮಾತ್ರ.

ಕಿಶೋ—ನಶಿರಿತನು ನಿನ್ನ ರಾಜನಲ್ಲವೆ? ಇಂದಿನ ಯುದ್ಧದಲ್ಲಿ ನಿನ್ನ ಹೃದಯದಲ್ಲಿ ನಿನ್ನ ರಾಜನಾರೆಂಬುದನ್ನು ರಕ್ತದಿಂದ ಬರೆದು ತಿಳಿಸುತ್ತೇನೆಂದು ಹೇಳಿ, ತನ್ನ ಸೈನಿಕರಿಗೆ ಇಂಗಿತವನ್ನು ಮಾಡಿದನು. ಕೂಡಲೆ ಅವರು ಅವನನ್ನು ಏಕಕಾಲಕ್ಕೆ ಮುತ್ತಿದರು. ಇಷ್ಟರಲ್ಲಿ ಇಬ್ರಾಹಿಮನು ತನ್ನ ೭ ನೂರು ಜನ ಸೈನಿಕರನ್ನು ತೆಗೆದುಕೊಂಡು ಅಲ್ಲಿಗೆ ಬಂದನು. ಗಣೇಶನಾರಾಯಣನ ಜನರು ತಾನು ಕಳಿಸಿದ ಎರಡು ಗಾಡಿ ಬರ್ಚಿಗಳನ್ನು ನಡುವೇ ಲೂಟಿ ಮಾಡಿದ ಸಂಗತಿಯು ಆತನಿಗೆ ತಿಳಿದ ಕೂಡಲೆ ಅವನು ಒಟ್ಟಾಗಿ ಕೋಟೆಯ ರಕ್ಷಣೆಗೆ ಸ್ವಲ್ಪ ಸಹ ಸೈನ್ಯವನ್ನಿಡದೆ ಎಲ್ಲ ಸೈನ್ಯ ತೆಗೆದುಕೊಂಡು ಬಂದಿದ್ದನು; ಆದರೆ ಗುಡಿಗೆ ಬರುವ ಮಾರ್ಗವು ಅತಿ ಕಿರಿದಾದ್ದರಿಂದ ಒಮ್ಮೆಲೆ ಎಲ್ಲ ಸೈನ್ಯವನ್ನು ಅಲ್ಲಿಗೆ ಒಯ್ಯುವದು ಶಕ್ಯವಿದ್ದಿಲ್ಲ.

ಗಣೇಶನಾರಾಯಣನು ಒಂದು ಕಡೆಯ ರಕ್ಷಣೆಗೆ ಗುಡಿಯ ಮಹಾದ್ವಾರವನ್ನು ಮಧ್ಯದಲ್ಲಿ ಮಾಡಿಕೊಂಡು ಅರ್ಧಚಂದ್ರಾಕಾರವಾಗಿ ಸೈನ್ಯವನ್ನು ನಿಲ್ಲಿಸಿಕೊಂಡು ನಿಂತಿದ್ದನು. ಅವನು ಎರಡು ನೂರು ಜನ ಹಿಂದುಗಳಲ್ಲಿ ಎಲ್ಲರೂ ಯುದ್ಧ ವಿದ್ಯೆಯಲ್ಲಿ ಅಶಿಕ್ಷಿತರು. ತಾನು ಬರುವಾಗ ಕರೆದುಕೊಂಡು ಬಂದ ೩೫ ಜನರು ಮಾತ್ರ ನುರಿತವರು. ಅವರ ಮೇಲೆಯೇ ಆವನ ಅವಲಂಬಿಕೆಯು. ಮಧ್ಯಾಹ್ನದ ಆರು ತಾಸಿನ ವರೆಗೆ ಅವನು ಮುಸಲ್ಮಾನರನ್ನು ಏರಿ ಬರಗೊಡದೆ ಪ್ರತಿಬಂಧ ಮಾಡಿದ್ದನು; ಆದರೆ ಬರಬರುತ್ತ ಹಿಂದೂಜನರು ದಣಿದು ಹತಾಶರಾಗಹತ್ತಿದರು. ಕಡೆಗೆ ಅರ್ಧ

ದಷ್ಟು ಹಿಂದೂಜನರು ಹತಾಶರಾದರು. ಮುಸಲ್ಮಾನರು ಅಲ್ಲಾಹೋ ಅಕಬರ! ಎಂದು ಗರ್ಜನೆ ಮಾಡುತ್ತ ಮೂರು ದಿಕ್ಕಿನಿಂದ ಗಣೇಶನಾರಾಯಣನನ್ನು ಮುತ್ತಿದರು. ಇಬ್ರಾಹಿಮನು ಅವನ ಮೇಲೆ ಏರಿ ಬಂದನು. ಗಣೇಶನಾರಾಯಣನು ಅವನ ಆಕ್ರಮಣವನ್ನು ತಪ್ಪಿಸಿಕೊಂಡು- ಖಾನಸಾಹೇಬ, ನಾನೊಬ್ಬನು ನಿಮ್ಮ ಕೈಸೆರೆಯಾದರೆ ಈ ಯುದ್ಧವು ಶಾಂತವಾಗುವದಷ್ಟೇ? ಎಂದು ಕೇಳಿದನು.

ಇಬ್ರಾ—ಯಾಕೆ, ಜೀವದ ಮೇಲೆ ಇಷ್ಟು ಪ್ರೀತಿಯೇ? ಮರಣಕ್ಕೆ ಅಂಜುವೆಯಾ?

ಗಣೇ—ಜೀವದ ಮಮತೆಯಿದ್ದರೆ ಅತ್ಯಾಚಾರಿಯಾದ ನಶೆರಿತನ ಸೆರೆಯಾಳಾಗಲು ಒಪ್ಪುತ್ತಿದ್ದೆನೇ?

ಇಬ್ರಾ—ಕಾಫರ! ಅರಸನ ನಿಂದೆಯೇ? ನಿಲ್ಲು, ಗೌಡರಾಜ್ಯದಲ್ಲಿಯ ಹಿಂದುಗಳ ಕುಲವನ್ನೇ ನಾಮಶೇಷ ಮಾಡುವೆನು.

ಗಣೇ—ನಿನ್ನಂಥ ಕೋಟಿ ಇಬ್ರಾಹಿಮರು ಕೂಡಿದರೂ ಹಿಂದುಗಳ ನಾಮಶೇಷವು ಅಶಕ್ಯವು. ಹಿಂದುಸ್ಥಾನದಲ್ಲಿ ಹಿಂದೂಜನರ ಹೆಸರು ನಾಮಶೇಷವೇ? ಈ ಮೊದಲು ಎಷ್ಟೋ ಜನ ಘೋರಿ, ಖಿಲಜಿ ನೊದಲಾದ ಹಿಂದೂದ್ವೇಷಿಗಳು ಬಂದು ಹೇಳಲು ಹೆಸರಿಲ್ಲದೆ ಹೋಗಿರುವರು; ಆದರೆ ಹಿಂದುಗಳು ಮಾತ್ರ ಇದ್ದ ಹಾಗೆಯೇ ಇರುವರು. ಇಬ್ರಾಹಿಮ, ದೀಪದ ಹುಳವು ಸೂರ್ಯನಿಗೆ ಸಮವಾದೀತೇ?

ಇಬ್ರಾ—ಯಾವ ಜಾತಿಯು ಈಗ ಇನ್ನೂರು ವರ್ಷಗಳಿಂದ ಅನ್ಯಸಮಾಜದ ಪಾದದಲ್ಲಿ ತಲೆಬೊಗ್ಗಿಸಿಕೊಂಡು ಲಾಂಗೂಲಚಾಲನ ಮಾಡ ಹತ್ತಿರುವದೋ, ಆ ಹಿಂದುಗಳು ಸೂರ್ಯನಿಗೆ ಸಮಾನರು; ಹಾಗು ಅವರನ್ನು ಆಳತಕ್ಕಂಥ ಪಠಾಣರು ದೀಪದ ಹುಳಗಳೇ? ಏನು ಮಾತಾಡುತ್ತಿರುವಿಯೋ ಮೂರ್ಖಾ? ನಿನ್ನ ಮತಿ ಭ್ರಮೆಯಾಗಿದೆ."

ಗಣೇ—ಖಾನಸಾಹೇಬ, ನನ್ನ ಬುದ್ಧಿಭ್ರಂಶವಾಗಿಲ್ಲ. ಹಿಂದುಗಳ ಮನಸ್ಸಿನಲ್ಲಿ ರಾಜ್ಯಾಭಿಲಾಷೆಯಿದ್ದದ್ದಾದರೆ ಸೈಫುದ್ದೀನ, ನಶೆರಿತ ಹಾಗು ಇಬ್ರಾಹಿಮ ಇವರಿಗೆ ಭಾರತದಲ್ಲಿರುವದು ಶಕ್ಯವಾಗುತ್ತಿದ್ದಿಲ್ಲ. ಹಿಂದುಗಳು ತಮ್ಮ ಧರ್ಮ, ಸುಖ, ಶಾಂತಿ ಇಷ್ಟರಿಂದಲೇ ತೃಪ್ತರು. ಈ ಕಾರಣದಿಂದಲೇ ಇಲ್ಲಿ ಅವರು ಮುಸಲ್ಮಾನರಿಗೆ ಆಶ್ರಯ ಕೊಟ್ಟಿರುವರು.

ಇಬ್ರಾ—ಅಹುದು. ಆ ಆಶ್ರಯವನ್ನು ಉದಾರ ಮನಸ್ಸಿನಿಂದ ಕೊಟ್ಟಿರುವಿರಷ್ಟೇ? ಈಗ ಅದರ ಪ್ರತಿಫಲವಾಗಿ ನಾನು ಪ್ರತಿಯೊಬ್ಬ ಹಿಂದುವಿನ ಮನೆಗೆ ಬೆಂಕಿಯನ್ನು ಹಚ್ಚಿ, ಅವರ ಹೆಂಡಿರು-ಮಕ್ಕಳನ್ನು ಎಳೆದು ತಂದು ನಮ್ಮ ದಾಸಿಯರನ್ನಾಗಿ ಮಾಡಿಕೊಳ್ಳುವೆವು. ಹಿಂದೂ ದೇವರ ಮೂರ್ತಿಗಳನ್ನು ನಮ್ಮ ಮಸೀದೆಯ ಪಾವಟಿಗೆಗಳನ್ನಾಗಿ ಮಾಡಿ ಕೊಳ್ಳುವೆವು. ಸಾಧ್ಯವಿದ್ದರೆ ರಕ್ಷಣೆ ಮಾಡಿಕೊಳ್ಳಲಿ.

ಗಣೇಶನಾರಾಯಣನ ಕಣ್ಣುಗಳು ಕೆಂಡದಂತಾದವು. ಅವನು ಕ್ರೋಧ ಭರದಿಂದ—ಇಬ್ರಾಹಿಮ, ಸಾವಿರಾರು ನಶೆರಿತಶಹ ಇಬ್ರಾಹಿಮಖಾನರ ಶಿರಚ್ಛೇದವನ್ನು ಮಾಡುವ ಪ್ರಸಂಗ ಬಂದರೂ ರಕ್ತಪಾತಕ್ಕೆ ಅಸಹ್ಯ ಪಡದೆ, ಕೊಲೆ ಮಾಡಿ ನಾವು ನಮ್ಮ ಧರ್ಮವನ್ನೂ ಸತ್ವವನ್ನೂ ರಕ್ಷಿಸಿ ಕೊಂಡೇ ತೀರತಕ್ಕವರು. ಈ ಗಣೇಶನಾರಾಯಣನು ಜೀವಂತನಿರುವ ವರೆಗೆ ಹಿಂದೂ ದೇವತೆಗಳ ಅಪಮಾನವೇ?

ಇಬ್ರಾ—ನೀನು ಇನ್ನೆಷ್ಟು ಗಳಿಗೆ ಬದುಕಿರುವೆನೆಂದು ತಿಳಿದಿರುವೆ?

ಗಣೇ—ನಾನು ಬದುಕಿರುವದೇ? ಕೇಳು. ಈ ದೇವಿಯ ಮುಂದೆ ಪ್ರತಿಜ್ಞೆ ಮಾಡುವದೇನೆಂದರೆ, ಇಬ್ರಾಹಿಮಖಾನನನ್ನು ಕೊಲ್ಲುವ ವರೆಗೆ ನಾನು ಸಾಯುವದಿಲ್ಲ.

ಇಬ್ರಾ—ಒಳ್ಳೇದು, ನೋಡೋಣ; ಯಾರು ಯಾರನ್ನು ಕೊಲ್ಲುವ ರೆಂಬದನ್ನು.

ಇಬ್ಬರೂ ಆವೇಶದಿಂದ ಕಾದತೊಡಗಿದರು. ಇಬ್ರಾಹಿಮನಿಗೆ ತನ್ನ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವದೇ ಕಠಿಣವಾಯಿತು. ಅಂಥವನು ಗಣೇಶನಾರಾಯಣನನ್ನು ಕೊಲ್ಲುವ ಬಗೆ ಹೇಗೆ? ಮುಂದೆ ಅರೆಕ್ಷಣದಲ್ಲಿ ಗಣೇಶನಾರಾಯಣನು ಇಬ್ರಾಹಿಮನ ಖಡ್ಗವನ್ನು ಮುರಿದೊಗೆಯಲು, ಅವನು ನಿಶ್ಶಸ್ತ್ರನಾದನು. ಆಗ ಗಣೇಶನಾರಾಯಣನು: ಇಬ್ರಾಹಿಮ, ಈಗ ನಿನ್ನನ್ನು ಯಾರು ರಕ್ಷಿಸುವರು? ಎಂದನು.

ಇಬ್ರಾ—ನಾನು ನಿನ್ನ ಹತ್ತರ ಪ್ರಾಣಭಿಕ್ಷೆಯನ್ನು ಬೇಡತಕ್ಕವನಲ್ಲ. ಬೇಕಾದದ್ದನ್ನು ಮಾಡು. ತಮ್ಮ ಸೇನಾಪತಿಯ ಅವಸ್ಥೆಯನ್ನು ಕಂಡು ಪಠಾಣರು ನಾಲ್ಕೂ ದಿಕ್ಕಿನಿಂದ ಗಣೇಶನಾರಾಯಣನನ್ನು ಮುತ್ತಿದರು. ದಣಿದಂಥ ಹಿಂದುಗಳಿಗೆ ಗಣೇಶನಾರಾಯಣನ ಸಹಾಯಕ್ಕೆ ಹೋಗುವದು

ಅಶಕ್ಯವಾಯಿತು. ನಾಲ್ಕೂ ದಿಕ್ಕಿನಿಂದ ಗಣೇಶನಾರಾಯಣನ ಮೇಲೆ ಬಾಣಗಳ ಸುರಿಮಳೆಯು. ಅವನ ಕವಚವು ಛಿನ್ನ ವಿಚ್ಛಿನ್ನವಾಯಿತು. ಅನೇಕ ಕಡೆಗೆ ಗಾಯಗಳಾಗಿ ರಕ್ತವು ಸುರಿಯಹತ್ತಿತು. ಹಿಂದೂ ಜನರಲ್ಲಿ ೪೦-೫೦ ಜನರು ಮಾತ್ರ ಜೀವಂತರಿದ್ದು, ತಮ್ಮ ಕೈಯಿಂದಾದಷ್ಟು ಸಾಹಸ ಮಾಡಿ ಕಾದಹತ್ತಿದರು. ಇನ್ನು ತನ್ನ ಮರಣವು ಸಮೀಪಿಸಿ ತೆಂದು ಗಣೇಶನಾರಾಯಣನು ತಿಳಿದು, ತನ್ನ ಪ್ರತಿಜ್ಞಾರಕ್ಷಣೆಯ ಸಲು ವಾಗಿ ಇಬ್ರಾಹಿಮನನ್ನು ಶೋಧಿಸತೊಡಗಿದನು. ಯುದ್ಧಮಾಡಿ ದಣಿದ ಗಣೇಶನಾರಾಯಣನ ಹಸ್ತಗಳಲ್ಲಿಯ ಸಾಮರ್ಥ್ಯವು ಕಡಿಮೆಯಾಗಿ ಕೈಗಳು ನಡುಗಹತ್ತಿದವು. ಕೈಯೊಳಗಿನ ಖಡ್ಗವು ತನ್ನಷ್ಟಕ್ಕೆ ತಾನೇ ಕಳಚಿ ಬೀಳುವ ಪ್ರಸಂಗಬಂತು. ಈ ಸಂಧಿಯನ್ನು ಸಾಧಿಸಿ, ಇಬ್ರಾ ಹಿಮನು ತನ್ನ ಕೈಯೊಳಗಿನ ಶೂಲವನ್ನು ಎತ್ತಿ ಗಣೇಶನಾರಾಯಣನ ವಕ್ಷ ಸ್ಥಳಕ್ಕೆ ಒಗೆಯಲು ಸಿದ್ಧನಾದನು. ಅದು ಕ್ಷಣದಲ್ಲಿ ಗಣೇಶನಾರಾಯ ಣನ ವಕ್ಷಸ್ಥಳವನ್ನೇ ಬೇಧಿಸತಕ್ಕದ್ದು; ಆದರೆ ಅಷ್ಟರಲ್ಲಿ ಆಜಾನಬಾಹು ವಾದ ಜೋನಾಬಖಾನನು ಬಂದು ಅವನನ್ನು ತೆಕ್ಕೆಬಿದ್ದನು.

ಅಕಸ್ಮಾತ್ತಾಗಿ ಒದಗಿದ ಈ ದೃಶ್ಯವನ್ನು ಕಂಡು ಪಠಾಣರು ಹತಾಶ ರಾದರು. ಜೋನಾಬಖಾನನನ್ನು ನೋಡಿದ ಕೂಡಲೆ ಹಿಂದುಗಳು ಜಯ ಜಯಕಾರವನ್ನು ಮಾಡಿದರು. ಜೋನಾಬಖಾನನು ಹಿಂದುಗಳ ಪಕ್ಷಕ್ಕೆ ಕೂಡಿದ್ದನ್ನು ನೋಡಿ, ಪಠಾಣರು ಅವನನ್ನು ಅಸೂಯೆಯ ದೃಷ್ಟಿಯಿಂದ ನೋಡತೊಡಗಿದರು. ಆಗ ಇಬ್ರಾಹಿಮನು ಅವನನ್ನು ಕುರಿತು:—ಖಾನ ಸಾಹೇಬ, ನೀವು ರಾಜಧಾನಿಗೆ ಹೋಗುವದಕ್ಕೆ ಅಪ್ಪಣೆಯನ್ನು ಕೇಳಿ ದವರು ಇಲ್ಲಿಗೇಕೆ ಬಂದಿರಿ? ಎಂದನು.

ಜೋ—ನಾನು ರಾಜಧಾನಿಗೆ ಹೋಗತಕ್ಕವನೇ: ಆದರೆ ಹಾದಿಯಲ್ಲಿ ಮುಸಲ್ಮಾನರು ಹಿಂದೂ ಪ್ರಜೆಗಳ ಮನೆಗಳ ಲೂಟಿಯನ್ನು ನಡೆಯಿಸಿರುವ ಸುದ್ದಿಯನ್ನು ಕೇಳಿ, ಪಟ್ಟಣದಲ್ಲಿ ಹೋಗಿದ್ದೆನು. ತಿರುಗಿ ಬರುವಾಗ ಇಲ್ಲಿ ಒಂದು ನೋಡಲು....

ಇಬ್ರಾ—ಯಾವನು ಕೈದಿಯೋ, ಅವನಿಗೆ ಈ ಎಲ್ಲ ಕಾರಭಾರವೇಕೆ? ನೀನು ಇಲ್ಲಿಗೆ ಬಂದದ್ದು ಅಯೋಗ್ಯವು!

ಜೋ—ಇಬ್ರಾಹಿಮ, ಪಠಾಣರಾಜ್ಯದ ತಳಹದಿಯನ್ನೇ ಸಡಿಲು

ಮಾಡುತ್ತಿರುವ ನಿಮ್ಮ ಕಾರ್ಯವನ್ನು ನೋಡಿ ಮನಸ್ಸಿಗೆ ಬಹಳ ವ್ಯಥೆಯಾಗುತ್ತಿರುವದು. ಈ ದೃಶ್ಯವನ್ನು ನೋಡಿ ನನ್ನಲ್ಲಿ ಯೋಗ್ಯಾಯೋಗ್ಯ ವಿಚಾರಮಾಡುವ ಸಾಮರ್ಥ್ಯವೇ ಉಳಿಯಲಿಲ್ಲ.

ಇಬ್ರಾ—ನೀವು ಸೈಪುದ್ದೀನ ನವಾಬನ ಪ್ರೀತಿಯವರು. ಉಳಿದವರು ಈ ಪ್ರಕಾರ ಮಾಡಿದ್ದರೆ, ನಾನು ಆಗಲೆ ಅವರನ್ನು ಯಮಸದನಕ್ಕೆ ಅಟ್ಟುತ್ತಿದ್ದೆನು.

ಜೋ—ಅದು ಏನೇ ಇರಲಿ. ಇಬ್ರಾಹಿಮಾ, ನೀವು ಈ ಗುಡಿಯು ಧ್ವಂಸ ಮಾಡಲು ಕಾರಣವೇನು? ಈ ನಿರ್ಬಲ ಹಿಂದುಗಳ ನಾಶದಿಂದ ಪಠಾಣರಾಜ್ಯವು ಸುರಕ್ಷಿತವಾಗುವದೇ?

ಇಬ್ರಾ—ರಾಜದ್ರೋಹಿಗಳಿಗೆ ಯೋಗ್ಯ ಶಿಕ್ಷೆಯು ಆಗಲೇ ಬೇಕು.

ಜೋ—ದೇಶದಲ್ಲಿ ಎಲ್ಲರೂ ರಾಜದ್ರೋಹಿಗಳಾದರೆ ಹೇಗೆ ಮಾಡುವಿರಿ?

ಇಬ್ರಾ—ದೇಶದಲ್ಲಿಯ ಎಲ್ಲರನ್ನೂ ಕೊಲೆ ಮಾಡುವೆವು.

ಜೋ—ಎಲ್ಲರನ್ನೂ ಕೊಂದರೆ, ಅರಸರಾಗಿ ನೀವು ಯಾರನ್ನು ಆಳುವಿರಿ?

ಇಬ್ರಾ—ಆ ವಿಚಾರವು ರಾಜನದು, ಸೈನಿಕರಾದ ನಮ್ಮದಲ್ಲ.

ಜೋ—ಇಬ್ರಾಹಿಮ, ಈ ಕೆಲಸವನ್ನು ಇನ್ನೆರಡು ದಿವಸ ತಡೆ. ಅಷ್ಟರಲ್ಲಿ ನಾನು ನವಾಬನ ಕಡೆಗೆ ಹೋಗಿ ಅವನಿಗೆ ತಿಳಿಯ ಹೇಳಿ, ಈ ಕಾರ್ಯವನ್ನು ಮಾಡಬಾರದಾಗಿ ಆಜ್ಞೆ ಮಾಡಿಸುವೆನು.

ಇಬ್ರಾ—ಖಾನಸಾಹೇಬ, ಈಗ ಮಾತಿನಲ್ಲಿ ಹೊತ್ತುಗಳೆಯುವಂತಿಲ್ಲ. ನೀವು ಆ ಕಡೆಗೆ ಹೋಗಿರಿ.

ಜೋ—ನಾನು ಇಲ್ಲಿಯೇ ನಿಲ್ಲತಕ್ಕವನು; ನಿಮ್ಮ ಕಾರ್ಯವನ್ನು ನೀವು ಮಾಡಿರಿ.

ಇಬ್ರಾ—ಪಠಾಣರ ಕೈಯಿಂದ ಪಠಾಣರ ಕೊಲೆಯೇ! ಉಪಾಯವಿಲ್ಲ. ನಮ್ಮ ಕಡೆಗೆ ಅಪರಾಧವಿಲ್ಲ. ಅಲ್ಲಾನು ನೋಡುತ್ತಿರುವನು, ಎಂದು ಶೂಲವನ್ನು ಮೇಲಕ್ಕೆತ್ತಿದನು.

ಜೋನಾಬಖಾನನು ತನ್ನ ಎದೆಯನ್ನು ಮುಂದೆ ಮಾಡಿ ಎರಡೂ ಕೈಗಳನ್ನು ಮೇಲಕ್ಕೆತ್ತಿ ಉಚ್ಚಸ್ವರದಿಂದ—'ಖಾನಸಾಹೇಬ, ನಿರ್ಭಯದಿಂದ ಶೂಲವನ್ನು ಒಗೆ. ನಾನು ಪಠಾಣರಾಜ್ಯದ ಹಿತಕ್ಕಾಗಿಯೇ ದೇಹ

ವಿಟ್ಟಿನೆಂಬುದು ತಾನಾಗಿ ಮುಂದೆ ಪಠಾಣರಿಗೆ ತಿಳಿಯುವದು. ನಾನು ಸತ್ತನಂತರ ನನ್ನ ಹೃದಯಪೀಠವನ್ನು ಪರೀಕ್ಷಿಸಿ ನೋಡು. ಪ್ರತಿಯೊಂದು ನರಗಳ ಮೇಲೆ ಅಲ್ಲಾನ ಹೆಸರು, ಪಠಾಣರ ಹೆಸರು ಮೂಡಿರುವದು! ಎಂದನು.

ಇಬ್ರಾಹಿಮನು ನಿಜವಾಗಿಯೂ ಶೂಲವನ್ನೆಸೆದನು. ಅದು ಜೋನಾಬ ಖಾನನ ನಾಶಮಾಡತಕ್ಕದ್ದೇ; ಆದರೆ ಅಷ್ಟರಲ್ಲಿ ಗಣೇಶನಾರಾಯಣನು ಜೋನಾಬಖಾನನನ್ನು ಎತ್ತಿ ಹಿಂದುಗಳ ಗುಂಪಿನಲ್ಲಿ ತೂರಿ, ಆ ಶೂಲದ ಗುರಿಯನ್ನು ತಪ್ಪಿಸಿ ನಿಂತು, ತನ್ನ ಬಲಗೈಯ್ಯಲ್ಲಿಯ ಖಡ್ಗವನ್ನು ಎತ್ತಿ ಆವೇಶದಿಂದ ಇಬ್ರಾಹಿಮನ ಮೇಲೆ ಬಿದ್ದನು. ಕೂಡಲೆ ಪಠಾಣರು ಗಣೇಶ ನಾರಾಯಣನನ್ನು ಮುತ್ತಿದರು; ಆದರೆ ಅಷ್ಟರಲ್ಲಿ ಯಾರಿಗೂ ಕಾಣದಂತೆ ಗುಡಿಯ ಹಿಂದಿನ ಭಾಗದಿಂದ ಸುಯ್ ಸುಯ್ ಎಂದು ಬಾಣಗಳ ಮಳೆಯು ಒಂದೇಸವನೆ ಆಗಹತ್ತಿತು. ಹಾಗೆ ಹಿಂದಿನಿಂದ ಬಾಣಗಳನ್ನು ಹೊಡೆದವರು ತ್ರಿಪುರಾದೇವಿಯು ಸೈನ್ಯಸಹಿತವಾಗಿ ರಾಜನಿಗೆ ಸಹಾಯ ಮಾಡಲು ಬಂದವಳು ಗುಡಿಯ ಹಿಂದಿನ ಕಾಡಿನಲ್ಲಿದ್ದು ಬಾಣಗಳನ್ನು ಹೊಡೆಯ ಲಾರಂಭಿಸಿದಳು. ಹಿಂದೂ ಮುಸಲ್ಮಾನರಿಬ್ಬರೂ ಯುದ್ಧದಲ್ಲಿ ತೊಡಗಿದ್ದ ರಿಂದ ಯಾರೂ ಆ ಕಡೆಗೆ ಲಕ್ಷ್ಯಕೊಡಲಿಲ್ಲ. ಅದನ್ನು ಬೇರೆಯವರಾರೂ ನೋಡದಿದ್ದರೂ ಮನೋಹರನು ಮಾತ್ರ ನೋಡಿದ್ದನು. ಅವನು ಅಲ್ಲಿಂದ ಓಡುತ್ತ ಹೋಗಿ ರಾಣಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಆಗ ತ್ರಿಪುರಾದೇವಿಯು "ಹಿಂದೂಜನರ ಶಕ್ತಿಯು ಕಡಿಮೆಯಾಗಿರುವದಲ್ಲವೆ?" ಎಂದು ಕೇಳಲು,

ಮನೋ—"ತಾಯೀ, ತಾವು ಒಳ್ಳೇ ಯೋಗ್ಯ ವೇಳೆಗೆ ಬಂದಿರು ವಿರಿ. ಈಗ ಮಾತಿಗೆ ಅವಕಾಶವಿಲ್ಲವೆ"ಂದನು. ಆಗ ತ್ರಿಪುರಾದೇವಿಯು ತನ್ನ ಸೈನಿಕರನ್ನು ಕುರಿತು:—"ಪ್ರಿಯ ಸೈನಿಕರೇ, ಮುಂದೆ ಲಕ್ಷ್ಯವಿಟ್ಟು ನೋಡಿರಿ. ನವಾಬನ ಸೈನಿಕರು ಗುಡಿಯನ್ನು ನೆಲಸಮ ಮಾಡಲು ಬಂದಿರು ವರು. ನಿಶ್ಶಸ್ತ್ರರಾದ ಸ್ವಲ್ಪ ಜನ ಹಿಂದುಗಳು ಮಾತ್ರ ಗುಡಿಯ ರಕ್ಷಣೆಗೆ ಹೆಣಗುತ್ತಿರುವರು. ಅಕೋ, ಅತ್ತ ನೋಡಿರಿ. ನಿಮ್ಮ ರಾಜರು ಸಾವಿರಾರು ಪಠಾಣರ ಮಧ್ಯದಲ್ಲಿ ನಿಂತು ಒಬ್ಬರೇ ಹೇಗೆ ಯುದ್ಧ ಮಾಡುತ್ತಿರುವರು? ಇದನ್ನು ನೋಡಿ ಸುಮ್ಮನೆ ನಿಲ್ಲತಕ್ಕವರೋ, ಅಥವಾ ಪ್ರಾಣಭಯದಿಂದ

ಪಲಾಯನ ಮಾಡತಕ್ಕವರೋ? ವಿಚಾರ ಮಾಡಿರಿ. ಯಾರಿಗೆ ನವಾಬನ ವಿರುದ್ಧ ಶಸ್ತ್ರಹಿಡಿಯುವ ಮನಸ್ಸಿಲ್ಲವೋ, ಅವರು ತಮ್ಮ-ತಮ್ಮ ಮನೆಗಳಿಗೆ ತಿರುಗಿ ಹೋಗಬಹುದು. ನಮ್ಮ ಸೈನಿಕರಲ್ಲಿ ಹಿಂದು-ಮುಸಲ್ಮಾನರೆಂಬ ಭೇದಭಾವವಿಲ್ಲ. ಕರ್ತವ್ಯವನ್ನು ಸ್ಮರಿಸಿ ಹಿಂದೂ ಧರ್ಮ, ದೇವರು, ಮಾನ ಇವುಗಳ ರಕ್ಷಣೆಯು ಅವಶ್ಯವೆಂದು ತಿಳಿದವರು ಮಾತ್ರ ಯುದ್ಧ ಮಾಡಿರಿ," ಎಂದು ತನ್ನ ಆನೆಯನ್ನು ಮುಂದೆ ಸಾಗಿಸಿದಳು. ರಾಣಿಯು ಆನೆಯ ಮೇಲೆ ಕುಳಿತು ಆ ಅಡವಿಯನ್ನು ದಾಟಿ ಯುದ್ಧದ ಬೈಲಿಗೆ ಬಂದಳು. ಅವಳ ಎಡ-ಬಲದಲ್ಲಿ ಲಾಠಿಗಳನ್ನು ಧರಿಸಿದ ಸಾವಿರಾರು ಹಿಂದೂ ಜನರಿದ್ದರು. ಅವಳು ತನ್ನ ಸೈನಿಕರನ್ನು ಕುರಿತು: "ನನ್ನ ವೀರಪುತ್ರರೇ, ಎದುರಿಗೆ ಹಿಂದುಗಳ ಪುಣ್ಯತೀರ್ಥವಿದೆ. ನಾನು ನಿಮಗೆ ತೀರ್ಥ-ಕ್ಷೇತ್ರಗಳನ್ನು ತೋರಿಸುವೆನೆಂದು ಹೇಳಿ ಕರೆದುಕೊಂಡು ಬಂದಿರುವೆನಷ್ಟೇ? ಈ ರಣ ಕ್ಷೇತ್ರವೇ ಆ ಪವಿತ್ರ ತೀರ್ಥವು. ಇಂಥ ಪವಿತ್ರ ತೀರ್ಥವು ಹಿಂದುಸ್ಥಾನ ದಲ್ಲೆಲ್ಲಿಯೂ ಇಲ್ಲ," ಎಂದಳು. ಆಗ ಎಲ್ಲರ ಲಕ್ಷ್ಯವು ರಾಣಿಯವರ ಕಡೆಗೆ ಹೊರಳಿತು. ಆನೆಯ ಮೇಲೆ ಬೆಳ್ಳಿಯ ಅಂಬಾರಿಯಲ್ಲಿ ಕುಳಿತ ತ್ರಿಪುರಾರಾಣಿಯನ್ನು ನೋಡಿದರೆ ರಾಕ್ಷಸರ ಸಂಹಾರಕ್ಕೆ ಹೊರಟ ಆದಿ ಶಕ್ತಿಯಂತೆ ಎಲ್ಲರಿಗೂ ಭಾಸವಾಗಿ, ಎಲ್ಲರಲ್ಲಿಯ ಆತ್ಮಸಾಮರ್ಥ್ಯವೂ ಧರ್ಮಾಭಿಮಾನವೂ ಉಕ್ಕೇರಿದವು. ಎಲ್ಲ ಹಿಂದುಗಳು ಅವಳನ್ನು ನೋಡಿ ಭಕ್ತಿಯಿಂದ ನಿಂತಲ್ಲಿಯೇ ಪ್ರಣಾಮವನ್ನು ಮಾಡಿದರು. ಮುಸಲ್ಮಾನರು ಆ ದೈವೀ ತೇಜಸ್ಸನ್ನು ನೋಡಿ ಕ್ಷಣಕಾಲ ಆತ್ಮವಿಸ್ಮೃತಿಯನ್ನು ಹೊಂದಿ ಬೆಪ್ಪಗೆ ನಿಂತುಕೊಂಡರು. ರಾಣಿಯು ರಾಜನ ಸಮೀಪಕ್ಕೆ ಬಂದು ತಾನು ಆನೆಯಿಂದ ಇಳಿಯದೆ, ಕುಳಿತಲ್ಲಿಯೇ ಶಿರಬಾಗಿಸಿ ಪತಿಗೆ ವಂದನೆ ಮಾಡಿ ದಳು. ನಂತರ ಅವಳು:—"ರಾಜಾ, ನಿನ್ನ ಸೈನಿಕರನ್ನು ನಿನಗೆ ಒಪ್ಪಿಸಿರು ವೆನು," ಎಂದಂದಳು.

ಆಕಸ್ಮಾತ್ತಾಗಿ ೨-೩ ಸಾವಿರ ಹಿಂದೂ ಜನರು ಅಲ್ಲಿಗೆ ಬಂದ ಕೂಡಲೆ ಪಠಾಣರು ಧೈರ್ಯಗುಂದಿದರು. ಜೋನಾಬಖಾನನು ಇನ್ನು ತನ್ನ ಅವಶ್ಯಕತೆಯಿಲ್ಲೆಂದು ಅಲ್ಲಿಂದ ಹೊರಟು ಹೋದನು.

ಆಗ ಗಣೇಶನಾರಾಯಣನು—ಇಬ್ರಾಹಿಮಖಾನ, ನಾವು ಕಾರಣ ವಿಲ್ಲದೆ ನರಹತ್ಯವನ್ನು ಮಾಡಲು ಬರುವದಿಲ್ಲ. ದೇವೀ ಗುಡಿಯ ಸಂರಕ್ಷ

ಣೆಯೇ ನಮ್ಮ ಉದ್ದೇಶವು. ಕಾರಣ ನಿಮಗೆ ಮಾರ್ಗವನ್ನು ಕೊಡುತ್ತೇವೆ. ನೀವು ಓಡಿ ಹೋಗತಕ್ಕದ್ದು, ಎಂದನು.

ಇಬ್ರಾ—ಪಠಾಣರು ಓಡಿ ಹೋಗತಕ್ಕವರಲ್ಲ. ರಾಜದ್ರೋಹಿಗಳಿಗೆ ಯೋಗ್ಯ ಶಿಕ್ಷೆಯನ್ನು ವಿಧಿಸತಕ್ಕವರು.

ಗಣೇ—ಶಿಕ್ಷೆಯನ್ನು ಹಿಂದಿನಿಂದ ವಿಧಿಸಿರಿ; ಆದರೆ ಸದ್ಯಕ್ಕೆ ಓಡಿ ಹೋಗಿರಿ.

ಇಬ್ರಾ—ಗಣೇಶನಾರಾಯಣಾ, ನಾವು ಜೀವದಾನ ಬೇಡತಕ್ಕವರಲ್ಲ. ಇಂದು ಒಂದು ವೇಳೆ ನಾವು ಸುಮ್ಮನೆ ಹೋದರೂ, ನಾಳೆ ಹತ್ತು ಸಾವಿರ ಜನರು ಬಂದು ಈ ಗುಡಿಯನ್ನು ನಾಶಮಾಡತಕ್ಕವರೇ.

ಗಣೇಶ—ಸಾಧ್ಯವಿದ್ದರೆ ಹಾಗೆಯೇ ಮಾಡಬಹುದು.

ಕಿಶೋರಿಮೋಹನನು ಈ ಮೊದಲೇ ಇಬ್ರಾಹಿಮನ ಹಿಂದೆ ಹೋಗಿ ನಿಂತಿದ್ದನು. ಅವನು ಇಬ್ರಾಹಿಮನನ್ನು ಕುರಿತು:-ಕಿಲ್ಲೇದಾರ ಸಾಹೇಬ, ಈಗ ನಾವು ಇಲ್ಲಿಂದ ಹೋಗತಕ್ಕದ್ದೇ ಉಚಿತವಾಗಿದೆ.

ಇಬ್ರಾ—ಏನು ಏನೆಂದಿರಿ?

ಕಿಶೋ—ಈಗ ನಾವು ಹೋಗತಕ್ಕದ್ದೇ ಯೋಗ್ಯವು.

ಇಬ್ರಾ—ಓಡಿ ಹೋಗಬೇಕೇ?

ಕಿಶೋ-ಓಡಿ ಹೋಗದೆ ಇಲ್ಲಿ ಇದ್ದು ಪ್ರಾಣ ಕಳೆದುಕೊಳ್ಳಬೇಕೇನು?

ಇಬ್ರಾ—ಪ್ರಾಣ ಹೋದರೂ ಚಿಂತೆ ಇಲ್ಲ. ಓಡಿ ಹೋಗಿ ನಾನು ಪಠಾಣರ ಕೀರ್ತಿಗೆ ಕಲಂಕ ತರುವವನಲ್ಲ.

ಕಿಶೋ—ತಾವು ಪ್ರಾಣ ಕೊಡಬಹುದು; ಆದರೆ ನಾನು ಮಾತ್ರ ಹೋಗತಕ್ಕವನೇ.

ಇಬ್ರಾ—ನೀವು ಹೋಗಬಹುದು; ಆದರೆ ನಿಮ್ಮ ೨೦೦ ಜನರನ್ನು ಮಾತ್ರ ಇಲ್ಲಿಯೇ ಬಿಟ್ಟು ಹೋಗತಕ್ಕದ್ದು.

ಕಿಶೋ-"ಸುಮ್ಮನೆ ಸೈನ್ಯದ ನಾಶದಿಂದ ಫಲವೇನು?" ಎಂದಂದು. ತನ್ನ ಸೈನ್ಯವನ್ನು ತೆಗೆದುಕೊಂಡು ಹೊರಡುವ ಪ್ರಯತ್ನಕ್ಕೆ ಹತ್ತಿದನು; ಆದರೆ ರಾಣಿಯ ಸೈನಿಕರು ಅವನ ಮಾರ್ಗ ಕಟ್ಟಿದರು. ಆಗ ಅವನು ತನ್ನ ಹತ್ತರ ಇದ್ದ ಮನೋಹರನನ್ನು ಕುರಿತು—ಮನೂ, ಈಗ ಉಪಾಯವೇನು?

ಮನೋ—ಅದಕ್ಕೇಕೆ ಚಿಂತೆಯು? ನೀವು ನನ್ನ ಹಿಂದಿನಿಂದ ಬರಬೇಕು, ಎಂದು ಕೌಶಲ್ಯದಿಂದ ಅವನನ್ನು ಪಾರು ಮಾಡಿಕೊಂಡು ಹೋದನು; ಆದರೆ ಅವನ ಸೈನಿಕರು ಮಾತ್ರ ಅಲ್ಲಿಯೇ ಉಳಿದರು.

ಮನೋಹರನು ಜಯ ಗಣೇಶ ಮಹಾರಾಜಕೀ ಜಯ! ಎಂದು ಒದರುತ್ತ ಮುಂದೆ ನಡೆದದ್ದರಿಂದ, ಅವನೂ ಕಿಶೋರಿಮೋಹನನೂ ಅಲ್ಲಿಂದ ಪಾರಾಗಿಹೋದರು.

ಇಷ್ಟರಲ್ಲಿ ಚತುರ ಇಬ್ರಾಹಿಮನು ಚಪಲತನದಿಂದ ಶೂಲವನ್ನು ಒಗೆಯಲು, ಅದು ಗಣೇಶನಾರಾಯಣನ ಪಕ್ಕೆಗೆ ಬಡೆಯಿತು. ಕೂಡಲೆ ಅವನು ಕುದುರೆಯ ಮೇಲಿಂದ ನೆಲಕ್ಕೆ ಬಿದ್ದನು. ಇಬ್ರಾಹಿಮನು ಆ ಕೂಡಲೆ ಅವನನ್ನು ಎತ್ತಿ, ಕುದುರೆಯ ಮೇಲೆ ಕೂಡ್ರಿಸಿಕೊಂಡು ದುರ್ಗಪ್ರವೇಶ ಮಾಡಿದನು. ಹಿಂದುಗಳಿಗೆ ಜಯವಾದರೂ ಗಣೇಶನಾರಾಯಣನು ಶತ್ರುಗಳ ಕೈವಶವಾದ್ದರಿಂದ, ಅವರು ಬಹಳೇ ನಿರುತ್ಸಾಹಗೊಂಡರು.

## (೨೧)

ನವಾಬ ಸೈಫುದ್ದೀನನು ಬೇನೆಯಿಂದ ದಿನದಿನಕ್ಕೆ ಹಣ್ಣಾಗುತ್ತ ನಡೆದಿದ್ದನು. ಅವನಿಗೆ ತನ್ನ ಜೀವನದ ಬಗ್ಗೆ ಸಂಶಯವುಂಟಾಗಿತ್ತು. ಅವನು ತನ್ನ ಕೋಣೆಯಲ್ಲಿಯ ಹಸ್ತಿದಂತ ಪಲ್ಲಂಗದ ಮೇಲೆ ಕುಳಿತಿದ್ದನು. ಅವನ ಎದುರಿಗೆ ಒಂದು ಕೋಚಿನ ಮೇಲೆ ಹಕೀಮನು ಕುಳಿತಿದ್ದನು. ಸೈಫುದ್ದೀನನು ಹಕೀಮನನ್ನು ಕುರಿತು—ಹಕೀಮ, ಇನ್ನು ನಾನೆಷ್ಟು ದಿವಸ ಬದುಕುವೆನು? ಎಂದನು.

ಹಕೀಮ—ಸುಲ್ತಾನಸಾಹೇಬ, ತಮ್ಮ ಪ್ರಶ್ನೆಗೆ ಉತ್ತರವನ್ನು ಕೊಡಲಿಕ್ಕೆ ದೇವರೇ ಸಮರ್ಥನು!

ಸೈಫು—ಉತ್ತರವು ನಿನಗೆ ಶಕ್ಯವಿಲ್ಲವೋ? ಹಾಗಾದರೆ ನಿನಗೆ ವೈದ್ಯನೆಂದು ಯಾಕೆ ಅನ್ನಬೇಕು?

ಹಕೀಮ—ನಾವು ಔಷಧಗಳನ್ನು ಮಾತ್ರ ಕೊಡಬಲ್ಲವರು; ಜನನ ಮರಣಗಳನ್ನು ಹೇಳುವದು ನಮ್ಮಿಂದ ಸಾಧ್ಯವಿಲ್ಲ.

ಸೈ—ನಾನು ರೋಗಿಯಿದ್ದು, ನೀವು ನನಗೆ ಚಿಕಿತ್ಸೆಯನ್ನು ನಡೆಯಿಸಿರುವಿರಲ್ಲವೇ? ಅಂದಬಳಿಕ ನೀವು ಇನ್ನೆಷ್ಟು ದಿವಸಕ್ಕೆ ನನಗೆ ಗುಣ ಮಾಡುವಿರಿ?

ಹಕೀಮ— ಹುಜೂರ, ನಾವು ಶಕ್ಯವಿದ್ದಷ್ಟು ಪ್ರಯತ್ನವನ್ನು ಮಾಡುತ್ತೇವೆ.

ಸೈ—ನನಗೆ ಗುಣವಾಗಲು ಶಕ್ಯವಿರುವದೋ ?

ಹಕಿ—ಜಹಂಪನಾಹ..

ಸೈ—ನಿಜವಾದ ಅಭಿಪ್ರಾಯವನ್ನು ಮಾತ್ರ ಹೇಳಿರಿ. ಸುಮ್ಮನೆ ಸಮಾಧಾನಪಡಿಸುವ ಮಾತುಗಳನ್ನು ಹೇಳಬೇಡಿರಿ.

ಹ—ತಮ್ಮ ರೋಗವು ಕಠಿಣವಾದದ್ದು, ನಮಗೆ ಸಾಧ್ಯವಲ್ಲದ್ದು.

ಸೈಫುದ್ದೀನನು ದೀರ್ಘವಾದ ನಿಟ್ಟುಸಿರು ಬಿಟ್ಟು—ನಾನು ಇನ್ನೆಷ್ಟು ದಿವಸ ಬದುಕುವ ಸಂಭವವಿರುವದು ? ಎಂದನು.

ಹಕಿ—ಅದನ್ನು ನಿಶ್ಚಯವಾಗಿ ಹೇಳಲು ಬರುವಂತಿಲ್ಲ; ಆದರೂ ೮-೧೦ ದಿವಸ ಬದುಕಬಹುದು; ಪ್ರಸಂಗವಶಾತ್ ಒಂದು ತಿಂಗಳು ಸಹ ಬದುಕಬಹುದು.

ಸೈ-ಒಂದು ವೇಳೆ ನಾಳೆ-ನಾಡದು ಸಹ ಮರಣ ಹೊಂದಬಹುದಲ್ಲವೇ?

ಹಕೀ—ತಾವು ಬಲ್ಲವರೇ ಇರುವಿರಿ. ತಮಗೆ ಹೆಚ್ಚು ಹೇಳುವದೇನು?

ಸೈಫುದ್ದೀನನು ಕ್ಷಣಕಾಲ ಸುಮ್ಮನಿದ್ದು ನಂತರ "ಹಕೀಮ ಸಾಹೇಬ, ನನಗೆ ರಾಜ್ಯಕಾರಭಾರದ ಅನೇಕ ಕೆಲಸಗಳನ್ನು ಮಾಡತಕ್ಕದ್ದಿರುವದು. ಈಗ ತಾವು ಮನೆಗೆ ಹೋಗಬಹುದು," ಎಂದ ಕೂಡಲೆ ಹಕೀಮನು ಹೊರಟು ಹೋದನು. ನಂತರ ನವಾಬನು ಸೇವಕನನ್ನು ಕರೆದು ತನ್ನ ಪ್ರಿಯಪುತ್ರಿಯಾದ ಮರಿಯನ್ನಳನ್ನು ಕರೆಯಲು ಹೇಳಿದನು. ಕೂಡಲೆ ಮರಿಯನ್ನಳು ತಂದೆಯ ಹತ್ತರ ಬಂದಳು.

ಸೈಫುದ್ದೀನನು ಹಾಸಿಗೆ ಹಿಡಿದಾಗಿನಿಂದ ಮರಿಯನ್ನಳು ವಿಲಾಸ ಸುಖಗಳನ್ನು ತ್ಯಜಿಸಿ, ಯಾವಾಗಲೂ ತಂದೆಯ ಆರೋಗ್ಯವನ್ನು ಕುರಿತು ದೇವರನ್ನು ಪ್ರಾರ್ಥಿಸುತ್ತಿದ್ದಳು. ಗೌಡರಾಜ್ಯದಲ್ಲಿಯ ಭಾವಿಕ ಮುಲ್ಲಾ ಜನರನ್ನು ಕರೆಯಿಸಿ, ಅವರಿಗೆ ದೇವರ ಪ್ರಾರ್ಥನೆ ಮಾಡುವ ಕಾರ್ಯವನ್ನು ನಿಯಮಿಸಿದ್ದಳು; ಆದರೂ ದೇವರಿಗೆ ದಯ ಬಂದಿರಲಿಲ್ಲ. ಅವಳು ಹತ್ತರ ಬಂದ ಕೂಡಲೆ ನವಾಬನು—"ಮರಿಯನ್ನ! ಎಂದನು.

ಮರಿ—ಅಪ್ಪಾ, ಯಾಕೆ?

ಸೈ—'ಮಗೂ, ನಾನು ಇನ್ನು ಬಹು ದಿವಸ ಬದುಕುವಂತಿಲ್ಲ.'

ಮರಿಯಮ್ನಳು ದುಃಖವನ್ನು ನುಂಗಿಕೊಂಡು—"ಅಪ್ಪಾ, ಹಾಗೆನ್ನ ಬೇಡ. ನಿನಗೆ ಗುಣವಾಗುವದು ನಿಶ್ಚಯವು."

ಸೈ—ಇಲ್ಲ; ಮರಿಯಮ್ನ, ಅದು ಶಕ್ಯವು. ಹಕೀಮನು ಮರಣವು ಸಮೀಪಿಸಿರುವದೆಂದು ಹೇಳಿದನು.

ಮರಿಯಮ್ನಳ ಹೃದಯದಲ್ಲಿ ಕಂಪನ ಹುಟ್ಟಿತು. ಅವಳು ಮನಸ್ಸಿನಲ್ಲಿ—"ಏನು, ದೇವರು ಇರುವದು ಸುಳ್ಳೇ? ಈ ವಿಶ್ವದ-ಯಜಮಾನನಾದ ದೇವರು ದಯಾಸಾಗರನೆಂಬದು ನಿಜವಲ್ಲವೇನು? ಮಕ್ಕಳ ಮರುಗು ಜಗತ್ತಿನ ತಂದೆಯಾದ ದೇವರಿಗೆ ತಿಳಿದಿರಲಿಕ್ಕಿಲ್ಲವೇ? ಅವನ ಹೃದಯದಲ್ಲಿ ದಯಾ-ಮಾಯೆಗಳು ಇರಲಿಕ್ಕಿಲ್ಲವೇ?" ಎಂದು ಯೋಚಿಸತೊಡಗಿದಳು. ಆಗ ಅವಳ ತಂದೆಯು: "ಪುತ್ರೀ, ಮರಿಯಮ್ನ, ನಾನು ನಿನಗೊಂದು ಮಾತನ್ನು ಕೇಳತಕ್ಕವನಿರುವೆನು," ಎಂದನು.

ಮರಿಯಮ್ನಳು ಮನಸ್ಸಿನಲ್ಲಿ—ಖುದಾ, ಸರ್ವಸಾಕ್ಷಿಯಾದ ಅಲ್ಲಾ, ಜೀವನದ ವಿನಿಮಯರೂಪವಾಗಿ ತಂದೆಯ ಪ್ರಾಣವನ್ನುಳಿಸಬಾರದೇ? ಅದು ನಿನಗೂ ಅಶಕ್ಯವೇ? ಹೌದು, ನೀನೂ ಜಡಪಿಂಡನು; ಸೃಷ್ಟಿಕ್ರಮದ ಅಧೀನನು. ಅಹಾ! ದೇವರಿಗಿಂತ ನಿಯತಿಯು ಹೆಚ್ಚಿನದಾಯಿತಲ್ಲ? ಎಂದು ಯೋಚಿಸಹತ್ತಿದಳು. ಆಗ ಅವಳ ತಂದೆಯು ಮತ್ತೆ—ನನ್ನದೊಂದು ಆಜ್ಞೆಯಿರುವದು.

ಮರಿ—ಅಪ್ಪಾ, ಹೇಳಲು ಸಂಕೋಚವೇಕೆ? ನಿನ್ನ ಪ್ರಿಯ ಪುತ್ರಿಯು ನಿನ್ನ ಮಾತು ನಡಿಸಲಿಕ್ಕಿಲ್ಲವೇ?

ಸೈ—ಮಗೂ, ನೀನು ಸ್ವರ್ಗಲೋಕದ ದೇವತೆಗೆ ಸಮಾನಳು. ನಿನ್ನ ಚಿಂತೆಯೇ ನನ್ನ ಸಮಾಧಾನವೃತ್ತಿಯನ್ನು ಕಡಿಮೆ ಮಾಡಿರುವದು.

ಮರಿ—ಅಪ್ಪಾ, ನಾನು ಏನು ಮಾಡಿದರೆ ನಿನಗೆ ಸಮಾಧಾನವಾಗುವದು.

ಸೈ—ಮರಿಯಮ, ನೀನು ನಶೆರಿತನನ್ನು ಪ್ರೀತಿಸುವದಿಲ್ಲ. ಅಂದಬಳಿಕ ಅವನನ್ನು ವಿವಾಹವಾಗಲು ಹೇಳುವದಿಲ್ಲ; ಆದರೆ....

ಮರಿ—ಮತ್ತೇನು ಅಪ್ಪಾ?

ಸೈ—ಆದರೆ ಕಾಫರನನ್ನು ಮಾತ್ರ ವಿವಾಹವಾಗಬೇಡ.

ಮರಿ—ಕಾಫರನು ಯಾರು ಅಪ್ಪಾ?

ಸೈ—ಕುಮಾರ ಯದುನಾರಾಯಣ.

ಮರಿಯಮ್ಮಳು ಏನೂ ಮಾತಾಡಲಿಲ್ಲ. ಕ್ಷಣಕಾಲ ನಂತರ ನವಾಬನು ಮತ್ತೆ—ಮರಿಯಮ, ನಮ್ಮ ವಂಶದಲ್ಲಿ ಯಾರೂ ಎಂದೂ ಕಾಫರನೊಡನೆ ವಿವಾಹವನ್ನು ಮಾಡಿಕೊಂಡಿಲ್ಲ.

ಮರಿ—ಮಾಡಿಕೊಂಡರೆ ತಪ್ಪೇನು ?

ಸೈ—ಅಪಯಶಸ್ಸು ಮತ್ತು ಕಲಂಕವು.

ಮರಿ—ಮತ್ತೆ ?

ಸೈ—ಅಧರ್ಮವು.

ಮರಿ—ಇಷ್ಟೇ ಅಲ್ಲವೇ ?

ಸೈ—ಇದೇನು ಸಾಮಾನ್ಯವೆ?

ಮರಿ—ಯದುನಾರಾಯಣನ ವಿಷಯಕ್ಕೆ ಇಂಥ ಕ್ಷುದ್ರ ಕಾರಣಗಳೇ?

ಸೈ—ಹಾಗಾದರೆ ನೀನು ನನ್ನ ಇಚ್ಛೆಯನ್ನು ಪೂರ್ಣ ಮಾಡುವದಿಲ್ಲವೆ ?

ಮರಿ—ಅಪ್ಪಾ, ನಿನ್ನ ಸಹಜ ಸಮಾಧಾನಕ್ಕಾಗಿ ನಾನು ಪ್ರಾಣವನ್ನು ಕೂಡ ಕೊಡಲಿಕ್ಕೆ ಸಿದ್ಧಳು. ಹೀಗಿದ್ದು ನಾನು ನಿನ್ನ ಅಂತಕಾಲದ ಇಚ್ಛೆಯನ್ನು ಪೂರ್ಣ ಮಾಡಲಾರೆನೆ? ಕೇಳು. ಈಗ ನಾನು ಪ್ರತಿಜ್ಞೆ ಮಾಡುವದೇನಂದರೆ: ನಾನು ಎರಡನೇ ಧರ್ಮದ ಯಾರನ್ನೂ ಲಗ್ನ ಮಾಡಿಕೊಳ್ಳುವದಿಲ್ಲ.

ಸೈ—ಇನ್ನು ನಾನು ಸುಖದಿಂದ ಪ್ರಾಣಬಿಡುವೆನು.

ಮರಿ—ಅಪ್ಪಾ, ನನ್ನದೊಂದು ಪ್ರಾರ್ಥನೆಯಿರುವದು. ಅದೇನಂದರೆ, ನೀವು ನನಗೆ ವಿವಾಹಮಾಡಿಕೊಳ್ಳಬೇಕೆಂದು ಆಜ್ಞೆ ಮಾಡಬಾರದು.

ಸೈ—ಅದೇಕೆ?

ಮರಿ—ನಾನು ಆಜನ್ಮ ಅವಿವಾಹಿತಳಾಗಿಯೇ ಇರುವೆನು.

ಸೈ—ಛೀ, ಹುಚ್ಚಿ! ನಾನು ನಿನ್ನ ಸಲುವಾಗಿ ಉತ್ತಮನಾದ ಪತಿಯನ್ನು ಗೊತ್ತುಮಾಡಿಟ್ಟಿರುವೆನು. (ಸೈಫುದ್ದೀನನು ತನ್ನ ಮಗಳನ್ನು ದಿಲ್ಲಿಯ ಬಾದಶಹನಿಗೆ ಕೊಡಬೇಕೆಂದು ನಿರ್ಧರಿಸಿಕೊಂಡಿದ್ದನು. ಅದಕ್ಕೆ ಬಾದಶಹನೂ ಒಪ್ಪಿಕೊಂಡಿದ್ದನು.)

ಮರಿ—ನಾನು ಇನ್ನು ಲಗ್ನ ಮಾಡಿಕೊಂಡರೆ ನೀತಿ ವಿರುದ್ಧವಾಗುವದು. ದ್ವಿಚಾರಿಣಿಯಾದಂತಾಗುವದು ; ಯಾಕಂದರೆ ನಾನು ಯದುನಾರಾಯಣನ ಹೊರತು ಅನ್ಯರ ಲಗ್ನ ಮಾಡಿಕೊಂಡರೆ ಧರ್ಮಭ್ರಷ್ಟಳಾದಂತಾಗುವದು.

ಸೈ—ಹಾಗಾದರೆ ನೀನು ಈಗ ಯದುನಾರಾಯಣನ ಕೂಡ ವಿವಾಹ ಮಾಡಿಕೊಂಡಿರುಯೇನು ?

ಮರಿ—ಮನಸ್ಸಿನಿಂದ ನಮ್ಮಿಬ್ಬರ ವಿವಾಹವಾಗಿದೆ. ಅವನ ಹೊರತು ಆ ಸ್ಥಳವು ಯಾರಿಗೂ ಸಿಗದು. ದಿಲ್ಲಿಯ ಸಿಂಹಾಸನವೇ ಏಕೆ, ಇಡೀ ಪೃಥ್ವಿಯ ರಾಜ್ಯತ್ವವು ದೊರೆತರೂ ಅನ್ಯ ಸ್ವಾಮಿಯನ್ನು ನಾನು ಗ್ರಹಣ ಮಾಡಲಾರೆನು.

ಸೈ—ನಾನು ಆ ಪ್ರಕಾರ ಅಪ್ಪಣೆ ಮಾಡಿದರೆ?

ಮರಿ—ಯಾವದು ನನ್ನಿಂದ ಶಕ್ಯವಿಲ್ಲವೋ, ಅದನ್ನು ನಾನು ಹೇಗೆ ಮಾಡಬಲ್ಲೆನು? ಅಪ್ಪಾ, ನೀನು ಒಂದುವೇಳೆ ಆ ಅಶಕ್ಯ ಕಾರ್ಯವನ್ನು ಮಾಡಲು ಅಪ್ಪಣೆ ಮಾಡಿದರೆ, ನಾನು ನನ್ನ ಪ್ರಾಣವನ್ನು ಕೊಡತಕ್ಕವಳು. ನನ್ನ ಹೃದಯವನ್ನು ಸೀಳಿ ತೋರಿಸಲು ಬರುವಂತೆ ಇದ್ದರೆ ತೋರಿಸುತ್ತಿದ್ದೆನು. ಅಂದರೆ ಅಲ್ಲಿ ಯದುನಾರಾಯಣನ ಮೂರ್ತಿಯು ಹೇಗೆ ಸ್ಥಾಪಿತವಾಗಿರುವದೆಂಬದು ನಿನಗೆ ಕಾಣಿಸುತ್ತಿತ್ತು.

ಸೈಫುದ್ದೀನನು ಸಮ್ಮನಾದನು. ಅವನ ಎಲ್ಲ ಮನೋರಾಜ್ಯವು ಮಣ್ಣುಪಾಲಾಯಿತು. ಆಗ ಅವನು—ಮಗು, ಹಾಗಾದರೆ ನಾನು ನಿನ್ನ ಮನಸ್ಸಿಗೆ ತಾಪಕೊಡುವದಿಲ್ಲ. ನನ್ನ ಮನಸ್ಸಿಗೆ ಎಷ್ಟೇ ತಾಪವಾಗಲಿ, ಪಠಾಣರ ಕೀರ್ತಿಯು ಕಲಂಕಿತವಾಗಲಿ. ನಿನಗಿಂತ ಅವು ನನಗೆ ಹೆಚ್ಚಿನವಲ್ಲ. ನೀನು ಕುಮಾರನ ಪಾಣಿಗ್ರಹಣವನ್ನು ಮಾಡು.

ಮರಿ—ಅಪ್ಪಾ, ನಾನು ಇದೀಗ ಅನ್ಯ ಧರ್ಮದವರನ್ನು ವಿವಾಹ ಮಾಡಿಕೊಳ್ಳುವದಿಲ್ಲವೆಂದು ಪ್ರತಿಜ್ಞೆ ಮಾಡಿರುವೆನಷ್ಟೇ ?

ಸೈ—ಹಾಗಾದರೆ ಮುಂದೆ ಹೇಗೆ?

ಮರಿ—ನಾನು ಆಜನ್ಮ ಅವಿವಾಹಿತಳಾಗಿಯೇ ಇರುವೆನು.

ಆಗ ಸೈಫುದ್ದೀನನು ಒಬ್ಬ ಚಾಕರನನ್ನು ಕರೆದು—ಹೋಗು;

ಈಗಿಂದೀಗಲೆ ಹೋಗಿ ಕುಮಾರ ಯಮುನಾರಾಯಣನನ್ನು ಕಾರಾಗೃಹದಿಂದ ಮುಕ್ತಮಾಡುವಂತೆ ತಿಳಿಸು, ಎಂದನು.

ತುಸ ಹೊತ್ತಿನಲ್ಲಿಯೇ ಮತ್ತೆ ಸೇವಕನು ಬಂದು—ಖಾವಿಂದ, ಹೊರಗೆ ಜೋನಾಬಖಾನರು ಬಂದಿರುವರು, ಎಂದನು.

( ೨೨ )

"ಜೋನಾಬಖಾನ, ಮಿತ್ರಾ, ಈ ಹತಭಾಗ್ಯ ಸೈಫುದ್ದೀನನ ಕಡೆಯ ಭೆಟ್ಟಿಗೆ ಬಂದೆಯಾ ? "

ಜೋನಾಬ—ದೇವರು ನಿಮ್ಮನ್ನು ದೀರ್ಘಾಯುಷಿಯಾಗಿ ಮಾಡಲಿ. ಇದೇ ನನ್ನ ಪ್ರಾರ್ಥನೆಯು.

ಸೈ—ಜೋನಾಬಖಾನ, ನನ್ನ ಅಂತ್ಯಕಾಲವು ತೀರ ಸಮೀಪಿಸಿದೆ. ಮಿತ್ರಾ, ಅಂತ್ಯಕಾಲದಲ್ಲಿ ನನಗೆ ಬುದ್ಧಿ ಬಂತು. ಈ ಸಿಂಹಾಸನಕ್ಕೆ ನಾನು ಯೋಗ್ಯನಲ್ಲನೆಂಬದು ಈಗ ತಿಳಿದು ಬಂತು. ಅಯ್ಯೋ! ಈ ಮೊದಲೇ ತಿಳಿದಿದ್ದರೆ ?—

ಜೋ—ನೀವು ವಿನಾಕಾರಣ ಮನಸ್ಸಿಗೆ ತಾಪಮಾಡಿಕೊಳ್ಳುವಿರಿ. ನಿಮ್ಮಂಥ ನ್ಯಾಯಪ್ರಿಯ ರಾಜರೆಷ್ಟು ಮಂದಿ ಇರುವರು ?

ಸೈ—ನ್ಯಾಯಪ್ರಿಯನೆ ? ಸುಳ್ಳು! ನಾನು ನ್ಯಾಯಪ್ರಿಯನಾಗಿದ್ದರೆ, ಈ ಪಠಾಣರ ರಾಜ್ಯದಲ್ಲಿ ಈ ಪ್ರಕಾರದ ಅಶಾಂತಿಯು ಉತ್ಪನ್ನವಾಗಿ, ಪಠಾಣ ಸಿಂಹಾಸನವು ಹೊಯ್ದಾಡುತ್ತಿರಲಿಲ್ಲ. ನ್ಯಾಯದ ಮೇಲೆ ನೆಲಿಸಿದ ರಾಜ್ಯವು ಎಂದೂ ನಾಶವಾಗುವದಿಲ್ಲ.

ಜೋ—ಒಂದುವೇಳೆ ಲೋಪವಾದರೂ ನಿಮ್ಮ ಅಪರಾಧವೇನು ?

ಸೈ—ನನ್ನ ಅನೇಕ ಅಪರಾಧಗಳಿರುವವು. ನಾನು ನಲಿರಿತನ ಅನೇಕ ಅಪರಾಧಗಳನ್ನು ಅಲಕ್ಷಿಸಿ, ಅವನ ಸ್ವೇಚ್ಛಾಚಾರಕ್ಕೆ ಆಶ್ರಯಕೊಟ್ಟೆನು. [ಜೋನಾಬಖಾನನ ಕಡೆಗೆ ನೋಡಿ] ಇದೇನು ಖಾನಸಾಹೇಬ, ನಿಮ್ಮ ಒರೆಯಲ್ಲಿ ಖಡ್ಗವೇಕಿಲ್ಲ ?

ಜೋ—ನವಾಬಸಾಹೇಬ, ನಾನೀಗ ಕೈದಿಯು.

ಸೈ—ನೀನು ಕೈದಿಯೆ? ನಾನು ಜೀವಂತನಿರುವಾಗಲೆ ನೀನು ಕೈದಿಯೇ ? ನಿನ್ನನ್ನು ಕೈದು ಮಾಡಿದವರಾರು?

ಜೋ—ಯಾರೂ ಮಾಡಿಲ್ಲ. ನಾನೇ ಸ್ವೇಚ್ಛೆಯಿಂದ ಕೈದಿಯಾಗಿರುತ್ತೇನೆ.

ಸೈ—ಅದೇಕೆ?

ಜೋ—ನಾನು ನಿಮ್ಮ ಆಜ್ಞಾಭಂಗ ಮಾಡಿರುವೆನು.

ಸೈ—ನಿನ್ನಂಥ ರಾಜ್ಯನಿಷ್ಠೆಯುಳ್ಳವನು ನನ್ನ ಆಜ್ಞೆಯನ್ನು ಭಂಗ ಮಾಡುವದು ಶಕ್ಯವಿಲ್ಲ. ನೀನು ನನ್ನ ಯಾವ ಆಜ್ಞೆಗಳನ್ನು ಮೀರಿರುವಿ?

ಜೋ—ಮೊದಲನೇದು, ನಾನು ರಾಜಾ ಗಣೇಶನಾರಾಯಣನನ್ನು ಕೊಲ್ಲಬೇಕೆಂಬ ನಿಮ್ಮ ಆಜ್ಞೆಯನ್ನು ಭಂಗ ಮಾಡಿರುವೆನು.

ಸೈ—ಗಣೇಶನಾರಾಯಣನನ್ನು ಕೊಲ್ಲಲು ನನ್ನಿಂದ ಆಜ್ಞೆಯು? ನಾನು ಅದನ್ನು ಎಂದೂ ಕೊಟ್ಟಿಲ್ಲವಲ್ಲ!

ಜೋ—ಅದು ನನಗೆ ಗೊತ್ತಿತ್ತು; ಆದ್ದರಿಂದಲೇ ಆ ಹುಕುಂ ಮೋಸದ್ದೆಂದು ನಾನು ಅದನ್ನು ಹರಿದು ಹಾಕಿದೆನು.

ಸೈ—ನನ್ನ ಎರಡನೇ ಅಪ್ಪಣೆ ಯಾವದು?

ಜೋ—ದೇವೀಕೋಟೆಯೊಳಗಿನ ದೇವಿಯ ಗುಡಿ ನೆಲಸಮ ಮಾಡುವದು.

ಸೈ—ಜೋನಾಬಿಯಾನ, ನಾನು ಈ ಅಮಂಗಲ ಸುದ್ದಿಯನ್ನು ಕೇಳಲಾರೆನು. ಹಾಯ್! ಹಾಯ್! ಇನ್ನು ಮಾತ್ರ ಪಠಾಣರ ಸಿಂಹಾಸನವು ನಾಶವಾಗುವದೇ ನಿಶ್ಚಯವು.

ಜೋ—ಹುಜೂರ, ಈ ಎಲ್ಲ ವಿಷಯಗಳನ್ನು ನಶೆರಿತನಿಗೆ ಉಪದೇಶ ಮಾಡಿದವರು ಕುತುಬ ಉಲ್ ಆಲಮ್ ಫಕೀರರಂತೆ! ನವಾಬಸಾಹೇಬ, ಈಗ ನಾನು ನಿಮ್ಮಿಂದ ಅಪ್ಪಣೆ ದೊರಕಿಸಲು ಬಂದಿರುವೆನು.

ಸೈ—ಯಾತರ ಸಲುವಾಗಿ ಅಪ್ಪಣೆ ಬೇಕು?

ಜೋ—ನಾನು ಮುಕ್ಕಾ ಯಾತ್ರೆಗೆ ಹೋಗಬೇಕೆಂದು ಮಾಡಿರುವೆನು.

ಸೈ—ಮಿತ್ರಾ, ಇಂಥ ಸಂಕಟ ಸಮಯದಲ್ಲಿ ನನ್ನನ್ನು ಬಿಟ್ಟು ಹೋಗುವೆಯಾ?

ಜೋ—ಹುಜೂರ, ನಿಮ್ಮನ್ನು ಬಿಟ್ಟು ಅಲ್ಲ; ನಶೆರಿತಶಹನನ್ನು ಬಿಟ್ಟು ಹೋಗುತ್ತೇನೆ.

ಸೈ—ಎಲ್ಲದರ ಅರ್ಥವೂ ಒಂದೇ!

ಜೋ—ನವಾಬಸಾಹೇಬ! ಹಾಗೆ ಹೇಗಾದೀತು? ನಿಮ್ಮಿಂದ ನನಗೆ ಆದರ-ಸನ್ಮಾನಗಳು ದೊರೆಯುತ್ತಿದ್ದವು; ಆದರೆ ಸಶರಿತನಿಂದ ಅಪಮಾನ-ಕಷ್ಟಗಳನ್ನು ಹೊಂದಬೇಕಲ್ಲವೇ?

ಸೈ—ಜೋನಾಬ, ನೀನು ಸನ್ಮಾನ-ದೊಡ್ಡಿಸ್ತಿಕೆಗಳನ್ನೇ ಇಚ್ಛಿಸುವವ ನೆಂಬದು ಈಗ ತಿಳಿಯಿತು.

ಜೋ—ನಾನು ಮಾನ-ಮರ್ಯಾದೆಗಳ ಹಂಬಲವುಳ್ಳವನಿರದಿದ್ದರೂ ಕಾರಾಗೃಹವಾಸವನ್ನು ಅಥವಾ ಕೊಲೆಗಡಕರ ಕೊಲೆಯನ್ನು ಮಾತ್ರ ತಿರಸ್ಕರಿಸತಕ್ಕವನು.

ಸೈ—ಅದು ಏನೇ ಇರಲಿ, ಇಂಥ ವಿಪತ್ತಿನ ಸಮಯದಲ್ಲಿ ನಾನು ನಿನಗೆ ಅಪ್ಪಣೆಯನ್ನು ಕೊಡಲಾರೆನು, ಎಂದಂದು ಸೇವಕರನ್ನು ಕರೆದು, ಮುಖ್ಯ ಸೇನಾಪತಿಯನ್ನು ಕರೆಯಲು ಹೇಳಿದನು. ಸಮಶೇರಖಾನನು ಆಗ ಮುಖ್ಯ ಸೇನಾಪತಿಯು. ಅವನು ಶೂರನೂ ಸಾಹಸಿಯೂ ಇದ್ದನು. ಅವನು ನವಾಬನ ಆಪ್ತನು. ಆತನು ಬಂದ ಕೂಡಲೆ ನವಾಬನು ಅವನನ್ನು ಹತ್ತರ ಕುಳ್ಳಿರಿಸಿಕೊಂಡನು. ನಂತರ ತನ್ನ ಹತ್ತರಿದ್ದ ರತ್ನಖಚಿತ ಖಡ್ಗವನ್ನು ಮುಂದೆ ಮಾಡಿ—ಜೋನಾಬಖಾನ, ಈ ನನ್ನ ಖಡ್ಗವನ್ನು ಇಂದಿನ ದಿವಸ ನಿನ್ನ ಸ್ವಾಧೀನ ಮಾಡಿರುವೆನು. ಪಠಾಣ ಸಿಂಹಾಸನವನ್ನು ಸ್ಥಿರ ಪಡಿಸುವ ಭಾರವು ನಿನ್ನದು. ಈ ಖಡ್ಗವು ನಿನ್ನ ಬಳಿಯಲ್ಲಿ ಎಂದೂ ಅಯೋಗ್ಯ ಕಾರ್ಯ ಮಾಡಲಾರದೆಂದು ನನ್ನ ನಂಬಿಗೆಯಿರುವದು, ಎಂದನು.

ಜೋನಾಬಖಾನನು ವಿನಯದಿಂದ ಎದ್ದು ಆ ಖಡ್ಗವನ್ನು ಸ್ವೀಕರಿಸಿ—ಈ ಸೇವಕನಿಗೆ ತಮ್ಮ ಅಪ್ಪಣೆಯನ್ನು ಮೀರುವ ಸಾಮರ್ಥ್ಯ ವೆಲ್ಲಿಂದನು.

ಆಗ ನವಾಬನು ಅವರಿಬ್ಬರಿಗೂ ಹೋಗಲು ಹೇಳಿ, ನಗರ ಕೊತವಾಲನನ್ನು ಕರೆಯಿಸಿ, ಅವನನ್ನು ಕುರಿತು—ಗಣೇಶನಾರಾಯಣನು ಈಗ ಎಲ್ಲಿರುವನು?

ಕೊತವಾಲನು—ಹುಜೂರ, ಗಣೇಶನಾರಾಯಣನು ದೇವೀ ಕೋಟೆಗೆ ಹೋಗಿರುವನು.

ಗಣೇಶನಾರಾಯಣನನ್ನು ಇದ್ದಲ್ಲಿಂದ ತೀವ್ರವಾಗಿ ಕರೆತರುವಂತೆ

ನವಾಬನು ಹೇಳಲು, ಕೊತವಾಲನು 'ಅಪ್ಪಣೆ' ಎಂದೆಂದು ಹೊರಟು ಹೋದನು.

## ( ೨೩ )

ಕಿಶೋರಿಮೋಹನನು ದೇವೀಕೋಟೆಯ ಯುದ್ಧ ಭೂಮಿಯಿಂದ ಹೊರಟವನು ಮೋಹನನನ್ನು ಕರೆದುಕೊಂಡು ರಾಜಧಾನಿಯ ಹಾದೀ ಹಿಡಿದನು. ಅವರಿಬ್ಬರೂ ಬಹಳ ದಾರಿಯನ್ನು ನಡೆದ ಬಳಿಕ ಒಂದು ಗಿಡದ ನೆರಳಿಗೆ ಕುಳಿತುಕೊಂಡರು. ಆಗ ಕಿಶೋರಿಮೋಹನನು—"ಮನೂ, ನಿನ್ನ ಪುಣ್ಯದಿಂದ ಇಂದು ನಾನು ಪಾರಾಗಿ ಬಂದೆನು."

ಮನೋ—ಹುಜೂರ, ನೀವು ಇಷ್ಟು ದೂರ ಬಂದದ್ದು ಒಳತಾಗಲಿಲ್ಲ.

ಕಿಶೋ—ಅದೇಕೆ?

ಮನೋ—ಸಮೀಪದಲ್ಲಿದ್ದರೆ ಯುದ್ಧದ ಪರಿಣಾಮವನ್ನು ತಿಳಕೊಂಡು ನವಾಬನಿಗೆ ಹೇಳಲಿಕ್ಕೆ ಬರುತ್ತಿತ್ತು.

ಕಿಶೋ—ಇಲ್ಲಿಂದಲೇ ನಾನು ಅದರ ಪರಿಣಾಮವನ್ನು ಹೇಳುವೆನು.

ಮನೋ—ಕಡೆಯ ಪರಿಣಾಮವು ಏನಾಗಿರುವದು ಪ್ರಭೋ?

ಕಿಶೋ—ಆಗುವದೇನು? ಎಲ್ಲ ಪಠಾಣರೂ ಸ್ವರ್ಗವನ್ನು ಕಂಡಿರುವರು. ಈಗ ದೇವೀಕೋಟೆಗೆ ಗಣೇಶನಾರಾಯಣನೇ ರಾಜನು. ಆ ಯುದ್ಧವನ್ನೂ ಗಣೇಶನಾರಾಯಣನನ್ನೂ ನೆನಿಸಿದರೆ ನನ್ನ ಮೈಮೇಲಿನ ಕೂದಲುಗಳು ಈಗ ಸಹ ನೆಟ್ಟಗಾಗುವವು!

ಮನೋ—ಪ್ರಭೋ! ಪಠಾಣರೇ ಸೋತಿರಬಹುದೆಂದು ಯಾತರ ಮೇಲಿಂದ? ಯುದ್ಧಕ್ಷೇತ್ರದಲ್ಲಿ ಒಮ್ಮೊಮ್ಮೆ ಕ್ಷುಲ್ಲಕ ಕಾರಣಗಳಿಂದಲೇ ಗೆಲ್ಲತಕ್ಕಂಥವರು ಸಹ ಸೋಲುವರು.

ಕಿಶೋ—ನಾವು ಗೆದೆಯುವದು ಶಕ್ಯವಿಲ್ಲ. ಏನೇ ಆಗಲಿ, ನಿನ್ನಿನಿಂದ ನಮಗೆ ಆಹಾರ ದೊರೆತಿಲ್ಲ. ಇಲ್ಲಿ ಸಮೀಪದಲ್ಲಿ ಎಲ್ಲಿಯಾದರೂ ಆಶ್ರಯ ನೋಡೋಣ.

ಮನೋ—ಹಾಗಾದರೆ ಸಮೀಪದ ಗ್ರಾಮಕ್ಕೆ ಹೋಗೋಣ.

ಕಿಶೋ—ಮನೂ, ಹಿಂದೂ ಜನರ ಮನೆಯಲ್ಲಿ ಹೋಗಲಿಕ್ಕೆ ನನಗೆ ಭಯವೆನಿಸುತ್ತದೆ.

ಮನೂ—ಹಾಗಾದರೆ ಮುಸಲ್ಮಾನರ ಮನೆಗೆ ಹೋಗೋಣವೆ?

ಕಿಶೋ—ಅದೂ ಶಕ್ಯವಿಲ್ಲ. ಈಗ ನಮಗೆ ಎರಡೂ ಜನಾಂಗಗಳ ಭಯವು. ( ಮುಂದೆ ನೋಡಿ ) ಮನೂ, ಅತ್ತ ನೋಡು. ದೂರದಲ್ಲಿ ಕುದುರೆಯ ಮೇಲಿಂದ ಇತ್ತ ಯಾರೋ ಬರುವಂತೆ ತೋರುತ್ತದೆ. ಏಳು, ಇಲ್ಲಿಂದ ತೀವ್ರ ಹೊರಡು ವಾ.

ಮನೂ—ನಾವು ಇಬ್ಬರಿರುವೆವು. ಅವನು ಒಬ್ಬನೇ. ಅಂದಬಳಿಕ ಭಯವೇಕೆ?

ಕಿಶೋ—ನಾವು ಇಬ್ಬರಿದ್ದರೂ ಏನು ಮಾಡತಕ್ಕವರು? ಎಂದನು.

ಸ್ವಾರನು ಸಮೀಪಕ್ಕೆ ಬಂದನು. ಅವನು ಪಠಾಣನು. ಈ ಮೊದಲು ಕಿಶೋರಿಮೋಹನನ ಸಂಗಡ ದೇವೀಕೋಟೆಗೆ ಬಂದವರಲ್ಲೊಬ್ಬನು. ಅವನ ಪರಿಚಯವು ಕಿಶೋರಿಮೋಹನನಿಗೆ ಹತ್ತಿತು. ಧೈರ್ಯ ಬಂತು. ಆಗ ಆ ಸ್ವಾರನನ್ನು ಕುರಿತು—"ದೇವೀಕೋಟೆಯ ಸುದ್ದಿಯೇನು?" ಎಂದು ಕೇಳಿದನು. ಅದಕ್ಕೆ ಸ್ವಾರನು—"ಹುಜೂರ, ೪-೮ ಜನ ಪಠಾಣರ ಹೊರತು ಯಾರೂ ಜೀವಂತ ಉಳಿದಿಲ್ಲ!" ಅನ್ನಲು, ಕಿಶೋರಿಮೋಹನನು ನಡುವೇ ಬಾಯಿ ಹಾಕಿ—ಮನೂ, ಈ ಮೊದಲು ಇಲ್ಲಿಂದಲೇ ನಾನು ಈ ಸಂಗತಿಯನ್ನು ಹೇಳಲಿಲ್ಲವೇ? ಇರಲಿ. ಮತ್ತೇನು? ಎಂದು ಕೇಳಿದನು. ಸ್ವಾರನು—"ಹಿಂದೂ ಜನರಿಗೆ ಜಯ ದೊರೆತಿದ್ದರೂ, ರಾಜಾ ಗಣೇನಾರಾಯಣನು ಮಾತ್ರ ಗಾಯ ಹೊಂದಿ ಇಬ್ರಾಹಿಮಖಾನನ ಕೈವಶನಾಗಿರುವನು. ಇಬ್ರಾಹಿಮಖಾನನು ಕಿಲ್ಲೆಯನ್ನು ಸೇರಿರುವನು." ಎಂದನು.

ಕಿಶೋ—ಪಠಾಣರು ಸೋತು ರಾಜಾ ಗಣೇಶನಾರಾಯಣನನ್ನು ಸೆರೆ ಹಿಡಿದಿರುವರೇ? ಇದು ಅಸಂಭವವು.

ಸೈನಿಕ—ಅಕಸ್ಮಾತ್ತಾಗಿ ಈ ಸಂಗತಿಯು ಸಂಭವಿಸಿದ್ದು ನಿಜವು.

ಕಿಶೋ—ಜಯ ರಾಧಾಕೃಷ್ಣ! ದೇವರು ದಯಶಾಲಿಯು. ನಮ್ಮ ಮಾನ ಕಾದನು. ಏನೇ ಆಗಲಿ, ಇಬ್ರಾಹಿಮಖಾನ, ನೀನೇ ಧನ್ಯನು! ಗುಡಿಯು ಧ್ವಂಸವಾಗದಿದ್ದರೆ ಇಲ್ಲ; ನಮ್ಮ ಮುಖ್ಯ ವಿಷಯವು ಗಣೇಶ ನಾರಾಯಣನ ಕೈಸೆರೆಯು. ಅದಂತೂ ಈಗ ಆಗಿ ಹೋಯಿತು. ಇರಲಿ. ಸೈನಿಕನೇ, ನೀನೆತ್ತ ಹೊರಟಿರುವೆ?

ಸೈ—ನಾನು ರಾಜಧಾನಿಗೆ.

ಕಿಶೋ—ಹೋಗು! ತೀವ್ರ ಹೋಗಿ ಸವಾಬನಿಗೆ ಸುದ್ದಿಯನ್ನು ಹೇಳಿ, ಇಬ್ರಾಹಿಮನಿಗೆ ಸಹಾಯವನ್ನು ಕಳಿಸುವಂತೆ ತಿಳಿಸು.

ಗಣೇಶನಾರಾಯಣನು ಸೆರೆ ಸಿಕ್ಕ ಸಂಗತಿಯನ್ನು ಕೇಳಿದ ಕೂಡಲೆ ಮನೋಹರನು ಚಿಂತೆಗೊಳಗಾಗಿದ್ದನು. ಆತನ ಮನಸ್ಸು ದೇವೀಕೋಟೆಯ ಕಡೆಗೇ ಹೋಗಹತ್ತಿತು; ಆದರೆ ಸಾವಿರಾರು ಹಿಂದೂ ಜನರು ಗಣೇಶ ನಾರಾಯಣನನ್ನು ಉದ್ಧಾರ ಮಾಡಲು ಹೆಣಗಾಡುತ್ತಿರುವಾಗ, ನಾನೊಬ್ಬನು ಹೋಗಿ ಮಾಡುವದೇನು? ಎಂದು ಭಾವಿಸಿ ಆತನು ಸುಮ್ಮನಾದನು. ಅಷ್ಟ ರಲ್ಲಿ ಕಿಶೋರಿಮೋಹನನು ಅವನನ್ನು ಕುರಿತು–ಮನೂ, ಇಲ್ಲಿಯೇ ಸಮೀಪ ದಲ್ಲಿ ನಮ್ಮ ಮಾವನ ಊರು ಇರುವದು. ಅವನ ಮನೆಗೆ ಹೋಗೋಣ ವೇನು? ಎಂದು ಕೇಳಿದನು.

ಇದು ವರೆಗೆ ಎಂದೂ ತನ್ನ ಹೆಂಡತಿಯ ಹೆಸರು ಎತ್ತದ ಕಿಶೋರಿ ಮೋಹನನು ಇಂದು ತನ್ನ ಮಾವನ ಮನೆಗೆ ಹೋಗೋಣವೆಂದು ಅನ್ನಲು, ಮನೋಹರನಿಗೆ ಆಶ್ಚರ್ಯವಾಯಿತು. ಅವನು ಉತ್ಕಂಠತೆಯಿಂದ— ಹುಜೂರ, ನಿಮ್ಮ ಮಾವನ ಮನೆಯೇ? ಸಮೀಪದಲ್ಲಿದೆಯೇ?

ಕಿಶೊ— ಹೌದು. ನನ್ನ ಹೆಂಡತಿಯು ಅಲ್ಲೇ ಇರುವಳು.

ಮನೋ—ಅವನು ನಿಮಗೆ ಯೋಗ್ಯ ಮಾನ-ಮರ್ಯಾದೆಯನ್ನು ಮಾಡಬಹುದಲ್ಲವೇ?

ಕಿಶೋ—ಅವನು ಬಡವನು. ಏನೇ ಆಗಲಿ, ಇಂದು ನಮಗೆ ಅವನು ಯೋಗ್ಯವಾದ ಆದರ-ಸತ್ಕಾರ ಮಾಡದಿದ್ದರೆ, ನಾನು ಆತನ ಮನೆಯನ್ನು ಸುಟ್ಟು ಬೂದೀ ಮಾಡುವೆನು, ತಿಳಿಯಿತೆ?

ಮನೋ—ಪ್ರಭೋ, ತಾವು ಹೆಂಡತಿಯನ್ನು ತವರು ಮನೆಯಲ್ಲೇ ಏಕೆ ಬಿಟ್ಟಿರುವಿರಿ?

ಕಿಶೋ— ಮನೂ, ಅವಳು ಬಹಳ ಸಿಟ್ಟಿನ ಸ್ವಭಾವದವಳು. ನಾನು ಬೇಕಾದ ವಸ್ತ-ಒಡವೆಗಳನ್ನೂ ಸೀರೆ-ಕುಪ್ಪಸಗಳನ್ನೂ ತಂದು ಕೊಟ್ಟು ಸಮಾಧಾನ ಪಡಿಸಲಿಕ್ಕೆ ಯತ್ನಿಸಿದೆನು; ಆದರೆ ನಮ್ಮ ಮನೆಗೆ ಪರಸ್ತ್ರೀಯರೂ ವೇಶ್ಯಾಸ್ತ್ರೀಯರೂ ಬಂದ ಕೂಡಲೆ ಸಹನವಾಗದ ಅವಳು ಬಂದವರನ್ನು ಅವಮಾನಪಡಿಸಹತ್ತಿದಳು. ಮನೂ, ನೀನೇ ಹೇಳು, ಪರ

ಸ್ತ್ರೀಯರನ್ನು ಬಯಸದವನು ಪುರುಷನೋ ಏನು? ಆದರಿಂದ ಅವಳದೇನು ಹಾನಿ?

ಮನೋ—ಹೌದು, ಪ್ರಭೋ! ಸ್ತ್ರೀಯರು ಬಹಳೇ ಸ್ವಾರ್ಥಿಗಳು. ಅವರಲ್ಲಿ ಹೊಟ್ಟೆಕಿಚ್ಚು ಇದ್ದೇ ಇರುತ್ತದೆ. ನಿಮ್ಮ ಪತ್ನಿಯು ಈ ವಿಷಯ ದಲ್ಲಿ ಕಲಹ ಮಾಡಿದ್ದು ಅವಳ ಅಪರಾಧವೇ ಸರಿ. ಹೆಂಗಸರಲ್ಲಿ ಇಂಥ ದುರ್ಗುಣಗಳಿರುವವೆಂದು ತಿಳಿದೇ ನಾನು ಎಂದೂ ಲಗ್ನ ಮಾಡಿಕೊಳ್ಳ ಬಾರದೆಂದು ನಿರ್ಧರಿಸಿರುವೆನು.

ಕಿಶೋ—ಹೀಗೇನು? ಹಾಗಾದರೆ ನೀನು ಅನ್ಯ ಹೆಂಗಸರನ್ನು ಲಗ್ನ ವಾಗಬೇಡ. ನನ್ನನ್ನೇ ಲಗ್ನಮಾಡಿಕೊ, ಎಂದೆನ್ನಲು,

ಮನೋಹರನ ಮುಖವು ಸಿಟ್ಟಿನಿಂದ ಕೆಂಪಡರಿತು. ಅವನು ಬೇರೆ ಕಡೆಗೆ ಮುಖವನ್ನು ತಿರುಗಿಸಿದನು.

## ( ೨೪ )

ನಂದಿಗ್ರಾಮವು ಕಿಶೋರಿಮೋಹನನ ಮಾವನ ಊರು. ಅವನ ಮಾವನ ಹೆಸರು ಅಮರನಾಥನು. ಅಮರನಾಥನಿಗೆ ಶಿವಶಂಕರನೆಂಬ ೨೦ ವರ್ಷದ ಒಬ್ಬ ಮಗನೂ ಕಿಶೋರಿಮೋಹನನನ ಹೆಂಡತಿಯಾದ ಕಿರಣ ಬಾಲೆಯೆಂಬ ೧೮ ವರ್ಷದ ಒಬ್ಬ ಹೆಣ್ಣುಮಗಳೂ ಈ ಪ್ರಕಾರ ಇಬ್ಬರು ಮಕ್ಕಳಿದ್ದರು.

ಅಮರನಾಥನು ಕಿಶೋರಿಮೋಹನನಿಗೆ ಬಡವನಂತೆ ತೋರಿದರೂ, ಆತನು ಆ ಹಳ್ಳಿಯಲ್ಲಿ ಹೊಲ-ಮನೆಗಳನ್ನು ಮಾಡಿಕೊಂಡು ಸುಖದಿಂದ ಇದ್ದನು. ಅವನ ಹತ್ತರ ಸ್ವಲ್ಪ ದ್ರವ್ಯವೂ ಇತ್ತು. ಅವನು ನಂದಿಗ್ರಾಮ ದಲ್ಲಿಯ ಎಲ್ಲ ಜನರಿಗೆ ಪ್ರಿಯನಾಗಿದ್ದನು. ರೂಪವತಿಯಾದ ಕಿರಣಬಾಲೆ ಯನ್ನು ಧನವಂತನಾದ ಕಿಶೋರಿಮೋಹನನಿಗೆ ಕೊಡುವಾಗ ಮಗಳಿಗೆ ಬಹಳ ಸುಖವಾಗುವದೆಂದು ಆತನು ಭಾವಿಸಿದ್ದನು; ಆದರೆ ಸ್ವಲ್ಪ ದಿವಸ ಗಳಲ್ಲೇ ಅವನ ಭ್ರಮೆಯು ದೂರಾಯಿತು. ಲಗ್ನವಾದ ಮೇಲೆ ತಿಳಿದು ಮಾಡುವದೇನು? ಅಮರನಾಥನಿಗೆ ತನ್ನ ಅಳಿಯನು ಪರಸ್ತ್ರೀಲಂಪಟನು ಮಾತ್ರ ಇರದೆ ಸ್ವದೇಶ-ಸ್ವಧರ್ಮಗಳ ದ್ರೋಹಿಯೂ ಇರುವನೆಂಬದು ತಿಳಿದ ಬಳಿಕಂತೂ ಆತನಲ್ಲಿ ಅಳಿಯನ ವಿಷಯಕ್ಕೆ ಬಹಳೇ ಅನಾದರ ಹುಟ್ಟಿತು.

ಮನೆಗೆ ಅಪರಿಚಿತರು ಬಂದಾಗ ಮಾಡುವ ಸಖ್ಯ, ಆದರ, ಸತ್ಕಾರ ಗಳನ್ನು ಕೂಡ ಕಿಶೋರಿಮೋಹನನಿಗೆ ಮಾಡಲಿಕ್ಕೆ ಅಮರನಾಥನಿಗೆ ಮನಸ್ಸಿರ ಲಿಲ್ಲ; ಆದರೆ ತನ್ನ ಪತ್ನಿಯ ಅತ್ಯಾಗ್ರಹಕ್ಕಾಗಿ ಆತನು ತನ್ನ ಮನೆಯ ಹೊರಗಿನ ಒಂದು ಹಾಳು ಕೋಣೆಯನ್ನು ಅವರಿಗೆ ಇರಲಿಕ್ಕೆ ಕೊಟ್ಟನು.

ಅಮರನಾಥನು ತೋರಿಸಿದ ಅನಾದರದಿಂದ ಕಿಶೋರಿಮೋಹನನಿಗೆ ಬಹಳ ಸಿಟ್ಟು ಬಂತು; ಆದರೆ ಅವನಿಗೆ ಆಗ ಎಲ್ಲಿಯೂ ಆಶ್ರಯ ದೊರೆಯದಿದ್ದ ಕಾರಣ ಆತನು ಅಂದಿನ ರಾತ್ರಿಯನ್ನು ಅಲ್ಲಿಯೇ ಕಳೆಯ ಬೇಕೆಂದು ನಿರ್ಧರ ಮಾಡಿದನು; ಹಾಗು ಅತ್ತೆಯು ಕಳುಹಿಸಿದ ಫಲಾಹಾರ ವನ್ನು ತಿಂದು ಮಲಗಿದನು. ಕಿಶೋರಿಮೋಹನನಿಗೆ ನಿದ್ದೆ ಹತ್ತಿದ ನಂತರ ಮಧ್ಯರಾತ್ರಿಯ ಹೊತ್ತಿಗೆ ಮನೋಹರನು ಎದ್ದು ಹೊರಗೆ ಬಂದು ಆ ಮನೆಯ ಒಬ್ಬ ಚಾಕರನನ್ನು ಎಬ್ಬಿಸಿ ಅವನಿಂದ ಅಮರನಾಥನನ್ನು ಎಚ್ಚರ ಗೊಳಿಸಿದನು. ನಂತರ ಕಿಶೋರಿಮೋಹನನು ದೇವೀಕೋಟೆಯ ಗುಡಿ ಯನ್ನು ನೆಲಸಮ ಮಾಡಲಿಕ್ಕೆ ಹಾಗೂ ರಾಜಾ ಗಣೇಶನಾರಾಯಣನನ್ನು ಕೊಲ್ಲಲಿಕ್ಕೆ ಹೋದ ಸಂಗತಿಯನ್ನೂ, ಅಲ್ಲಿ ವರ್ತಿಸಿದ ವಿಷಯವನ್ನೂ ಆತನಿಗೆ ತಿಳಿಸಿದನು.

ಅದನ್ನು ಕೇಳಿದ ಕೂಡಲೆ ಅಮರನಾಥನಿಗೆ ಸಿಟ್ಟು ತಡೆಯದಂತಾಗಿ ಸೇವಕನ ಕಡೆಯಿಂದ ಕಿಶೋರಿಮೋಹನನನ್ನು ಎಬ್ಬಿಸಿ, ಹೊರಗೆ ಕರೆಯಿಸಿ, ಅವನಿಗೆ ಈಗಿಂದೀಗಲೆ ತನ್ನ ಮನೆಯನ್ನು ಬಿಟ್ಟು ಹೊರಗೆ ಹೋಗಲು ಹೇಳಿದನು. ಕಿಶೋರಿಮೋಹನನು ಮಾವನಿಗೆ ಬೆದರಿಕೆಯನ್ನು ಹಾಕಲು, ಅಮರನಾಥನು ಅವನಿಗೆ—"ಹೋಗು, ದೇಶದ್ರೋಹಿ, ನೀನು ಬೇಕಾದದ್ದನ್ನು ಮಾಡಹೋಗು!! ನಾನು ಅಂಜತಕ್ಕವನಲ್ಲ. ನೀನು ನವಾಬನ ಸಹಾಯ ದಿಂದ ನಮ್ಮ ಮನೆಮಾರುಗಳನ್ನು ಕಸಕೊಂಡು ನಮ್ಮ ಹೆಂಡಿರ-ಮಕ್ಕಳನ್ನು ಪೀಡಿಸಬಹುದು. ಇಷ್ಟೇ ಅಲ್ಲವೆ? ಆದರೆ ನೀನಾಗಲಿ ನವಾಬನಾಗಲಿ ನಮ್ಮ ಹಿಂದೂ ಧರ್ಮವನ್ನು ಕಸಿದುಕೊಳ್ಳುವದು ಶಕ್ಯವಿಲ್ಲವಷ್ಟೆ? ಸಾಯು ವಾಗ 'ನಾನು ಹಿಂದೂ ಧರ್ಮದವನೇ ಇರುವೆನು.' ಎಂಬದಿಷ್ಟೇ ಮಾತು ನನಗೆ ಶಾಂತಿಯನ್ನುಂಟುಮಾಡುವದು. ನಿನ್ನಂಥ ಧರ್ಮದ್ರೋಹಿಗೆ ಆ ಸುಖದ ಕಲ್ಪನೆಯು ಹೇಗಾದೀತು? ಅದೇನೇ ಇರಲಿ. ನೀನು ಮೊದಲು ಇಲ್ಲಿಂದ ಓಡಿಹೋಗಿ, ಜೀವ ಬದುಕಿಸಿಕೋ; ಯಾಕಂದರೆ ಬೆಳಗಾಗುತ್ತಲೆ

ನಿನ್ನ ಚರಿತ್ರೆಯನ್ನು ತಿಳಿದ ಈ ಊರ ಜನರು ಕಲ್ಲು ಒಗೆದು ನಿನ್ನನ್ನು ಕೊಂದಾರು,'' ಎಂದನು.

ಕಿಶೋರಿಮೋಹನನು ಸಿಟ್ಟಿನಿಂದ—''ಇಂದಿಗೆ ನಮ್ಮ ನಿನ್ನ ಸಂಬಂಧವು ಕಡಿದು ಹೋಯಿತೆಂದು ತಿಳಿ; ಮತ್ತು ನನ್ನ ಹೆಂಡತಿಯನ್ನು ಈಗಲೆ ನನ್ನ ಸಂಗಡ ಕಳುಹಿಸು'' ಎಂದನು. ಅದಕ್ಕೆ ಅಮರನಾಥನು ''ನಿನ್ನ ಹೆಂಡತಿಯು ನಿನ್ನೊಡನೆ ಬರಲಿಕ್ಕೆ ಒಪ್ಪಿದರೆ ನಾನು ಅವಳನ್ನು ಏಕೆ ಇಟ್ಟುಕೊಳ್ಳಲಿ?'' ಎಂದೆಂದು ಮನೆಯೊಳಗೆ ಹೋಗಿ, ಕಿರಣಬಾಲೆಯನ್ನು ಕರೆದುಕೊಂಡು ಬಂದನು.

ಕಿರಣಬಾಲೆಯು ನಿಜವಾಗಿಯೂ ರೂಪವತಿಯು. ಕಿಶೋರಿಮೋಹನನು ಇದುವರೆಗೆ ಕ್ರೀಡಾ ವಿಲಾಸ ಭೋಗಗಳನ್ನುಪಭೋಗಿಸಿದ ಯಾವ ಸ್ತ್ರೀಯಳೂ ಇವಳ ರೂಪಕ್ಕೆ ಒರೆ ಹತ್ತುವಂತಿದ್ದಿಲ್ಲ. ಹೀಗಿದ್ದು ಕಿಶೋರಿಮೋಹನನು ಪರಸ್ತ್ರೀಲಂಪಟನು. ಇದಕ್ಕೆ ಕಾರಣವೆಂದರೆ, ಪುರುಷರ ಚಂಚಲ ಸ್ವಭಾವವು. ಒಮ್ಮೆ ಉಪಭೋಗ ಮಾಡಿದ ವಸ್ತುವು ಕ್ಷಣದಲ್ಲಿಯೇ ಬೇಸರಾಗಿ ಬೇರೊಂದು ಪದಾರ್ಥವನ್ನು ಇಚ್ಛಿಸುವಂಥವರಿಗೆ ತಮ್ಮ ಪತ್ನಿಯು ಎಂಥ ಸುರೂಪಿಯಿದ್ದರೂ ಅಷ್ಟೇ? ಕಿಶೋರಿಮೋಹನನಿಗೆ ಹೆಂಡತಿಯನ್ನು ಕರೆದುಕೊಂಡು ಹೋಗುವ ಇಚ್ಛೆಯಿದ್ದಿಲ್ಲ. ಅದರಿಂದ ಅವನು ಪೇಚಿಗೊಳಗಾದನು.

ಅಮರನಾಥನು ಮಗಳನ್ನು ಹೊರಗೆ ಕರೆದುಕೊಂಡು ಬಂದು ಕಿಶೋರಿಮೋಹನನ ಕಡೆಗೆ ಕೈಮಾಡಿ ತೋರಿಸಿ—''ಅಕೋ, ಅಲ್ಲಿ ನಿನ್ನ ಪತಿಯಿರುವನು'' ಎಂದು ಹೇಳಿ ಒಳಗೆ ಹೋಗಿ, ಮನೆಯ ಬಾಗಿಲವನ್ನು ಮುಚ್ಚಿಕೊಂಡನು. ಕಿರಣಬಾಲೆಯು ಸ್ವಲ್ಪ ಸಹ ಭಯಪಡಲಿಲ್ಲ. ತಂದೆಯ ಮನೆಯ ಕಡೆಗೆ ಹೊರಳಿ ಸಹ ನೋಡದೆ ಪತಿಯನ್ನು ಕುರಿತು—''ನಡೆಯಿರಿ ಹೋಗೋಣ. ಇನ್ನು ಇಲ್ಲಿ ಏಕೆ?'' ಎಂದಳು.

ಕಿಶೋರಿ—ಇಂಥ ಮಧ್ಯರಾತ್ರಿಯಲ್ಲಿ ನಿನ್ನನ್ನು ಹೇಗೆ ಕರೆದುಕೊಂಡು ಹೋಗುವದು? ಇಲ್ಲಿಗೆ ನಮ್ಮ ಪಟ್ಟಣವು ದೂರವಾಗುವದು.

ಕಿರಣಬಾಲೆ—ಎಷ್ಟು ದೂರವಿದ್ದರೂ ನಾನು ನಡೆದು ಬರಲಿಕ್ಕೆ ಸಿದ್ಧಳಿರುವೆನು. ನಿಮಗೆ ಆ ಚಿಂತೆಯೇ ಬೇಡ.

ಬಳಿಕ ಮೂವರೂ ಅಲ್ಲಿಂದ ರಾಜಧಾನಿಗೆ ಬಂದರು. ಬರುವಾಗ

ಹಾದಿಯಲ್ಲಿ ಮನೋಹರನು ಅವಳ ಸಂಗಡ ಬಲು ಮಮತೆಯಿಂದ ವರ್ತಿಸಿದನು. ಕಿಶೋರಿಮೋಹನನು ಹೆಂಡತಿಯನ್ನು ಪಟ್ಟಣದಲ್ಲಿಯ ಮನೆಯಲ್ಲಿಟ್ಟು, ತಾನು ಉದ್ಯಾನ ಮಂದಿರಕ್ಕೆ ಹೋಗಬೇಕೆಂದು ಮಾಡಿದನು. ಅದಕ್ಕೆ ಕಿರಣಬಾಲೆಯು ಸಮ್ಮತಿಸಲಿಲ್ಲ. ಮನೋಹರನು ಒಡೆಯನಿಗೆ ಸಮಾಧಾನವನ್ನು ಹೇಳಿ ಅವಳನ್ನೂ ಉದ್ಯಾನದಲ್ಲಿಯ ವಿಲಾಸಭುವನಕ್ಕೆ ಕರೆದುಕೊಂಡು ಹೋದನು. ಕಿಶೋರಿಮೋಹನನು ಅವರಿಬ್ಬರನ್ನು ಅಲ್ಲಿ ಬಿಟ್ಟು ಅರಮನೆಗೆ ನಶಿರಿತನ ಭೆಟ್ಟಿಗೆ ಬಂದನು. ನಶಿರಿತನು ಅವನನ್ನು ಕಂಡ ಕೂಡಲೆ ಉತ್ಸುಕತೆಯಿಂದ—" ಸರದಾರ, ಮೋಹನರಾವ, ಹೋದ ಕೆಲಸವೇನಾಯಿತು? " ಎಂದು ಕೇಳಿದನು.

ಕಿಶೋರಿ—ಗುಡಿಯ ಧ್ವಂಸಕಾರ್ಯವು ಆಗಲಿಲ್ಲ ಹುಜೂರ.

ನಶಿ—ಏನು, ನಿಮ್ಮಿಂದಾಗಲಿಲ್ಲವೇ?

ಕಿಶೋರಿ—ಇಲ್ಲ. ಯುದ್ಧದಲ್ಲಿ ನಮಗೆ ಅಪಜಯವಾಯಿತು.

ನಶಿ—ಈ ಸುದ್ದಿಯನ್ನು ಹೇಳುವದಕ್ಕೆಂದೇ ನೀನು ಆತುರತೆಯಿಂದ ಇಲ್ಲಿಗೆ ಬಂದೆಯಲ್ಲವೇ?

ಕಿಶೋರಿ—ಒಂದು ಶುಭವಾರ್ತೆಯೂ ಇರುವದು.

ನಶಿ—ಅದೇನು ?

ಕಿಶೋರಿ—ಗಣೇಶನಾರಾಯಣನು ಬಂದಿಯಾಗಿರುವನು.

ನಶಿ—ಏನು, ಗಣೇಶನಾರಾಯಣನು ಕೈಸೆರೆಯಾದನೆ! ! ಯಾ ಖುದಾ! ಶೋಭಾನ ಅಲ್ಲಾ !!

ಕಿಶೋರಿ—ಆದರೆ. .

ನಶಿರಿತ—ಮತ್ತೆ ಆದರೆ ಎನ್ನುವಿಯಲ್ಲ?

ಕಿಶೋರಿ—ಸಾವಿರಾರು ಹಿಂದೂ ಜನರು ದುರ್ಗವನ್ನು ಮುತ್ತಿರುವರು. ಕಾರಣ ಅವನನ್ನು ಇತ್ತ ತರುವದೂ ಅಲ್ಲಿ ಕಾಯುವದೂ ಕಠಿಣವು.

ನಶಿ—ಅದಕ್ಕೇಕೆ ಚಿಂತೆ? ನಾನು ಈಗಲೆ ಎರಡು ಸಾವಿರ ಸೈನ್ಯವನ್ನು ಕಳುಹಿಸಿ ರಾಜದ್ರೋಹಿಗಳಾದ ಹಿಂದೂ ಜನರ ಸಂಹಾರವನ್ನು ಮಾಡಿಸಿ, ಅವರ ಮನೆಮಾರುಗಳಿಗೆ ಬೆಂಕಿ ಹಚ್ಚಿಸುವೆನು. ಕಿಶೋರಿಮೋಹನರಾವ, ನಿನಗೆ ಇನ್ನೊಂದು ಸಂಗತಿಯನ್ನು ಹೇಳುವೆನು.

ಕಿಶೋರಿ—ಅದೇನು ಸರಕಾರ?

ನಶಿ—ಸೈಫುದ್ದೀನನು ಮರಣೋನ್ಮುಖನು. ಅವನು ಗಣೇಶ ನಾರಾಯಣನನ್ನು ಇದ್ದಲ್ಲಿಂದ ಕರೆತರುವಂತೆ ಆಜ್ಞೆ ಮಾಡಿ ಜನರನ್ನು ಕಳುಹಿಸಿರುವನು.

ಕಿಶೋರಿ—ಏತರ ಸಲುವಾಗಿ?

ನಶಿ—ಅವನನ್ನು ಮುಖ್ಯ ವಜೀರನನ್ನಾಗಿ ಮಾಡುವನಂತೆ!

ಕಿಶೋರಿ—ಇದಕ್ಕೆ ಮುಂದೆ ಉಪಾಯವು?

ನಶಿ—ನಾನು ಗಣೇಶನಾರಾಯಣನನ್ನು ಕರೆತರಲು ಹೋದ ಜನರನ್ನು ಮಧ್ಯದಲ್ಲಿಯೆ ಪ್ರತಿಬಂಧಿಸಿರುವೆನು. ನವಾಬನ ಅಂತಿಮ ಇಚ್ಛೆಯ ಮೇರೆಗೆ ಗಣೇಶನಾರಾಯಣನ ಶಿರಸ್ಸನ್ನು ಕತ್ತರಿಸಿಕೊಂಡು ಅವನಿಗೆ ಕಾಣಿಕೆಯಾಗಿ ಒಯ್ಯುವೆನು, ಎಂದು ಹೇಳಿ ಮೂನಾರಖಾನನೆಂಬ ಸೇನಾಪತಿಯ ಸಂಗಡ ೨ ಸಾವಿರ ಸೈನ್ಯವನ್ನು ದೇವೀಕೋಟೆಗೆ ಕಳುಹಿಸಿದನು.

( ೨೫ )

ಗಣೇಶನಾರಾಯಣನ ಮೂರ್ಛೆ ಭಂಗವಾದಕೂಡಲೆ ಕಣ್ಣು ತೆರೆದು ನೋಡಲು ತಾನು ಒಂದು ಸುಂದರವಾದ ಕೋಣೆಯಲ್ಲಿ ಕುತ್ನಿಯ ಗಾದಿಯ ಮೇಲೆ ಮಲಗಿಕೊಂಡಿದ್ದನು. ಹತ್ತರ ಇಬ್ರಾಹಿಮನು ಕುಳಿತಿದ್ದನು. ಗಣೇಶನಾರಾಯಣನು ಕೂಡಲೆ ಎದ್ದು ಕುಳಿತನು. ಅದನ್ನು ನೋಡಿ ಇಬ್ರಾಹಿಮನು—"ಏನಾದರೂ ಆಹಾರವನ್ನು ತೆಗೆದುಕೊಳ್ಳುವಿರಾ?"

ಗಣೇ—ಮ್ಲೇಂಛರಿಂದ ಸ್ಪರ್ಶವಾದ ಆಹಾರವನ್ನು ನಾನು ಸ್ವೀಕರಿಸುವದಿಲ್ಲ.

ಇಬ್ರಾ—ನಾನು ಹೊರಗೆ ಹೋಗಿ ಹಿಂದೂ ಜನರಿಂದ ಆಹಾರವನ್ನು ಕಳಿಸಿಕೊಡುತ್ತೇನೆ.

ಗಣೇ—ಒಳ್ಳೇದು; ಆದರೆ ನಾನೀಗ ಎಲ್ಲಿರುವೆನು?

ಇಬ್ರಾ—ದೇವೀಕೋಟೆಯ ಕಿಲ್ಲೆಯಲ್ಲಿ.

ಗಣೇ—ದೇವೀಮಂದಿರವು ಧ್ವಂಸವಾಯಿತೆ?

ಇಬ್ರಾ—ಇಲ್ಲ.

ಗಣೇ—ಹಿಂದುಗಳು ಸೋತರಷ್ಟೇ?

ಇಬ್ರಾ—ಕೈದಿಗೆ ಹೆಚ್ಚಿನ ಸಂಗತಿಯನ್ನು ತಿಳಿದುಕೊಳ್ಳುವ ಅಧಿಕಾರವಿಲ್ಲ.

ಗಣೇ—ಹಾಗಾದರೆ ಇನ್ನು ನಾನು ಏನನ್ನೂ ಕೇಳುವದಿಲ್ಲ.

ಇಬ್ರಾ—ರಾಜಾ, ನಿನ್ನ ಮುಂದೆ ಮುಚ್ಚಿಡುವದೇನು? ಹಿಂದೂಗಳೇ ಗೆದ್ದರು. ಪಠಾಣ ಸೈನ್ಯವು ನಾಮಶೇಷವಾಗಿರುವದು.

ಗಣೇ—ಹಾಗಾದರೆ ನಾನು ಕೈದಿಯು ಹೇಗಾದೆನು?

ಇಬ್ರಾ—ನನ್ನ ಚತುರತನದಿಂದ ನೀನು ಕೈದಿಯಾಗಿರುವಿ. ಗಣೇಶ ನಾರಾಯಣಾ, ಮೊದಲು ನೀನು ಏನಾದರೂ ಆಹಾರ ತಕ್ಕೋ; ಯಾಕಂದರೆ ನಿನ್ನನ್ನು ನೆರೆಮನೆಗೆ ಕಳುಹಿಸಬೇಕಾಗಿದೆ, ಎಂದು ಹೇಳಿ ಹೊರಗೆ ಹೋದನು.

ಸ್ವಲ್ಪಹೊತ್ತಿನಲ್ಲಿ ಬ್ರಾಹ್ಮಣನು ಆಹಾರವನ್ನು ತೆಗೆದುಕೊಂಡು ಬಂದನು. ಇಡೀ ದಿವಸ ಉಪವಾಸದಿಂದ ಇದ್ದ ಕಾರಣ ಗಣೇಶನಾರಾಯಣನು ಸ್ವಲ್ಪ ಆಹಾರವನ್ನು ತಕ್ಕೊಂಡು ವಿಶ್ರಾಂತಿಯನ್ನು ಹೊಂದಿದನು. ಅಷ್ಟರಲ್ಲಿ ಒಬ್ಬ ಪಠಾಣನು ಬಂದು ಅವನನ್ನು ಕಾರಾಗೃಹದಲ್ಲಿ ಇರಿಸಿ ಹೋದನು.

ಮಧ್ಯರಾತ್ರಿಯಾಗುತ್ತ ಬಂದರೂ ಗಣೇಶನಾರಾಯಣನಿಗೆ ನಿದ್ರೆ ಹತ್ತಲಿಲ್ಲ. ಬೆಳಕೂ ಗಾಳಿಯೂ ಇಲ್ಲದ ಕತ್ತಲೆ ಕೋಣೆಯಲ್ಲಿ ಅವನಿಗೆ ನಿದ್ರೆಯಾದರೂ ಹೇಗೆ ಹತ್ತಬೇಕು? ಬಾಗಿಲ ಕಾಯುವವನು ಅಡ್ಡಾಡುವ ಸಪ್ಪಳದ ಹೊರತು ಬೇರೆ ಯಾವ ಸಪ್ಪಳವೂ ಕೇಳಿಸುತ್ತಿದ್ದಿಲ್ಲ. ನಾಲ್ಕೂ ದಿಕ್ಕಿನಲ್ಲಿ ಶಾಂತತೆಯು. ಗಣೇಶನಾರಾಯಣನು ಕಾರಾಗೃಹದಲ್ಲಿ ಸುಮ್ಮನೆ ಅಡ್ಡಾಡುತ್ತಿದ್ದನು. ಅಷ್ಟರಲ್ಲಿ ಕಾವಲುಗಾರನು ಒಮ್ಮೆಲೆ ಚೀರಿದನು. ಮರುಕ್ಷಣದಲ್ಲಿಯೇ ಯಾರೋ ಬಿದ್ದಂತೆ ಸಪ್ಪಳವಾಯಿತು. ನಂತರ ಎಲ್ಲವೂ ಸ್ತಬ್ಧವು. ಗಣೇಶನಾರಾಯಣನು ಆಶ್ಚರ್ಯದಿಂದ ಕಾವಲುಗಾರನನ್ನು ಕೊಂದವರಾರಿರಬಹುದು? ರಾಣಿಯು ಹಿಂದೂ ಜನರನ್ನು ತೆಗೆದುಕೊಂಡು ಕಿಲ್ಲೆಯಲ್ಲಿ ಬಂದಿರಬಹುದೇನು? ಎಂದು ಯೋಚಿಸತೊಡಗಿದನು. ಈ ವಿಸ್ಮಯವು ಕ್ಷಣಕಾಲ ಮಾತ್ರ ಉಳಿಯಿತು; ಯಾಕಂದರೆ ಕೂಡಲೆ ಕಾರಾಗೃಹದ ಬಾಗಿಲು ತೆರೆಯಲ್ಪಟ್ಟಿತು. ಆ ಕತ್ತಲೆಯಲ್ಲಿಯೇ ಕೆಲವು ಜನರು ಒಳಗೆ ಬರಲು ಗಣೇಶನಾರಾಯಣನು ಅವರನ್ನು ಕುರಿತು:— ನೀವಾರು? ಎಂದು ಕೇಳಿದನು. ಅದಕ್ಕೆ ಪ್ರತ್ಯುತ್ತರವಾಗಿ ಸ್ತ್ರೀಕಂಠದಿಂದ: ನಾವು ನಿಮ್ಮ ಸೇವಕರು, ಎಂಬ ಉತ್ತರವು ಬಂದಿತು; ಮತ್ತೆ ಬಂದ

ಸ್ತ್ರೀಯಳು ತನ್ನ ಅನುಚರರಿಗೆ ರಾಜನನ್ನು ಬಂಧಮುಕ್ತಮಾಡಲು ತಿಳಿಸಿದಳು. ಆಗ ಗಣೇಶನಾರಾಯಣನು:—ರಾಣೀ, ಈ ಕಿಲ್ಲೆಯನ್ನು ಪ್ರವೇಶ ಮಾಡಲು ನಿನ್ನ ಹೊರತು ಮತ್ತಾರ್‍ಯರಿಗೆ ಶಕ್ಯವು? ಎಂದನು.

ರಾಣಿ—ಪ್ರಭೋ! ಅದು ತಮ್ಮ ಪುಣ್ಯದಿಂದಲ್ಲವೇ? ನಿಮ್ಮ ಬಲವಿಲ್ಲದೆ ಈ ಕ್ಷುದ್ರಳು ಏನು ತಾನೇ ಮಾಡಬಲ್ಲಳು?

ಗಣೇ-ಹಾಗೇನೂ ಅಲ್ಲ. ನೀನೇ ನನ್ನ ಸರ್ವಸಾಹಸ ಶಕ್ತಿಮೂಲಳು.

ರಾಣಿ—ಇನ್ನೂ ಕಿಲ್ಲೆಯು ಪೂರ್ಣ ಕೈವಶವಾಗಿಲ್ಲ. ಕಾರಣ ಇಲ್ಲಿ ತಡಮಾಡಿದರೆ ಉಪಯೋಗವಿಲ್ಲ.

ಗಣೇ—ದುರ್ಗವನ್ನು ಗೆದ್ದು ಮಾಡುವದೇನು? ನವಾಬನ ಸಂಗಡ ಕಲಹಬೆಳಿಸುವದು ನೆಟ್ಟಗಲ್ಲ.

ರಾಣಿ—ಈಗ ಪ್ರೇಮವೇನುಳಿದದೆ? ನಾವು ನವಾಬನ ೯೦೦ ಜನ ಸೈನಿಕರನ್ನು ಕೊಂದು ಕಿಲ್ಲೆಯನ್ನು ಹೊಕ್ಕು ಬಂದಿಯನ್ನು ಸಹ ಬಿಡಿಸಿಕೊಂಡು ಹೋದ ಮೇಲೆ ಇನ್ನೂ ಪ್ರೇಮವೇ?

ಗಣೇ—ರಾಣೀ, ನೀನು ಮಾಡಿದ ಕಾರ್‍ಯವು ವಿಹಿತವಾಗಲಿಲ್ಲ.

ರಾಣಿ—ನಾವು ಮಾಡಿದ್ದು ಅಯೋಗ್ಯವೇ? ರಾಜಾ ಮುಸಲ್ಮಾನರು ಹಿಂದೂ ಜನರ ಗುಡಿಯನ್ನು ನೆಲಸಮ ಮಾಡಿ ಮೂರ್ತಿಯನ್ನು ಕಾಲಿನಿಂದ ತುಳಿದರೆ ಯೋಗ್ಯವಾಗುತ್ತಿತ್ತೇ? ಆಗ ಹಿಂದುಗಳಾದ ನಾವು ಸುಮ್ಮನೆ ನೋಡುತ್ತ ನಿಲ್ಲುವದು ವಿಹಿತವಷ್ಟೇ?

ಗಣೇ—ಹಾಗೇನೂ ಅಲ್ಲ. ಆತ್ಮರಕ್ಷಣೆಗೆ ಎಷ್ಟು ಅವಶ್ಯವೋ ಅಷ್ಟೇ ಮಾಡಬೇಕಾಗಿತ್ತು. ಈಗ ನಾವು ಕಿಲ್ಲೆಯನ್ನು ಜಯಿಸುವದು ಆತ್ಮರಕ್ಷಣೆಯಲ್ಲ; ರಾಜದ್ರೋಹದ ಕಾರ್‍ಯವಾಗುವದು.

ರಾಣಿ—ರಾಜಾ, ನೀವು ಸಂಕಟದಲ್ಲಿ ಸಿಕ್ಕಿದ್ದನ್ನು ಕೇಳಿದಾಗ ನನ್ನಲ್ಲಿ ಯೋಗ್ಯಾಯೋಗ್ಯ ವಿಚಾರವುಳಿಯಲು ಶಕ್ಯವಿರಲಿಲ್ಲ. ಇಂಥ ಪ್ರಸಂಗದಲ್ಲಿ ಬರಿಯ ಕಿಲ್ಲೆಯನ್ನು ಆಕ್ರಮಿಸುವದೇಕೆ, ನವಾಬನನ್ನೂ ಪ್ರಸಂಗದಲ್ಲಿ ದೇವರನ್ನೂ ಸಹ ಆಕ್ರಮಣ ಮಾಡಲು ಸಿದ್ಧಳು.

ಗಣೇ—ರಾಣೀ, ಇದುವರೆಗೆ ನನ್ನ ಸಹಧರ್ಮಿಣಿಯಾಗಿ ನೀನು ಏನನ್ನು ಕಲಿತೆ? ದೇಶದ ಸುಖಶಾಂತಿಗಳಿಗಿಂತಲೂ ನಾನು ನಿನಗೆ ಹೆಚ್ಚಿನವನೇನು?

ರಾಣಿ—"ರಾಜಾ, ನೀನೇ ನನ್ನ ದೇಶವು. ನೀನೇ ನನ್ನ ಸರ್ವಸ್ವವು. ಈ ವಿಶ್ವದ ತುಂಬ ನೀನೇ ಕಾಣುವಿ." ಅಷ್ಟರಲ್ಲಿ ಜನರು ಬಂದ ಸಪ್ಪಳವು ಕೇಳಲು, ಅವರು ತಿರುಗಿ ನೋಡಿದರು. ಇಬ್ರಾಹಿಮನು ೨೦-೨೫ ಜನ ಪಠಾಣರನ್ನು ಕರೆದುಕೊಂಡು ಅಲ್ಲಿಗೆ ಬಂದನು. ಬಂದವನೇ ಅವನು "ರಾಜಾ, ನಾನು ಸೋತೆನು. ನಿನ್ನ ಕೈವಶವಾಗಲು ಒಪ್ಪಿರುವೆನು. ಈ ನನ್ನ ಖಡ್ಗವನ್ನು ತೆಗೆದುಕೋ" ಎಂದನು.

ಗಣೇ—ಇಬ್ರಾಹಿಮಖಾನ, ನಿಮ್ಮಂಥ ಶೂರರ ಶಸ್ತ್ರವನ್ನು ತೆಗೆದುಕೊಂಡು ಬಂದಿಯನ್ನಾಗಿ ಮಾಡಬೇಕೇ? ನೀವು ಬೇಕಾದಲ್ಲಿಗೆ ಹೋಗಬಹುದು. ನಾನು ಅಪ್ಪಣೆಯನ್ನು ಕೊಟ್ಟಿರುವೆನು.

ಇಬ್ರಾ—ಗಣೇಶನಾರಾಯಣಾ, ಈಗ ಮಾತ್ರ ನೀನು ನನ್ನನ್ನು ಸಂಪೂರ್ಣವಾಗಿ ಸೋಲಿಸಿದೆ. ಮೊದಲು ನನಗೆ ನಿನ್ನ ಯೋಗ್ಯತೆಯು ತಿಳಿಯಲಿಲ್ಲ. ಈಗ ರಾಜಧಾನಿಗೆ ಹೋಗುತ್ತೇನೆ.

ಗಣೇ—ಹಾಗಾದರೆ ನಾನೇ ಬಂದು ನಿಮ್ಮನ್ನೂ ನಿಮ್ಮ ಅನುಚರರನ್ನೂ ಕಿಲ್ಲೆಯ ಹೊರಗೆ ಕಳಿಸಿ ಬರುತ್ತೇನೆ, ನಡೆಯಿರಿ.

"ನಿಮ್ಮ ಉದಾರ ಮನಸನ್ನು ನೋಡಿ ಬಹಳ ಸಂತೋಷವಾಗುತ್ತದೆ" ಎಂದು ಇಬ್ರಾಹಿಮಖಾನನು ಹೊರಟು ಹೋದನು.

ಮರುದಿವಸ ಬೆಳಗು ಮುಂಜಾನೆ ಗಣೇಶನಾರಾಯಣನು ರಾಣಿಯನ್ನು ಕುರಿತು: ರಾಣೀ, ಇಂದು ನಾನು ರಾಜಧಾನಿಗೆ ಹೋಗುತ್ತೇನೆ. ನೀನು ಸೈನ್ಯವನ್ನು ತಕ್ಕೊಂಡು ಸಪ್ತದುರ್ಗಕ್ಕೆ ಹೋಗು, ಎನ್ನಲು, ರಾಣಿಯು—"ನೀವು ಅಲ್ಲಿಗೆ ಹೋದ ಕೂಡಲೆ ನಶೀರಿತನು ನಿಮ್ಮನ್ನು ಸೆರೆಹಿಡಿದರೆ ಹೇಗೆ ಮಾಡುವಿರಿ? ಎಂದಳು.

ಗಣೇ—ಹಾಗೆ ಮಾಡಿದರೆ ಬಹಳೇ ಉತ್ತಮವಾಗುವದು; ಯಾಕಂದರೆ ನಿರಪರಾಧಿಗಳ ಕೊಲೆಯು ತಪ್ಪುವದು. ನಶೀರಿತನು ಬಹುಶಃ ನನ್ನ ಶೋಧವನ್ನೇ ನಡೆಸಿರಬಹುದು.

ರಾಣಿ—ಸೈಫುದ್ದೀನನು ಮರಣಹೊಂದಿ ನಶೀರಿತನು ಪಟ್ಟಕ್ಕೆ ಕೂಡ್ರುವವರೆಗೆ ಈ ನಿರ್ಭಾಗ್ಯ ಹಿಂದುಗಳಿಗೆ ಸ್ವರಾಜ್ಯ-ಸ್ವಾತಂತ್ರ್ಯಗಳು ಸಿಗುವ ಲಕ್ಷಣ ಕಾಣಿಸುವದಿಲ್ಲ.

ಗಣೇ—ರಾಣೀ, ನೀನು ಎಂಥ ಅಮಂಗಲ ಮಾತನಾಡುತ್ತೀ?

ಸೈಫುದ್ದೀನನು ಜೀವಂತನಿರುವಾಗಲೇ ಅತ್ಯಾಚಾರಗಳು ಪ್ರಾರಂಭ ವಾಗಿವೆ. ಅವನು ಸತ್ತ ಬಳಿಕಂತೂ ಪ್ರಜೆಗಳ ಗೋಳನ್ನು ಕೇಳತಕ್ಕವ ರಾರು? ಈ ಸಂಗತಿಯನ್ನು ಯೋಚಿಸಿ ನೋಡು.

ರಾಣಿ—ಯೋಚಿಸುವದೇನು? ನಶಿರಿತನು ಹೆಚ್ಚು ಅತ್ಯಾಚಾರಿ ಯಾಗುವದರಿಂದ ಹಿಂದೂ ಜನರ ಸ್ವರಾಜ್ಯ-ಸಂಪಾದನೆಯ ಇಚ್ಛೆಗೆ ಉತ್ತೇಜನ ಕೊಟ್ಟಂತಾಗುವದು.

ಗಣೇ—ಈ ಪ್ರಕಾರದಿಂದ ಸ್ವರಾಜ್ಯ ದೊರೆಯಬೇಕಾದರೆ ಎಷ್ಟು ಹಿಂದೂಜನರ ರಕ್ತಪಾತದ ವಿನಿಮಯ ಮಾಡಬೇಕಾಗುವದೆಂಬದನ್ನು ಬಲ್ಲೆಯಾ?

ರಾಣಿ—ರಾಜಾ, ರಕ್ತಪಾತವಾಗದೆ ಸ್ವರಾಜ್ಯ-ಸ್ವಾತಂತ್ರ್ಯಗಳು ಸಿಗುವದು ಶಕ್ಯವಿಲ್ಲ.

ಗಣೇ—ರಾಣೀ, ಹಿಂದೂ ಜನರ ರಕ್ತಪಾತವನ್ನು ನೋಡಿದರೆ ನನ್ನ ಪ್ರತಿಯೊಂದು ನರಗಳಲ್ಲಿಯ ಹರಿಯುವ ರಕ್ತವು ಮಂಜುಗಟ್ಟುವದು. ಕೈ-ಕಾಲುಗಳು ತಣ್ಣಗಾಗಿ ಶಕ್ತಿಹೀನವಾಗುತ್ತವೆ. ಆದ್ದರಿಂದ ನನಗೆ ಸ್ವರಾಜ್ಯ-ಸ್ವಾತಂತ್ರ್ಯಗಳಿಗಿಂತ ಪ್ರಜೆಗಳ ಶಾಂತಿಯೇ ಬೇಕಾದದ್ದು. ಕಾರಣ ಸೈಫುದ್ದೀನನೇ ಚಿರಂಜೀವಿಯಾಗಿ ಈ ಗೌಡವನ್ನು ಆಳಲೆಂದು ಪ್ರಾರ್ಥಿಸುತ್ತೇನೆ. ಈ ಅಸಂಖ್ಯ ಹಿಂದೂಜನರ ಸುಖ-ದುಃಖಗಳು ನಮ್ಮನ್ನವಲಂಬಿಸಿರುವವು. ಕಾರಣ ನಿಷ್ಕಾರಣವಾಗಿ ಹಿಂದೂ ಮುಸಲ್ಮಾನರಲ್ಲಿ ವಿದ್ರೋಹಾಗ್ನಿಯನ್ನು ಪ್ರಜ್ವಲಗೊಳಿಸದಂಥ ಬುದ್ಧಿಯನ್ನು ದೇವರು ನನಗೆ ಕೊಡಲಿ. ಈ ನನ್ನ ಪ್ರಿಯ ಬಂಗಾಲೀ ಜನರ ರಕ್ತದಿಂದ ಈ ಪವಿತ್ರ ಗಂಗಾ ನದಿಯ ನೀರು ಕೆಂಪಗಾಗುವದನ್ನು ನಾನು ನೋಡಲಾರೆನು.

ರಾಣಿ—ಸ್ವಾಮೀ, ಎಷ್ಟು ಹೃದಯದೌರ್ಬಲ್ಯವು ನಿಮ್ಮದಿದು?

ಗಣೇ—ರಾಣೀ, ಈ ಹಿಂದುಗಳೇ ನನ್ನ ಎಲ್ಲ ಬಂಧು-ಬಳಗವು. ಬಹಳವೇಕೆ, ಇವರೇ ನನ್ನ ಸರ್ವಸ್ವವು. ಅತ್ಯಾಚಾರಿಯಾದ ನಶಿರಿತನು ಇದುವರೆಗೆ ನನ್ನೆದುರಿಗೆ ಎಷ್ಟೋ ಜನ ಹಿಂದೂ ನರ-ನಾರಿಯರ ಧನ-ಮಾನ ಗಳನ್ನು ಸೂರೆಗೊಂಡರೂ ನಾನು ಸಹಿಸಿದುದೇಕೆ? ನಾನು ದುರ್ಬಲನೆಂದಲ್ಲ. ಈ ವಿದ್ರೋಹಾಗ್ನಿಗೆ ಪುಟಕೊಟ್ಟರೆ ಗೌಡರಾಜ್ಯದಲ್ಲಿಯ ಎಲ್ಲ ಹಿಂದೂಗಳು ಕಷ್ಟಪಡಬೇಕಾಗುತ್ತದೆಂದು. ತಿಳಿಯಿತೇ?

ರಾಣಿ—ಆತ್ಮರಕ್ಷಣೆಯ ಸಲುವಾಗಿ ಮತ್ತು ಪರರ ರಕ್ಷಣೆಯ ಸಲುವಾಗಿ ಯಾವ ಕ್ಷತ್ರಿಯನು ಯುದ್ಧ ಮಾಡಲು ಹಿಂಜರಿಯುವನೋ, ಅವನು ಅಧರ್ಮಾಚರಣೆಯಾಗುವನೆಂಬದನ್ನು ನಿಮಗೆ ಹೇಳುವ ಕಾರಣವಿಲ್ಲ. ನಿಮ್ಮಂಥ ಧರ್ಮಾಭಿಮಾನಿಗಳಿಗೆ ಧರ್ಮವನ್ನು ಕಲಿಸುವವರಾರು?

ಗಣೇ—ಈ ಭಾರತದಲ್ಲಿಯ ಈ ನನ್ನ ಹಿಂದೂ ಜನರ ಕಲ್ಯಾಣವೇ ನನ್ನ ಧರ್ಮವು. ಅವರೇ ನನ್ನ ಕುಲದೈವತವು. ಇದರ ಹೊರ್ತು ಬೇರೆ ಧರ್ಮದೇವತೆಗಳು ನನಗೆ ಗೊತ್ತಿಲ್ಲ. ಇದರಿಂದ ನಾನು ಅನಂತಕಾಲ ನರಕವನ್ನು ಅನುಭವಿಸಿದರೂ ಚಿಂತೆ ಇಲ್ಲ. ನನ್ನ ಈ ಹಿಂದೂಪುತ್ರರ ಕಣ್ಣುಗಳಲ್ಲಿಯ ಒಂದು ಹನಿ ಕಣ್ಣೀರನ್ನು ಸಹ ನೋಡಲಾರೆನು. ಆದ್ದರಿಂದ ನೀನು ಸಪ್ತದುರ್ಗಕ್ಕೆ ಹೋಗು. ನಾನು ರಾಜಧಾನಿಗೆ ಹೋಗತಕ್ಕವನು, ಎಂದು ಹೇಳಿ, ೧೦೦ ಜನರನ್ನು ಮಾತ್ರ ಸಂಗಡ ಕರಕೊಂಡು ಗಣೇಶನಾರಾಯಣನು ಫಿರೋಜಾಬಾದಕ್ಕೆ ಹೊರಟನು.

ಗಣೇಶನಾರಾಯಣನು ತನ್ನ ಜನರನ್ನು ಕರಕೊಂಡು ಹೋಗುವಾಗ ನಡುದಾರಿಯಲ್ಲಿ ನವಾಬನ ಸೈನ್ಯವು ದೇವೀಕೋಟೆಯ ಕಡೆಗೆ ಬರುವದನ್ನು ನೋಡಿ ಮನಸ್ಸಿನಲ್ಲಿ:—"ಈ ಸೈನ್ಯವು ಇತ್ತಕಡೆಗೇಕೆ ಹೊರಟಿರಬಹುದು? ಬಹುಶಃ ನನ್ನನ್ನು ಎದುರಿಸಲಿಕ್ಕೆ ಇವರು ಹೊರಟಂತೆ ಕಾಣಿಸುತ್ತದೆ. ನಾನು ಇವರನ್ನು ಹಾಗೆಯೇ ಮುಂದಕ್ಕೆ ಹೋಗಲು ಬಿಟ್ಟರೆ, ಇವರು ನಿಷ್ಕಾರಣವಾಗಿ ದೇವೀಕೋಟೆಯ ಪ್ರಜೆಗಳನ್ನು ಪೀಡಿಸುವರು. ನಾನು ಇವರ ಕೈವಶವಾಗುವದೇ ಉತ್ತಮ ಉಪಾಯವೆ"ಂದು ತಿಳಿದು ತನ ಕುದುರೆಯನ್ನು ಓಡಿಸುತ್ತ ಅವರ ಎದುರಿಗೆ ಬಂದು:—"ಸೈನಿಕರೇ, ನೀವು ಈಗ ದೇವೀಕೋಟೆಗೆ ನನ್ನನ್ನು ಹುಡುಕಲಿಕ್ಕೆ ಹೊರಟಿರುವಿರಲ್ಲವೇ? ನಾನೇ ಗಣೇಶನಾರಾಯಣನು. ನನಗೆ ಯುದ್ಧವು ಬೇಕಾಗಿಲ್ಲ. ನಿಮ್ಮ ಕೈಸೆರೆಯಾಗಲು ಒಪ್ಪಿರುವೆನು." ಎಂದನು.

ಆ ಸೈನ್ಯದ ಮುಖ್ಯಸ್ಥನ ಹೆಸರು ಮೀನಾರಖಾನನು. ಅವನು ಚತುರನೂ, ಧೂರ್ತನೂ ಇದ್ದನು. ಗಣೇಶನಾರಾಯಣನ ಕೂಡ ಯುದ್ಧದ ಪ್ರಸಂಗವು ತಪ್ಪಿದ್ದಕ್ಕಾಗಿ ಅವನಿಗೆ ಆನಂದವಾಯಿತು. ಅವನು ಮುಂದೆ ಬಂದು: "ರಾಜಾ, ನೀನು ತಿಳಿಸವನೇ ಇರುತ್ತೀ. ಅಂದಬಳಿಕ ಹೆಚ್ಚು ಹೇಳುವದೇನು? ನಾನು ನಿನ್ನನ್ನು ಕೈದಿಯೆಂದು ತಿಳಿದು ನಿಶ್ಶಸ್ತ್ರನನ್ನಾಗಿ

ಮಾಡುವದಿಲ್ಲ. ರಾಜಧಾನಿಗೆ ಹೋಗೋಣ ನಡೆ." ಎಂದು ಅವನನ್ನು ಸಂಗಡ ಕರಕೊಂಡು ರಾಜಧಾನಿಗೆ ಹಿಂತಿರುಗಿದನು. ರಾಜಧಾನಿಗೆ ಬಂದ ನಂತರ ಗಣೇಶನಾರಾಯಣನು ಮೀನಾರಖಾನನನ್ನು ಕುರಿತು:—"ಸೇನಾಪತಿ ಸಾಹೇಬ, ನಾನು ಕ್ಷಣಕಾಲ ನವಾಬ ಸೈಫುದ್ದೀನನ ಭೆಟ್ಟಿಗೆ ಹೋಗಿ ಬರುವೆನು. ಅಪ್ಪಣೆಯನ್ನು ಕೊಡುವಿರಾ?'' ಎಂದನು.

ಮೀನಾರ—ನನಗೆ ಆ ಪ್ರಕಾರದ ಆಜ್ಞೆ ಇಲ್ಲ. ನಿಮ್ಮನ್ನು ಕಿಲ್ಲೆಯೊಳಗಿರುವ ಸೆರೆಮನೆಯಲ್ಲಿ ಇಡಬೇಕೆಂದು ಆಜ್ಞೆಯಾಗಿದೆ. ಇನ್ನು ಮೇಲೆ ಮಾತ್ರ ನಿಯಮದ ಪ್ರಕಾರ ನಿಮ್ಮ ಶಸ್ತ್ರವನ್ನು ತೆಗೆದುಕೊಳ್ಳಬೇಕಾಗುವದು. ಕಾರಣ ನೀವೇ ನಿಮ್ಮ ಶಸ್ತ್ರವನ್ನು ಕೆಳಗಿಡಿರಿ, ಎಂದನು.

ಗಣೇ—ನನ್ನ ಕೈಯೊಳಗಿನ ಶಸ್ತ್ರವನ್ನು ನಾನೇ ಎಂದೂ ಕೆಳಗಿಡುವವನಲ್ಲ. ಆ ಪದ್ಧತಿಯು ನಮ್ಮ ಮನೆತನದಲ್ಲಿಲ್ಲ, ಎಂದನು. ಧೂರ್ತನಾದ ಮೀನಾರಖಾನನು ಇನ್ನು ಮುಂದೆ ಪ್ರಸಂಗವನ್ನು ಬೆಳಿಸುವದರಿಂದ ಹಿತವಾಗುವದಿಲ್ಲವೆಂದು ತಿಳಿದು ಆಗ ಆತನ ಶಸ್ತ್ರವನ್ನು ತೆಗೆದುಕೊಳ್ಳದೆ ಅವನನ್ನು ಕಿಲ್ಲೆಯೊಳಗಿನ ಸೆರೆಮನೆಗೆ ಕಳಿಸಿದನು.

## ( ೨೬ )

ಸೈಫುದ್ದೀನನು ಯದುನಾರಾಯಣನನ್ನು ಸೆರೆಮನೆಯಿಂದ ಬಿಡುಗಡೆ ಮಾಡಲು ಅಪ್ಪಣೆಯನ್ನು ಮಾಡಿದ್ದರೂ ನಶೆರಿತನು ನಡುವೆ ಕಾರಸ್ಥಾನವನ್ನು ಮಾಡಿದ್ದರಿಂದ, ಬಿಡುಗಡೆಯಾಗಲಿಕ್ಕೆ ೩-೪ ದಿವಸ ತಡವಾಯಿತು. ಕಡೆಗೆ ಜೋನಾಬಖಾನನೇ ಸ್ವತಃ ಹೋಗಿ ಯದುನಾರಾಯಣನ ಬಿಡುಗಡೆ ಮಾಡಿದನು. ಯದುನಾರಾಯಣನು ಅಲ್ಲಿಂದ ಮೊದಲು ತನ್ನ ಮನೆಗೆ ಹೋದನು. ಮನೆಯಲ್ಲಿ ಮೊದಲು ಅವನಿಗೆ ದಿವಾಣ ನರಸಿಂಹನ ಭೆಟ್ಟಿಯಾಯಿತು. ಕುಮಾರನು ಅವನನ್ನು ಕುರಿತು:—"ಇಷ್ಟು ದಿವಸ ನೀನೆಲ್ಲಿದ್ದೆ? ಎಂದು ಕೇಳಲು,

ದಿವಾಣ—ಭೂಗರ್ಭದಲ್ಲಿ ಏನಿರುವದೆಂಬದನ್ನು ನೋಡಲು ಪಾತಾಳದಲ್ಲಿದ್ದೆನು.

ಯದು—ಹೊರಗೆ ಹೇಗೆ ಬಂದೆ?

ದಿವಾಣ—ಗೋವಿಂದನ ಸಹಾಯದಿಂದ. ಈ ಕೆಲಸದಲ್ಲಿ ಒಬ್ಬ

ಬಾಲಕನು ಸಹಾಯ ನನಗೆ ಮಾಡದಿದ್ದರೆ ನನ್ನ ಬಿಡುಗಡೆಯು ಯಾರಿಂದಲೂ ಶಕ್ಯವಿದ್ದಿಲ್ಲ.

ಯದು—ಮತ್ತೇನು ವಿಶೇಷ?

ದಿವಾ—ಮೊದಲು ಶುಭವಾರ್ತೆಯನ್ನು ಹೇಳುವೆನು. ಇಂದು ನವಾಬ ಸೈಫುದ್ದೀನನ ಕೊನೆಯ ದಿವಸವು.

ಯದು—ಒಬ್ಬ ರಾಜನು ಸತ್ತರೆ ಮತ್ತೊಬ್ಬನು ರಾಜನಾಗುವನು. ಇದರಲ್ಲಿ ಹಿಂದುಗಳಿಗೇನು ಶುಭವು?

ದಿವಾ—ನಶೀರಿತನು ಪಟ್ಟಕ್ಕೆ ಬರುವದು ಹಿಂದುಗಳಿಗೆ ಶುಭದಿವಸವಲ್ಲವೇ? ಯಾಕಂದರೆ ಅವನ ಅತ್ಯಾಚಾರದಿಂದ ಹಿಂದೂ ಜನರು ಶಸ್ತ್ರವನ್ನು ಹಿಡಿಯಬೇಕಾಗುವದು. ಒಂದು ನೂರು ವರ್ಷಗಳ ನಂತರ ಮತ್ತೆ ಹಿಂದುಗಳಿಗೆ ಶಸ್ತ್ರ ಹಿಡಿಯುವ ಸುದಿನವು ಪ್ರಾಪ್ತವಾಗುವದು. ಹೀಗೆ ಇನ್ನು ಕೆಲವು ಕಾಲ ಕ್ರಮಿಸಿದ್ದರೆ, ಹಿಂದುಗಳು ನಿರ್ವೀರ್ಯರಾಗುತ್ತಿದ್ದಿಲ್ಲವೆ?

ಯದು—ಮತ್ತೇನು ವಿಶೇಷ?

ದಿವಾ—ನಿಮ್ಮ ತಂದೆಯು ಸೆರೆಯಲ್ಲಿರುವನು.

ದಿವಾ—ರಾಜಧಾನಿಯ ಕಿಲ್ಲೆಯಲ್ಲಿ.

ಯದು—ಇದು ಯಾರ ಕೆಲಸ?

ದಿವಾ—ನಶೀರಿತಶಹನದು.

ಯದು—ಆ ನೀಚನು ಅವರನ್ನು ಅಲ್ಲಿ ಕೊಲೆ ಮಾಡಿಸಬಹುದಲ್ಲವೆ?

ದಿವಾ—ಕಿಲ್ಲೇದಾರ ಸಮಶೇರಖಾನನು ಸಜ್ಜನನು. ಈ ಪ್ರಕಾರದ ಕೊಲೆಗೆ ಆಸ್ಪದ ಕೊಡಲಿಕ್ಕಿಲ್ಲ.

ಯದು—ಇಷ್ಟರಿಂದ ನಾವು ನಿಶ್ಚಿಂತರಾಗಬಹುದೇ?

ದಿವಾ—ನೀವು ಏನು ಮಾಡಬೇಕೆನ್ನುವಿರಿ?

ಯದು—ಕಿಲ್ಲೆಗೆ ಮುತ್ತಿಗೆ ಹಾಕಬೇಕೆಂದು ನನ್ನ ಅಭಿಪ್ರಾಯವು.

ದಿವಾ—ಅದು ಕಠಿಣಕಾರ್ಯವು. ಇದಕ್ಕೆ ೨೫ ಸಾವಿರ ಸೈನ್ಯ ಬೇಕಾಗುವದು.

ಯದು—'ಅವರು ಸಪ್ತದುರ್ಗದಲ್ಲಿರುವರು' ಎಂದು ಹೇಳಿ, ದಿವಾಣನು ಕುಮಾರನಿಗೆ ದೇವೀಕೋಟೆಯ ಯುದ್ಧದ ಸಂಗತಿಯನ್ನು ತಿಳಿಸಿದನು;

ಮತ್ತು ಸ್ವೀಕೃತಕಾರ್ಯವನ್ನು ಬಹು ಸಮಾಧಾನ ವೃತ್ತಿಯಿಂದ ಮಾಡ ಲಿಕ್ಕೆ ತಿಳಿಸಿದನು.

ಯದು—ಈಗ ಮುಂದೇನು ಮಾಡತಕ್ಕದ್ದು?

ದಿವಾ–ಕಿಶೋರಿಮೋಹನನ ಉಪವನದಲ್ಲಿ ಒಬ್ಬ ತೀಕ್ಷ್ಣಬುದ್ಧಿಯ ಬಾಲಕನಿರುವನು. ಅವನು ಬಾಲಕನೋ–ಬಾಲಕಿಯೋ? ಎಂಬುದು ಮಾತ್ರ ಇದುವರೆಗೂ ನನಗೆ ತಿಳಿದಿಲ್ಲ. ಅವನು ನಿಮ್ಮ ತಂದೆಯ ಹಿತ ಚಿಂತಕನು. ನೀವು ಅವನಿಗೆ ಭೆಟ್ಟಿಯಾಗಿ ನಿಮ್ಮ ತಂದೆಯ ವರ್ತಮಾನ ವನ್ನು ತಿಳಿದು ಬಂದು ತಿಳಿಸಲಿಕ್ಕೆ ಹೇಳಿರಿ ಅವನು ಗುಪ್ತಚರನ ಕಾರ್ಯಕ್ಕೆ ಯೋಗ್ಯನಿರುವನು.

## ( ೨೭ )

"ಮೀನಾರಖಾನ, ನೀನು ದೇವೀಕೋಟೆಗೆ ಹೋಗಲಿಲ್ಲವೇ?"

"ಸರಕಾರ, ಹೋಗುವ ಅವಶ್ಯಕತೆಯೇ ಉಳಿಯಲಿಲ್ಲ"

"ಅದೇಕೆ?"

"ನಡುಹಾದಿಯಲ್ಲೇ ಗಣೇಶನಾರಾಯಣನು ಭೆಟ್ಟಿಯಾದನು"

"ಅವನನ್ನು ಸೆರೆ ಹಿಡಿದುಕೊಂಡು ಬಂದಿರುವೆಯಾ?"

"ಹೌದು; ಅವನನ್ನು ನಿಮ್ಮ ಅಪ್ಪಣೆಯ ಮೇರೆಗೆ ಕಿಲ್ಲೆಯೊಳಗಿನ ಸೆರೆಮನೆಯಲ್ಲಿರಿಸಿರುವೆನು."

"ಹಾಗಾದರೆ ನಾಳೆ ಬೆಳಗಾಗುವದರೊಳಗೆ ಅವನ ಶಿರಚ್ಛೇದ ಮಾಡ ತಕ್ಕದ್ದು. ತಿಳಿಯಿತೆ?"

"ಅಪ್ಪಣೆಯಂತೆ ನಡೆಯುವೆನು; ಆದರೆ ನನಗೆ ಇದರ ಪ್ರತಿ ಫಲವೇನು?"

"ನಿನಗೆ ಮುಖ್ಯ ಸೇನಾಪತಿಯ ಸ್ಥಳವನ್ನು ಕೊಡುತ್ತೇನೆ."

ಮೀನಾರಖಾನನು ಅಲ್ಲಿಂದ ಹೊರಟು ಒಂದು ನೂರು ಜನ ಸೈನಿಕ ರನ್ನು ಸಂಗಡ ಕರಕೊಂಡು ಕಿಲ್ಲೆಯ ಕಡೆಗೆ ನಡೆದನು. ಕಿಲ್ಲೆಯ ಸುತ್ತಲೂ ಆಳವಾದ ಕಂದಕವು. ಯಾವಾಗಲೂ ನೀರಿನಿಂದ ತುಂಬಿರುತ್ತಿತ್ತು. ಮೀನಾರಖಾನನು ಕಂದಕದ ಹತ್ತಿರ ಹೋಗಿ ರಾಜನ ಹುಕುಮುನ್ನು ತೋರಿಸಿದ ಕೂಡಲೆ ಸೇತುವೆಯು ಜೋಡಿಸಲ್ಪಟ್ಟಿತು. ಮೀನಾರಖಾನನು

ತನ್ನ ಜನರೊಂದಿಗೆ ಕಂದಕವನ್ನು ದಾಟಿ ಕಿಲ್ಲೆಯ ಬಾಗಿಲಿಗೆ ಹೋಗಿ, ಅಲ್ಲಿಯೂ ಹುಕುಮನ್ನು ತೋರಿಸಿ ಕಿಲ್ಲೆಯೊಳಗೆ ಪ್ರವೇಶ ಮಾಡಿದನು. ಇತ್ತ ಆ ಸೇತುವೆಯು ಮೇಲಕ್ಕೆತ್ತಲ್ಪಟ್ಟಿತು. ಮನೋಹರನು ದೂರ ನಿಂತು ಇದನ್ನೆಲ್ಲ ನೋಡುತ್ತಿದ್ದನು. ಅವನು ಒಂದು ಗಳಿಗೆ ತಡೆದು, ನಂತರ ತಾನು ತಂದಿದ್ದ ಉದ್ದನ್ನ ಬಿದರುಗಳನ್ನು ಕಂಡಕದ ಈ ಕಡೆಗೆ ನೀರಲ್ಲಿಟ್ಟು ಬೇರೊಂದು ತುದಿಯನ್ನು ಕಿಲ್ಲೆಯ ಗೋಡೆಗೆ ಆನಿಸಿ ಕಂದಕವನ್ನು ದಾಟಿ ಹೋದನು; ಆದರೆ ಕಿಲ್ಲೆಯ ಮಹಾದ್ವಾರದಿಂದ ಒಳಗೆ ಪ್ರವೇಶಮಾಡಲು ಬರುವಂತಿದ್ದಿಲ್ಲ. ಅದರಿಂದ ಸುಮ್ಮನೆ ಅಲ್ಲಿ ಅಲೆದಾಡಹತ್ತಿದನು. ಅವನು ತನ್ನ ಎಲ್ಲ ದೇಹವನ್ನು ಕರೇ ವಸ್ತ್ರದಿಂದ ಮುಚ್ಚಿಕೊಂಡಿದ್ದನು.

ಇಷ್ಟರಲ್ಲಿ ಜೋನಾಬಖಾನನು ಪಟ್ಟಣದಿಂದ ಕಿಲ್ಲೆಯೊಳಗೆ ಪ್ರವೇಶ ಮಾಡಿದನು. ಅವನು ಕಿಲ್ಲೆಯೊಳಗಿನ ಎಲ್ಲ ಅಧಿಕಾರಿಗಳಿಗೆ ನವಾಬನ ಅಂತ್ಯ ದರ್ಶನವನ್ನು ತೆಗೆದುಕೊಳ್ಳಬೇಕೆಂಬ ನವಾಬನ ಆಜ್ಞೆಯನ್ನು ತಿಳಿಸಿದನು. ಆ ಪ್ರಕಾರ ಎಲ್ಲರೂ ಹೋದರು; ಆದರೆ ಮೀನಾರಖಾನನು ಮಾತ್ರ ಹೊರಡಲಿಲ್ಲ. ಜೋನಾಬಖಾನನು ಅವನನ್ನು ಕುರಿತು:-"ಯಾಕೆ, ಖಾನಸಾಹೇಬ, ನೀವು ಹೋಗುವದಿಲ್ಲವೇ?" ಎನ್ನಲು, ಮೀನಾರನು:—"ನಾನು ಹೋಗಿ ಮಾಡುವದೇನು? ನವಾಬನ ಚಾಕರಿಯನ್ನು ಇಲ್ಲಿ ಇದ್ದು ಮಾಡಿದರೆ ಹೋದಂತಾಗುವದು," ಎಂದನು. ಅದಕ್ಕೆ ಜೋನಾಬನು:-'ಹಾಗೆನ್ನ ಕೂಡದು. ನವಾಬನ ಅಂತಿಮ ಆಜ್ಞೆಯನ್ನು ಪಾಲಿಸಿರಿ,' ಎನ್ನಲು, ಮೀನಾರನು:—"ಒಳ್ಳೇದು ನೀವು ನಡೆಯಿರಿ, ನಾನು ಹಿಂದಿನಿಂದ ಬರುವೆನೆ"ಂದನು. ಇತ್ತ ಜೋನಾಬನು ಅಲ್ಲಿಂದ ಹೊರಟು ಮಹಾದ್ವಾರವನ್ನು ದಾಟುವಾಗ ದೂರ ಗೋಡೆಯ ಹತ್ತರ ಯಾರೋ ನಿಂತಂತೆ ಭಾಸವಾಯಿತು. ಅವನು ಆ ಕಡೆಗೆ ಹೊರಟನು. ತನ್ನ ಕಡೆಗೆ ಯಾರೋ ಬರುವರೆಂದು ತಿಳಿದು ಮನೋಹರನು ಅಲ್ಲಿಯೇ ನೆಲದ ಮೇಲೆ ಮಲಗಿದನು. ಜೋನಾಬಖಾನನು ಹತ್ತರ ಹೋಗಿ—"ನೀನು ಯಾರು?" ಎಂದನು.

"ನಾನು ಮನುಷ್ಯನು."

"ಮನುಷ್ಯನೆಂಬುದು ತಿಳಿಯುತ್ತದೆ. ನಿನ್ನ ಹೆಸರೇನು?"

"ನಾನು ಯಾರೇ ಇರಲಿ; ದಯಮಾಡಿ ನನ್ನನ್ನು ಕೋಟೆಯೊಳಗೆ ಹೋಗಗೊಡಿರಿ."

"ಕೋಟೆಯೊಳಗೇನು ಕೆಲಸವಿರುವದು ?"

"ಅಭಯವನ್ನು ಕೊಟ್ಟರೆ ಹೇಳುತ್ತೇನೆ."

ಕೋಮಲ ಕಂಠಸ್ವರವನ್ನು ಕೇಳಿ ಜೋನಾಬಖಾನನಿಗೆ ದಯೆ ಹುಟ್ಟಿತು. ಅವನು "ಅಭಯವನ್ನು ಕೊಟ್ಟಿರುವೆನು ಹೇಳು" ಎಂದನು.

ಮನೋ—ನಾನು ಕಿಲ್ಲೇದಾರ ಸಮಸೇರಖಾನರ ಕಡೆಗೆ ಹೋಗ ಬೇಕಾಗಿದೆ.

ಜೋನಾಬ—ಈಗ ಅವನು ಅರಮನೆಯಲ್ಲಿರುವನು.

ಮನೋ—ಹಾಗಾದರೆ ಸೇನಾಪತಿ ಜೋನಾಬಖಾನರ ಕಡೆಗೆ ಹೋಗುತ್ತೇನೆ.

ಜೋನಾ—ಕೆಲಸವೇನು ?

ಮನೋ—ಅದು ಅವರ ಮುಂದೆ ಹೇಳತಕ್ಕದ್ದು. ಅನ್ಯರ ಮುಂದೆ ಹೇಳುವಂತಿಲ್ಲ.

ಜೋನಾ—ನಾನೇ ಜೋನಾಬಖಾನನು.

ಮನೋಹರನು ಅವನನ್ನು ದಿಟ್ಟಿಸಿ ನೋಡಿ—"ಹೌದು, ನೀವು ಜೋನಾಬಖಾನರು. ನಾನು ನಿಮ್ಮನ್ನು ಮೊದಲನೇ ಸಾರೆ ದೇವೀಕೋಟೆಯಲ್ಲಿ ಇಬ್ರಾಹಿಮಖಾನನ ಮನೆಯಲ್ಲಿ ನೋಡಿರುವೆನು. ನಂತರ ಪಠಾಣರು ದೇವಿಯ ಗುಡಿಯ ಮುಂದೆ ಯುದ್ಧ ಮಾಡುವಾಗ ಗಣೇಶನಾರಾಯಣನನ್ನು ರಕ್ಷಣೆ ಮಾಡಲು ಅವನನ್ನು ಅಪ್ಪಿಕೊಂಡಾಗ ನೋಡಿರುವೆನು. ನೀವು ಮನುಷ್ಯಕುಲಕ್ಕೆ ಅಲಂಕಾರ ಸ್ವರೂಪರು!" ಎಂದು ಅಂದು ಎರಡೂ ಕೈಗಳನ್ನು ಜೋಡಿಸಿಕೊಂಡು ವಿನಯದಿಂದ: "ಖಾನಸಾಹೇಬ, ಈಗ ನಾನು ಬಹಳ ಸಂಕಟಕ್ಕೊಳಗಾಗಿರುವೆನು. ನೀವು ಸಹಾಯ ಮಾಡಿದರೆ ರಾಜಾ ಗಣೇಶನಾರಾಯಣರು ಬದುಕುವರು"

ಜೋನಾ—ರಾಜಾ ಗಣೇಶನಾರಾಯಣರು ಎಲ್ಲಿರುವರು ?

ಮನೋ—ಇಲ್ಲಿಯೇ; ಕಿಲ್ಲೆಯೊಳಗಿನ ಕಾರಾಗೃಹದಲ್ಲಿ.

ಜೋನಾ—ಸೆರೆ ಹಾಕಿದವರಾರು ?

ಮನೋ—ನಶೆರಿತಶಹನು.

ಜೋನಾ—ಹಾಗಾದರೆ ನವಾಬನ ಅಥವಾ ನಶೆರಿತನ ಆಜ್ಞೆಯ ಹೊರತು ಈ ಕೆಲಸವು ಅಸಾಧ್ಯವು.

ಮನೋ—ವಿಲಂಬಮಾಡಿ ಉಪಯೋಗವಿಲ್ಲ. ಏನಾದರೂ ಉಪಾಯ ಮಾಡಬೇಕು.

ಜೋನಾ—ಅದೇಕೆ?

ಮನೋ—ಪೂನಾರಖಾನನು ಒಂದು ನೂರು ಜನರನ್ನು ಕರೆದು ಕೊಂಡು ಇಂದು ರಾತ್ರಿ ರಾಜನ ವಧೆಯನ್ನು ಮಾಡತಕ್ಕವನು. ಈಗ ಅವನು ಕಿಲ್ಲೆಯಲ್ಲಿರುವನು.

ಪೂನಾರಖಾನನು ನವಾಬನ ಅಂತ್ಯ ದರ್ಶನಕ್ಕೆ ಹೋಗದೆಯಿದ್ದ ಕಾರಣವು ಜೋನಾಬಖಾನನಿಗೆ ಈಗ ಹೊಳೆಯಿತು. ಆಗ ಅವನು—"ಏನೇ ಆಗಲಿ, ಈಗಿಂದೀಗಲೆ ಅವನ ಉದ್ಧಾರದ ಕೆಲಸವು ನನ್ನಿಂದ ಅಶಕ್ಯವು." ಎಂದನು.

ಮನೋಹರನು ತಿರಸ್ಕಾರದಿಂದ:—"ಏನು, ಸೇನಾಪತಿ ಜೋನಾಬ ಖಾನನಿಗೆ ಇದು ಅಶಕ್ಯವೇ? ಈಗ ತಿಳಿಯಿತು. ಹಿಂದುಗಳಿಗೆ ಹಿಂದುಗಳೇ ಸಹಾಯಕರು. ಅವರು ಮುಸಲ್ಮಾನರ ಸಹಾಯ ಬೇಡುವದು ಮುಖ್ಯ ತನವು. ಸೇನಾಪತಿಗಳೇ, ಸರಿದು ನಿಲ್ಲಿರಿ. ನಿಮಗೆ ಅಸಾಧ್ಯವಾದ ಕಾರ್ಯ ವನ್ನು ಈ ಕ್ಷುದ್ರ ಬಾಲಿಕೆಯು ಹೇಗೆ ಮಾಡುವಳೆಂಬವನ್ನು ನೋಡಿರಿ.

ಜೋನಾ—ಏನು, ನೀನು ಹೆಂಗಸೇ?

ಮನೋ—ಹೌದು. ಹೆಂಗಸರಿಂದೇನಾಗುವದೆನ್ನುವಿರಾ? ನಿಮ್ಮಂಥ ವೀರ ಪುರುಷರಿಂದಾಗದ ಕಾರ್ಯವನ್ನು ನಾನು ಕ್ಷಣದಲ್ಲಿ ಮಾಡುವೆನು.

ಜೋನಾ—ತಾಯೀ, ನೀನಾರು?

ಮನೋ—ನಾನೇ? ನಾನೊಬ್ಬ ಹಿಂದೂ ಬಾಲಿಕೆಯು. ಇದರ ಹೊರತು ನನ್ನ ಅನ್ಯ ಪರಿಚಯವೇಕೆ?

ಜೋನಾ—ನೀನು ಯಾರೇ ಆಗಲಿ, ನಿನ್ನಂಥ ವೀರ ಸ್ತ್ರೀಯರು ಹಿಂದೂ ಜನಾಂಗದಲ್ಲಿ ಹುಟ್ಟಹತ್ತಿದ ಬಳಿಕ ಹಿಂದೂ ಜನರಿಗೆ ಶುಭಕಾಲವು ನಿಶ್ಚಯವಾಗಿ ಬಂದಿರುವದು. ಈಗ ನಾನು ನಿರ್ಮಲ ಮನಸ್ಸಿನಿಂದ ಹೇಳುವ ದೇನಂದರೆ:—ನಾನು ಗಣೇಶನಾರಾಯಣನನ್ನು ಕಾರಾಗೃಹದಿಂದ ಮುಕ್ತ ಮಾಡದಿದ್ದರೂ ನಿಶ್ಚಯವಾಗಿ ಬದುಕಿಸುವೆನೆಂದು ಹೇಳುತ್ತೇನೆ. ನೀನು ಮನೆಗೆ ಹೋಗು!!

ಮನೋ—ನನಗೆ ಮನೆಯೇ ಇಲ್ಲ. ಹೋಗುವದೆಲ್ಲಿಗೆ? ರಾಜಾ

ಗಣೇಶನಾರಾಯಣನು ಕಿಲ್ಲೆಯಿಂದ ಸುರಕ್ಷಿತವಾಗಿ ಹೊರಗೆ ಹೋದ ದ್ದನ್ನು ನೋಡಿದ ನಂತರವೇ ನಾನು ಇಲ್ಲಿಂದ ಆಚೆಗೆ ಹೋಗತಕ್ಕವಳು.

ಜೋನಾ—"ಹಾಗಾದರೆ ನಾನು ನನ್ನ ಕರ್ತವ್ಯವನ್ನು ಮಾಡ ಬೇಕಾಗುವದು. ನಿನ್ನನ್ನು ನಜರ ಬಂದಿಯಲ್ಲಿಡಿಸುವೆನೆ"ಂದು ಹೇಳಿ, ಕಿಲ್ಲೆಯೊಳಗೆ ಹೋಗಿ ಒಬ್ಬ ಕಾವಲುಗಾರನಿಗೆ—"ಬಾಗಿಲ ಹೊರಗೆ ಒಬ್ಬ ಬಾಲಿಕೆಯಿರುವಳು. ಆವಳನ್ನು ನಜರ ಬಂದಿಯಲ್ಲಿಡಿರಿ" ಎಂದು ಅಪ್ಪಣೆ ಕೊಟ್ಟು, ಕಾರಾಗೃಹದ ಅಧ್ಯಕ್ಷನನ್ನು ಕರೆಯಿಸಿ ಅವನನ್ನು ಕುರಿತು:—ಗಣೇಶನಾರಾಯಣರು ಸೆರೆಯಲ್ಲಿರುವರೇ?" ಎಂದು ಕೇಳಲು, ಅವನು 'ಹೌದೆ'ಂದನು. ಆಗ ಜೋನಾಬಖಾನನು ಅವನನ್ನು ಕುರಿತು—"ಈಗ ನಾನು ಹೋಗಿ ನವಾಬನ ಕಡೆಯಿಂದ ಗಣೇಶನಾರಾಯಣನ ಬಿಡುಗಡೆಯ ಹುಕುಮು ತರುವೆನು. ನಾನು ಬರುವ ವರೆಗೆ ನೀನು ಯಾರನ್ನೂ ಕಾರಾಗೃಹದಲ್ಲಿ ಬಿಡಬೇಡ" ಎಂದು ಹೇಳಲು, ಕಾರಾಗೃಹದ ಅಧ್ಯಕ್ಷನು 'ಅಪ್ಪಣೆ' ಎಂದು ಹೋದನು. ಅಷ್ಟರಲ್ಲಿ ಜೋನಾಬಖಾನನ ಹಿಂದೆ ನಿಂತ ಮನೋಹರನು—'ಇಷ್ಟರಿಂದ ಕಾರ್ಯವಾಗದು' ಎಂದನು. ಜೋನಾಬ ಖಾನನು ಹಿಂತಿರುಗಿ ನೋಡಿ, ವಿಸ್ಮಯದಿಂದ:—"ನೀನು ಇಲ್ಲಿಗೆ ಹೇಗೆ ಬಂದೆ?" ಎಂದನು.

ಮನೋ—ನಾನು ನಿಮ್ಮ ಹಿಂದಿನಿಂದಲೇ ಬಂದಿರುವೆನು.

ಜೋನಾ—ಕಾವಲುಗಾರನಿಗೆ ನಿನ್ನನ್ನು ನಜರ ಬಂದಿಯನ್ನಾಗ ಮಾಡಲು ಹೇಳಿದ್ದೆನು. ಅವನು ಹೇಗೆ ಬಿಟ್ಟನು?

ಮನೋ—ನೀವು ಬಾಲಿಕೆಯನ್ನು ನಜರ ಬಂದಿಯನ್ನಾಗಿ ಮಾಡಲಿಕ್ಕೆ ಹೇಳಿದ್ದಿರಿ; ಬಾಲಕನ ವಿಷಯಕ್ಕೆ ಹೇಳಿದ್ದಿಲ್ಲ. ಇದಲ್ಲದೆ ನಾನು ನಿಮ್ಮ ಹಿಂದೆ ಇದ್ದ ಕಾರಣ ಕಾವಲುಗಾರನು ನನ್ನನ್ನು ನಿಮ್ಮ ಸೇವಕನೆಂದು ತಿಳಿದನು.

ಜೋನಾಬ—ನೀನು ಬಹಳೇ ಚತುರಳು. ನಾನು ಮುಂದೇನು ಮಾಡಬೇಕೆನ್ನುತ್ತೀ?

ಮನೋ—ನೀವು ಸೆರೆಮನೆಯ ಸುತ್ತಲೂ ಪಹರೆಯನ್ನು ಇಟ್ಟು, ಒಳಗೆ ಯಾರನ್ನೂ ಹೋಗಗೊಡದಂತೆ ವ್ಯವಸ್ಥೆಯನ್ನು ಮಾಡಿರಿ. ಅಂದರೆ ಗಣೇಶನಾರಾಯಣನು ಸುರಕ್ಷಿತವಾಗಿ ಉಳಿಯುವನು.

ಜೋನಾಬಖಾನನು ಹಾಗೆಯೇ ಆಗಲೆಂದು ಹೇಳಿ, ಆ ಪ್ರಕಾರ ವ್ಯವಸ್ಥೆಯನ್ನು ಮಾಡಿ ಅರಮನೆಗೆ ಹೊರಟನು.

( ೨೮ )

ಇಂದು ಗೌಡರಾಜಧಾನಿಯ ಸೈಫುದ್ದೀನನ ಅರಮನೆಯಲ್ಲಿ ಜನ ದಟ್ಟಣೆಯು ವಿಶೇಷವಾಗಿತ್ತು. ಪ್ರಶಸ್ತವಾದ ಅರಮನೆಯಲ್ಲಿ ಕಾಲಿಡಲು ಸಹ ಅವಕಾಶವಿಲ್ಲದಷ್ಟು ಜನರು ನೆರೆದಿದ್ದರು. ಇವರೆಲ್ಲರೂ ನವಾಬ ಸೈಫುದ್ದೀನನ ಅಂತ್ಯಕಾಲದ ಭೆಟ್ಟಿಗೆ ಬಂದಿದ್ದರು. ಇಷ್ಟು ಜನದಟ್ಟಣೆ ಯಿದ್ದರೂ ಅರಮನೆಯಲ್ಲಿ ಗಂಭೀರವಾದ ಶಾಂತತೆಯಿತ್ತು. ನವಾಬನು ಇಂದು ಬೆಳಗು ಕಳೆಯುವದಿಲ್ಲವೆಂದು ಹಕೀಮನು ಹೇಳಿದ್ದನು. ಮರಣ ಕಾಲವು ಸಮೀಪಿಸಿದ್ದರೂ ನವಾಬನ ಮೈಮೇಲಿನ ಪ್ರಜ್ಞೆಯು ತಪ್ಪಿದ್ದಿಲ್ಲ.

ನವಾಬನು ಬೆಳ್ಳಿಯ ಮಂಚದ ಮೇಲೆ ಮಲಗಿಕೊಂಡು ಮನಸ್ಸಿನಲ್ಲಿ:- 'ಈ ನನ್ನ ಬಂಧು ಬಾಂಧವರೆಲ್ಲರೂ ಇಲ್ಲಿಯೇ ಉಳಿಯತಕ್ಕವರು. ನಾನು ನನ್ನ ಕರ್ಮಫಲವನ್ನು ಮಾತ್ರ ಸಂಗಡ ತಕ್ಕೊಂಡು ಅಪರಿಚಿತವಾದ ರಾಜ್ಯಕ್ಕೆ ಹೋಗತಕ್ಕವನು. ಈ ಸಂಗತಿಯು ನನಗೆ ಮೊದಲೇ ತಿಳಿದಿದ್ದರೆ.. ಇನ್ನು ಉಪಾಯವಿಲ್ಲ.' ಎಂದು ಆಲೋಚಿಸತೊಡಗಿದ್ದನು. ಆಗ ಮುಲ್ಲಾನು ಕುರಾಣದ ಪಾನನ್ನು ತಿರುವಿ ಹಾಕುತ್ತ:—"ಹುಜೂರ"ಎಂದನು.

ಸೈಫುದ್ದೀನನು ಅವನ ಕಡೆಗೆ ತಿರುಗಿ:—"ಇನ್ನು ಈ ಮುಲ್ಲಾನ ಕೆಲಸವಿಲ್ಲ. ಸೇನಾಪತಿ ಎಲ್ಲಿರುವನೆ"ಂದು ಕೇಳಲು, ಸೇನಾಪತಿಯಾದ ಸಮಸೇರಖಾನನು ಮುಂದೆ ಬಂದು:—"ನಾನು ಇಲ್ಲಿಯೇ ಇರುವೆನು." ಎಂದನು.

ಸೈಫು—"ಗಣೇಶನಾರಾಯಣನು ಇನ್ನೂ ಬರಲಿಲ್ಲವೇ?"

ಸಮಶೇ—ನಾಲ್ಕೂ ಕಡೆಗೆ ಜನರನ್ನು ಕಳುಹಿಸಿದ್ದೇನೆ. ಹೋದವ ರಾರೂ ಬಂದಿಲ್ಲ.

ಸೈಫು—ಅವನೇಕೆ ಬಂದಾನು? ಅವನು ಬೇಕೆಂತ ಬಂದಿರಲಿಕ್ಕಿಲ್ಲ.

ಇಷ್ಟರಲ್ಲಿ ಜೋನಾಬಖಾನನು ಅಲ್ಲಿಗೆ ಬಂದನು. ನವಾಬನ ಕಡೆಯ ಮಾತುಗಳು ಅವನ ಕಿವಿಗೆ ಬಿದ್ದ ಕೂಡಲೆ ಅವನು—"ನವಾಬಸಾಹೇಬ, ಗಣೇಶನಾರಾಯಣನು ಅಂಥ ಮನುಷ್ಯನಲ್ಲ. ಬರಲಾರದಂತಹ ಸ್ಥಿತಿ ಯಲ್ಲಿರುವನು"

ಸೈಫು—ಅದೇಕೆ?

ಜೋನಾಬ—ಈಗ ಅವನು ಈ ಕೋಟೆಯ ಕಾರಾಗೃಹದಲ್ಲಿರುವನು.

ಸೈಫು—ಹಾ! ಏನಂದಿ? ಅವನನ್ನು ಸೆರೆ ಹಾಕಲು ಆಜ್ಞೆಯನ್ನು ಯಾರು ಕೊಟ್ಟರು?

ಜೋನಾಬ—ಪ್ರಭುಗಳೇ, ಅದನ್ನು ಹೇಳಲು ಸಾಧ್ಯವಿಲ್ಲ.

ಸೈಫು—ಜೋನಾಬಖಾನ, ತಿಳಿಯಿತು. ಸಶೆರಿತನು ಮಾಡಿದ ಕಾರ್ಯವಿದು. ಸಶೆರಿತ, ನಿನ್ನ ಹಿತವೇ ನಿನಗೆ ಗೊತ್ತಿಲ್ಲ. ನಿನ್ನ ಸಿಂಹಾಸನವನ್ನು ನೀನೇ ನಾಶಗೊಳಿಸುವೆ. ಉಪಾಯವಿಲ್ಲ. ನಿನ್ನ ಹಣೆಯ ಬರಹದಲ್ಲಿದ್ದಂತೆ ಆಗುವದು!

ಸಶೆರಿತನು ಸಿಟ್ಟಿನಿಂದ ಜೋನಾಬಖಾನನ ಕಡೆಗೆ ನೋಡುತ್ತ: "ರಾಜದ್ರೋಹಿಗಳಿಗೆ ದಂಡಸದಿದ್ದರೆ ದೇಶದಲ್ಲಿ ಶಾಂತತೆಯುಳಿಯಲಿಕ್ಕಿಲ್ಲ."

ಸೈಫು—ದೇಶದೊಳಗಿನ ಶಾಂತತೆಯು ನಿನ್ನಿಂದಲೇ ಭಂಗವಾಗುವದು. ದೇವಿಯ ಕೋಟೆಯ ದೇವಿಯ ಗುಡಿಯನ್ನು ಕೆಡಹುವ ಕಾರ್ಯಕ್ಕೆ ನೀನು ಕೈ ಹಾಕಿದ್ದರಿಂದಲೇ ಗಣೇಶನಾರಾಯಣನು ಶಸ್ತ್ರ ಹಿಡಿದನು. ಇರಲಿ. ಜೋನಾಬಖಾನ, ನೀನು ಕಿಲ್ಲೆಯೊಳಗೆ ಹೋಗಿ ಗಣೇಶನಾರಾಣನನ್ನು ಬಂಧಮುಕ್ತ ಮಾಡಿ ನನ್ನೆಡೆಗೆ ಕರೆದುಕೊಂಡು ಬಾ, ಎಂದು ಹೇಳಲು ಜೋನಾಬಖಾನನು ಹೋದನು.

ನಂತರ ಸೈಫುದ್ದೀನನು—"ಎಲೈ, ನನ್ನ ಸರದಾರರೇ, ನಾನು ಗಣೇಶನಾರಾಯಣನಿಗೆ ಮುಖ್ಯ ವಜೀರ ಪದವನ್ನು ಕೊಡಬೇಕೆಂದು ಮಾಡಿರುವೆನು. ಇದಕ್ಕೆ ನಿಮ್ಮ ಅಭಿಪ್ರಾಯವೇನು?" ಎಂದು ಕೇಳಲು, ಎಲ್ಲರೂ ಸುಮ್ಮನಿದ್ದರು. ಆಗ ನವಾಬನು:—"ತಿಳಿಯಿತು, ನಿಮ್ಮ ಅಭಿಪ್ರಾಯವು ತಿಳಿಯಿತು. ಇದಕ್ಕೆ ನಿಮ್ಮ ಸಮ್ಮತಿಯು ಇರಲಿಕ್ಕಿಲ್ಲ. ನಾನಾದರೂ ವೀರತನ-ಸದ್ಗುಣಗಳಿಗೆ ಮೆಚ್ಚಿ ಈ ಕೆಲಸವನ್ನು ಅವನಿಗೆ ಕೊಡುವೆನೆಂದು ನೀವು ಭಾವಿಸಬೇಡಿರಿ. ನಿಮ್ಮಲ್ಲಿ ಅವನಿಗಿಂತ ಶೂರರೂ ಸದ್ಗುಣಿಗಳೂ ಅನೇಕ ಜನರಿರುವಿರಿ" ಎಂದನು. ಆಗ ಸರದಾರರಲ್ಲೊಬ್ಬನು:—"ಹಾಗಾದರೆ ಅವನನ್ನು ವಜೀರನನ್ನಾಗಿ ಮಾಡುವ ಕಾರಣವೇನು?"

ಸೈಫು—"ಅವನು ಹಿಂದುವೆಂದು."

ಸರದಾರ—ತಮ್ಮ ಮಾತಿನ ಅರ್ಥವು ನಮಗೆ ತಿಳಿಯಲಿಲ್ಲ.

ಸೈಫು—ಹಿಂದೂ ಮುಸಲ್ಮಾನರ ಐಕ್ಯದಿಂದ ಪಠಾಣರಾಜ್ಯವು ಸ್ಥಿರವಾಗುವದು. ಕಾರಣ......

ಸರದಾರ—ಹಾಗಾದರೆ ನಮ್ಮ ಅಡ್ಡಿಯಿಲ್ಲ.

ಅಷ್ಟರಲ್ಲಿ ಗಣೇಶನಾರಾಯಣನು ಅಲ್ಲಿಗೆ ಬಂದು ವಿನಯದಿಂದ ನವಾಬನಿಗೆ ಮುಜುರೆಯನ್ನು ಮಾಡಿದನು. ನವಾಬನು ಅದನ್ನು ಸ್ವೀಕರಿಸಿ—“ಗಣೇಶನಾರಾಯಣ, ನಾನು ನಶಿರಿತನಿಗೆ ನನ್ನ ಭಾವೀ ಉತ್ತರಾಧಿಕಾರವನ್ನು ಕೊಡುವೆನು. ಇದಕ್ಕೆ ನಿನ್ನ ಒಪ್ಪಿಗೆಯಿರುವದಷ್ಟೇ?”

ಗಣೇ—ನಾನು ಒಬ್ಬ ಸಾಮಾನ್ಯ ಪ್ರಜೆಯು. ಇದರಲ್ಲಿ ನನ್ನ ಒಪ್ಪಿಗೆಯೇಕೆ?

ಸೈಫು—ಹಾಗಲ್ಲ; ಪ್ರಜೆಗಳಿಗೆ ರಾಜನನ್ನು ನಿರ್ಧರಿಸುವ ಅಧಿಕಾರವಿರುತ್ತದೆ.

ಗಣೇ—ಹಾಗಿದ್ದರೆ ಈ ಸರದಾರರಲ್ಲಿಯ ಒಬ್ಬನಿಗೆ ಆ ಅಧಿಕಾರವನ್ನು ಕೊಡಬೇಕೆಂದು ನನ್ನ ಅಭಿಪ್ರಾಯವಿದೆ.

ಗಣೇಶನಾರಾಯಣನಿಂದ ಈ ಪ್ರಕಾರದ ಉತ್ತರ ಬಂದೀತೆಂದು ಯಾರೂ ಭಾವಿಸಿದ್ದಿಲ್ಲ. ಆ ಉತ್ತರದಿಂದ ನವಾಬನ ಮನಸ್ಸಿಗೂ ವಿಷಾದವೆನಿಸಿತು. ನಶಿರಿತನಂತೂ ಸಿಟ್ಟಿನಿಂದ ಚಡಪಡಿಸಹತ್ತಿದನು. ಒಬ್ಬರ ಬಾಯಿಂದಲೂ ಮಾತು ಹೊರಡಲಿಲ್ಲ. ಕ್ಷಣಕಾಲದನಂತರ ನವಾಬನು—ಗಣೇಶನಾರಾಯಣ, ಆ ಅಧಿಕಾರವು ನವಾಬನ ಮಗನಿಗೇ ಇರುವದು.

ಗಣೇ—ಪ್ರಭುಗಳು ನನ್ನ ಅಭಿಪ್ರಾಯವನ್ನು ಕೇಳಿದ್ದರಿಂದ ಹೇಳಿದೆನು.

ನವಾಬನು ನಂತರ ಒಂದು ಬಟ್ಟಲದಲ್ಲಿ ಔಷಧ ತಕ್ಕೊಂಡು ಕುಡಿದು—ಗಣೇಶನಾರಾಯಣ, ನಶಿರಿತನ ವಿರುದ್ಧ ಶಸ್ತ್ರ ಹಿಡಿಯುವದಿಲ್ಲವೆಂದು ನನ್ನೆದುರಿಗೆ ಪ್ರತಿಜ್ಞೆ ಮಾಡು.

ಗಣೇ—“ನಶಿರಿತನು ನಿರಪರಾಧಿಗಳಾದ ಹಿಂದೂ ಜನರ ಮೇಲೂ ಹಿಂದೂ ಸ್ತ್ರೀಯರ ಮೇಲೂ ಎಲ್ಲಿಯ ವರೆಗೆ ಅತ್ಯಾಚಾರವನ್ನು ಮಾಡುವದಿಲ್ಲವೋ, ಅಲ್ಲಿಯ ವರೆಗೆ ನಾನು ಆತನ ವಿರುದ್ಧ ಶಸ್ತ್ರ ಹಿಡಿಯುವದಿಲ್ಲವೆಂದು ಪ್ರತಿಜ್ಞೆ ಮಾಡಿ ಹೇಳುತ್ತೇನೆ.”

ಗಣೇಶನಾರಾಯಣನ ಮಾತು ನವಾಬನ ಮನಸ್ಸಿಗೆ ಬರಲಿಲ್ಲ. ಬರದಿದ್ದರೆ ಮಾಡುವದೇನು? ಆಗ ಅನ್ಯ ಉಪಾಯವಿದ್ದಿಲ್ಲ. ನವಾಬನು

ಮತ್ತೆ—"ಹಾಗೆಯೇ ಆಗಲಿ. ಗಣೇಶನಾರಾಯಣ, ನಿನಗೆ ವಜೀರಪದವನ್ನು ಕೊಡುತ್ತೇನೆ."

ಗಣೇ—ನನಗೆ ವಜೀರಪದವೆ? ಪ್ರಭುಗಳು ಈ ಸೇವಕನ ಅಪರಾಧವನ್ನು ಕ್ಷಮಿಸಬೇಕು.

ಸ್ವೈಪು—ಹಾಗಾಗದು. ನೀನು ಸ್ವೀಕರಿಸಲೇಬೇಕು. ಹಿಂದುಗಳು ಕೃತಜ್ಞರೆಂಬದು ನನಗೆ ಪೂರ್ಣ ನಂಬಿಗೆಯಿದೆ. ನಮ್ಮ ಅನ್ನವನ್ನುಂಡು ನೀನು, ಎಂದಿಗೂ ನಮ್ಮ ಮೇಲೆ ತಿರುಗಿ ಬೀಳಲಾರೆ?

ಗಣೇ—ಹಾಗೆಯೇ ಆಗಲಿ; ಆದರೆ ನಶಿರಿತನ ಕೈಕೆಳಗೆ ಹೆಚ್ಚು ದಿವಸ ನಾನು ಆ ಕೆಲಸ ಮಾಡುವ ಪ್ರಸಂಗವು ಒರಲಿಕ್ಕಿಲ್ಲವೆಂದು ನನಗೆ ಅನಿಸುವದು.

ನಂತರ ನವಾಬನು ನಶಿರಿತನನ್ನು ಕುರಿತು—"ನಶಿರಿತ್, ಗಣೇಶನಾರಾಯಣನನ್ನು ಎಂದೂ ಅವಮಾನಗೊಳಿಸುವದಿಲ್ಲವೆಂದೂ ಮತ್ತು ಹಿಂದೂ ಸ್ತ್ರೀಯರ ಮೇಲೂ ಹಿಂದೂ ಧರ್ಮದ ಮೇಲೂ ಅತ್ಯಾಚಾರ ಮಾಡುವದಿಲ್ಲವೆಂದೂ ನನ್ನನ್ನು ಮುಟ್ಟಿ ಪ್ರತಿಜ್ಞೆ ಮಾಡು" ಎಂದನು. ನಶಿರಿತನು ಆ ಪ್ರಕಾರ ಪ್ರತಿಜ್ಞೆ ಮಾಡಿದನು.

ಬಳಿಕ ನವಾಬನು ಸರದಾರರ ಕಡೆಗೆ ತಿರುಗಿ—"ನನ್ನ ಪ್ರಿಯ ಸರದಾರರೇ, ನಶಿರಿತನ ಮಾನ ಕಾಯುವೆವೆಂದು ಪ್ರತಿಜ್ಞೆಯನ್ನು ಮಾಡಿರೆ'ನ್ನಲು ಅವರಲ್ಲೊಬ್ಬ ವೃದ್ಧ ಸರದಾರನು—"ಜಹಂಪನಾಹ, ನಶಿರಿತನು ನಮ್ಮ ಗೌರವ-ಮಾನಗಳನ್ನು ಕಾಯ್ದರೆ ನಾವೇಕೆ ಅವನ ಮಾನವನ್ನು ರಕ್ಷಿಸದೆ ಬಿಟ್ಟೇವು?" ಎಂದನು. ಇದೆಲ್ಲವೂ ಆದನಂತರ ನವಾಬನು ಜೋನಾಬ ಖಾನನನ್ನು ಕುರಿತು—"ಪ್ರಿಯ ಮಿತ್ರ ಜೋನಾಬ ಸೇನಾಪತಿಯೇ, 'ಈ ಪಠಾಣ ಸಿಂಹಾಸನವನ್ನು ರಕ್ಷಿಸುವೆನೆ'ಂದು ಪ್ರತಿಜ್ಞೆ ಮಾಡು" ಎನ್ನಲು, ಜೋನಾಬಖಾನನು—"ನನ್ನ ದೇಹದಲ್ಲಿಯ ಕಡೆಯ ರಕ್ತದ ಹನಿಯನ್ನು ಚಲ್ಲಿಯವರೂ ಈ ಪಠಾಣ ಸಿಂಹಾಸನವನ್ನು ರಕ್ಷಿಸುವೆನೆ"ಂದನು. ಮುಂದೆ ಒಂದು ಕ್ಷಣದಲ್ಲಿ ನವಾಬನ ಜೀವಜ್ಯೋತಿಯು ಅನಂತಾಕಾಶದಲ್ಲಿ ವಿಲೀನವಾಗಿ ಹೋಯಿತು! ಮರುದಿವಸ ಬೆಳಗಾಗುವದರೊಳಗೆ ನವಾಬನ ಮರಣದ ವಾರ್ತೆಯು ಗೌಡರಾಜ್ಯದ ತುಂಬ ಪಸರಿಸಿತು.

## ( ೨೯ )

ಭಾರತ ಹುಣ್ಣಿವೆಯ ಬೆಳದಿಂಗಳು ಇಡೀ ಜಗತ್ತನ್ನೇ ಪ್ರಕಾಶಮಾನಗೊಳಿಸಿ ಎಲ್ಲ ಜನರ ಮನಸ್ಸಿಗೂ ಹರ್ಷವನ್ನು ಕೊಡುತ್ತಿತ್ತು. ಹಗಲು ರಾತ್ರಿಯನ್ನದೆ ದುಡಿದ ಶ್ರಮಜೀವಿಗಳು ಸಹ ವಿಶ್ರಾಂತಿಗೋಸ್ಕರ ಮಾಡುವ ನಿದ್ರೆಯನ್ನು ಕಡಿಮೆ ಮಾಡಿ, ಆ ಬೆಳದಿಂಗಳ ಸುಖವನ್ನು ಅನುಭವಿಸುತ್ತಿದ್ದರು. ಇಂಥ ಹುಣ್ಣಿವೆಯ ರಾತ್ರಿ ನಾಲ್ಕು ತಾಸಿನ ಸಮಯಕ್ಕೆ ಕಿಶೋರಿಮೋಹನನ ವಿಲಾಸಗೃಹದ ಮುಂದಿನ ತೋಟದಲ್ಲಿ ಒಂದು ಕಲ್ಲುಗದ್ದಿಗೆಯ ಮೇಲೆ ಕಿರಣಬಾಲೆಯೂ ಮನೋಹರನೂ ಕುಳಿತಿದ್ದರು. ಕಿರಣಬಾಲೆಗೆ ಆ ಸೃಷ್ಟಿದೇವಿಯ ಮಧುರ ಸೌಂದರ್ಯಪಾನದಿಂದ ಶಾಂತತೆಯಾಗಲಿಲ್ಲ. ಆಗ ಅವಳು—"ಮನುಷ್ಯರಿಂದ ಇನ್ನೆಷ್ಟು ಸಹಿಸಲು ಶಕ್ಯವಿರುವದು?"

ಮನೋ—ಹೀಗೇಕೆ ಅನ್ನುವಿ? ಯಾವಳಿಗೆ ದಿನಾಲು ಪತಿಯ ಪಾದಗಳ ಸ್ಪರ್ಶವು ಸಿಗುವದೋ, ಅವಳು ಪುಣ್ಯವಂತಳೇ ಸರಿ. ಪದತಾಡನವು ಅಪಮಾನವೆಂದು ಭಾವಿಸಬೇಡ.

ಕಿರಣ—ಸಖೀ, ನಿನ್ನ ವಿವಾಹವಾದ ಮೇಲೆ ನಿನಗೂ ಈ ಪ್ರಸಂಗ ಬಂದಾಗ ನಿಜಸ್ಥಿತಿಯು ತಿಳಿದೀತು.

ಮನೋ—ನನ್ನ ಲಗ್ನವೇ? ಲಗ್ನವೆಂಬ ಮಾತು ಜನರಿಗೆ ಆನಂದವನ್ನುಂಟು ಮಾಡತಕ್ಕದ್ದು. ನನಗೆ ಲಗ್ನದ ಆಶೆಯೇ ಇಲ್ಲ.

ಕಿರಣ—ನೀನು ಹೆಂಗಸಾಗಿ ಇಂಥ ವಿಷಯಲಂಪಟನ ಮನೆಯೊಳಗ್ಯಾಕೆ ಇರುವಿ?

ಮನೋ—ನಿನಗೆ ನಾನು ಹೆಂಗಸೆಂದು ತಿಳಿದದ್ದು ನಾನೇ ಹೇಳಿದ ನಂತರವೇ ಅಲ್ಲವೇ?

ಕಿರಣ—ನೀನು ಈ ಸಂಗತಿಯನ್ನೆಷ್ಟು ದಿನ ಮುಚ್ಚಿಡತಕ್ಕವಳು?

ಮನೋ—ಅದು ನನ್ನ ಮನಸ್ಸಿನ ಮೇಲೆ ಅವಲಂಬಿಸಿರುವದು.

ಕಿರಣ—ಹಾಗಾದರೆ ನನಗೇಕೆ ಹೇಳಿದೆ?

ಮನೋ—ಜೀವಕ್ಕೊಬ್ಬ ಗೆಳತಿಯು ಇರಬೇಕೆಂಬ ಇಚ್ಛೆಯಿಂದ.

ಕಿರಣ—ನಾನು ಗೆಳತಿಯಾದ ಮೇಲೆ ನನಗೇಕೆ ನಿನ್ನ ಸಂಗತಿ ಹೇಳಬಾರದು? ಇಲ್ಲಿ ಯಾವಾಗಲೂ ವೇಶ್ಯಾಸ್ತ್ರೀಯರ ನಾಚು-ಗಾನಗಳು ನಡೆದಿರುವವು. ಇಂಥಲ್ಲಿ ನಿನಗೆ ಸಮಾಧಾನವು ಹೇಗಾಗುವದು?

ಮನೋ—ಏನು ಹೇಳಲಿ! ಎಲ್ಲಿ ನೋಡಿದರೂ ಇದೇ ಪ್ರಕಾರವು. ಪ್ರತಿ ಮನೆಯಲ್ಲಿಯೂ ಚರಿತ್ರಹೀನರಾದ ಪುರುಷರು. ಕಾರಣ ನಾನು ಇಲ್ಲಿಯೇ ಪುರುಷ ವೇಷದಿಂದ ಇರುವೆನು. ಇರಲಿ. ನೀನು ಒಂದು ಪದವನ್ನು ಅನ್ನಬಾರದೇ?

ಕಿರಣ—ಸ್ತ್ರೀಯರು ಸಂಗೀತವನ್ನು ಕಲಿಯುವದು ಪತಿಯ ಆನಂದದ ಸಲುವಾಗಿ. ನನಗೆ ಅಂಥ ಆನಂದವು ದೊರೆಯುವ ಆಶೆಯೇ ಇಲ್ಲ. ಅಂದ ಬಳಿಕ ನಾನು ಯಾವ ಆನಂದದಿಂದ ಪದವನ್ನು ಅನ್ನಲಿ?

ಮನೋ—ಕೆಲವು ಹೊತ್ತು ನಾನು ನಿನ್ನ ಪತಿಯೆಂದೇ ತಿಳಿದು ಪದವನ್ನು ಅನ್ನು.

ಕಿರಣ—ಓಹೋ! ಪತಿದೇವ, ನಿನ್ನ ಅಪ್ಪಣೆಯಂತೆ ಅನ್ನುವೆನು.

ಮನೋ—ಬೇಗ ಅನ್ನು ನೋಡು. ಇಲ್ಲದಿದ್ದರೆ ಮತ್ತೆ ಪದಾಘಾತ.. ಯಾವಾಗಲೂ ಅಳುಮೋರೆಯಿಂದ ಇರುವೆಯಾ?

ಕಿರಣ—ಸ್ವಾಮಿ, ತಪ್ಪಾಯಿತು. ಅನ್ನುತ್ತೇನೆ, ಎಂದು ಮಧುರ ವಾದ ಕಂಠದಿಂದ ಅನ್ನಲು ಪ್ರಾರಂಭಮಾಡಿದಳು.

ನವಾಬ ನಶೆರಿತನು ಅಕಸ್ಮಾತ್ತಾಗಿ ಅದೇ ದಾರಿಯಿಂದ ಹೋಗು ತಿದ್ದನು. ಕಿರಣಬಾಲೆಯ ಮಧುರ ಕಂಠವು ಅವನನ್ನು ಮುಂದೆ ಹೆಜ್ಜೆ ಇಡಗೊಡಲಿಲ್ಲ. ಆಗ ಅವನು ಗೋಡೆಯ ಹತ್ತರ ನಿಂತು ತೋಟದೊಳಗೆ ಇಣಿಕಿ ನೋಡಿದನು. ಅಕಸ್ಮಾತ್ತಾಗಿ ಮನೋಹರನ ಲಕ್ಷ್ಯವು ಆ ಕಡೆಗೆ ಹೋಗಲು, ಅವನು—ಸಖೀ, ಅಕೋ ನೋಡು, ಯಾರೋ ಇತ್ತ ನೋಡು ತ್ತಿರುವರು. ಒಳಗೆ ಹೋಗೋಣ, ಎನ್ನಲು, ಇಬ್ಬರೂ ಒಳಗೆ ಹೋದರು.

ಇತ್ತ ನಶೆರಿತನ ಹೃದಯದಲ್ಲಿ ಕಾಮವಾಸನೆಯು ಪ್ರಬಲವಾಯಿತು. ಅವನು ಗೋಡೆಯನ್ನು ಹಾರಿ ಅವರನ್ನು ಅನುಸರಿಸತಕ್ಕವನೇ; ಆದರೆ ಆಗ ಅವನು ಆ ಇಚ್ಛೆಯನ್ನು ಬಿಗಿಹಿಡಿದು, ಅಲ್ಲಿಂದ ನೆಟ್ಟಗೆ ಕಿಶೋರಿಮೋಹನನ ದಿವಾಣಖಾನೆಗೆ ಹೋದನು.

ಆಮಂತ್ರಣ ಕೊಡದೆ ನವಾಬನು ತಾನಾಗಿ ತನ್ನ ಉದ್ಯಾನಭುವ ನಕ್ಕೆ ಒಂದದ್ದು ನೋಡಿ ಕಿಶೋರಿಮೋಹನನಿಗೆ ಬಹಳ ಆನಂದವಾಯಿತು. ಅವನು ಎದ್ದು ನಿಂತು ಬೊಗ್ಗಿ ಮೂರು ಮೂರು ಸಾರೆ ಸಲಾಂ ಮಾಡಿ— ಪ್ರಭುಗಳಿಗೆ ಬಹುದಿನಗಳ ನಂತರ ಈ ಬಡವನ ನೆನಪಾಯಿತು, ಎಂದನು.

ನಶೆರಿತನು—ಕಿಶೋರಿಮೋಹನರಾವ, ನಾನು ನಿನ್ನನ್ನು ಮರೆತಿಲ್ಲ. ಬಹಳ ಕಾರ್ಯಗಳು ನನಗಿದ್ದ ಕಾರಣ ಬರಲು ಆಗಿಲ್ಲ. ನಿನ್ನನ್ನು ನಮ್ಮ ಹಿತಚಿಂತಕನೆಂದು ತಿಳಿದಿರುವೆನು. ಇರಲಿ. ಸರದಾರ, ಇಲ್ಲಿ ಮೊದಲಿನಂತೆ ನೃತ್ಯ-ಗೀತಗಳು ನಡೆದಿರುವವಷ್ಟೇ?

ಕಿಶೋ—ಸರಕಾರ, ಮೊದಲಿನಂತೆಯೇ ಸಾಗಿರುತ್ತವೆ.

ನಶೆರಿತ—ಹಾಗಾದರೆ ಪ್ರಾರಂಭವಾಗಲಿ.

ಕಿಶೋರಿಮೋಹನನು ಅಲ್ಲಿದ್ದ ಎಲ್ಲ ನರ್ತಕಿಯರನ್ನು ಆನಂದದಿಂದ ಕರೆಯಿಸಿದನು. ನಶೆರಿತನು ಅವನನ್ನು ದಿಟ್ಟಿಸಿ ನೋಡಿ, ನಂತರ—ಕಿಶೋರಿ ಮೋಹನ, ಇವರ ಹೊರ್ತು ಇನ್ನೂ ಬೇರೆ ನರ್ತಕಿಯರಿರುವರೇನು?

ಕಿಶೋ—ಇಲ್ಲ ಹುಜೂರ.

ನಶೆ—ಹಾಗಾದರೆ ನಾನು ಈಗ ಬರುವಾಗ ನಿಮ್ಮ ಉದ್ಯಾನದಲ್ಲಿ ಒಬ್ಬಳು ಹಾಡುತ್ತ ಕುಳಿತಿದ್ದಳು.

ಕಿಶೋ—ಪ್ರಭೋ— ಇವರ ಹೊರ್ತು ಮತ್ತೆ ಇಲ್ಲಿ ಯಾರೂ ಇಲ್ಲ.

ನಶೆ—ಛೀ! ಇವರೆಲ್ಲರೂ ಅವಳ ದಾಸಿಯಾಗಿರಲಿಕ್ಕೆ ಯೋಗ್ಯರು. ಅವಳ ಕಂಠವು ಬಲು ಮಧುರವು. ಅವಳ ಹತ್ತರ ಆ ನಿನ್ನ ಸೇವಕನಿದ್ದನು.

ಕಿಶೋ—ಹೀಗೆ ಏನು? ಅವನನ್ನೇ ಕೇಳುವೆನೆಂದು, ಮನೂ ಎಂದು ಕೂಗಿದನು.

ಕೂಡಲೆ ಮನೋಹರನು ಅಲ್ಲಿಗೆ ಬರಲು ನಶೆರಿತನು ಅವನನ್ನು ಕುರಿತು—ತೋಟದಲ್ಲಿ ಹಾಡುತ್ತಿದ್ದವರು ಯಾರು? ಎಂದನು.

ಮನೋ—ಹುಜೂರ, ಅವರು ನಮ್ಮ ಸರದಾರರ ಹೆಂಡತಿಯು.

ನಶೆರಿತ—ಯಾರೇ ಇರಲಿ. ಅವಳನ್ನು ಇಲ್ಲಿಗೆ ಕರೆದುಕೊಂಡು ಬಾ, ಎಂದನು.

ಕಿಶೋರಿಮೋಹನನು ಮನಸ್ಸಿನಲ್ಲಿ—ಅವಳು ಈ ಎಲ್ಲ ನರ್ತಕಿಯರಿಗಿಂತ ಸುಂದರಳಿರುವಳೇ? ಅವಳ ಕಂಠವು ಅಷ್ಟು ಮಧುರವಿರುವದೇ? ಆಗಲಿ. ಈಗ ಇಲ್ಲಿಯೇ ಬರುವಳು, ಎಂದು ಸುಮ್ಮನಾದನು.

ಇತ್ತ ಮನೋಹರನು ಒಳಗೆ ಹೋಗಿ ಕಿರಣಬಾಲೆಯನ್ನು ಕುರಿತು— ಸಖೀ, ಓಡು; ಆದಷ್ಟು ತೀವ್ರ ಇಲ್ಲಿಂದ ಓಡಿ ಹೋಗು. ಬಹು ದೂರ ಹೋಗು, ಎಂದನು.

ಕಿರಣ—ಯಾಕೆ ಏನಾಗಿರುವದು?

ಮನೋ—ನವಾಬನು ನಿನ್ನನ್ನು ಕರೆದುಕೊಂಡು ಬರಲು ಹೇಳಿರುವನು.

ಕಿರಣ—ಇದಕ್ಕೆ ನಾನು ಓಡಿಹೋಗಬೇಕೆ? ಮನೆಗೆ ದರೋಡೆ-ಗಿರೋಡೆ ಬಂದಿರಬಹುದೆಂದು ನಾನು ಭಾವಿಸಿದ್ದೆನು.

ಮನೋ—ದರೋಡೆಯು ಬಂದಿದ್ದರೆ ಇಷ್ಟು ಅಂಜುವ ಕಾರಣವಿದ್ದಿಲ್ಲ. ದೇಶದ ರಾಜನೇ ಆ ವೃತ್ತಿಯನ್ನವಲಂಬಿಸಿದ ಮೇಲೆ ಗತಿಯೇನು? ದರೋಡೆಖೋರರು ಧನವನ್ನು ಮಾತ್ರ ಹರಣ ಮಾಡುವರು; ಆದರೆ ಈ ನೀಚನು ನಿನ್ನ ಸರ್ವಸ್ವವಾದ ಪಾತಿವ್ರತ್ಯಕ್ಕೆ ಕೈಹಾಕತಕ್ಕವನು.

ಕಿರಣ—ಅದಕ್ಕೆ ನಾನು ಅಂಜತಕ್ಕವಳಲ್ಲ; ಯಾಕಂದರೆ ಅಗ್ನಿಸಾಕ್ಷಿಯಾಗಿ ನನ್ನನ್ನು ಕೈ ಹಿಡಿದ ಗಂಡನು ನನ್ನ ರಕ್ಷಣೆಯನ್ನು ಮಾಡಿಯೇ ಮಾಡುವನು.

ಮನೋ—ನಿನ್ನ ಪತಿಯೇ? ಅವನಿಗೆ ಪಾತಿವ್ರತ್ಯದ ಕಲ್ಪನೆಯೇ ಇಲ್ಲ. ಅವನು ಪರಸ್ತ್ರೀಯರ ಪಾತಿವ್ರತ್ಯವನ್ನು ಹರಣ ಮಾಡುತ್ತ ತಿರುಗಾಡಹತ್ತಿರುವನು. ಅಂಥವನು ನಿನ್ನನ್ನು ರಕ್ಷಿಸುವನೇ? ಈ ಭ್ರಮೆಯನ್ನು ದೂರಮಾಡು. ಅಗ್ನಿ ಸಾಕ್ಷಿಯಾಗಿ ನಿನ್ನ ಕೈ ಹಿಡಿದ ಪತಿಯು, ಈಗಲೂ ನಿನ್ನ ಕೈ ಹಿಡಿದು ನವಾಬನ ರಂಗಮಂಟಪಕ್ಕೆ ಕಳಿಸುವನು.

ಕಿರಣ—ನನ್ನ ಪತಿಯು ಇಷ್ಟು ನೀಚನಿರುವನೇ?

ಮನೋ—ಅದನ್ನು ನಾನು ಏನು ಹೇಳಲಿ? ನಿನಗೇ ತಿಳಿಯುವದು.

ಕಿರಣ—ಪತಿಯು ಹಾಗೆ ಮಾಡಿದರೆ ನನ್ನ ಪಾತಿವ್ರತ್ಯವನ್ನು ರಕ್ಷಿಸಿಕೊಳ್ಳಲಿಕ್ಕೆ ನಾನು ಸಮರ್ಥಳಿರುವೆನು. ಇಂಥ ನೂರಾರು ನವಾಬರು ಒಮ್ಮೆಲೆ ತಮ್ಮ ಶಕ್ತಿಯನ್ನು ಒಟ್ಟುಗೂಡಿಸಿದರೂ ನಾನು ಬೆದರತಕ್ಕವಳಲ್ಲ. ಎಂದಳು.

ಕಿರಣಬಾಲೆಯ ಆತ್ಮಿಕ ಸಾಮರ್ಥ್ಯವನ್ನು ಕೇಳಿ ಮನೋಹರನು ಬೆರಗಾಗಿ—"ಹಾಗಾದರೆ ನವಾಬನಿಗೆ ಏನು ಹೇಳಲಿ?"

ಕಿರಣ—ನವಾಬನು ಜನ್ಮಜನ್ಮಾಂತರ ತಪಸ್ಸು ಮಾಡಿ ಹಿಂದೂ ಜಾತಿಯಲ್ಲಿ ಹುಟ್ಟಿ ಒಂದಾಗ ದೂರದಿಂದ ನನ್ನ ದರ್ಶನವನ್ನು ತೆಗೆದುಕೊಳ್ಳಲು ಯೋಗ್ಯನಾಗುವನೆಂದು ಹೇಳು.

ಮನೋ—ನವಾಬನು ಸಿಟ್ಟಿಗೇಳುವನು. ಅದರಿಂದ ಅನರ್ಥವಾದೀತು.

ಕಿರಣ—ಅದಕ್ಕೆ ನಾನು ಅಂಜುವದಿಲ್ಲ.

ಮನೋ—ನಿನ್ನ ಹತ್ತರ ಏನಾದರೂ ಶಸ್ತ್ರವಿರುವದೇ?

ಕಿರಣ—ಇಲ್ಲ.

ಮನೋ—ಹಾಗಾದರೆ ಈ ಸಣ್ಣ ಚೂರಿಯು ನಿನ್ನ ಹತ್ತರ ಇರಲಿ. ಪ್ರಸಂಗದಲ್ಲಿ ಇದರ ಉಪಯೋಗವಾಗುವದು, ಎಂದು ಚೂರಿಯನ್ನು ಕೊಟ್ಟಳು.

## ( ೩೦ )

ಗಣೇಶನಾರಾಯಣನು ತನ್ನ ಶಯನಮಂದಿರದಲ್ಲಿ ಕುಳಿತು ಮನಸ್ಸಿನಲ್ಲಿ ಏನನ್ನೋ ಭಾವಿಸಹತ್ತಿದನು. ಆಗ ರಾಣಿಯು ಅಲ್ಲಿಗೆ ಬಂದು—"ರಾಜಾ, ಈ ಪರದಾಸ್ಯತ್ವವನ್ನು ಇನ್ನೂ ಬಿಡುವದಿಲ್ಲವೇ?" ಎಂದಳು.

ಗಣೇ—ರಾಣೀ, ನಾನು ಮೃತ ನವಾಬನ ಎದುರಿಗೆ ಪ್ರತಿಜ್ಞೆ ಮಾಡಿರುವೆನು.

ತ್ರಿಪುರಾ—ರಾಜಾ, ನೀನು ನಿನ್ನ ಹಿಂದೂ ಮಾತೆಯನ್ನೂ ಹಾಗೂ ಪುಣ್ಯ ಸಲಿಲೆಯಾದ ಭಾಗೀರಥಿಯನ್ನೂ ಸ್ಮರಿಸಿ ಹಿಂದೂ ಜನಾಂಗದ ಮಾನ ಕಾಯುವ ಪ್ರತಿಜ್ಞೆಯನ್ನು ಎಷ್ಟು ಸಾರೆ ಮಾಡಿರುವೆನೆಂಬದನ್ನು ಸ್ಮರಿಸು. ಈ ಮುಸಲ್ಮಾನರ ಅತ್ಯಾಚಾರದಿಂದ ಪ್ರತಿದಿವಸ ಎಷ್ಟೋ ಜನ ಹಿಂದೂ ರಮಣಿಯರು ಗಂಗಾ ಗರ್ಭವನ್ನು ಸೇರುತ್ತಿರುವರು. ಎಷ್ಟೋ ಜನರು ವಿಷ ತಿಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವರು. ಸ್ವಾಮೀ, ಈ ಮೋಹ ನಿದ್ರೆಯಿಂದ ಎಚ್ಚತ್ತು ಜಗತ್ತನ್ನು ನೋಡು.

ಗಣೇ—ರಾಣೀ, ಸ್ವಲ್ಪ ಸಮಾಧಾನ ತಾಳು. ನಾನು ಸ್ವಲ್ಪ ದಿವಸಗಳಲ್ಲೇ ವಜೀರಪದವನ್ನು ಬಿಡತಕ್ಕವನಿರುತ್ತೇನೆ, ಎಂದನು. ಅಷ್ಟರಲ್ಲಿ ಒಬ್ಬ ಸೇವಕನು ಬಂದು ಹೊರಗೆ ಜೋನಾಬಖಾನರು ಬಂದಿರುವರು, ಎಂದು ಹೇಳಿದನು. ಗಣೇಶನಾರಾಯಣನು ಅವರನ್ನು ಕರೆದುಕೊಂಡು ಬಾ, ಎನ್ನಲು, ಸೇವಕನು ಇಲ್ಲಿಯೇ ಕರೆದುಕೊಂಡು ಬರತಕ್ಕದ್ದೇನು? ಎಂದು ಕೇಳಿದನು. ಗಣೇಶನಾರಾಯಣನು ರಾಣಿಯ ಕಡೆಗೆ ನೋಡುತ್ತ ತಾನು ಕುಳಿತಲ್ಲಿಯೇ ಕರೆದುಕೊಂಡು ಬರಲಿಕ್ಕೆ ಸೇವಕನಿಗೆ ಆಜ್ಞಾಪಿಸಿದನು.

ತ್ರಿಪು—ಇಲ್ಲಿ, ನನ್ನ ಶಯನಮಂದಿರದಲ್ಲಿ ಮುಸಲ್ಮಾನರ ಪ್ರವೇಶವೆ?

ಗಣೇ—ರಾಣೀ, ಅವನು ನನ್ನ ಗೆಳೆಯನು. ನನ್ನ ಪರಮ ಮಿತ್ರನು, ಎಂದನು.

“ಮಿತ್ರನೇ! ಆಗಲಿ!! ಅವನನ್ನು ಹಾಸಿಗೆಯ ಮೇಲೆ ಕುಳ್ಳಿರಿಸಿ ಕೊಂಡು ಕೂಡಿರಿ” ಎಂದು ಅಂದು ರಾಣಿಯು ಒಳಗೆ ಹೋದಳು.

ಜೋನಾಬಖಾನನು ಒಳಗೆ ಬರಲು, ಗಣೇಶನಾರಾಯಣನು ಎದ್ದು ಅವನನ್ನು ತನ್ನ ಹತ್ತಿರ ಕೂಡಿಸಿಕೊಂಡನು. ಆಗ ಜೋನಾಬಖಾನನು—ರಾಜಾ, ಯಾವ ಈ ಶಯನ ಮಂದಿರದಲ್ಲಿ ಅರಸನಿಗೆ ಕೂಡ ಬರಲು ಸಾಧ್ಯವಿಲ್ಲವೋ, ಅಂಥಲ್ಲಿ ಈ ಕ್ಷುದ್ರನನ್ನು ಬರಮಾಡಿಕೊಂಡದ್ದು ನೋಡಿದರೆ ನಿಮ್ಮ ದೊಡ್ಡ ಮನಸ್ಸು ವ್ಯಕ್ತವಾಗುತ್ತದೆ, ಎಂದನು.

ಗಣೇ—ಖಾನಸಾಹೇಬ, ನೀವು ನನಗೆ ಪ್ರಿಯರು. ನಿಮಗೆ ಇಂದು ನಾನು ನನ್ನ ಸರ್ವಸ್ವವನ್ನೂ ತೋರಿಸುತ್ತೇನೆ. ಸ್ವಲ್ಪ ತಡೆಯಿರಿ, ಎಂದು ಒಳಗೆ ಹೋಗಿ ತ್ರಿಪುರಾರಾಣಿಯನ್ನು ಕರೆದುಕೊಂಡು ಬಂದನು. ಆ ತೇಜಸ್ವಿನಿಯಾದ ತ್ರಿಪುರಾದೇವಿಯನ್ನು ನೋಡಿದ ಕೂಡಲೆ ಜೋನಾಬಖಾನನು ಬೆರಗಾದನು. ಅವಳ ಮುಖದ ಮೇಲಿನ ದೈವೀ ತೇಜಸ್ಸು ನೋಡುವವರಲ್ಲಿ ವಿನಯವನ್ನು ಹುಟ್ಟಿಸುತ್ತಿತ್ತು. ಜೋನಾಬಖಾನನು ಎದ್ದು ನಿಂತು ಅವಳಿಗೆ ಸಲಾಂ ಮಾಡಿದನು. ನಂತರ ಗಣೇಶನಾರಾಯಣನು—“ಮನುಷ್ಯಕುಲಕ್ಕೆ ಗೌರವಸ್ವರೂಪರಾದ ಜೋನಾಬಖಾನರು ಇಂದು ನಮ್ಮ ಮನೆಗೆ ಬಂದದ್ದರಿಂದ ನಾನು ಧನ್ಯನಾದೆನು.”

ತ್ರಿಪುರಾ—ಸೇನಾಪತಿಗಳೇ, ಯಾರು ನನ್ನ ಸ್ವಾಮಿಯ ಮಿತ್ರರೂ ಬಂಧುಗಳೂ ಆಗಿರುವರೋ, ಅವರು ನನಗೂ ಪೂಜ್ಯರು. ನೀವು ಆಸನದಲ್ಲಿ ಕೂಡಬೇಕು, ಎಂದಳು.

ಜೋನಾ—ರಾಣಿಯವರೇ, ನಾನು ನವಾಬನ ಎದುರಿಗೆ ಸಹ ಆಸನ ಗ್ರಹಣ ಮಾಡಿರುವೆನು; ಆದರೆ ನಿಮ್ಮೆದುರಿಗೆ ಮಾತ್ರ ನನ್ನಿಂದಾಗದು, ಎಂದನು. ನಂತರ ಗಣೇಶನಾರಾಯಣನನ್ನು ಕುರಿತು—ವಜೀರಸಾಹೇಬ, ನಾನು ಸೇನಾಪತಿಯ ಕೆಲಸಕ್ಕೆ ರಾಜೀನಾಮೆ ಕೊಡುತ್ತೇನೆ.

ಗಣೇ—ಅದೇಕೆ?

ಜೋನಾ—ನನ್ನ ಕೆಲಸದ ಮೇಲೆ ಇಬ್ರಾಹಿಮಖಾನನನ್ನು ನಿಯ

ಮಿಸುವ ಸಂಚು ನಡೆದಿರುವದೆಂದು ತಿಳಿಯುತ್ತದೆ. ನವಾಬನು ನನ್ನನ್ನು ಕೆಲಸದಿಂದ ದೂರ ಮಾಡುವ ಮೊದಲೇ ನಾನು ಬಿಡುವದು ಯೋಗ್ಯವೆಂದು ನನಗೆ ತೋರುತ್ತದೆ. ನವಾಬನ ದರ್ಶನ ತೆಗೆದುಕೊಳ್ಳುವ ಇಚ್ಛೆಯು ಕೂಡ ನನಗಿಲ್ಲ. ನೀವು ಪಟೇರರು. ಕಾರಣ ನಿಮ್ಮ ಹತ್ತರ ತಿಳಿಸಿ ಕೆಲಸ ಬಿಡಲು ಬಂದಿರುತ್ತೇನೆ.

ಗಣೇ—ಸೇನಾಪತಿಗಳೇ, ನಾನೂ ನನ್ನ ಕೆಲಸವನ್ನು ಬಿಡತಕ್ಕವನಿರುವೆನು.

ಜೋನಾ—ನಾನು ಬಿಟ್ಟ ೧-೨ ದಿವಸಗಳಲ್ಲಿ ನಿಮ್ಮ ಸರತಿಯೂ ಬರಬಹುದು.

ಗಣೇ—ಹಾಗಾದರೆ ನಶಿರಿತಶಹನು ತನ್ನ ನಿಜರೂಪ ಧಾರಣ ಮಾಡುವನು. ಗೌಡರಾಜ್ಯದ ದೈವದಲ್ಲಿ ಏನಿರುವದೋ ತಿಳಿಯದು, ಎಂದನು.

ತ್ರಿಪುರಾರಾಣಿಯು ಒಂದು ಕಿಟಕಿಯ ಹತ್ತರ ನಿಂತಿದ್ದಳು. ಆವಳು ಕಿಟಕಿಯೊಳಗಿಂದ ಆಕಾಶದ ಕಡೆಗೆ ಕೈ ಮಾಡಿ-“ ಇಕೋ, ಇತ್ತ ನೋಡಿರಿ. ಗೌಡ ರಾಜ್ಯದ ಭಾವೀ ಚಿತ್ರವು ಈ ಆಕಾಶದಲ್ಲಿ ಒಡ ಮೂಡಿರುವದು ನೋಡಿರಿ, ಗೌಡ ರಾಜ್ಯದಲ್ಲಿ ನವೀನ ಸೂರ್ಯನುದಯಿಸಿರುವನು. ಗಂಗಾ ನದಿಯು ಮೊದಲಿನಂತೆ ಕಲಕಲ ನಾದದಿಂದ ಹರಿಯುತೊಡಗಿರುವಳು. ಗಿಡ ಬಳ್ಳಿಗಳು ಫಲಪುಷ್ಪಗಳಿಂದ ಬಾಗಿವೆ. ನಾಲ್ಕೂ ದಿಕ್ಕಿನಿಂದ ಮತ್ತೆ ಹಿಂದೂ ಕೀರ್ತಿಯ ಜಯಜಯಕಾರವು ಕೇಳ ಬರುತ್ತದೆ” ಎಂದಳು.

ಗಣೇಶನಾರಾಯಣನು ಆವಳ ಆ ಉತ್ತೇಜಕ ಮಾತುಗಳನ್ನು ಕೇಳಿ ಬೆರಗಾದನು. ಜೋನಾಬಖಾನನು—“ರಾಜಾ, ನಾನು ಮಕ್ಕಾ ಯಾತ್ರೆಗೆ ಹೋಗಬೇಕೆಂದು ಮಾಡಿ ಇಲ್ಲಿಗೆ ಬಂದೆನು; ಆದರೆ ಈಗ ಆ ವಿಚಾರ ಬಿಟ್ಟು ಬಿಟ್ಟಿರುವೆನು.

ಗಣೇ—ಒಮ್ಮಿಂದೊಮ್ಮೆಲೆ ನಿಮ್ಮ ವಿಚಾರವು ಹೆಚ್ಚುಕಡಿಮೆಯಾಗಲು ಕಾರಣವೇನು ?

ಜೋನಾಬ—ಪಠಾಣರಾಜ್ಯದ ಸಂಕಟಸಮಯದಲ್ಲಿ ಹೋಗುವದು ವಿಹಿತವಲ್ಲೆಂದು ತೋರುತ್ತದೆ.

ಗಣೇಶ—ಪಠಾಣರಾಜ್ಯಕ್ಕೆ ವಿಪತ್ತು ಬಂದಿರುವದೆಂದು ಯಾತರ ಮೇಲಿಂದ?

ಜೋನಾಬ—ನಾನು ಯಾವ ಮಾತುಗಳನ್ನು ಕೇಳಿದೆನೋ, ಯಾವ ಸಂಗತಿಯನ್ನು ನೋಡಿದೆನೋ ಅದರ ಮೇಲಿಂದ.

ಗಣೇಶ—ನನ್ನ ಇಚ್ಛೆಯಾದರೂ ನೀವು ಇಲ್ಲಿಯೇ ಇರಬೇಕೆಂದಿರುವದು. ನಿಮ್ಮಂಥ ಶೂರರು, ನಿಮ್ಮಂಥ ವೈರಿಗಳು ದೊರೆತರೆ ನನಗೆ ಆನಂದವೇ ಆನಂದವು! ಎಂದನು.

ಜೋನಾಬಖಾನನು ಹೊರಟು ಹೋದನು.

( ೩೧ )

ರಾತ್ರಿಯು ಸುಮಾರು ಒಂದು ತಾಸಾಗಿತ್ತು. ಈಗ ಕಾಲಿಂದೀ ನದಿಯ ಪೂರ್ವಭಾಗದಲ್ಲಿ ಒಂದು ಸಣ್ಣ ನೌಕೆಯಲ್ಲಿ ಮರಿಯಮಳೂ ಕುಮಾರ ಯದುನಾರಾಯಣನೂ ನೌಕಾವಿಹಾರವನ್ನು ಮಾಡುತ್ತಿದ್ದರು. ಆಗ ಕುಮಾರನು:—ಮರಿಯಮ, ನಾನು ಇನ್ನು ನಿನ್ನನ್ನು ಅಗಲಿ ಹೋಗುವದೇ ಇಲ್ಲ.

ಮರಿ—ಅದು ಶಕ್ಯವಿಲ್ಲ ಕುಮಾರ.

ಯದು—ಹಾಗೆಂದರೆ ಹೇಗೆ ಮರಿಯಮ? ನೀನು ನನ್ನನ್ನು ಲಗ್ನವಾಗುವದಿಲ್ಲವೇ?

ಮರಿ—ಕುಮಾರ, ಆ ಸಂಕಲ್ಪವನ್ನು ಮರೆತೇ ಬಿಡು. ವಿವಾಹವಾಗಲು ಶಕ್ಯವಿಲ್ಲ.

ಯದು—ಅದೇಕೆ?

ಮರಿ—ಹಿಂದೂ-ಮುಸಲ್ಮಾನರಲ್ಲಿ ವಿವಾಹವಾಗಲು ಶಕ್ಯವಿಲ್ಲ.

ಯದು—ನಮ್ಮಿಬ್ಬರಲ್ಲಿ ಯಾರೂ ಹಿಂದೂ-ಮುಸಲ್ಮಾನರಲ್ಲ, ತಿಳಿಯಿತೆ? ಇಬ್ಬರ ಧರ್ಮವೂ ಒಂದೇ. ನಾನು ಕುಮಾರ, ನೀನು ಮರಿಯಮ.

ಮರಿ—ಅದು ತಿಳಿಯಿತು; ಆದರೆ....ಎಂದು ಸುಮ್ಮನಾದಳು. ನಂತರ ಕ್ಷಣಕಾಲ ತಡೆದು:-ಕುಮಾರ, ಇನ್ನು ನನ್ನ ಮನಸ್ಸನ್ನು ಅಸ್ಥಿರಗೊಳಿಸಬೇಡ. ಯಾಕಂದರೆ ನಾನು ವಚನಬದ್ಧಳು.

ಯದು—ಯಾರಿಗೆ ವಚನ ಕೊಟ್ಟಿರುವೆ?

ಮರಿ—ತಂದೆಗೆ.

ಯದು—ಏನಂತ ವಚನಕೊಟ್ಟಿರುವೆ?

ಮರಿ—ಅದನ್ನು ಕೇಳಿ ಮಾಡುವದೇನು?

ಕುಮಾ—ಹೀಗೋ, ಹಾಗಾದರೆ ಅದನ್ನು ಕೇಳುವದು ಬೇಡ; ಹಾಗೂ ನನ್ನನ್ನು ವಿವಾಹ ಮಾಡಿಕೊಳ್ಳುವದೂ ಬೇಡ.

ಮರಿ—ಕುಮಾರ, ಸಿಟ್ಟಾಗಬೇಡ. ಹೇಳುತ್ತೇನೆ. ನಮ್ಮ ತಂದೆಯು ಸಾಯುವಾಗ ಅವನ ಅಂತಿಮ ಇಚ್ಛೆಯ ಮೇರೆಗೆ ನಾನು ಹಿಂದುವನ್ನು ಲಗ್ನವಾಗುವದಿಲ್ಲವೆಂದು ಪ್ರತಿಜ್ಞೆ ಮಾಡಿರುತ್ತೇನೆ.

ಕುಮಾ—ನಾನು ಒಂದು ವೇಳೆ ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದರೆ?

ಮರಿ—ಕುಮಾರ, ನೀನು ಎಂಥ ಮಾತನಾಡುವಿ?

ಕುಮಾರ—ಮರಿಯುನ, ಪ್ರಿಯೇ, ನಿನ್ನ ಸಲುವಾಗಿ ನಾನು ಧರ್ಮ-ಕರ್ಮಗಳನ್ನು ತ್ಯಜಿಸಲು ಸಿದ್ಧನಿರುವೆನು.

ಮರಿ—ಧರ್ಮವನ್ನು ಬಿಟ್ಟರೂ ತಂದೆ-ತಾಯಿ ಸ್ವದೇಶಗಳನ್ನು ಬೇರೆ ಬಿಡುವಂತಿಲ್ಲವಷ್ಟೇ?

ಕುಮಾ—ಇವೆಲ್ಲವುಗಳನ್ನೂ ಬಿಡುವೆನು.

ಮರಿ—ಕುಮಾರ, ನಿನ್ನ ಮುಖದಿಂದ ಈ ಮಾತುಗಳೇ? ಇವುಗಳನ್ನು ಕೇಳಿ ನನಗೆ ಬಲು ವಿಷಾದವೆನಿಸಿತು. ನೀನು ಹಿಂದಕ್ಕೆ ಸೆರೆಮನೆಯಲ್ಲಿದ್ದಾಗ ನನಗೆ "ಯಾವಳು ಸ್ನೇಹಮಯ ತಾಯಿ-ತಂದೆಗಳನ್ನು ತ್ಯಜಿಸುವಳೋ ಅವಳು ಸ್ವಾಮಿ ದ್ರೋಹಿಯಾಗಬಲ್ಲಳೆ"ಂದು ಹೇಳಿದ್ದನ್ನು ಮರೆತೆಯಾ? ನೀತಿಯು ಉಪದೇಶಕ್ಕಲ್ಲ; ಸ್ವಂತ ಆಚರಣೆಗಾಗಿ. ಈಗ ನೀನು ನಿನ್ನ ಸ್ವದೇಶ, ಮಾತಾಪಿತೃಗಳಿಗಿಂತ ನನ್ನನ್ನು ಹೆಚ್ಚೆಂದು ಭಾವಿಸಿದರೆ, ಮನುಷ್ಯತ್ವವನ್ನು ಕಳಕೊಂಡು, ಇಂದ್ರಿಯಗಳ ಅಧೀನನಾಗಿರುವಿಯೆಂದು ತಿಳಿಯುವೆನು. ಆದ್ದರಿಂದ ಕುಮಾರ, ಮೋಹವನ್ನು ಬಿಟ್ಟು ಕರ್ತವ್ಯವನ್ನು ಸ್ಮರಿಸು. ಮನೋದೌರ್ಬಲ್ಯವುಳ್ಳವನಾಗಬೇಡ.

ಕುಮಾ—ಮರಿಯುನ, ಆಗದು. ನೀನು ದೊರೆಯದಿದ್ದರೆ ನಾನು ಬದುಕಲಾರೆನು.

ಮರಿ—ನೀನು ಬದುಕು ಅಥವಾ ಬದುಕದೆ ಇರು. ಅದರಿಂದ ಇಡಿ ವಿಶ್ವಕ್ಕೆ ಮತ್ತು ಹಿಂದೂ ಸಮಾಜಕ್ಕೆ ಕೊರತೆಯಾಗುವದಿಲ್ಲ; ಆದರೆ ಗಣೇಶ

ನಾರಾಯಣನ ಮಗನು ಸ್ವದೇಶ-ಧರ್ಮಗಳ ದ್ರೋಹಿಯಾಗಿ ಜೀವಿಸಿದರೆ ಮಾತ್ರ ಸ್ವದೇಶಕ್ಕೂ ಸ್ವಧರ್ಮಕ್ಕೂ ಹಾಸ್ಯಾಸ್ಪದವಾಗುವದು.

ಕುಮಾ—ನನಗೆ ದೇಶ-ಧರ್ಮಗಳ ಅಂಜಿಕೆಯಿಲ್ಲ. ಒಂದು ವೇಳೆ ಸಮಾಜವು ನನಗೆ ಬಹಿಷ್ಕಾರವನ್ನು ಹಾಕಿದರೂ ಈ ಅನಂತ ವಿಶ್ವದ ಬೇರೊಂದು ಮೂಲೆಯಲ್ಲಿ ಹೋಗಿ, ನಿನ್ನ ಸಂಗಡ ಹುಲ್ಲಿನ ಗುಡಿಸಲದಲ್ಲಾದರೂ ಆನಂದದಿಂದ ಇರುವೆನು. ನೀನೇ ನನ್ನ ದೇಶವು; ನೀನೇ ನನ್ನ ಧರ್ಮವು.

ಮುರಿ—ಛೀ! ಛೀ!! ಎಂಥ ಮಾತನಾಡುವಿ? ನಾನು ಬಹು ದೂರದಲ್ಲಿದ್ದು ಕುಮಾರನು ಸ್ವದೇಶ-ಸ್ವಧರ್ಮಗಳ ಸಲುವಾಗಿ ಪ್ರಾಣವನ್ನು ತ್ಯಜಿಸಿದನೆಂಬ ವಾರ್ತೆಯನ್ನು ಕೇಳಿದ್ದರೆ ಆನಂದದಿಂದ ಸ್ವರ್ಗದ ವರೆಗೆ ನಿನ್ನನ್ನು ಹಿಂಬಾಲಿಸುತ್ತಿದ್ದೆನು. ಬೇಡ! ಬೇಡ!! ಕುಮಾರ, ವಿಷಯ ಮೋಹವನ್ನು ದೂರ ಮಾಡು. ದೇಶ-ಧರ್ಮಗಳ ಸಲುವಾಗಿ ಪ್ರಾಣವನ್ನ ರ್ಪಿಸಲು ಸಿದ್ಧನಾಗು.

ಕುಮಾ—ಮುರಿಯನ, ಅದು ನನ್ನಿಂದಾಗದು. ನೀನು ಯಾವ ದಿವಸ ನನ್ನ ಕಣ್ಣಿಗೆ ಬಿದ್ದೆಯೋ, ಅಂದಿನ ದಿನವೇ ಆ ನನ್ನ ಭಾವನೆಗೆ ತಿಲಾಂಜಲಿಯನ್ನು ಕೊಟ್ಟೆನು. ನನ್ನ ಅಪರಾಧಕ್ಕೆ ನೀನೇ ಕಾರಣಳು, ತಿಳಿಯಿತೇ?

ಮುರಿ—ನನ್ನ ಸಲುವಾಗಿ, ನನ್ನ ರೂಪದ ಸಲುವಾಗಿ ನೀನು ಕರ್ತವ್ಯ ಭ್ರಷ್ಟನೇ? ಕುಮಾರ, ನಾನು ಅಷ್ಟು ಸುಂದರಳಿರುವೆನೆ? ಹಾಗಾದರೆ ನನ್ನ ರೂಪವು ನಿನ್ನ ಕಣ್ಣಿಗೆ ಬೀಳದಂತೆ ಮಾಡುವೆನು.

ಕುಮಾರ—ಎಲ್ಲಿಗೆ ಹೋಗುವಿ?

ಮುರಿ—ನನ್ನ ರೂಪವು ನಿನ್ನ ಕಣ್ಣಿಗೆ ಬೀಳದಲ್ಲಿಗೆ, ಎಂದು ನೌಕೆಯ ಮೇಲಿಂದ ನದಿಯಲ್ಲಿ ಹಾರಿದಳು. ಕೂಡಲೆ ಕುಮಾರನೂ ಹಾರಿಕೊಂಡು ಮುರಿಯನಳ ಶೋಧ ನಡೆಯಿಸಿದನು; ಆದರೆ ಅವಳು ಅವನಿಗೆ ಸಿಗಲಿಲ್ಲ. ಕಡೆಗೆ ನಿರಾಶನಾಗಿ ಬೆಳಗು ಮುಂಜಾನೆ ಮನೆಗೆ ಬಂದನು. ಅವನ ಅಂದಿನ ರೂಪವನ್ನು ನೋಡಿ ತ್ರಿಪುರಾದೇವಿಯು:—ಮಗೂ ಇದೇನು? ಹೀಗೇಕೆ ನಿನ್ನ ಅವಸ್ಥೆಯು?

ಕುಮಾರ—ಅವ್ವಾ, ನನ್ನ ಸರ್ವಸ್ವವನ್ನು ಇಂದು ಕಾಲಿಂದೀ ನದಿಯಲ್ಲಿ ಕಳಕೊಂಡೆನು.

ತ್ರಿಪುರಾ—ಏನು ನಿನ್ನ ಸರ್ವಸ್ವವನ್ನು ಕಳೆದುಕೊಂಡಿಯಾ ? ನಿನ್ನ ಧರ್ಮ-ದೇಶಗಳೇ ನಿನ್ನ ಸರ್ವಸ್ವವು ಅವನ್ನೆಲ್ಲಿ ಕಳಕೊಂಡೆ?

ಯದು—ಅವ್ವಾ, ನನ್ನ ಧರ್ಮ-ದೇಶಗಳಿಗಿಂತಲೂ ಹೆಚ್ಚಾದ ವಸ್ತುವನ್ನು ಕಳಕೊಂಡೆನು.

ತ್ರಿಪುರಾ—ಅದೇನು ಮಗೂ ?

ಯದು—ನವಾಬ ಪುತ್ರಿಯಾದ ಮರಿಯುನಳನ್ನು ಇಂದು ಕಳೆದುಕೊಂಡೆನು

ತ್ರಿ—ಯಾಕೆ, ಅವಳು ಸತ್ತಳೇ ?

ಯದು—ಅವಳು ಸಾಯಲಿಲ್ಲ. ನದಿಯಲ್ಲಿ ಹಾರಿಕೊಂಡು ಆತ್ಮಹತ್ಯೆ ಮಾಡಿಕೊಂಡಳು.

ತ್ರಿ—ಆತ್ಮಹತ್ಯವೇ ? ಅದೇಕೆ ?

ಯದು—ನಾನು ಅವಳ ಸಲುವಾಗಿ ಮುಸಲ್ಮಾನ ಧರ್ಮವನ್ನು ಸ್ವೀಕರಿಸಲು ಸಿದ್ಧನಾಗಿದ್ದೆನು. ಆದ್ದರಿಂದ ಅವಳು ನನ್ನ ಧರ್ಮರಕ್ಷಣೆಯ ಸಲುವಾಗಿ ತನ್ನ ಆತ್ಮವನ್ನು ಬಲಿಕೊಟ್ಟಳು !

ತ್ರಿ—ಮರಿಯುನಳು ಸ್ತ್ರೀಯರಲ್ಲಿ ರತ್ನಳು; ನೀನು ಹಿಂದೂ ಕುಲ ಕಲಂಕನು.

ಯದು—ಅದು ನನಗೆ ಪೂರಾ ತಿಳಿಯುತ್ತದೆ; ಆದರೆ ಮಾಡಲೇನು ? ನನಗೆ ಅವಳಿಗಿಂತ ಹೆಚ್ಚಿನ ವಸ್ತುವು ಯಾವುದೂ ಇಲ್ಲ. ಜನ್ಮಜನ್ಮಾಂತರದಲ್ಲಿ ಅವಳು ಪ್ರಾಪ್ತವಾಗುವಂತೆ ಇದ್ದರೆ, ಈಗ ಬೇಕಾದ್ದನ್ನು ಮಾಡಬಲ್ಲೆನು, ಎಂದನು.

ರಾಣಿಯು ತಿರಸ್ಕಾರದಿಂದ ಮುಖ ತಿರುಗಿಸಿ ಅಲ್ಲಿಂದ ಒಳಗೆ ಹೋದಳು.

## ( ೩೨ )

ಮನೋಹರನು ಕಿರಣಬಾಲೆಯ ಹತ್ತರದಿಂದ ಹೊರಟು ನವಾಬನ ಹತ್ತರ ದಿವಾಣಖಾನೆಗೆ ಬಂದನು. ನಶಿರಿತನು ಅವನನ್ನು ಕುರಿತು:-ಯಾಕೆ, ಅವಳು ಬರಲಿಲ್ಲವೆ ? ಎಂದನು.

ಮನೋ—ಅವಳು ಬರಲಿಲ್ಲ.

ನಶಿ—ಯಾಕೆ, ಏನಂದಳು?

ಮನೋ—ಹುಜೂರ ಕ್ಷಮಿಸಬೇಕು.

ನಶಿ—ಹೇಳಲೇ ಬೇಕು.

ಮನೋ—ಜನ್ಮ ಜನ್ಮಾಂತರ ತಪಸ್ಸು ಮಾಡಿ ಹಿಂದೂ ಕುಲದಲ್ಲಿ ಹುಟ್ಟಿ ಬಂದರೆ, ನೀವು ಅವಳನ್ನು ದೂರದಿಂದ ನೋಡಬಹುದಂತೆ.

ನಶಿ—ಎಷ್ಟು ಸೊಕ್ಕು ಅವಳದು? ನೀನು ಅವಳನ್ನು ಹಿಡಿದೆಳೆದು ಕೊಂಡು ಬರಲಿಲ್ಲವೇಕೆ?

ಮನೋ—"ಅವಳು ನಮ್ಮ ಯಜಮಾನನ ಪತ್ನಿಯು. ಅಂದಬಳಿಕ ಹಾಗೆ ಮಾಡುವದು ಶಕ್ಯವಿಲ್ಲವೆ"ಂದನು.

ನಶೀರಿತನು ಕಿಶೋರಿಮೋಹನನ ಕಡೆಗೆ ತಿರುಗಿ ನೋಡಿ:—"ಸರದಾರ, ನಾನು ನಿಮ್ಮ ಲಗ್ನವಾಗಿಲ್ಲವೆ"ಂದು ಭಾವಿಸಿದ್ದೆನು.

ಕಿಶೋ—ಹುಜೂರ, ನನ್ನ ಲಗ್ನವಾಗಿ ಬಹಳ ದಿವಸಗಳಾದವು.

ನಶಿ—ಹಾಗಾದರೆ ಇದುವರೆಗೆ ಅವಳೆಲ್ಲಿದ್ದಳು?

ಕಿಶೋ—ತವರು ಮನೆಯಲ್ಲಿ. ಅವಳನ್ನು ಕರೆದುಕೊಂಡು ಬರುವ ಇಚ್ಛೆ ಸಹ ನನಗಿದ್ದಿಲ್ಲ.

ನಶಿ—ಹಾಗಾದರೆ ಈಗ ಯಾಕೆ ಕರೆದುಕೊಂಡು ಬಂದೆ?

ಕಿಶೋ—ಅವಳ ತಂದೆಯು ಜುಲುಮೆಯಿಂದ ಕಳಿಸಿ ಕೊಟ್ಟನು.

ನಶೀರಿತನು ಕೆಲ ಕಾಲ ಏನನ್ನೊ ಭಾವಿಸಿ, ಅಲ್ಲಿದ್ದ ನರ್ತಕಿಯರನ್ನು ಹೊರಗೆ ಹೋಗಲು ಆಜ್ಞೆ ಮಾಡಿದನು. ಕಿಶೋರಿಮೋಹನನೂ ತಾನೂ ಇಬ್ಬರೇ ಅಲ್ಲಿ ಉಳಿದರು. ಆಗ ನವಾಬನು:—ಕಿಶೋರಿಮೋಹನ, ಈಗ ನಾನು ಬಹಳ ಸಂಕಟಕ್ಕೊಳಗಾಗಿರುವೆನು. ನೀನು ಪರಮ ಮಿತ್ರನು. ನಿನ್ನ ಮತ ಕೇಳಲು ಬಂದಿರುವೆನು.

ಕಿಶೋ—ಪ್ರಭುಗಳ ಅಪ್ಪಣೆಯಾಗಲಿ.

ನಶಿ—ಗಣೇಶನಾರಾಯಣನು ನನ್ನ ವಿರುದ್ಧ ಗುಪ್ತ ಕಾರಸ್ಥಾನ ನಡೆಯಿಸಿರುವನು. ಕಾರಣ ಅವನನ್ನು ತೆಗೆದು, ಅವನ ವಜೀರ ಪದವಿಯನ್ನು ನಿನಗೆ ಕೊಡಬೇಕೆಂದು ಮಾಡಿರುವೆನು.

ಕಿಶೋ—ಹುಜೂರ, ಖುದಾವಂದ ನೀವು ಕರುಣಾಶಾಲಿಗಳು.

ನಶಿ—ಒಮ್ಮೆಲೆ ವಜೀರನನ್ನು ಮಾಡಲು ಬರುವದಿಲ್ಲ. ಮೊದಲು

ಮಂತ್ರಿಪದ, ನಂತರ ವಜೀರಪದ. ತಿಳಿಯಿತೇ? ಕಿಶೋರಿಮೋಹನ, ಈಗ ಎಲ್ಲರೂ ನನ್ನ ಕೈ ಬಿಡಹತ್ತಿರುವರು. ಆ ಪ್ರಕಾರ ನೀನೂ ಎಲ್ಲಿ ಕೈ ಬಿಡುವಿಯೋ ಎಂಬ ಅಂಜಿಕೆ!

ಕಿಶೋ---ಹುಜೂರ, ನಾನು ಹಾಗೆಂದಿಗೂ ಮಾಡೆನು. ನೀವು ನರಕಕ್ಕೆ ಹೋದರೂ ನಾನು ನಿಮ್ಮ ಹಿಂದೆ ಅಲ್ಲಿಗೇ ಬರತಕ್ಕವನು.

ನಶೀ—ಯಾವಾಗಲು ನಾಚ-ಗಾಯನಗಳಲ್ಲಿ ಮಗ್ನನಾಗಿ ನೀನು ಮೊದಲಿನಂತೆ ಇದ್ದರೆ ನಿನ್ನ ಬುದ್ಧಿಯು ರಾಜಕಾರಣದಲ್ಲಿ ತೀಕ್ಷ್ಣವಾಗುತ್ತಿದ್ದಿಲ್ಲ. ನೀನು ಹೆಂಡತಿಯನ್ನು ಕರೆದುಕೊಂಡು ಬಂದದ್ದು ಬಹಳ ಒಳ್ಳೇದು. ನನ್ನ ಮನಸ್ಸಿನಲ್ಲಿ ಮಿತ್ರನ ಪತ್ನಿಯಾದ ಅವಳಿಗೆ ಮುತ್ತಿನ ಮಾಲೆಯನ್ನು ಕಾಣಿಕೆ ಕೊಡಬೇಕೆಂಬ ಅಪೇಕ್ಷೆಯಿರುವದು. (ಎಂದು ಕೊರಳೊಳಗಿನ ಮುತ್ತಿನ ಹಾರವನ್ನು ತೋರಿಸಿದನು.)

ಕಿಶೋ—ತಾವು ತೋರಿಸಿದ ಈ ಅನುಗ್ರಹದಿಂದ ನಾನೂ ನನ್ನ ಹೆಂಡತಿಯೂ ಧನ್ಯರಾದೆವು.

ನಶೀ—ಈ ಮಾಲೆಯನ್ನು ಅವಳ ಕೊರಳಿನಲ್ಲಿ ನಾನೇ ಹಾಕಿದರೆ ನಾನೂ ಧನ್ಯನು.

ಕಿಶೋ—ಅವಳು ತಮ್ಮ ದಾಸಿಯೆಂದ ಬಳಿಕ ಇದೇನು ಮಹತ್ವದ ಕಾರ್ಯವು?

ನಶೀ—ಅವಳು ದಾಸಿಯಲ್ಲ; ಬಂಧುಪತ್ನಿಯು.

ಕಿಶೋ—ಹುಜೂರ, ಅವಳನ್ನು ಇಲ್ಲಿಗೆ ಕರೆತರುವೆನು.

ನಶೀ—ಬೇಡ; ನಾವೇ ಅವಳ ಹತ್ತರ ಹೋಗೋಣ.

ಇಬ್ಬರೂ ಕಿರಣಬಾಲೆಯಿದ್ದ ಮನೆಗೆ ಹೊರಟರು. ಇವರನ್ನು ನೋಡಿದ ಕೂಡಲೆ ಕಿರಣಬಾಲೆಗೆ ಬಹಳ ಸಿಟ್ಟು ಬಂದು ಅವಳು ಈದ ಹುಲಿಯಂತೆ ಪತಿಯ ಕಡೆಗೆ ನೋಡಹತ್ತಿದಳು.

ಆಗ ಕಿಶೋರಿಮೋಹನನು—ಕಿರಣಬಾಲೆ, ನವಾಬರು ಬಂದಿರುವರು. ಅವರಿಗೆ ಸಲಾಂ ಮಾಡು, ಎಂದನು.

ಕಿರಣ—"ನೀವು ಬೇಕಾದಷ್ಟು ಸಾರೆ ಮಾಡಬಹುದು. ನಾನು ಮಾಡತಕ್ಕವಳಲ್ಲ." ಎಂದಳು. ಆಗ ನವಾಬ ನಶೀರಿತನು ಅವಳಿಗೆ ಸಲಾಂ ಮಾಡಿದನು: ಆದರೆ ಅವಳು ಆ ಕಡೆಗೆ ಹೊರಳಿ ಸಹ ನೋಡಲಿಲ್ಲ. ಆಗ

ಕಿಶೋರಿಮೋಹನನು ಅವಳನ್ನು ಕುರಿತು:—“ಕಿರಣ, ನೀನು ನನ್ನ ಹೆಂಡತಿಯಾಗಿದ್ದು, ನಿನಗೆ ಈ ಮರ್ಯಾದೆಯ ಮಹತ್ವವು ತಿಳಿಯಬಾರದೇ?” ಎಂದನು.

ಕಿರಣ—ನನಗೆ ಅದು ಎಂದೂ ತಿಳಿಯುವದು ಬೇಡ.

ಕಿಶೋ—ನೀನು ಅಸಭ್ಯಳು; ಹಳ್ಳಿಗಾಡು.

ಕಿರಣ—ಅಂತೇಯೋ ಇದುವರೆಗೆ ನಿಮ್ಮೆದುರಿಗೆ ನಿಂತಿರುವೆನು.

ಪತಿ-ಪತ್ನಿಯರ ನಡುವೆ ಎಷ್ಟು ಪ್ರೀತಿಯಿರುವದೆಂಬದು ನಶಿರಿತನಿಗೆ ತಿಳಿಯಿತು. ಅವನು ಮುಗುಳು ನಗೆ ನಗುತ್ತ-ಕಿಶೋರಿಮೋಹನರಾವ, ನೀವು ಸ್ವಲ್ಪ ಹೊರಗೆ ಹೋಗಿರಿ. ಇವರಿಗೆ ನಾನು ಸ್ವಲ್ಪ ತಿಳಿಹೇಳುತ್ತೇನೆ, ಎಂದನು.

ಕಿರಣಬಾಲೆಯ ಎರಡೂ ಕಣ್ಣುಗಳು ಕೆಂಪಗಾಗಿ ವಿಸ್ತೃತವಾದವು. ಸಿಟ್ಟಿನಿಂದ ಶ್ವಾಸೋಚ್ಛ್ವಾಸವು ಒತ್ತರದಿಂದ ನಡೆಯಿತು. ಅವಳು ನವಾಬನನ್ನು ಕುರಿತು: “ನೀನು ಯಾರು?” ಎಂದಳು.

ನಶಿರಿತನು ಅಂಜಿ, ಎರಡು ಹೆಜ್ಜೆ ಹಿಂದೆ ಸರಿದು:—ನಾನು-ನಾನು ನವಾಬನು.

ಕಿರಣ—ನೀನು ನವಾಬನಲ್ಲ, ರಾಕ್ಷಸನು! ಯಾವನು ನಿಜವಾದ ನವಾಬನೋ, ಅವನು ದೇಶವನ್ನೂ ಪ್ರಜೆಗಳನ್ನೂ ರಕ್ಷಿಸುವನು. ಅತ್ಯಾಚಾರವನ್ನೆಂದೂ ಮಾಡುವದಿಲ್ಲ.

ನಶಿ—ನಾನು ಅತ್ಯಾಚಾರವನ್ನು ಮಾಡತಕ್ಕವನೇ?

ಕಿರಣ—ಅತ್ಯಾಚಾರವನ್ನಾಗಲಿ ಅದರ ಇಚ್ಛೆಯನ್ನಾಗಲಿ ಯಾವನು ಮಾಡಿದರೂ ಅಷ್ಟೇ. ಇರಲಿ. ಈಗ ನೀನು ಇಲ್ಲಿಂದ ಹೊರಗೆ ಹೋಗು.

ನಶಿರಿತನು ಹಿಂದಿರುಗಿ ನೋಡಲು ಕಿಶೋರಿಮೋಹನನು ಇದ್ದಿಲ್ಲ. ಅವನು ಒಂದು ಹೆಜ್ಜೆ ಮತ್ತೆ ಮುಂದೆ ಇಟ್ಟು, ಮುತ್ತಿನ ಸರವನ್ನು ಮುಂದೆ ಹಿಡಿದು: “ನಿನಗೆ ಇದನ್ನು ಉಪಹಾರ ಕೊಡಲು ಬಂದಿರುವೆನು” ಎಂದನು.

ಕಿರಣ—ನಿನ್ನ ಆ ಸರವನ್ನು ನಾಯಿಯ ಕೊರಳಲ್ಲಿ ಹಾಕು. ಮೂರ್ಖಾ, ಹಿಂದೂ ನಾರಿಯರಿಗೆ ಮುತ್ತಿನ ಲೋಭವನ್ನು ತೋರಿಸುತ್ತೀಯಾ? ನಿನಗೆ ಬುದ್ಧಿ ಇಲ್ಲ.

ನಶಿ—ನಿನಗೆ ಏನು ಬೇಕು ಹೇಳು. ಬೇಕಾದ್ದನ್ನು ಕೊಡುತ್ತೇನೆ.

ಕಿರಣ—ನೀನು ಒಂದು ವೇಳೆ ನಿನ್ನ ಸಿಂಹಾಸನವನ್ನು ತಲೆಯ ಮೇಲೆ ಹೊತ್ತುಕೊಂಡು ಬಂದು ನನಗೆ ಕೊಡಬಹುದು; ಆದರೆ ಆಗ ಕೂಡ ನಾನು ಅದನ್ನು ಎಡಗಾಲಿನಿಂದ ಒದ್ದು ಚೂರು ಚೂರು ಮಾಡತಕ್ಕವಳು. ಎಲೈ ನವಾಬನೇ, ಹಿಂದೂ ಸ್ತ್ರೀಯರ ಸತೀತ್ವದ ಮಾನದಿಂದ ನೀನೂ ನಿನ್ನ ಸಕಲ ಐಶ್ವರ್ಯವೂ ಕ್ಷುದ್ರವು. ಪ್ರತ್ಯಕ್ಷ ಪರಮೇಶ್ವರನು ಕೂಡ ಸ್ತ್ರೀಯರ ಸತೀತ್ವದ ಸಮನಲ್ಲ. ಅಂದಬಳಿಕ ನಿನ್ನಂಥ ಹೀನ ದರಿದ್ರನ ಪಾಡೇನು? ಪಾಪೀ, ಹೋಗು.

ನಶಿರಿತನು ಸಿಟ್ಟಿನಿಂದ—ಎಷ್ಟು ಗರ್ವವು ನಿನಗೆ? ಯಾವಳು ನನ್ನ ದಾಸಿಯ ದಾಸಿಯಾಗಲು ಕೂಡ ಯೋಗ್ಯಳಲ್ಲವೋ, ಅಂಥವಳಿಗೆ ಎಷ್ಟು ಸೊಕ್ಕು? ಇದರ ಫಲವನ್ನು ತೀವ್ರದಲ್ಲಿ ಅನುಭವಿಸುವಿ, ಎಂದೆಂದು ಹೊರಗೆ ಹೋದನು.

## ( ೩೩ )

ಮರುದಿನ ಮುಂಜಾನೆ ನಶಿರಿತನು ತನ್ನ ಕೋಣೆಯಲ್ಲಿ ಒಂದು ಪತ್ರವನ್ನು ಓದುತ್ತಿದ್ದನು. ಅದರ ಸಾರಾಂಶವು ಈ ಪ್ರಕಾರ ಇತ್ತು: "ಕಿಶೋರಿಮೋಹನನ ಪೂರ್ವಜರು ಬಹಳ ದ್ರವ್ಯವನ್ನು ಸಂಪಾದಿಸಿ ಒಂದು ನೆಲಮನೆಯಲ್ಲಿ ಹೂಳಿಟ್ಟಿರುವರು. ಅದಕ್ಕೆ ನಿಜವಾಗಿಯೂ ಗೌಡ ನವಾಬನೇ ಒಡೆಯನು. ಅದನ್ನು ಇಟ್ಟ ಸ್ಥಳದ ನಕಾಶವನ್ನು ಇದರ ಸಂಗಡ ಕಳಿಸಿರುತ್ತದೆ." ಪತ್ರ ಬರೆದವರ ಹೆಸರು ಇದ್ದಿಲ್ಲ.

ಆ ಪತ್ರವನ್ನು ಮನೋಹರನೇ ಬರೆದಿದ್ದನು. ನಶಿರಿತನಿಗೆ ಆಗ ನಿಜವಾಗಿಯೂ ಹಣದ ಅವಶ್ಯಕತೆ ಇತ್ತು. ಇಂಥ ವೇಳೆಯಲ್ಲಿ ಆ ಪತ್ರವು ಬಂದದ್ದರಿಂದ ಅವನ ಉತ್ಸಾಹವು ಹೆಚ್ಚಾಯಿತು. ಅವನು ಮನಸ್ಸಿನಲ್ಲಿ—ಕಿರಣ, ನಿನ್ನ ಗರ್ವವನ್ನು ಇನ್ನು ನೋಡುತ್ತೇನೆ. ಈಗ ನಿನ್ನ ಹಣವೂ ನೀನೂ ತಾನಾಗಿ ನನ್ನ ಕೈವಶವಾಗುವಂತೆ ಮಾಡುವೆನು, ಎಂದನು. ಅಷ್ಟರಲ್ಲಿ ಕಿಶೋರಿಮೋಹನನು ಅಲ್ಲಿಗೆ ಬರಲು, ಅವನನ್ನು ನೋಡಿ ನಶಿರಿತನು ನಗೆ ಮುಖದಿಂದ—ಕಿಶೋರಿಮೋಹನ, ಇನ್ನು ತೀವ್ರದಲ್ಲಿ ನಿನಗೆ ಮಂತ್ರಿಪದವನ್ನು ಕೊಡುತ್ತೇನೆ. ಆ ಬಗ್ಗೆ ನಿನಗೆ ಕೆಲವು ಕಾರ್ಯಭಾರವನ್ನು ತಿಳುಹಿಸಬೇಕಾಗುವದು. ಕಾರಣ ಇಂದು ಸಂಜೆಗೆ ಇತ್ತ ಬಾ, ಎಂದು ಹೇಳಲು, ಕಿಶೋರಿಮೋಹನನು ಹೊರಟು ಹೋದನು.

ಇತ್ತ ನವಾಬನು ಮೀನಾರಖಾನನನ್ನು ಕರೆದು ಅವನಿಗೆ ಅಂದಿನ ರಾತ್ರಿ ಕಿಶೋರಿಮೋಹನನ ಉದ್ಯಾನದಲ್ಲಿರುವ ಮನೆಗೆ ಬೆಂಕಿ ಹಚ್ಚಿ, ಅವನ ಹೆಂಡತಿಯನ್ನು ಅಂತಃಪುರಕ್ಕೆ ಹಿಡಿದು ತರಲು ಆಜ್ಞೆ ಮಾಡಿದನು. ಮೀನಾರಖಾನನು ಒಪ್ಪಿಕೊಂಡು ಹೋದನು.

ತರುವಾಯ ನವಾಬನು ಸೇವಕನನ್ನು ಕುರಿತು–ದರಬಾರವು ಕೂಡಿರುವದೇ? ಎಂದು ಕೇಳಲು, ಸೇವಕನು ಕೂಡಿರುವದಾಗಿ ಹೇಳಿದನು. ಆಗ ಸೇವಕನಿಗೆ ವಜೀರನನ್ನು ಕರೆದುಕೊಂಡು ಬರಲಿಕ್ಕೆ ಆಜ್ಞಾಪಿಸಲು, ಆ ಪ್ರಕಾರ ಗಣೇಶನಾರಾಯಣನು ಅಲ್ಲಿಗೆ ಬಂದನು

ನಶಿ—"ವಜೀರ ಸಾಹೇಬ, ಹಿಂದೂ ಜನರು ನನ್ನ ವಿರುದ್ಧವಾಗಿ ಶಸ್ತ್ರ ಹಿಡಿದು ಯುದ್ಧಕ್ಕೆ ಬಂದು ನಿಲ್ಲಬಹುದು." ಎಂದು ಕೇಳಲು, ಗಣೇಶ ನಾರಾಯಣನು ಆಶ್ಚರ್ಯದಿಂದ ಒಂದು ಕ್ಷಣ ನಶಿರಿತನ ಮುಖ ನೋಡಿ:– "ಮುಂದಿನ ಸಂಗತಿಯನ್ನು ಹೇಳಲು ಯಾರಿಗೆ ಶಕ್ಯವಿರುವದು?" ಎಂದನು.

ನಶಿ—ನೀವು ವಜೀರರು. ರಾಜ್ಯದ ಮುಖ್ಯ ಅಧಿಕಾರಿಗಳು. ಇದಲ್ಲದೆ ನಿಮ್ಮದು ತೀಕ್ಷ್ಣವಾದ ಹಿಂದೂ ತಲೆಯು. ಅಂದಬಳಿಕ ನೀವು ಇದನ್ನು ಸಹಜವಾಗಿ ಹೇಳಬಹುದಲ್ಲವೇ?

ಗಣೇ—ಹಿಂದೂ ಜನರ ಮೇಲೆ ಅತ್ಯಾಚಾರವಾಗದ ಹೊರತು ಅವರು ಶಸ್ತ್ರ ಹಿಡಿಯುವವರಲ್ಲವೆಂದು ನನ ನಂಬಿಗೆ.

ನಶಿ—ಈಗ ಅವರ ಮೇಲೆ ಅತ್ಯಾಚಾರವಾಗಹತ್ತಿರುವದೇನು?

ಗಣೇ—ಸ್ವಲ್ಪ ಸ್ವಲ್ಪ ಆಗಹತ್ತಿದೆ.

ನಶಿ—ನೀವೇ ವಜೀರರಿರುವಿರಿ. ಅದಕ್ಕೆ ಯಾಕೆ ಅಡ್ಡಿ ಮಾಡುವದಿಲ್ಲ?

ಗಣೇ—ನವಾಬನು ಸ್ವತಃ ಅತ್ಯಾಚಾರಿಯಾದಾಗ ಕೈ ಕೆಳಗಿನ ಅಧಿಕಾರಿಗಳು ಮಾಡುವದೇನು?

ನಶಿ—ವಜೀರಸಾಹೇಬ, ನಿಮ್ಮ ಸ್ಪಷ್ಟ ಮಾತು ಕೇಳಿ ಆನಂದವಾಯಿತು. ವಜೀರರೇ, ಪ್ರಜೆಗಳು ವಿದ್ರೋಹಿಗಳಾಗದಂಥ ಒಂದು ಉಪಾಯವನ್ನು ನಾನು ಹುಡುಕಿರುವೆನು.

ಗಣೇ—ಅದೇನುಪಾಯವು?

ನಶಿ—ಮನೆಗೊಬ್ಬರಂತೆ ಹಿಂದೂ ಬಲಿಷ್ಠ ತರುಣರನ್ನು ಸೆರೆಯು ಲ್ಲಿಡುವೆನು.

ಗಣೇಶನಾರಾಯಣನ ಮೈಯಲ್ಲಿ ನಡುಗು ಹುಟ್ಟಿತು. ಆಗ ಅವನು- "ಇದರಿಂದ ದೇಶದಲ್ಲಿಯ ಜನರು ಮತ್ತಿಷ್ಟು ಸಿಟ್ಟಿಗೇಳುವರು," ಎಂದನು.

ನಶಿ—ಅವರು ಸಿಟ್ಟಾಗಿ ಮಾಡುವೇನು? ಮೊದಲು ಕಾರಾಗೃಹ ದಲ್ಲಿದ್ದ ತರುಣರನ್ನು ಕೊಂದು, ಅವರ ಹೆಂಡಿರು-ಮಕ್ಕಳನ್ನು ಹಿಡಿಸಿ' ಮನೆ-ಮಾರುಗಳಿಗೆ ಬೆಂಕೀ ಹಚ್ಚಿಸುವೆನು, ಎನ್ನಲು ಗಣೇಶನಾರಾಯಣನು ಏನೂ ಮಾತಾಡದೆ ಸುಮ್ಮನೆ ಕೂಡಲು, ನಶಿರಿತನು:-ವಜೀರರೇ, ಹೇಗಡೆ, ನನ್ನ ಯುಕ್ತಿಯು? ಎಂದನು.

ಗಣೇ—ಯುಕ್ತಿಯು ನಿಮ್ಮ ಬುದ್ಧಿಗೆ ತಕ್ಕದ್ದಿರುವದು.

ನಶಿ—ವಜೀರರೇ, ಈಗಿರುವ ಸೇನಾಪತಿಗಳಿಂದ ನನ್ನ ಕಾರ್ಯಕ್ಕೆ ಸಹಾಯವಾಗುವದಿಲ್ಲ.

ಗಣೇ—ಅದು ನಿಜವು. ಅವರು ಕಾರಣವಿಲ್ಲದೆ ಮನುಷ್ಯರನ್ನು ಕೊಲ್ಲ ಲಾರರು.

ನಶಿ—ಆದ್ದರಿಂದ ಜೋನಾಬಖಾನ-ಸಮಸೇರಖಾನರನ್ನು ಕೆಲಸ ದಿಂದ ತೆಗೆದು, ಮೀನಾರಖಾನ-ಇಬ್ರಾಹಿಮಖಾನರನ್ನು ಆ ಕೆಲಸಕ್ಕೆ ನೇಮಿಸುವೆನು.

ಗಣೇ—ಇನ್ನೂ ಒಬ್ಬರುಳಿದರಲ್ಲ?

ನಶಿ—ಹೌದು ವಜೀರರೊಬ್ಬರುಳಿದರಲ್ಲವೇ? ಗಣೇಶನಾರಾಯ ಣರೇ, ನೀವು ಬಲು ಧೂರ್ತರು. ಈಗ ನಿಮ್ಮ ಮನಸ್ಸಿನಂತೆ ಆಗಲಿ.

ಗಣೇ—ಹಾಗಾದರೆ ನನಗೆ ಅಪ್ಪಣೆ ಕೊಡಿರಿ, ಮನೆಗೆ ಹೋಗುವೆನು.

ನಶಿ—ಒಳ್ಳೇದು.

ಗಣೇಶನಾರಾಯಣನು ಅಲ್ಲಿಂದ ದರ್ಬಾರಕ್ಕೆ ಬಂದು, ಎದ್ದು ನಿಂತು "ನಾನು ಇಂದಿನಿಂದ ನಿಮ್ಮ ವಜೀರನಲ್ಲ. ನವಾಬರು ನನ್ನನ್ನು ಕೆಲಸದಿಂದ ತೆಗೆದಿರುವರು" ಎಂದನು. ಆಗ ಸಮಸೇರಖಾನನು ಎದ್ದು ನಿಂತು— "ನವಾಬರು ನನ್ನನ್ನೂ ಜೋನಾಬಖಾನನ್ನೂ ಈ ಮೊದಲೇ ಕೆಲಸದಿಂದ ಬಿಡುಗಡೆ ಮಾಡಿರುವರು" ಎಂದನು. ಆಗ ಕಾರಾಗೃಹದ ಅಧ್ಯಕ್ಷನು

ಎದ್ದು ನಿಂತು—"ನನ್ನನ್ನು ತೆಗೆದಿರುವರೆ"ಂದನು. ದರಬಾರದೊಳಗಿನ ಉಳಿದ ಜನರು ಏನೂ ತಿಳಿಯದೆ, ಒಬ್ಬರ ಮುಖವನ್ನೊಬ್ಬರು ನೋಡುತ್ತ ಕುಳಿತರು.

( ೩೪ )

ಮರುದಿನ ಮುಂಜಾನೆ ಕಿಶೋರಿಮೋಹನನು ನಶಿರಿತನ ಹತ್ತರ ಬಂದು:—"ಹುಜೂರ, ನನ್ನ ಸರ್ವಸ್ವವೂ ನಾಶವಾಯಿತು. ನಾನು ನಿನ್ನಿನ ರಾತ್ರಿ ಇಲ್ಲಿ ಇದ್ದಾಗ ಉದ್ಯಾನದ ನನ್ನ ಮನೆಯನ್ನು ಲೂಟಿ ಮಾಡಿ ಸುಟ್ಟು ಬಿಟ್ಟಿರುವರು. ಮುಂದೇನು ಗತಿ?" ಎಂದನು.

ನಶಿರಿತನು ಏನೂ ಅರಿಯದವನಂತೆ:-"ಆಂ! ಇದೇನನರ್ಥವು? ಈ ಕೆಲಸವು ಬಹುಶಃ ಗಣೇಶನಾರಾಯಣನದೇ ಇರಬಹುದು."

ಕಿಶೋ—ಅವನೇ ಮಾಡಿಸಿರಬಹುದು. ನನ್ನ ಮೇಲೆ ನೀವು ಪ್ರೀತಿ ಮಾಡುವದನ್ನು ಸಹನ ಮಾಡಲಾರದೆ ಅವನು ಈ ಪ್ರಕಾರ ಮಾಡಿರುವನು.

ನಶಿ—ನಿನ್ನ ಹೆಂಡತಿಯ ಅವಸ್ಥೆಯು?

ಕಿಶೋ—ಅವಳು ಅಲ್ಲಿಯೇ ಸುಟ್ಟು ಬೂದಿಯಾಗಿ ಹೋಗಿರಬಹುದು. ಸರಕಾರ, ಇದಕ್ಕೆ ಉಪಾಯವೇನು?

ನಶೀ—ನಾಳೆ ದರ್ಬಾರದಲ್ಲಿ ಫಿರ್ಯಾದಿಯನ್ನು ಕೊಡು.

ಅಷ್ಟರಲ್ಲಿ ಹೊಸ ವಜೀರನಾದ ವಜೀರಲ್ಲಿಯು ಅಲ್ಲಿಗೆ ಬಂದನು. ನವಾಬನು ಅವನನ್ನು ಕುರಿತು: "ವಜೀರ, ನಿನ್ನೆ ರಾತ್ರಿ ಗಣೇಶನಾರಾಯಣನು ಇವನ ಮನೆಗೆ ಬೆಂಕೀ ಹಚ್ಚಿಸಿರುವನಂತೆ. ಕಾರಣ ನಾಳಿನ ದರ್ಬಾರದಲ್ಲಿ ಇವನ ಅರ್ಜಿಯನ್ನು ತೆಗೆದುಕೊಂಡು ಯೋಗ್ಯ ವ್ಯವಸ್ಥೆಯನ್ನು ಮಾಡತಕ್ಕದ್ದು."

ಕಿಶೋರಿಮೋಹನನು ನಶಿರಿತನನ್ನು ಕುರಿತು:—"ನವಾಬಸಾಹೇಬ, ನನ್ನ ಮಂತ್ರಿಪದವು?" ಎಂದು ಕೇಳಲು, ನವಾಬನು ವಜೀರನ ಕಡೆಗೆ ತಿರುಗಿ—"ವಜೀರ, ಇವರಿಗೆ ಮಂತ್ರಿಪದವನ್ನು ಕೊಡಬೇಕಲ್ಲ?"

ವಜೀರ—"ಹುಜೂರ, ಹಿಂದುಗಳು ಮಂತ್ರಿಯಾದರೆ ಪ್ರಜೆಗಳು ಆಕ್ಷೇಪಣೆ ತೆಗೆದುಕೊಳ್ಳುವರು. ಕಾರಣ ಮಂತ್ರಿಪದವು ಬೇಕಾದರೆ ಕಿಶೋರಿಮೋಹನನು ಮುಸಲ್ಮಾನನಾಗಬೇಕಾಗುವದು."

ಕಿಶೋ—ಏನು, ನಾನು ಮುಸಲ್ಮಾನನಾಗಬೇಕೆ? ನವಾಬರು ಈ ಸಂಗತಿಯನ್ನು ನನಗೆ ಇದು ವರೆಗೂ ಹೇಳಿದ್ದಿಲ್ಲವಲ್ಲ!

ನಶಿ—ನನ್ನದೇನೂ ಅಡ್ಡಿ ಇಲ್ಲ; ಆದರೆ ಈಗ ಹೊಸದಾಗಿ ಸರದಾರರು ಈ ಪ್ರಕಾರ ಅಭಿಪ್ರಾಯ ಪಡುವರಂತೆ.

ಕಿಶೋ—ಗಣೇಶನಾರಾಯಣನು ಹಿಂದುವು. ಅವನು ವಜೀರನಾಗಿದ್ದನಲ್ಲ?

ನಶಿ—ಅವನನ್ನು ಹಿಂದಿನ ನವಾಬರು ಮಾಡಿದ್ದರು.

ವಜೀರ—ಕಿಶೋರಿಮೋಹನರಾವ, ನೀವೇಕೆ ಮುಸಲ್ಮಾನರಾಗಬಾರದು? ರಾಜನು ಎಲ್ಲರಿಗಿಂತ ಶ್ರೇಷ್ಠನು: ಅಂದಬಳಿಕ ಅವನ ಧರ್ಮವೂ ಶ್ರೇಷ್ಠವು ಆದ್ದರಿಂದ ನೀವು ಮುಸಲ್ಮಾನರಾದರೇನು ತಪ್ಪು?

ಕಿಶೋ—"ಏನೇ ಇರಲಿ. ನಾನು ಮುಸಲ್ಮಾನನಾಗುವೆನೆ"ಂದನು. ಕೂಡಲೆ ವಜೀರನು ಅವನನ್ನು ಕರಕೊಂಡು ಒಳಗೆ ಹೋದನು. (ಅಲ್ಲಿ ಅವನಿಗೆ ಮುಸಲ್ಮಾನ ಧರ್ಮದ ದೀಕ್ಷೆಯನ್ನು ಕೊಡುವ ಕಾರ್ಯವು ಪ್ರಾರಂಭವಾಯಿತು.)

ಅವರು ಹೋದನಂತರ ನವಾಬನು ಮೀನಾರಖಾನನ್ನು ಕುರಿತು:—ಮೀನಾರ, ಕಿಶೋರಿಮೋಹನನ ಆಸ್ತಿಯು ಇನ್ನು ಏನಾದರೂ ಇರುವದೇ? ಎಂದು ಕೇಳಲು, ಮೀನಾರಖಾನನು ಊರೊಳಗೊಂದು ಮನೆಯಿರುವದೆಂದು ಹೇಳಿದನು. ನವಾಬನು ಮೀನಾರಖಾನನಿಗೆ ಆ ಮನೆಯನ್ನು ಸ್ವಾಧೀನದಲ್ಲಿ ತೆಗೆದುಕೊಂಡು, ತನ್ನ ಅಪ್ಪಣೆಯ ಹೊರತು ಯಾರನ್ನೂ ಬರಗೊಡಬಾರದೆಂದು ಹೇಳಿದನು. ಅಷ್ಟರಲ್ಲಿ ವಜೀರನ ಸಂಗಡ ಕಿಶೋರಿಮೋಹನನು ಅಲ್ಲಿಗೆ ಬಂದನು.

ಕಿಶೋರಿಮೋಹನನ ತಲೆಯನ್ನು ಪೂರಾ ಬೋಳಿಸಿದ್ದರು. ತಲೆಗೆ ಒಂದು ತುರ್ಕಿ ಟೊಪ್ಪಿಗೆಯು. ಕಾಲಲ್ಲಿ ಸಡಿಲಾದ ಇಜಾರವು. ಮೈಯಲ್ಲಿ ಒಂದು ಉದ್ದನ್ನ ಪೈರನದ ಮೇಲೆ ಜಾಕೀಟು. ಕಿಶೋರಿಮೋಹನನು ನವಾಬನಿಗೆ ಕೈ ಮುಗಿದು:—ಹುಜೂರ, ನಾನು ಮು-ಸ-ಲ-ಮಾ-ನ-ನಾಗಿರುವೆನು, ಎಂದನು. ಆಗ ಅವನ ಕೈ ಕಾಲು ನಡುಗುತ್ತಿದ್ದವು. ನಾಲಿಗೆಯು ಒಣಗಿತ್ತು. ಅಂಗಿಯು ಬೆವರಿನಿಂದ ತೊಯ್ದಿತ್ತು. ಆದರೂ ನಶಿರಿತನಿಗೆ ದಯೆ ಬರಲಿಲ್ಲ. ಆಗ ಅವನು—"ಯಾವನು ಸ್ವಧರ್ಮವನ್ನು ತ್ಯಾಗ ಮಾಡಿ

ರುವನೋ, ಅವನು ಒಡೆಯನನ್ನೂ ತ್ಯಾಗಮಾಡುವದು ಸಹಜವದೆ. ಕಾರಣ ನಿನಗೆ ಮಂತ್ರಿಪದವು ದೊರೆಯದೆ''ಂದನು.

ಕಿಶೋರಿ—ಪ್ರಭುಗಳೇ, ನಾನು ನಿಮ್ಮನ್ನು ತ್ಯಾಗಮಾಡತಕ್ಕವನೇ? ನಿಮ್ಮ ಸಲುವಾಗಿ ನಾನು ನನ್ನ ಧರ್ಮವನ್ನು ಕೂಡ ಬಿಟ್ಟು ಮುಸಲ್ಮಾನನಾಗಿರುವೆನು.

ನಶೆ—ನೀನು ನನ್ನ ಸಲುವಾಗಿ ಮುಸಲ್ಮಾನನಾಗಿಲ್ಲ; ಮಂತ್ರಿಪದದ ಸಲುವಾಗಿ ಆಗಿರುವಿ. ಕಿಶೋರಿಮೋಹನ, ನೀನು ಧರ್ಮಾಂತರ ಮಾಡಿದ ಕಾರಣ ನಿನ್ನ ತಂದೆಯ ಸಂಪತ್ತಿಯ ಮೇಲೆ ಕಾಯದೆ ಪ್ರಕಾರ ನಿನ್ನ ಅಧಿಕಾರವಿಲ್ಲ. ನಿನ್ನ ಪತ್ನಿಯೇ ಅವುಗಳ ಮಾಲಕಳು, ಎಂದನು.

ಕಿಶೋರಿಮೋಹನನು ದೀನಸ್ವರದಿಂದ–ಜಹಾಂಪನಾ! ಸುಲ್ತಾನ ಸಾಹೇಬ, ದೀನದುನಿಯಾರ ಮಾಲಕ, ಇನ್ನು ಮುಂದೆ ನನ್ನ ಗತಿಯು ಏನು? ಎಂದು ನೆಲಕ್ಕೆ ಬಿದ್ದನು.

( ೩೫ )

''ನಿಜವಾಗಿಯೂ ಹೇಳು; ನನ್ನ ಪತಿಯನ್ನು ಬಲಾತ್ಕಾರದಿಂದ ಮುಸಲ್ಮಾನನ್ನಾಗಿ ಮಾಡಿದರೆ?''

ಮನೋ—ಕಿರಣ, ಹಾಗೆ ಮಾಡಿಲ್ಲ. ನಿನ್ನ ಪತಿಯೇ ಮಂತ್ರಿಪದದ ಆಶೆಯಿಂದ ಮುಸಲ್ಮಾನನಾದನು.

ಕಿರ—ಮಂತ್ರಿಪದವು ದೊರಕಿತೇ?

ಮನೋ—ಇಲ್ಲ. ಅದು ದೊರೆಯಲಿಲ್ಲ. ಆಗ ಅವನು ನಿಶ್ಚೇಷ್ಟನಾಗಿ ಭೂಮಿಗೆ ಬಿದ್ದನು. ಸೇವಕರು ಅರಮನೆಯಿಂದ ಎಳೆದು ಬೀದಿಗೆ ಬಿಸುಟಿದರು. ನಾನು ಹೋಗಿ ಕರಕೊಂಡು ಬಂದು ಆಹಾರವನ್ನು ಕೊಟ್ಟೆನು.

ಕಿರ—ಯಾಕೆ, ಅವರ ಮನೆ ಇರುವದಲ್ಲ; ಅಲ್ಲಿಗೇಕೆ ಹೋಗಲಿಲ್ಲ?

ಮನೋ—ಆ ಮನೆಯೂ ಈಗ ನವಾಬನ ಕೈ ಸೇರಿರುವದು. ಈಗ ಸಧ್ಯಕ್ಕೆ ಕಿಶೋರಿಮೋಹನನ ಧನ, ಧರ್ಮ, ಸ್ತ್ರೀ, ಮನೆ-ಮಾರುಗಳೆಲ್ಲವೂ ನವಾಬನ ಆಧೀನವು.

ಕಿರ—ಇನ್ನು ಮುಂದೆ ನಾನೇನು ಮಾಡಬೇಕು?

ಮನೋ—ನಿನ್ನ ಪತಿಗೆ ಸಂತೋಷವಾಗುವಂಥ ಕಾರ್ಯ ಮಾಡು.

ಕಿರ—ಏನು ಮಾಡಿದರೆ ಅವರಿಗೆ ಸಂತೋಷವಾಗುವದು ?

ಮನೋ—ಯಾರು ನಿನ್ನ ಪತಿಯ ಸರ್ವನಾಶವನ್ನು ಮಾಡಿರುವರೋ, ಅವರ ಸರ್ವನಾಶದ ಉದ್ಯೋಗವನ್ನು ಮಾಡು. ನೀನು ಉರಿಯುವ ಮನೆಯಲ್ಲಿ ಸಿಕ್ಕು ಸುಟ್ಟು ಹೋಗಿರುವೆಯೆಂದು ನಿನ್ನ ಪತಿಯು ತಿಳಿದಿದ್ದನು. ನೀನು ನವಾಬನ ಅಂತಃಪುರದಲ್ಲಿರುವೆಯೆಂದು ನಾನು ಈಗ ಆತನಿಗೆ ತಿಳಿಸಿದೆನು.

ಕಿರಣ—ಅವರೇನಂದರು?

ಮನೋ—ನಿನ್ನನ್ನೂ ನವಾಬನನ್ನೂ ಬಹಳ ಬೈದನು.

ಕಿರಣ—ಮನೂ, ಹೇಗಾದರೂ ಮಾಡಿ ನನ್ನನ್ನು ಅವರ ಹತ್ತರ ಕಳುಹಿಸು. ನಾನೀ ನರಕದಲ್ಲಿರಲಾರೆನು.

ಮನೋ—ಇದಕ್ಕೆ ಒಂದೇ ಉಪಾಯವಿರುವದು. ಅದೇನಂದರೆ, ನೀನು ಕೆಲವು ದಿವಸಗಳವರೆಗೆ ತೋರಿಕೆಗೆ ನವಾಬನ ಮೇಲೆ ಪ್ರೀತಿಯನ್ನು ತೋರಿಸಿ, ಅವನನ್ನು ಮೋಹಗೊಳಿಸು.

ಕಿರ—ಇಂಥ ಹೀನ ಕಾರ್ಯವು ನನ್ನಿಂದಾಗದು.

ಮನೋ—ಹಾಗಾದರೆ ಬೇರೆ ಮಾರ್ಗವಿಲ್ಲ. ಕಿರಣಬಾಲೆ, ನಿನ್ನ ದೇಹವು ರಕ್ತ-ಮಾಂಸಗಳಿಂದ ನಿರ್ಮಿತವಾದದ್ದೆಂದು ತಿಳಿದಿದ್ದೆನು; ಆದರೆ ಈಗ ನಿನ್ನ ಮಾತುಗಳನ್ನು ಕೇಳಿದರೆ, ನೀನು ಮನುಷ್ಯಳಲ್ಲ; ಜಡಪಿಂಡವು ಮಣ್ಣಿನ ಗೊಂಬೆಯು! ಎಂದನು. ಇಷ್ಟರಲ್ಲಿ ನಶೆರಿತನು ಅಲ್ಲಿಗೆ ಬಂದನು. ಆಗ ಮನೋಹರನು ಅಲ್ಲಿಂದ ಹೋಗುವ ಪ್ರಯತ್ನವನ್ನು ಮಾಡದೆ ಸುಮ್ಮನೆ ನಿಂತನು. ನಶೆರಿತನು ಅವನನ್ನು ನೋಡಿ—"ನೀನು ಇಲ್ಲಿಗೇಕೆ ಬಂದಿರುವಿ?" ಎಂದನು.

ಮನೋ—ನಮ್ಮ ಯಜಮಾನ ಪತ್ನಿಯ ಹತ್ತರ ಆಶ್ರಯವನ್ನು ಬೇಡಲಿಕ್ಕೆ?

ನಶೆ—ಇವಳು ಇಲ್ಲಿರುವಳೆಂದು ನಿನಗೆ ಯಾರು ಹೇಳಿದರು.

ಮನೋ—ಕಾವಲುಗಾರನು.

ನಶೆ—ನಿನಗೆ ಇಲ್ಲಿ ಆಶ್ರಯ ದೊರೆಯದು.

ಮನೋ—ಸಿಗದಿದ್ದರೆ ಬೇರೆ ಕಡೆಗೆ ಹೋಗುವೆನು, ಎಂದು ಹೇಳಿ,

ಕಿರಣಬಾಲೆಯನ್ನು ಕುರಿತು- ಬಾಯಿಯವರೇ, ನೀವು ಶಹಾನಶಹಾ ನವಾಬನ ಪ್ರೀತಿಯ ನಜರಿಗೆ ಬಿದ್ದಿರುವಿರಿ. ಬಹಳೇ ಭಾಗ್ಯಶಾಲಿಗಳು. ಯಾವ ನವಾಬನ ಅನುಗ್ರಹದ ಸಲುವಾಗಿ ಸಾವಿರಾರು ಮಂದಿ ದಿನಾಲು ಅಲ್ಲಾನನ್ನು ಸ್ತುತಿಸುವರೋ, ಅಂಥ ನವಾಬನು ನಿಮ್ಮ ಪ್ರೇಮಭಿಕ್ಷೆ ಬೇಡುತ್ತಿರುವನು. ಈ ಸಂಸಮಯವನ್ನು ಕಳೆದುಕೊಳ್ಳಬೇಡಿರಿ. ನೀವು ನವಾಬನ ಮನಸ್ಸಿಗೆ ಆನಂದವಾಗುವಂತೆ ನಡೆಯಿರಿ. ನಾನು ಹೋಗಿ ಬರುತ್ತೇನೆಂದು ಸಿದ್ಧನಾದನು. ಮನೋಹರನ ಮಾತುಗಳಿಂದ ನವಾಬನ ವಿಚಾರವು ಬದಲಾಯಿತು. ಆಗ ನಶೆರಿತಶಹನು ಅವನಿಗೆ ಅಲ್ಲಿಯೇ ಇರಲಿಕ್ಕೆ ತಿಳಿಸಲು, ಮನೋಹರನು ಅವನಿಗೆ ಸಲಾಂ ಮಾಡಿ ಅಲ್ಲಿಂದ ಸ್ವಲ್ಪ ದೂರ ಹೋಗಿ ನಿಂತನು. ನಂತರ ನಶೆರಿತನು ಸ್ವಲ್ಪ ಮುಂದಕ್ಕೆ ಬಂದು ಕಿರಣಬಾಲೆಯ ಕೈ ಹಿಡಿಯ ಹೋದನು. ಆಗ ಅವಳು ಹಿಂದಕ್ಕೆ ಸರಿದು ದೀನ ಮುದ್ರೆಯಿಂದ:—“ನವಾಬ, ನನ್ನನ್ನು ಕ್ಷಮಿಸು” ಎಂದಳು.

ನಶೆ—ಸುಂದರಿ! ನಾನು ನಿನ್ನಿನಿಂದ ನಿನ್ನ ಹತ್ತಿರ ಬಂದಿಲ್ಲ. ಕಾರಣ ನಾನೇ ಅಪರಾಧಿಯು. ನನ್ನನ್ನು ನೀನೇ ಕ್ಷಮಿಸು.

ಕಿರಣ—ನೀನು ಇಂದು ಸಹ ಬಾರದಿದ್ದರೆ ಸುಖಿಯಾಗಿರುತ್ತಿದ್ದೆನು.

ನಶೆ—ಬಲುಮೆಯಿಂದ ನಾನು ನಿನ್ನನ್ನು ತರಿಸಿದೆನೆಂದು ಸಿಟ್ಟಾಗಿರುವದಾಗಿ ತೋರುತ್ತದೆ.

ಕಿರಣ—ಸುಲ್ತಾನ, ನೀನು ಪಿಶಾಚಿಯು! ನಿನ್ನ ಮುಖವನ್ನು ನೋಡಿದರೆ ತಿರಸ್ಕಾರ ಹುಟ್ಟುತ್ತದೆ.

ನಶೆ—ನಿನ್ನ ಮುಖವನ್ನು ನೋಡಿದರೆ ನನಗೆ ಆನಂದವಾಗುತ್ತದೆ.

ಕಿರ—ನೀನೇ ಅಲ್ಲವೆ ನನ್ನ ಮನೆ-ಮಾರುಗಳನ್ನು ಸುಡಿಸಿದವನು?

ನಶೆ—ಹೌದು. ನೀನು ತಿರುಗಿ ಅಲ್ಲಿಗೆ ಹೋಗಬಾರದೆಂದು ಆ ಪ್ರಕಾರ ಮಾಡಿಸಿರುವೆನು.

ಕಿರ—ನನ್ನ ಪತಿಯ ಧರ್ಮವನ್ನು ಭ್ರಷ್ಟ ಮಾಡಿದವನೂ ನೀನೇ.

ನಶೆ—ನಿಮ್ಮಿಬ್ಬರ ಸಂಬಂಧವು ಕಡಿಯಬೇಕೆಂದೇ ಹಾಗೆ ಮಾಡಿರುವೆನು.

ಕಿರಣ—ನರಪಿಶಾಚಿಯೇ, ಹಿಂದೂ ಪತಿ-ಪತ್ನಿಯರ ಸಂಬಂಧವು ಈ ಜೀವನದಲ್ಲಿಯಾಗಲಿ ಜೀವನಾಂತ್ಯದಲ್ಲಿಯಾಗಲಿ ಎಂದೂ ಕಡಿಯ

ಲಾರದು. ಮುಸಲ್ಮಾನನಾದ ನಿನಗೆ ಅದು ಹೇಗೆ ತಿಳಿಯಬೇಕು? ನನ್ನ ಪತಿಯು ಈಗ ಮುಸಲ್ಮಾನನಾಗಿರಲಿ, ಬೇಕಾದ ಧರ್ಮವನ್ನು ಸ್ವೀಕರಿಸಲಿ ಆ ಪತಿಯ ಧರ್ಮವೇ ನನ್ನ ಧರ್ಮವು. ಪತಿಯೇ ನನ್ನ ಸರ್ವಸ್ವವು.

ನಶಿ—ಏನು, ಇನ್ನೂ ನಿನ್ನ ಗರ್ವವು ಕಡಿಮೆಯಾಗಿಲ್ಲವೇ? ನೋಡುವೆನು.

ಕಿರ—ನವಾಬ, ನೀನು ನೋಡುವದೇನು? ಮಾಡುವದೇನು? ನೀನು ಇಡೀ ಪೃಥ್ವಿಯ ಸಾಮರ್ಥ್ಯವನ್ನು ಒಟ್ಟುಗೂಡಿಸಿದರೂ ನಿನ್ನಿಂದ ಹಿಂದೂ ಕುಲಸ್ತ್ರೀಯು ಧರ್ಮಚ್ಯುತಿಯಾಗಲಾರದು.

ನಶಿ—ಹೇಗೆಯೋ? ಎಂದಂದು ಸಂಕೇತ ಧ್ವನಿಯನ್ನು ಮಾಡಲು, ಒಬ್ಬ ಹಬಸೀ ಖೋಜಾನು ಬಂದನು. ನವಾಬನು ಅವನಿಗೆ ತಾರ್ತರ ಸ್ತ್ರೀಯರನ್ನು ಕರೆತರಲು ಹೇಳಲು, ಕೂಡಲೆ ೮-೧೦ ಜನ ತಾರ್ತರ ಸ್ತ್ರೀಯರು ಬಂದರು. ಅವರು ನವಾಬನ ಅಪ್ಪಣೆಯ ಪ್ರಕಾರ ಕಿರಣಬಾಲೆಯ ಹತ್ತರ ಶಸ್ತ್ರಗಳೇನಾದರೂ ಇರುವವೋ ಹೇಗೆಂದು ಶೋಧ ಮಾಡಲು, ಕಿರಣಬಾಲೆಯ ಹತ್ತರ ಒಂದು ಚೂರಿಯು ದೊರಕಿತು. ನವಾಬನು ಆ ಸ್ತ್ರೀಯರನ್ನು ಕಿರಣಬಾಲೆಯ ಕಾವಲಿಗಾಗಿ ನಿಯಮಿಸಿದನು. ಆಗ ಕಿರಣಬಾಲೆಯು:—"ದೇವರೇ, ನನ್ನನ್ನು ಈ ರಾಕ್ಷಸನ ಕೈಯಿಂದ ಪಾರು ಮಾಡು" ಎಂದಳು.

ನಶಿ—"ಈಗ ನಿನ್ನನ್ನು ರಕ್ಷಿಸಲು ದೇವರಿಗೆ ಕೂಡ ಶಕ್ಯವಿಲ್ಲ" ವೆಂದನು.

ಕಿರಣಬಾಲೆಯು ನಶಿರಿತನಿಗೆ ಅಲ್ಲಾನ ಆಣೆಯನ್ನೂ ಧರ್ಮದ ಆಣೆಯನ್ನೂ ಇಟ್ಟಳು: ಆದರೆ ನಶಿರಿತನು ಅತ್ತ ಲಕ್ಷ್ಯಕೊಡಲಿಲ್ಲ. ಅಷ್ಟರಲ್ಲಿ ಮನೋಹರನು ಅಲ್ಲಿಗೆ ಬಂದು—"ಹುಜೂರ" ಎಂದನು.

ನಶಿ—ಮತ್ತೇನು?

ಮನೋ—ನನಗೆ ಏಳು ದಿವಸಗಳ ಅವಧಿಯನ್ನು ಕೊಟ್ಟರೆ ಅಷ್ಟರಲ್ಲಿ ಇವಳಿಗೆ ತಿಳಿಸಿ ಹೇಳುವೆನು. ನಶಿರಿತನು ಕ್ಷಣಕಾಲ ಯೋಚಿಸಿ—'ಹಾಗೆಯೇ ಆಗಲಿ, ಎಂದು ಹೇಳಿ, ಆ ತಾರ್ತರ ಸ್ತ್ರೀಯರಿಗೆ ಹೋಗಲು ಸನ್ನೆ ಮಾಡಿದನು. ನಂತರ ತಾನೂ ಅಲ್ಲಿಂದ ಹೋದನು. ಆಗ ಕಿರಣಳು ಮನೋಹರನಿಗೆ—"ಈ ನರಕದಿಂದ ಉದ್ಧಾರ ಮಾಡಲು ನಿನ್ನ ಹೊರತು ಯಾರೂ

ಗತಿಯಿಲ್ಲವೆ”ಂದಳು. ಆಗ ಮನೋಹರನು ಅವಳಿಗೆ ಏನೇನೋ ಉಪದೇಶ ಮಾಡತೊಡಗಿದನು.

( ೩೬ )

ನಿರ್ಭಾಗ್ಯ ಕಿಶೋರಿಮೋಹನನ ಹತ್ತಿರ ಒಂದು ಪೈ ಸಹ ಇಲ್ಲದೆ ಓಣಿ ಓಣಿ ತಿರುಗಹತ್ತಿದನು. ತಾನು ಪೂರ್ವದಲ್ಲಿ ಸಹಾಯ ಮಾಡಿದ ಹಾಗೂ ಸಾಲ ಕೊಟ್ಟ ಅನೇಕರ ಕಡೆಗೆ ಹೋಗಿ ದೈನ್ಯದಿಂದ ತನ್ನ ಸ್ಥಿತಿಯನ್ನು ತಿಳಿಸಿದನು; ಆದರೂ ಆಗ ಅವನಿಗೆ ಯಾರೂ ಸಹಾಯ ಮಾಡಲಿಲ್ಲ. ಕಡೆಗೆ ನಿರಾಶನಾಗಿ ತನ್ನ ಮನೆಯ ಹಾದಿಯನ್ನು ಹಿಡಿದನು. ಆ ದುರ್ದೈವಿಗೆ ಅಲ್ಲಿಯೂ ಆಶ್ರಯ ಸಿಗಲಿಲ್ಲ; ಯಾಕಂದರೆ ಆಗ ಮನೆಯ ಬಾಗಿಲಿಗೆ ಇಬ್ಬರು ಸಶಸ್ತ್ರ ಕಾವಲುಗಾರರಿದ್ದರು. ಅವರು ಕಿಶೋರಿಮೋಹನನನ್ನು ಒಳಗೆ ಬಿಡಲಿಲ್ಲ. ಆಗ ಅವನು ಕಾವಲುಗಾರರಿಗೆ ತಾನು ಮನೆಯ ಮಾಲಕನೆಂದು ಹೇಳಿದನು. ಅವರು ನವಾಬನ ಅಪ್ಪಣೆಯ ಹೊರತು ಯಾರನ್ನೂ ಒಳಗೆ ಬಿಡುವದಿಲ್ಲವೆಂದು ತಿಳಿಸಲು, ಅವನಿಗೆ ಮುಂದಿನ ಮಾರ್ಗವೇ ತೋಚಲಿಲ್ಲ. ಆಗ ಅವನು ಮನಸ್ಸಿನಲ್ಲಿ—“ನವಾಬನು ದಯ ತೋರಿಸಿದರೆ ನನ್ನ ಭಾಗ್ಯ ಚಕ್ರವು ಮತ್ತೆ ತಿರುಗಬಹುದೆ”ಂದು ಭಾವಿಸಿ ಅರಮನೆಗೆ ಬಂದನು. ಅಲ್ಲಿಯ ಕಾವಲುಗಾರರೂ ಅವನನ್ನು ಒಳಗೆ ಬಿಡಲಿಲ್ಲ. ಆಗ ಅವನು ಕಾವಲುಗಾರನಿಗೆ—“ನನಗೆ ನವಾಬನಿಂದ ಹಣ ಬರತಕ್ಕದ್ದಿರುವದು. ಕಾರಣ ಸ್ವಲ್ಪ ಒಳಗೆ ಬಿಡಿರೆ”ಂದು ಬೇಡಿಕೊಂಡನು. ಕಾವಲುಗಾರನು ನಕ್ಕು—“ನವಾಬರು ನಿನ್ನಲ್ಲಿ ಹಣ ತಕ್ಕೊಂಡಿರುವರೇ? ನಿನ್ನ ತಲೆಯು ಕೆಟ್ಟಿದೆ. ಅತ್ತ ಹೋಗೆ”ಂದನು. ಮತ್ತೆ ಕಿಶೋರಿಮೋಹನನು—“ಒಳಗೆ ನನ್ನ ಹೆಂಡತಿಯಿರುವಳು. ಅವಳಿಗೆ ಭೆಟ್ಟಿಯಾಗುತ್ತೇನೆ”ಂದನು. ಅದಕ್ಕೆ ಕಾವಲುಗಾರನು—“ಅವಳು ಇಲ್ಲಿ ಯಾಕೆ ಇರುವಳು?” ಎಂದನು. ಆಗ ಕಿಶೋರಿಮೋಹನನು—“ನವಾಬನು ಬಲುಮೆಯಿಂದ ಅವಳನ್ನು ಇಲ್ಲಿಗೆ ತಂದಿರುವದಾ”ಗಿ ಹೇಳಿದನು. ಕಾವಲುಗಾರನು—“ನಿನ್ನ ಹೆಂಡತಿಯು ನವಾಬನ ಪ್ರೇಮಕ್ಕೆ ಪಾತ್ರಳಾಗಿರುವಳೆಂದ ಮೇಲೆ ಅವಳ ದೈವವೇ ತೆರೆಯಿತು. ಇಲ್ಲಿ ನಿನ್ನ ಕೆಲಸವೇನು? ಮನೆಗೆ ನಡೆ” ಎಂದು ಅವನನ್ನು ಹೊರಗೆ ನೂಕಿದನು.

ಇತ್ತ ಮನೋಹರನು ನಶಿರಿತನಿಂದ ತೆಗೆದುಕೊಂಡ ಏಳು ದಿವಸಗಳ

ಅವಧಿಯು ಇಂದಿಗೆ ತೀರಿತು. ಮನೋಹರನು ಕಿರಣಬಾಲೆಯ ಕೋಣೆಯನ್ನು ಸುಂದರವಾಗಿ ಶೃಂಗಾರ ಮಾಡಿ, ಅಲ್ಲಲ್ಲಿಗೆ ಆದೇ ಅರಳಿದ ಹೂಗೊಂಚಲುಗಳನ್ನು ಪುಷ್ಪವಾಟಿಕೆಯಲ್ಲಿರಿಸಿದನು; ಮತ್ತು ಅವಳನ್ನು ಸಹ ಹೂಗಳಿಂದ ಶೃಂಗರಿಸಿ ಅವಳಿಗೆ ಅಂದಿನ ಕೆಲಸದ ಬಗ್ಗೆ ಉಪದೇಶ ಮಾಡತೊಡಗಿದನು. ಉಪದೇಶವನ್ನು ಕೇಳುವಾಗ ನಡುನಡುವೆ ಕಿರಣಬಾಲೆಯ ಮೈಯಲ್ಲಿ ನಡುಗು ಹುಟ್ಟುತ್ತಿತ್ತು. ಆಗ ಮನೋಹರನು—"ಯಾಕೆ, ಕಿರಣ, ಇದರಂತೆ ಮಾಡುವದು ನಿನ್ನಿಂದ ಆಗುವದಿಲ್ಲವೇ?" ಎಂದನು. ಕಿರಣಬಾಲೆಯು ಆಕಾಶದ ಕಡೆಗೆ ನೋಡುತ್ತ—'ಮಾಡುವೆನೆ'ಂದಳು. ಮನೋಹರನು—'ನೀನು ಮನದಲ್ಲಿ ಏನೇನೋ ಯೋಚಿಸುವ ಹಾಗೆ ತೋರುತ್ತದಲ್ಲ?' ಎನ್ನಲು, ಕಿರಣಳು—'ಯೋಚನೆಯೇನೂ ಇಲ್ಲ. ನನ್ನ ಪತಿಯನ್ನು ನೆನಿಸಿದೆನು. ಅವರ ಸ್ಮರಣೆಯಿಂದಲೇ ನನ್ನಲ್ಲಿ ಉತ್ಸಾಹವು ಹುಟ್ಟುವದು. ಇಲ್ಲದಿದ್ದರೆ ಯಾವದನ್ನೂ ಮಾಡಲಾರದಷ್ಟು ನಿರ್ಬಲಳಾಗುವೆನೆ'ಂದಳು. ಕಿರಣಬಾಲೆಯ ಈ ಪತಿ ಪರಾಯಣತೆಯನ್ನು ಕಂಡು, ಮನೋಹರನಿಗೆ ಆಶ್ಚರ್ಯವಾಯಿತು.

ಅಷ್ಟರಲ್ಲಿ ನಶೀರತನು ಅಲ್ಲಿಗೆ ಬಂದನು. ನವಾಬನ ಸಲುವಾಗಿ ಒಂದು ಮಖಮಲ್ಲಿನ ಆಸನವು ಸಿದ್ಧ ಮಾಡಲ್ಪಟ್ಟಿತ್ತು. ನವಾಬನು ಒಂದು ಆಸನದ ಮೇಲೆ ಕುಳಿತನು. ಕೂಡಲೆ ಇಬ್ಬರು ದಾಸಿಯರು ಒಂದು ಚಾಮರಗಳನ್ನು ಬೀಸಹತ್ತಿದರು. ನವಾಬನು ಸಂತೋಷದಿಂದ ಮನೋಹರನ ಕಡೆಗೆ ತಿರುಗಿ—"ಈ ಎಲ್ಲ ವ್ಯವಸ್ಥೆಯನ್ನು ಮಾಡಿದವರಾರು?" ಎಂದನು. ಅದಕ್ಕೆ ಮನೋಹರನು—"ಪ್ರಭೋ, ನಾನೇ ಮಾಡಿರುವೆನೆಂ"ದನು.

ನಶೀ—"ನೀನು ಬಲು ಚತುರನು. ಒಂದು ವೇಳೆ ಹೆಂಗಸಾಗಿದ್ದರೆ ನಾನು.." ಎಂದು ಸುಮ್ಮನಾದನು.

ಮನೋಹರನು ಸಾರಂಗವನ್ನು ತೆಗೆದುಕೊಂಡು ಅದನ್ನು ಸರಿಮಾಡಹತ್ತಿದನು. ಆಗ ನಶೀರತನು—"ನಿಮ್ಮ ಒಡತಿಗೆ ಒಂದು ಪದವನ್ನು ಹೇಳಲು ತಿಳಿಸು," ಎಂದನು. ಮನೋಹರನು ಕಿರಣಬಾಲೆಗೆ ಕಣ್ಣಿನಿಂದ ಸನ್ನೆ ಮಾಡಲು, ಅವಳು ಒಂದು ಪದವನ್ನು ಪ್ರಾರಂಭ ಮಾಡಿದಳು. ಕಿರಣಬಾಲೆಯು ಮನಸ್ಸನ್ನು ಗಟ್ಟಿ ಮಾಡಿ ಮನೋಹರನ ಸಂಗಡ ಸ್ವರ ಕೂಡಿಸಿದಳು. ಅವರಿಬ್ಬರ ಕಂಠಸ್ವರವು ಮಧುರವು. ಆ ಗಾಯನಕ್ಕೆ ನವಾಬನು

ಸ್ಕೈಮರೆತನು. ಅವರ ಪದವು ಮುಗಿದ ನಂತರ ನವಾಬನು ತನ್ನ ಕೊರಳೊಳಗಿನ ಮುತ್ತಿನ ಹಾರವನ್ನು ತೆಗೆದು ಕಿರಣಬಾಲೆಯ ಕೊರಳಿಗೆ ಹಾಕಹೋದನು. ಆಗ ಕಿರಣಬಾಲೆಯ ಮುಖವು ಕೆಂಪಗಾಯಿತು. ತಾನು ಸುಮ್ಮನಿದ್ದರೆ ಏನಾದರೂ ವಿಪರೀತ ಪ್ರಸಂಗವು ವರ್ತಿಸೀತೆಂದು ತಿಳಿದು, ಮನೋಹರನು ಮುಂದೆ ಬಂದು, ಪ್ರಭುಗಳೇ,— “ಈ ಮಾಲೆಯು ತಮ್ಮಿಂದ ಹಿಂದಕ್ಕೆ ಒಮ್ಮೆ ಕೊಡಲ್ಪಟ್ಟಿದ್ದು” ಎಂದನು.

ನಶಿ—ಹಾಗಾದರೆ ಈಗ ನನ್ನ ಹತ್ತಿರ ಏನೂ ಇಲ್ಲವಲ್ಲ?

ಮನೋ—“ಮುತ್ತು-ರತ್ನಗಳ ಅಭಾವದ ಮೂಲಕ ತಮ್ಮ ಭಾವೀ ಬೇಗಮಳಿಗೆ ಪುಷ್ಪಗಳಿಂದಲಂಕಾರವನ್ನು ಮಾಡಿದ್ದೇನೆ. ನೋಡಿರೆ”ಂದನು. ನಿಜವಾಗಿಯೂ ಕಿರಣಬಾಲೆಯುಮೈ ಮೇಲೆ ಪುಷ್ಪಗಳ ಅಲಂಕಾರಗಳಿದ್ದವು. ಮನೋಹರನು ನವಾಬನನ್ನು ಕುರಿತು—‘ನಿಮ್ಮ ಕೈಯೊಳಗಿನ ರತ್ನ ಕೆಚ್ಚಿದುಂಗರ ಕೊಟ್ಟರೆ ತಾವು ಮತ್ತೊಮ್ಮೆ ಬರುವದರೊಳಗೆ ಇವಳಿಗೆ ಆಭರಣಗಳನ್ನು ಮಾಡಿಸಿಡುವೆನೆಂ’ದನು. ನವಾಬನು ತನ್ನ ಬೆರಳುಗಳೊಳಗಿನ ಎರಡು ಉಂಗುರಗಳನ್ನು ಮನೋಹರನ ಕೈಯಲ್ಲಿ ಕೊಟ್ಟನು; ಮತ್ತು ತನ್ನ ಕೈಯೊಳಗೆ ತೆಗೆದುಕೊಂಡ ಮುತ್ತಿನ ಸರವನ್ನು ಕಿರಣಬಾಲೆಯ ಕೊರಳೊಳಗೆ ಹಾಕಲುದ್ಯೋಗಿಸಿದನು. ಆಗ ಮನೋಹರನು ಕಣ್ಣುಸನ್ನೆ ಮಾಡಲು, ಕಿರಣಬಾಲೆಯು ಕಣ್ಣು ಮುಚ್ಚಿ ಸುಮ್ಮನೆ ಕುಳಿತಳು. ನಶಿರಿತನು ತನ್ನ ಕೈಯಿಂದ ಆ ಸರವನ್ನು ಕಿರಣಬಾಲೆಯ ಕೊರಳಲ್ಲಿ ಹಾಕಿದನು. ನಶಿರಿತನ ಹಸ್ತಸ್ಪರ್ಶವಾದ ಕೂಡಲೆ ಕಿರಣಬಾಲೆಗೆ ಎಚ್ಚರ ದಪ್ಪಿದಂತೆ ಆಗಿ ನೆಲಕ್ಕೆ ಬಿದ್ದಳು. ಕೂಡಲೆ ಮನೋಹರನು ಅವಳ ಕಣ್ಣಿಗೆ ನೀರು ಹಚ್ಚಿ ಗಾಳಿಯನ್ನು ಹಾಕಹತ್ತಲು ಕಿರಣಳು ಕಣ್ಣು ತೆರೆದಳು. ಆಗ ನವಾಬನು ಎದ್ದು ನಿಂತು ಇಂದು ಹೋಗುವೆನು. ನಾಳಿಗೆ ಮತ್ತೆ ಬರುವೆನೆಂದು ಹೊರಟನು. ಮನೋಹರನು ಅವನ ಹಿಂದಿಂದೆ ಹೊರಟು ಸ್ವಲ್ಪ ದೂರ ಹೋದನಂತರ—“ಜಹಾಂಪನಾ, ತಮ್ಮ ಸೇವಕನಾದ ನಾನು ಇಂದೆ ಮತ್ತೆ ಅಪಮಾನವನ್ನು ಹೊಂದಿದೆನು.” ಎಂದನು.

ನಶಿ—ಯಾರಿಂದ?

ಮನೋ—ಗಣೇಶನಾರಾಯಣನ ದಿವಾಣ ನರಸಿಂಹನಿಂದ.

ನಶಿ— ಕಾರಣವೇನು ?

ಮನೋ—ನಾನು ಹಿಂದುವಿದ್ದು, ಮುಸಲ್ಮಾನರಾದ ನಿಮ್ಮ ಚಾಕರಿಯನ್ನು ಮಾಡುವೆನಂತೆ! ಇದೇ ನನ್ನ ಅಪರಾಧವು. ಆ ಪಾಪಿಗಳಿಗೆ ಎಂದು ಶಿಕ್ಷೆಯಾಗುವದೋ ಏನೋ?

ನಶಿ—ಸ್ವಲ್ಪ ಸಮಾಧಾನ ತಾಳು. ಅವರ ವೇಳೆಯು ಸಮೀಪಿಸಿದೆ. ಮೊದಲು ಎಲ್ಲ ಹಿಂದುಗಳನ್ನು ಹಿಡಿದು ಕಾರಾಗೃಹದಲ್ಲಿಡುವೆನು.

ಮನೋ— ಪ್ರಭೋ! ನಿಜವಾಗಿಯೂ ನೀವು ಆ ಕಾರ್ಯವನ್ನೆಂದು ಆರಂಭ ಮಾಡುವಿರಿ?

ನಶಿ—ನಾಳೆ ಬರುವ ಅಮಾವಾಸ್ಯೆಯ ದಿವಸ.

ಮನೋ—"ಈ ಸೇವಕನ ಮೇಲೆ ಪ್ರಭುಗಳ ಅಂತಃಕರಣವಿರಬೇಕು" ಎಂದು ಸಲಾಂ ಮಾಡಿ ಹಿಂದಿರುಗಿದನು.

ಮನೋಹರನು ಅಲ್ಲಿಂದ ಉದ್ಯಾನದಲ್ಲಿ ಹೋಗಿ ಕಿರಣಬಾಲೆಯು ಇರುವ ಕೋಣೆಯ ಕಿಟಕಿಯ ಬುಡಕ್ಕೆ ಬಂದನು. ಮತ್ತು ತಾನು ಬಂದ ಸಂಗತಿಯನ್ನು ತಿಳಿಸುವದಕ್ಕಾಗಿ ಕಿಟಕಿಯೊಳಗೆ ಒಂದು ಸಣ್ಣ ಕಲ್ಲನ್ನು ಒಗೆದನು. ಆಗ ಕಿರಣಬಾಲೆಯು ಮೊದಲೇ ಸಂಕೇತ ಮಾಡಿಕೊಂಡ ಪ್ರಕಾರ ಬಾಗಿಲನ್ನು ಮುಚ್ಚಿ ಒಳಚಿಲಕವನ್ನು ಹಾಕಿಕೊಂಡಳು. ನಂತರ ಮೊದಲೇ ಗಂಟು ಹಾಕಿ ಸಿದ್ಧಮಾಡಿಟ್ಟ ರೇಶಿಮೆಯ ಹಗ್ಗವನ್ನು ಒಂದು ಗೂಟಕ್ಕೆ ಕಟ್ಟಿ ಕಿಟಕಿಯಲ್ಲಿ ಇಳಿ ಬಿಟ್ಟಳು. ಮನೋಹರನು ಅದನ್ನು ಗಟ್ಟಿಯಾಗಿ ಹಿಡಿದುಕೊಂಡು ನಿಲ್ಲಲು, ಕಿರಣಳು ಆ ಹಗ್ಗದೊಡನೆ ಕೆಳಗಿಳಿದಳು.

ಮನೋಹರನು ಮೊದಲೇ ಒಂದು ಗಂಟಿನಲ್ಲಿ ಪುರುಷರ ವೇಷಕ್ಕೆ ಬೇಕಾಗುವ ಅರಿವೆಗಳನ್ನು ಕಟ್ಟಿ ಅಲ್ಲಿ ಮುಚ್ಚಿಟ್ಟಿದ್ದನು. ಕಿರಣಬಾಲೆಗೆ ಅವುಗಳನ್ನು ತೊಡಿಸಿ ಸಂಗಡ ಕರಕೊಂಡು ಅಂತಃಪುರದ ಬಾಗಿಲಿಗೆ ಬಂದನು. ಕಾವಲುಗಾರನಿಗೆ ಮನೋಹರನ ಪರಿಚಯವು ಆಗಿತ್ತು. ಅವನು ದಿನಾಲು ಅಲ್ಲಿ ಅಡ್ಡಾಡುತ್ತಿದ್ದನು; ಆದರೂ ಕಾವಲುಗಾರನು ಇಷ್ಟ ರಾತ್ರಿಯಲ್ಲಿ ಅಪ್ಪಣೆಯಿಲ್ಲದೆ ಹೊರಗೆ ಬಿಡುವದಿಲ್ಲವೆಂದು ಹೇಳಿದನು. ಆಗ ಮನೋಹರನು ನವಾಬನಿಂದ ಇಸಕೊಂಡ ಎರಡೂ ಉಂಗುರಗಳನ್ನು

ತೋರಿಸಲು, ಕಾವಲುಗಾರನು ಸುಮ್ಮನಾಗಿ ಹೊರಗೆ ಹೋಗಗೊಟ್ಟನು. ಬಳಿಕ ಅವರು ದಾರಿಗೆ ಬಂದರು.

ಕಿರಣ—ಮನೂ, ಈಗ ಎಲ್ಲಿಗೆ ಹೋಗತಕ್ಕದ್ದು? ಎಂದಳು.

ಮನೋ—ನೀನು ಬೇಕಾದಲ್ಲಿಗೆ ಹೋಗಬಹುದು. ಮನಸ್ಸಿದ್ದರೆ ತ್ರಿಪುರಾರಾಣಿಯ ಹತ್ತಿರವಾದರೂ ಹೋಗು. ನನಗೆ ಬೇರೆ ಕೆಲಸವಿದೆ, ಎಂದಂದು ಬೇರೆ ದಿಕ್ಕಿಗೆ ಹೊರಟು ಹೋದನು.

## ( ೩೭ )

ಕಿರಣಬಾಲೆಯು ಆ ರಾತ್ರಿ ಅರಮನೆಯೊಳಗಿಂದ ಹೋದ ಸುದ್ದಿಯು ಮರುದಿವಸ ಮುಂಜಾನೆ ನವಾಬನಿಗೆ ತಿಳಿಯಿತು. ಅವನು ಕ್ರೋಧದಿಂದ ತಪ್ತನಾದನು. ಅವನು ಇದಕ್ಕೆ ಮನೋಹರನೇ ಮೂಲ ಕಾರಣನೆಂದು ತಿಳಿದು, ಅವನ ಶೋಧ ಮಾಡಿಸಿದನು. ಮನೋಹರನ ಶೋಧವಾಗಲಿಲ್ಲ. ಕಡೆಗೆ ನಶೀರತನ ಸಿಟ್ಟು ಹಿಂದೂ ಜನಾಂಗದ ಮೇಲೆ ಹಾಯಿತು. ಕೂಡಲೆ ಅವನು ಪ್ರತಿಯೊಂದು ಹಿಂದೂ ಜನರ ಮನೆಯಿಂದ ಒಬ್ಬೊಬ್ಬರಂತೆ ಬಲಿಷ್ಠ ತರುಣರನ್ನು ಹಿಡಿದುಕೊಂಡು ಬಂದು ಸೆರೆಯಲ್ಲಿಡುವಂತೆ ಆಜ್ಞೆ ಮಾಡಿದನು. ಈ ಸುದ್ದಿಯು ಗಣೇಶನಾರಾಯಣನಿಗೆ ತಿಳಿಯಲು, ಅವನು ೨ ನೂರು ಜನ ಅಂಗರಕ್ಷಕರೊಂದಿಗೆ ದರಬಾರಕ್ಕೆ ಬಂದನು. ಅಂದಿನ ದರಬಾರದಲ್ಲಿ ಜೋನಾಬಖಾನನೂ ಇದ್ದನು. ನಶೀರತನು ಗಣೇಶನಾರಾಯಣನನ್ನು ಕುರಿತು—"ಗಣೇಶನಾರಾಯಣ, ಯಾವ ಕಾರ್ಯದ ಸಲುವಾಗಿ ದರಬಾರಕ್ಕೆ ಬಂದಿರುವಿ?" ಎಂದನು.

ಗಣೇ—ತಮ್ಮ ವಿಚಿತ್ರ ಹುಕುಮನ್ನು ಕೇಳಿ ಸಭೆಗೆ ಬಂದೆನು.

ನಶೀ—ಏನು ಕೇಳಿರುವಿ?

ಗಣೇ—ನಿರಪರಾಧಿ ಹಿಂದೂ ಜನರನ್ನು ಹಿಡಿದು ತರಲು ಆಜ್ಞೆ ಮಾಡಿರುವಿರೇನು?

ನಶೀ—ಅದನ್ನು ಕೇಳಲು ನಿನಗೇನಧಿಕಾರವು?

ಗಣೇ—ನಾನು ನಿಮ್ಮ ಪ್ರಜೆಯು. ಪ್ರಜೆಗಳಿಗೆ ಅದನ್ನು ಕೇಳುವ ಅಧಿಕಾರವಿರುತ್ತದೆ.

ನಶೆ—ನನ್ನ ಮುಂದೆ ನಿನ್ನ ಅಧಿಕಾರವನ್ನು ತೋರಿಸಬೇಕೆನ್ನುವಿಯಾ? ಹುಲಿಗೆ ಅಂಜಿಕೆಯೇ ?

ಗಣೇ—ನವಾಬರಿಗೆ ಅಂಜಿಕೆ ಇರದಿದ್ದರೆ ಹೇಳಲು ಯಾಕೆ ಸಂಕೋಚ ಪಡುವಿರಿ?

ನಶೆ—ಹೀಗೋ ? ಗಣೇಶನಾರಾಯಣ, ಕೇಳು. ನಾನು ಪ್ರತಿಯೊಂದು ಹಿಂದೂ ಗೃಹದಿಂದ ಒಬ್ಬೊಬ್ಬ ತರುಣರನ್ನು ತಂದು ಸೆರೆಯಲ್ಲಿಡುವಂತೆ ಅಪ್ಪಣೆ ಮಾಡಿರುವೆನು ಈ ಅಪ್ಪಣೆಗೆ ನೀನೂ ಸಹ ಬಾಧ್ಯನು. ತಿಳಿಯಿತೆ ? ನಾನು ಹಿಂದುಗಳನ್ನು ಸೊರಜಿನಂತೆ ಭಾವಿಸಿರುವೆನು.

ಗಣೇ—ಅವರ ಅಪರಾಧವೇನು ?

ನಶೆ—ಅಪರಾಧವು ಅವರದಲ್ಲ; ನಿನ್ನದು.

ಗಣೇ—ಹಾಗಾದರೆ ನನಗೆ ಶಿಕ್ಷೆಯನ್ನು ಮಾಡಿರಿ. ಆ ನಿರಪರಾಧಿಗಳಿಗೇಕೆ ?

ನಶೆ—ನಿನಗೂ ಶಿಕ್ಷೆಯು ದೊರೆಯುವದು; ಆದರೆ ಸಧ್ಯಕ್ಕಲ್ಲ.

ಗಣೇ—ನವಾಬ, ನನ್ನನ್ನು ಕಾರಾಗೃಹದಲ್ಲಿಡು; ಆದರೆ ನಿರಪರಾಧಿಗಳಾದ ಆ ನಿರ್ಬಲ ಪ್ರಜೆಗಳನ್ನು ಪೀಡಿಸಬೇಡ.

ನಶೆ—ನಿನ್ನ ಅಭಿಪ್ರಾಯವನ್ನು ನಾನಾಗಿ ಕೇಳಿದಾಗ ಹೇಳು.

ಗಣೇ—ನವಾಬ, ನಿನಗೆ ನನ್ನ ಅಭಿಪ್ರಾಯವನ್ನು ಕೊಡಲಿಲ್ಲ. ನಾನು ಪ್ರಜೆಗಳ ಜೀವದಾನವನ್ನು ಬೇಡುವೆನು. ನಿನಗೆ ಕೈ ಮುಗಿದು ಬೇಡಿಕೊಳ್ಳುತ್ತೇನೆ. ರಾಜ್ಯದಲ್ಲಿ ಅಶಾಂತಿಯನ್ನುಂಟುಮಾಡಬೇಡ.

ನಶೆ—ಆ ಅಶಾಂತಿಯ ಭಯವು ನನಗಿಲ್ಲ.

ಗಣೇ—ಸುಲ್ತಾನ, ಹಿಂದುಗಳ ಮನಸ್ಸು ನೋಯಿಸಬೇಡವೆಂದು ಅಂತಃಕರಣಪೂರ್ವಕ ಬೇಡಿಕೊಳ್ಳುತ್ತೇನೆ. ನೀನು ನೂರಾರು ವರ್ಷ ಈ ಗೌಡ ಸಿಂಹಾಸನವನ್ನೇ ಆಳು. ನಾನು ನಿನ್ನ ಅಂಗರಕ್ಷಕನಾಗಿ ಚಿರಕಾಲ ನಿನ್ನ ಸಿಂಹಾಸನವನ್ನು ರಕ್ಷಿಸುವೆನು. ಹಿಂದುಗಳಿಗೆ ರಾಜ್ಯದ ಅಭಿಲಾಷೆಯಿಲ್ಲ.

ನಶೆ—ರಾಜಾ, ನಾನು ನಿನ್ನ ಮಾತನ್ನು ನಂಬುವ ಬಗೆ ಹೇಗೆ ?

ಗಣೇ—ನನ್ನ ಮೇಲೆ ಅಪನಂಬಿಗೆಯಿದ್ದರೆ ನನ್ನನ್ನು ಕೊಲ್ಲು; ಆದರೆ ನಿರಪರಾಧಿಗಳ ಸಂಹಾರ ಮಾಡಬೇಡ.

ನಶೆರಿತನು ಏನೂ ಮಾತಾಡಲಿಲ್ಲ. ಆಗ ಜೋನಾಬಖಾನನು ಎದ್ದು ಬಂದು ಕೈ ಮುಗಿದು—"ಗಣೇಶನಾರಾಯಣನ ಮಾತು ನಿಜವು. ಯಾರು ಪಠಾಣರನ್ನು ದ್ವೇಷಿಸುವದಿಲ್ಲವೋ ಅವರ ಪೀಡೆಯು ಅನುಚಿತವು."

ನಶೆರಿತನು ಸಿಟ್ಟಿನಿಂದ—"ಜೋನಾಬಖಾನ, ನಾನು ನಿನಗೆ ಯೋಗ್ಯಾಯೋಗ್ಯಗಳನ್ನು ಕೇಳಲಿಲ್ಲ."

ಜೋನಾ—ಕೇಳದಿದ್ದರೂ ಸಾಮ್ರಾಜ್ಯದ ಹಿತಚಿಂತಕರಿಗೆ ಹೇಳಲು ಅಧಿಕಾರವಿರುವದು.

ನಶೆ—ಹಿತಚಿಂತಕರಿಗೆ ಆ ಅಧಿಕಾರವಿರಬಹುದು; ಆದರೆ ನಿನ್ನಂಥ ಕಾಫರ ಭಕ್ತರಿಗೆಲ್ಲಿರುವದು ಆ ಅಧಿಕತರವು?

ಜೋನಾ—ನವಾಬ, ನನಗೆ ಬೇಕಾದಷ್ಟು ಅಪಮಾನ ಮಾಡು; ಬೇಕಾದರೆ ಸೆರೆಯಲ್ಲಿರಿಸು; ಆದರೆ ಪಠಾಣರ ಕೀರ್ತಿ-ಗೌರವಗಳಿಗೆ ಕುಂದು ತರಬೇಡ.

ನಶೆ—ನಿನ್ನನ್ನು ಈ ಮೊದಲೇ ಕೆಲಸದಿಂದ ದೂರಮಾಡಿರುವೆನು. ನೀನು ಈಗಿಂದೀಗಲೆ ದರಬಾರವನ್ನು ಬಿಟ್ಟು ಹೋಗು!!

ಜೋನಾಬಖಾನನು ದರಬಾರದಿಂದ ಸಾವಕಾಶವಾಗಿ ಹೊರಗೆ ಹೋದನು. ನವಾಬನು ಇಂದಿನ ದರಬಾರವು ಬರಖಾಸ್ತ ಎಂದು ಹೇಳಿ ಎದ್ದು ನಿಂತನು. ಗಣೇಶನಾರಾಯಣನು ಆಗಲೂ ಸಹ ಎರಡೂ ಕೈಗಳನ್ನು ಜೋಡಿಸಿ—"ನವಾಬ! ನವಾಬ!! ದೇಶದಲ್ಲಿ ದ್ವೇಷಾಗ್ನಿಯನ್ನು ಹಬ್ಬಿಸಬೇಡ. ಇನ್ನೂ ಸಮಯವಿರುವದು. ವಿಚಾರ ಮಾಡು. ಬಖ್ತ್ಯಾರ ಖಿಲಜಿಯಿಂದ ಸ್ಥಾಪಿತವಾದ ಪಠಾಣ ಸಿಂಹಾಸನವನ್ನು ಕಾಲಿನಿಂದ ಒದ್ದು ಚೂರು ಚೂರು ಮಾಡಬೇಡ," ಎಂದನು. ನವಾಬನು ಅವನ ಮಾತಿಗೆ ಕಿವಿಗೊಡದೆ ದರಬಾರದಿಂದ ಹೊರಟು ಹೋದನು. ಆಗ ಗಣೇಶನಾರಾಯಣನು ಒಮ್ಮೆ ಸುತ್ತಲೂ ನೋಡಿ ಗಂಭೀರವಾಗಿ ಅಲ್ಲಿಂದ ಹೊರ ಹೊರಟನು.

## ( ೩೮ )

ಗಣೇಶನಾರಾಯಣನು ತನ್ನ ಜನರನ್ನು ಕರೆಯಿಸಿ—"ಹಿಂದುಗಳೇ, ರಾಜನ ಆಜ್ಞೆಯನ್ನು ಮೀರುವದು ರಾಜದ್ರೋಹವು. ಕಾರಣ ಮನೆಗೊಬ್ಬ

ರಂತೆ ಹಿಂದುಗಳು ಸ್ವೇಚ್ಛೆಯಿಂದ ಕಾರಾಗೃಹಕ್ಕೆ ಹೋಗಿರೆಂ”ದು ಹೇಳಿ ಕಳುಹಿಸಿದನು. ಇದರಂತೆ ಹಳ್ಳಿಗಳಿಗೂ ಉಪದೇಶಕ್ಕೆ ಜನರನ್ನು ಕಳುಹಿಸಿದನು. ಹಿಂದೂ ತರುಣರು ಗುಂಪುಗುಂಪಾಗಿ ಕಾರಾಗೃಹಕ್ಕೆ ಬರಹತ್ತಿದರು. ಇದನ್ನು ನೋಡಿ ನವಾಬನಿಗೂ ಮುಸಲ್ಮಾನರಿಗೂ ಆಶ್ಚರ್ಯವಾಯಿತು. ರಾಜಧಾನಿಯಲ್ಲಿಯ ಕಾರಾಗೃಹವು ಒಂದು ಕ್ಷಣದಲ್ಲಿ ತುಂಬಿತು. ಹೆಚ್ಚಾದ ಜನರನ್ನು ಗುಂಪು ಗುಂಪು ಮಾಡಿ ಪಟ್ಟಣದಲ್ಲಿ ಅಲ್ಲಲ್ಲಿಗೆ ಕಾವಲುಗಾರರ ಜವಾಬದಾರಿಯ ಮೇಲೆ ಇಡಹತ್ತಿದರು. ಅದಕ್ಕೂ ಜನರು ಹೆಚ್ಚಾಗಲು ಊರ ಹೊರಗಿನ ಬೈಲಿನಲ್ಲಿ ಅವರನ್ನು ನಜರಬಂದಿಯಲ್ಲಿಟ್ಟರು. ರಾಜಧಾನಿಯಲ್ಲಿ ಎತ್ತ ನೋಡಿದತ್ತ ಹಿಂದೂ ತರುಣ ಕೈದಿಗಳೇ ಕಾಣಹತ್ತಿದರು!

ಅಂದು ಅಮಾವಾಸ್ಯೆಯು. ಸರಾಸರಿ ಒಂದು ತಾಸು ರಾತ್ರಿಯಾಗಿತ್ತು. ಆಗ ಫಿರೋಜಾಬಾದ ರಾಜಧಾನಿಯ ದಕ್ಷಿಣಕ್ಕೆ ಕಾಲಂದೀ ನದಿಯಲ್ಲಿ ಸಪ್ತದುರ್ಗದಿಂದ ಗಣೇಶನಾರಾಯಣನ ಸೈನಿಕರಿಂದ ತುಂಬಿದ ನಾವೆಗಳು ಬರಹತ್ತಿದವು. ಬಂದ ಜನರು ಸ್ವಲ್ಪ ಸಹ ಗದ್ದಲ ಮಾಡದೆ, ನದಿಯ ದಂಡೆಯ ಮೇಲಿನ ಅಡವಿಯಲ್ಲಿ ಮಾಯವಾಗಹತ್ತಿದರು. ಸುಮಾರು ೧೦–೧೨ ಸಾವಿರ ಜನ ಸೈನಿಕರು ಬಂದರು. ಇದಲ್ಲದೆ ಬರ್ಚಿ, ಕತ್ತಿ, ತ್ರಿಶೂಲಗಳಿಂದ ತುಂಬಿದ ಕೆಲವು ನಾವೆಗಳೂ ಬಂದವು. ಅವುಗಳನ್ನು ಕಾರಾಗೃಹದಲ್ಲಿರುವ ಹಿಂದೂ ತರುಣರ ಸಲುವಾಗಿ ತಂದಿದ್ದರು.

ಮಧ್ಯರಾತ್ರಿಯ ಸಮಯಕ್ಕೆ ನಶೆರಿತನು ಗುಪ್ತಚರರ ಮುಖದಿಂದ ಗಣೇಶನಾರಾಯಣನು ಸೈನ್ಯ ಸಂಗ್ರಹ ಮಾಡುತ್ತಿರುವ ಸುದ್ದಿಯನ್ನು ಕೇಳಿದನು. ಕೂಡಲೆ ಅವನು ಮಿನಾರಖಾನನನ್ನು ಕರೆಕಳುಹಿಸಿದನು. ಮಿನಾರಖಾನನು ಅಲ್ಲಿಗೆ ಒಂದು ಮುಟ್ಟಿ ಮುಟ್ಟುವಷ್ಟರಲ್ಲಿ ಚಾರರು ಬಂದು ಗಣೇಶನಾರಾಯಣನು ಒಂದು ಸಾವಿರ ಸೈನ್ಯವನ್ನು ತೆಗೆದುಕೊಂಡು ಕಾರಾಗೃಹಕ್ಕೆ ಮುತ್ತಿಗೆಯನ್ನು ಹಾಕಿರುವದಾಗಿ ಹೇಳಿದರು. ಅದನ್ನು ಕೇಳಿ ನವಾಬನು ಮಿನಾರಖಾನನನ್ನು ಬಹಳವಾಗಿ ಹೀಯಾಳಿಸಿ, ಈಗಿಂದೀಗಲೆ ಗಣೇಶನಾರಾಯಣನನ್ನು ಸೆರೆಹಿಡಿದುಕೊಂಡು ಬಾ, ಎಂದನು. ಮಿನಾರಖಾನನು ಅಲ್ಲಿಂದ ಹೋದನು. ಮುಂದೆ ಒಂದು ಗಳಿಗೆಯಲ್ಲಿ ಸೇವಕನು ಬಂದು ಗಣೇಶನಾರಾಯಣನು ಕಾರಾಗೃಹವನ್ನು ಒಡೆದು, ಬಂದಿಗಳನ್ನು ಬಿಡಿಸಿಕೊಂಡು ಹೋದ ಸುದ್ದಿಯನ್ನು ಹೇಳಿದನು.

ಆಗ ನಶೇರಿತನು ಗಾಬರಿಯಾದನು. ಪಟ್ಟಣದ ನಾಲ್ಕೂ ದಿಕ್ಕಿನಿಂದ ಕೋಲಾಹಲವು ಅರಮನೆಗೆ ಕೇಳಬರಹತ್ತಿತು. ಬರಬರುತ್ತ ಆ ಗದ್ದಲವು ಊರ ಹೊರಗೆ ಸಹ ಕೇಳಬಂತು. ಆಗ ನವಾಬನ ಅರಮನೆಯ ಮಾಳಿಗೆಯನ್ನು ಹತ್ತಿ ಪಟ್ಟಣವನ್ನು ನಿರೀಕ್ಷಿಸಹತ್ತಿದನು. ಎಲ್ಲಿ ನೋಡಿದಲ್ಲಿ ಜನರ ಚೀತ್ಕಾರವು ಕೇಳಿಸುತ್ತಿತ್ತು; ಆದರೆ ಅಮವಾಸ್ಯೆಯ ಕತ್ತಲಾದ್ದರಿಂದ ಏನೂ ಕಾಣಿಸಲಿಲ್ಲ. ಆಗ ಅವನು ಕೆಳಗಿಳಿದು ಬಂದು ಮೀನಾರಖಾನನ ಕಡೆಯ ಸಂಗತಿಯನ್ನು ತಿಳಿದುಕೊಂಡು ಬರಲು ಸೇವಕರನ್ನು ಕಳುಹಿಸಿ, ಅರಮನೆಯ ಮುಖ್ಯ ಕಾವಲುಗಾರರನ್ನು ಕರೆಯಿಸಿದನು. ಅವನು ಬರಲು, ನವಾಬನು ಅವನನ್ನು ಕುರಿತು—“ನಿನ್ನ ಹತ್ತಿರ ಸೈನ್ಯವೆಷ್ಟಿರುವದು?”

ಕಾವಲು—ಎರಡು ಸಾವಿರ.

ನಶೆ—ಗಣೇಶನಾರಾಯಣನು ಬಂದಿಗಳನ್ನು ಕಾರಾಗೃಹದಿಂದ ಬಿಡಿಸಿಕೊಂಡು ಹೋದ ಸಂಗತಿಯನ್ನು ಕೇಳಿರುವಿಯಷ್ಟೇ?

ಕಾವಲು—ಸರಕಾರ, ಕೇಳಿರುವೆನು.

ನಶೆ—ಅವರು ಈಗ ಅರಮನೆಯನ್ನು ಮುತ್ತಿದರೆ?

ಕಾವಲುಗಾರನು ಏನೂ ಉತ್ತರ ಕೊಡದೆ ನಕ್ಕನು. ಆಗ ನಶೆರಿತನು—ಇದು ನಗುವ ಸಮಯವಲ್ಲ; ಯಾಕಂದರೆ ಸೆರೆಮನೆಯಿಂದ ಮೂವತ್ತು ಸಾವಿರ ತರುಣ ಬಂದಿಗಳ ಬಿಡುಗಡೆಯಾಗಿದೆ. ಈಗ ಆ ಎಲ್ಲ ಜನರೂ ಅರಮನೆಯನ್ನು ಮುತ್ತುವ ಸಂಭವವಿರುವದು.

ಕಾವಲು—ಆ ಜನರಿಗೆ ಶಸ್ತ್ರಗಳು ಬೇಕಲ್ಲ; ನೀವು ಚಿಂತಿಸುವ ಕಾರಣವಿಲ್ಲ. ಅವರು ಇಲ್ಲಿಗೆ ಬಂದರೆ ಅವರನ್ನು ತಗಣಿ-ಚಿಕ್ಕಾಟಗಳಂತೆ ಕಾಲಿನಿಂದ ತುಳಿದು ನಾಶಮಾಡುತ್ತೇವೆ, ಎಂದು ಹೇಳಿದನು. ಅದರಿಂದ ನವಾಬನಿಗೆ ಪೂರ್ಣ ಸಮಾಧಾನವಾಗಲಿಲ್ಲ; ಇದಲ್ಲದೆ ಮೀನಾರಖಾನನ ಕಡೆಗೆ ಕಳುಹಿಸಿದ ಸೇವಕರಿಂದ ಸುದ್ದಿಯೂ ತಿಳಿಯಲಿಲ್ಲ.

ಮೀನಾರಖಾನನು ನವಾಬನ ಅಪ್ಪಣೆಯ ಪ್ರಕಾರ ಕಿಲ್ಲೆಯೊಳಗೆ ಹೋಗಿ ಒಂದು ಸಾವಿರ ಸೈನ್ಯವನ್ನು ತೆಗೆದುಕೊಂಡು ಪಟ್ಟಣದ ಹಾದೀ ಹಿಡಿದನು. ಅವನು ಸ್ವಲ್ಪ ಮುಂದೆ ಹೋಗುವಷ್ಟರಲ್ಲಿ ಎಲ್ಲಿಂದಲೋ ಸುಯ್ ಸುಯ್ ಎಂದು ಬಾಣಗಳ ಮಳೆಯು ಅವನ ಸೈನ್ಯದ ಮೇಲಾಗಹತ್ತಿತು. ಅವು ಯಾವ ಕಡೆಯಿಂದ ಬರುತ್ತವೆಂಬದೂ ತಿಳಿಯಲಿಲ್ಲ. ಮುಂದೆ ಹೋಗು

ವವು ಕಠಿಣವಾಯಿತು. ಇಷ್ಟರಲ್ಲಿಯೇ ಅವನ ಸೈನ್ಯವು ಅರ್ಧಕ್ಕಿಂತ ಹೆಚ್ಚು ನಾಶವಾಯಿತು. ಇನ್ನು ಮುಂದೆ ಹೋಗುವದು ಉಚಿತವಲ್ಲವೆಂದು ತಿಳಿದು, ಮೀನಾರಖಾನನು ಉಳಿದ ಸೈನ್ಯ ಸಹಿತ ಕಿಲ್ಲೆಯನ್ನು ಸೇರಿದನು.

ಮೀನಾರಖಾನನು ಕಿಲ್ಲೆಯೊಳಗೆ ಹೋದ ನಂತರ ಒಂದು ಸಾವಿರ ಪಿಲಾಲುಗಳನ್ನು ಹಚ್ಚಿಸಿದನು; ಮತ್ತು ಈ ಸಾರೆ ಎರಡು ಸಾವಿರ ಸೈನ್ಯ ವನ್ನು ತಕ್ಕೊಂಡು ಪಟ್ಟಣವನ್ನು ರಕ್ಷಿಸಲು ಹೊರಟನು. ಮೀನಾರಖಾನನು ನಾಲ್ಕೂ ದಿಕ್ಕಿನಲ್ಲಿ ಲಕ್ಷ್ಯವಿಟ್ಟು ಸಾವಕಾಶವಾಗಿ ದಂಡು ಮುಂದೆ ಸಾಗಿಸ ಹತ್ತಿದನು. ಅವನು ಪಟ್ಟಣದ ಸಮೀಪಕ್ಕೆ ಹೋದ ಕೂಡಲೆ ಮತ್ತೆ ಬಾಣ ಗಳ ಮಳೆಯು ಸುರಿಯಹತ್ತಿತು. ಆಗ ಅವನು ಸುತ್ತಲೂ ನಿರೀಕ್ಷಿಸಲು, ಹಿಂದೂ ಜನರು ನಾಲ್ಕೂ ದಿಕ್ಕಿನಿಂದ ಅವನನ್ನು ಮುತ್ತಿದ್ದರು. ಈ ಸಾರೆ ಹಿಂದುಗಳು ಗುಪ್ತವಾಗಿರದೆ ಕೈಯಲ್ಲಿ ಕತ್ತಿ-ಬರ್ಚಿಗಳನ್ನು ಹಿಡಿದುಕೊಂಡು ಎದುರಿಗೆ ನಿಂತು ಯುದ್ಧ ಮಾಡುತ್ತಿದ್ದರು. ಪಠಾಣರು ಶೂರರಾದರೂ ವೈರಿಗಳು ಒಮ್ಮೆಲೆ ನಾಲ್ಕೂ ದಿಕ್ಕಿನಿಂದ ಮುತ್ತಿದ್ದರಿಂದ ಅವರಿಗೆ ಮುಂದೆ ಹೋಗಲು ಸಾಧ್ಯವಾಗಲಿಲ್ಲ. ಕಡೆಗೆ ಮೀನಾರಖಾನನು ೪-೫ ನೂರು ಜನ ರನ್ನು ಮಾತ್ರ ಉಳಿಸಿಕೊಂಡು ಮತ್ತೆ ಕೋಟೆಯೊಳಗೆ ಹೋದನು. ಇನ್ನು ಮಾತ್ರ ಮೀನಾರಖಾನನು ಪಟ್ಟಣದಲ್ಲಿ ಹೋಗುವ ಹವ್ಯಾಸವನ್ನು ಬಿಟ್ಟು ಬೆಳಗಾಗುವ ತನಕ ಕೋಟೆಯಲ್ಲಿರಬೇಕೆಂದು ನಿರ್ಧರಿಸಿದನು; ಆದರೆ ಮರು ದಿವಸ ಬೆಳಗಾಗುತ್ತಲೆ ಯದುನಾರಾಯಣನು ಸೈನ್ಯವನ್ನು ತಕ್ಕೊಂಡು ಬಂದು ಕಿಲ್ಲೆಗೆ ಮುತ್ತಿಗೆ ಹಾಕಿದ್ದನು. ಈ ಕಾರಣದಿಂದ ಮೀನಾರನ ಕಡೆಗೆ ಕಳುಹಿಸಿದ ನವಾಬನ ಸೇವಕರು ನಡುವೇ ಶತ್ರುಗಳಿಂದ ಬಂಧಿಸಲ್ಪಟ್ಟರು. ಅದರಿಂದ ನವಾಬನಿಗೆ ಸುದ್ದಿಯು ತಿಳಿಯಲು ಮಾರ್ಗವಿರಲಿಲ್ಲ.

ಸೂರ್ಯೋದಯಕ್ಕೆ ಇನ್ನೂ ಅರ್ಧ ತಾಸಿನ ಅವಕಾಶವಿರುವಾಗ ಗಣೇಶನಾರಾಯಣನು ಮೂವತ್ತು ಸಾವಿರ ಹಿಂದೂ ಸೈನ್ಯದೊಡನೆ ಅರ- ಮನೆಗೆ ಮುತ್ತಿಗೆಯನ್ನು ಹಾಕಿದನು. ಈ ಮೂವತ್ತು ಸಾವಿರ ಜನರಲ್ಲಿ ಗಣೇಶನಾರಾಯಣನ ಒಂದು ಸಾವಿರ ಸೈನ್ಯವು ಯುದ್ಧ ವಿದ್ಯೆಯಲ್ಲಿ ಶಿಕ್ಷಣ ಹೊಂದಿದ್ದು, ಉಳಿದವರು ಕತ್ತಿ, ಬರ್ಚಿ, ತ್ರಿಶೂಲ, ಬಿಲ್ಲು, ಬಾಣಗಳನ್ನು ಸುಮ್ಮನೆ ಹಿಡಿದುಕೊಂಡು ಬಂದಿದ್ದರು. ಗಣೇಶನಾರಾಯಣನು ಅರಮನೆಯ ಹೆಬ್ಬಾಗಿಲವನ್ನು ಮುರಿದು ಒಳಗಿನ ವಿಸ್ತಾರವಾದ ಪಟಾಂಗಣಕ್ಕೆ ಬಂದನು.

ಆ ಅಂಗಳವನ್ನು ದಾಟುತ್ತಲೆ ನವಾಬನ ಎರಡು ಸಾವಿರ ಸುರಿತ ಸೈನಿಕರು ಹಿಂದೂ ಜನರನ್ನು ಎದುರಿಸಲು ಸಿದ್ಧರಾಗಿ ನಿಂತಿದ್ದರು. ಆಗ ಗಣೇಶ ನಾರಾಯಣನು ಬಲಗಡೆಗೆ ಬಾಣ ತ್ರಿಶೂಲ ಬರ್ಚಿಯ ಹಿಂದುಗಳನ್ನು ನಿಲ್ಲಿಸಿ, ಎಡಗಡೆಗೆ ತನ್ನ ಸುರಕ್ಷಿತ ಸೈನ್ಯವನ್ನು ನಿಲ್ಲಿಸಿ, ಅವರ ಹಿಂದೆ ಲಾಠಿಯ ಹಿಂದುಗಳನ್ನು ನಿಲ್ಲಿಸಿ ಮುಂದೆ ಸಾಗಿದನು.

ಹಿಂದೂ ಜನರು ತಮ್ಮನ್ನು ಸುತ್ತುಗಟ್ಟುವ ಆಲೋಚನೆಯಲ್ಲಿರುವ ರೆಂದು ತಿಳಿದು ಪಠಾಣರು ಅಂಜದೆ ಮುಂದೆ ಬಂದು ಬಲಗಡೆಗೆ ಅಶಿಕ್ಷಿತ ಸೈನ್ಯವಿರುವದರಿಂದ ಅವರನ್ನು ತೀವ್ರ ನಾಶಪಡಿಸಬೇಕೆಂಬ ಆಲೋಚನೆ ಯಿಂದ ಆ ಕಡೆಗೆ ಏರಿ ಹೋದರು ಗಣೇಶನಾರಾಯಣನಿಗೆ ಇದೇ ಬೇಕಾ ಗಿತ್ತು. ವೈರಿಗಳು ತನ್ನ ಕಡೆಗೆ ಬೆನ್ನು ಮಾಡಿದ ಕೂಡಲೆ ಗಣೇಶನಾರಾ ಯಣನ ಸೈನ್ಯವು ಒತ್ತರದಿಂದ ಅವರ ಮೇಲೆ ಬಿದ್ದು ಪಠಾಣರ ನಾಶವನ್ನು ಪ್ರಾರಂಭ ಮಾಡಿತು. ಆಗ ಮುಸಲ್ಮಾನರಿಗೆ ತಮ್ಮ ತಪ್ಪು ತಿಳಿಯಿತು; ಆದರೆ ಆಗ ಮಾಡುವದೇನು? ಮೂವತ್ತು ಸಾವಿರ ಹಿಂದೂ ಜನರು "ಗಣೇಶನಾರಾಯಣಮಹಾರಾಜಕೀಜಯ! ಭಾರತ ಮಾತಾಕೀ ಜಯ!" ಎಂದು ಜಯಘೋಷ ಮಾಡುತ್ತ ಪಠಾಣರ ಕೊಲೆಯನ್ನು ನಡೆಯಿಸಲು, ಆ ಎರಡು ಸಾವಿರ ಮುಸಲ್ಮಾನರು ಹಿಂದೂ ಜನರಲ್ಲಿ ಕಾಣದೆ ಅಡಗಿ ಹೋದರು. ಪಠಾಣರು ನಾಮಶೇಷವಾದರು. ಆಗ ಗಣೇಶನಾರಾಯಣನು ಅರಮನೆಯನ್ನು ಹೊಕ್ಕು ನಶೆರಿತನ ಶೋಧ ಮಾಡಲು ಅವನು ಸಿಗಲಿಲ್ಲ.

ಅರಮನೆಯ ರಕ್ಷಣೆಯು ಅಸಾಧ್ಯವೆಂದು ತಿಳಿದ ಕೂಡಲೆ ನಶೆರಿತನು ಗಾಬರಿಯಾಗಿ ಅಲ್ಲಿಂದ ಪಾರಾಗುವ ಯೋಚನೆಯನ್ನು ಮಾಡಹತ್ತಿದನು. ಅರಮನೆಯಲ್ಲಿಯ ಒಂದು ಗುಪ್ತ ಮಾರ್ಗವು ಕಿಲ್ಲೆಯೊಳಗೆ ಹೋಗುತ್ತಿತ್ತು. ಅದು ನಶೆರಿತಶಹನಿಗೊಬ್ಬನಿಗೇ ಗೊತ್ತಿತ್ತು. ನಶೆರಿತನು ಆ ಮಾರ್ಗದಿಂದ ಕಿಲ್ಲೆಯನ್ನು ಸೇರಿದನು. ಹೋಗುವಾಗ ಅವನ ಮನಸ್ಸಿನಲ್ಲಿ—"ಅಯ್ಯೋ! ನಾನು ಗಣೇಶನಾರಾಯಣನ ಮಾತು ಕೇಳಿದ್ದರೆ ನೆಟ್ಟಗಾಗುತ್ತಿತ್ತು. ಎಲ್ಲ ಹಿಂದೂ ತರುಣರನ್ನು ತಂದು ರಾಜಧಾನಿಯಲ್ಲಿ ಕೂಡ ಹಾಕಿದ್ದು ಮೂರ್ಖ ತನವೇ ಸರಿ! ನನ್ನ ಆಲೋಚನೆಯೇ ನನಗೆ ಮುಳುವಾಯಿತು!" ಎಂದು ಪಶ್ಚಾತ್ತಾಪಪಟ್ಟನು.

ಗಣೇಶನಾರಾಯಣನು ಅರಮನೆಯಲ್ಲಿಯ ರಾಜಭಾಂಡಾರವನ್ನು

ಕೈವಶ ಮಾಡಿಕೊಂಡನು. ಆಗ ಅರಮನೆಯ ಮೇಲೆ ಹಿಂದೂ ಧ್ವಜ ಪತಾಕೆಯು ಹಾರಾಡಹತ್ತಿತು. ಗಣೇಶನಾರಾಯಣನು ಅರಮನೆಯ ಮಾಳಿಗೆಯನ್ನು ಹತ್ತಿ ಪಟ್ಟಣದ ಕಡೆಗೆ ನೋಡಲು, ಹಿಂದೂ ಜನರು ಮುಸಲ್ಮಾನರ ಮನೆಗಳನ್ನು ಲೂಟಿ ಮಾಡಹತ್ತಿದ್ದರು. ನೋಡಿದತ್ತ ರಕ್ತದ ಪ್ರವಾಹವೇ ಕಾಣಿಸಹತ್ತಿತು. ಆಗ ಅವನು ಮುಖ ತಗ್ಗಿಸಿಕೊಂಡು ನಂತರ ಕೋಟೆಯ ಕಡೆಗೆ ಹೊರಳಿ ನೋಡಿದನು. ಪಠಾಣರ ಅರ್ಧಚಂದ್ರಾಕಾರದ ನಿಶಾನೆಯು ಕಿಲ್ಲೆಯ ಮೇಲೆ ಇನ್ನೂ ಹಾರಾಡುತ್ತಿತ್ತು. ಕಿಲ್ಲೆಯ ಹೊರಭಾಗದಲ್ಲಿ ಕುಮಾರ ಯದುನಾರಾಯಣನು ಹದಿನೈದು ಸಾವಿರ ಸೈನ್ಯದಿಂದ ಮುತ್ತಿಗೆ ಹಾಕಿಕೊಂಡು ಕುಳಿತಿದ್ದನು. ಕಿಲ್ಲೆಯೊಳಗೆ ಗದ್ದಲವೇನೂ ತೋರಿಬರಲಿಲ್ಲ. ಅದರಿಂದ ಗಣೇಶನಾರಾಯಣನು ಮನಸ್ಸಿನಲ್ಲಿ ಪಠಾಣರು ಯದುನಾರಾಯಣನ ಮೇಲೆ ಬೀಳುವ ಸಿದ್ಧತೆಯನ್ನು ಮಾಡುತ್ತಿರುವರೆಂದು ಭಾವಿಸಿ, ತನ್ನ ಸೈನ್ಯವನ್ನು ತಕ್ಕೊಂಡು ಕುಮಾರನ ಸಹಾಯಕ್ಕೆ ಹೋಗಲು ಸಿದ್ಧನಾದನು.

## ( ೩೯ )

"ಇಲ್ಲಿಯೇ ಕುಳಿತುಕೊಳ್ಳಿರಿ."

"ಕಿರಣಬಾಲೆ, ನಾನು ಈಗ ಎಲ್ಲಿಯೂ ಕೂಡಲಾರೆನು. ಮೊದಲು ನನ್ನನ್ನು ದೇವಿಯ ಗುಡಿಗೆ ಕರೆದುಕೊಂಡು ಹೋಗು."

ಕಿರಣಬಾಲೆ—ನಾವು ಈಗ ದೇವಿಯ ಗುಡಿಗೇ ಬಂದಿರುವೆವು. ಎದುರಿಗೇ ದೇವಿಯ ಮೂರ್ತಿಯಿದೆ.

ಕಿಶೋರಿಮೋಹನ (ವ್ಯಾಕುಲಸ್ವರದಿಂದ)—ಇದೇ ದೇವಿಯ ಮಂದಿರವೇನು? ಅಹಹ! ನಾನು ಹಿಂದಕ್ಕೊಮ್ಮೆ ಈ ದೇವಿಯ ಗುಡಿಯ ಪಟಾಂಗಣವನ್ನು ಹಿಂದೂ ರಕ್ತದಿಂದ ಕಲಂಕಿತವಾಗಿ ಮಾಡಿರುವೆನು. ಈಗ ಧರ್ಮದ್ರೋಹಿಯೂ ದೇಶದ್ರೋಹಿಯೂ ಆದ ನಾನು ಕಣ್ಣೀರಿನಿಂದ ಆ ರಕ್ತದ ಕಲೆಗಳನ್ನು ತೊಳೆಯುವೆನು, ಎಂದಂದು ಕಿಶೋರಿಮೋಹನನು ಆ ಪಟಾಂಗಣದಲ್ಲಿ ನೆಲದ ಮೇಲೆ ಉರುಳಾಡುತ್ತ ಶೋಕ ಮಾಡಹತ್ತಿದನು. ಶೋಕದಿಂದ ಮನಸ್ಸು ಸ್ವಲ್ಪ ಶಾಂತವಾದ ಮೇಲೆ ಎದ್ದು ಕುಳಿತನು. ನಂತರ ಅಲ್ಲಿಯ ಧೂಳಿಯನ್ನು ಮೈತುಂಬ ಸವರಿಕೊಂಡನು.

ಕಿಶೋರಿಮೋಹನನ ಎರಡೂ ಕಣ್ಣುಗಳು ಹೋಗಿದ್ದವು. ಇಷ್ಟೇ ಅಲ್ಲ, ಒಂದು ಕಾಲು ಸಹ ಮುರಿದಿತ್ತು. ಹೀಗಾಗಲು ಕಾರಣವೆಂದರೆ—ಕಿಶೋರಿಮೋಹನನು ಧನ, ಕನಕ, ಕಾಂತಿವಿಹೀನನಾಗಿ ಮುಸಲ್ಮಾನರ ಉಡಿಗೆ ತೊಡಿಗೆಗಳಿಂದ ಭಿಕ್ಷೆ ಬೇಡುತ್ತ ಹಳ್ಳಿ ಹಳ್ಳಿ ತಿರುಗಹತ್ತಿದನು. ಆಗ ಒಂದು ಹಳ್ಳಿಯಲ್ಲಿಯ ಒಬ್ಬ ಹಿಂದೂ ಮನುಷ್ಯನು ಕಿಶೋರಿಮೋಹನನನ್ನು ಗುರ್ತಿಸಿ ಅವನು ಮುಸಲ್ಮಾನರ ಪಕ್ಷವಹಿಸಿ ಹಿಂದುಗಳಿಗೆ ಪೀಡಿಸಿದ್ದನ್ನು ಊರ ಜನರಿಗೆ ತಿಳಿಸಿ ಹೇಳಲು, ಇವರು ಅವನನ್ನು ಒಳಿತಾಗಿ ತಳಿಸಿದರು. ಅವರಲ್ಲೊಬ್ಬನು ರೊಚ್ಚಿನಿಂದ ಬರಿಕೊಟ್ಟು ಈತನ ಎರಡೂ ಕಣ್ಣುಗಳನ್ನು ಕಳೆದನು. ಜನರ ಬಡಿತದಲ್ಲಿ ಅವನದೊಂದು ಕಾಲೂ ಮುರಿಯಿತು. ಈ ಅವಸ್ಥೆಯಲ್ಲಿ ಅವನು ಒಂದು ದಿವಸ ಕಿರಣಳ ಕಣ್ಣಿಗೆ ಬಿದ್ದನು. ಕಿರಣ ಬಾಲೆಯು ಮನುಷ್ಯರಿಗೆ ಸಾಧ್ಯವಿದ್ದ ಎಲ್ಲ ಪ್ರಯತ್ನವನ್ನೂ ಪತಿಯ ಸಲುವಾಗಿ ಮಾಡಿದಳು. ಅವಳು ಆ ಕುಂಟನೂ ಕುರುಡನೂ ಆದ ಗಂಡನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಮನೆಮನೆಗೆ ಹೋಗಿ ಭಿಕ್ಷೆ ಬೇಡಿ ಅವನ ಹೊಟ್ಟೆಗೆ ಹಾಕುತ್ತಿದ್ದಳು. ಒಂದು ದಿವಸ ಒಬ್ಬ ತರುಣನು ಕಿರಣಳ ರೂಪವನ್ನು ನೋಡಿ ಬಲಾತ್ಕಾರ ಮಾಡಹೋಗಲು, ಅವಳು ಕೋಲಿನಿಂದ ಅವನಿಗೆ ಚೆನ್ನಾಗಿ ಪ್ರಹಾರ ಮಾಡಿದಳು. ನಂತರ ಅವಳು ತನ್ನ ರೂಪವು ತನಗೆ ಮುಳುವಾಗುವದೆಂದು ತಿಳಿದು, ಬಿಸಿ ಬೂದಿ, ಕೆಂಡಗಳನ್ನು ಮುಖಕ್ಕೆ ಹಚ್ಚಿಕೊಂಡು ಕಲೆಗಳಾಗುವಂತೆ ಮಾಡಿಕೊಂಡಳು. ಒಂದು ದಿವಸ ಅವಳು ಪತಿಗೆ ಊಟಕ್ಕೆ ಹಾಕಿ ಅವನ ಎಲೆಯಲ್ಲಿ ಉಳಿದ ಉಚ್ಛಿಷ್ಟವನ್ನು ಸೇವಿಸುತ್ತ ಕುಳಿತಳು. ಆಗ ಕಿಶೋರಿಮೋಹನನು ಅವಳನ್ನು ಕುರಿತು—"ಕಿರಣ, ಏನು ಮಾಡುತ್ತಿರುವಿ?" ಎಂದು ಕೇಳಿದನು.

ಕಿರಣ—ಊಟ ಮಾಡುತ್ತಿರುವೆನು.

ಕಿಶೋರಿ—ಉಣ್ಣಲಿಕ್ಕೆ ನಿನಗೇನು ಉಳಿದಿರುವದು?

ಕಿರಣ—ನಿಮ್ಮ ಎಲೆಯಲ್ಲಿ ಮಿಕ್ಕುಳಿದದ್ದನ್ನೇ ಉಣ್ಣುವೆನು.

ಕಿಶೋರಿ—ಅದೆಷ್ಟಿರುವದು? ಅಷ್ಟರಿಂದ ನಿನ್ನ ಹೊಟ್ಟೆ ಹೇಗೆ ತುಂಬೀತು.

ಕಿರಣ—ನನಗೆ ಅಷ್ಟೇ ಸಾಕು.

ಕಿಶೋರಿ—ಕಿರಣ, ನನ್ನ ಎಂಜಲು ತಿನ್ನಬೇಡ. ನಾನು ಜಾತಿ ಕೆಟ್ಟು ಮುಸಲ್ಮಾನನಾಗಿರುವೆನು.

ಕಿರಣ—ನಾನೂ ಮುಸಲ್ಮಾನಳು.

ಕಿಶೋರಿ—ಅದು ಹೇಗೆ?

ಕಿರಣ—ಪತಿಯ ಧರ್ಮವೇ ಸ್ತ್ರೀಯರ ಧರ್ಮವು.

ಕಿಶೋರಿಮೋಹನನಿಗೆ ಬಹಳ ಪಶ್ಚಾತ್ತಾಪವಾಯಿತು. ಆಗ ಅವನು ಪತ್ನಿಗೆ ತನ್ನನ್ನು ದೇವೀಕೋಟಿಯ ದೇವೀ ಮಂದಿರಕ್ಕೆ ಕರೆದುಕೊಂಡು ಹೋಗಲು ಹೇಳಿದನು. ಅದರಂತೆ ಅವಳು ಅವನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಮೇಲೆ ಹೇಳಿದ ಪ್ರಕಾರ ದೇವೀ ಗುಡಿಗೆ ಬಂದಿದ್ದಳು.

## ( ೪೦ )

ಬಹಳ ಪ್ರಯತ್ನ ಪಟ್ಟರೂ ಕಿಲ್ಲೆಯು ಗಣೇಶನಾರಾಯಣನ ಕೈವಶವಾಗುವ ಲಕ್ಷಣವು ತೋರಲಿಲ್ಲ. ಅಷ್ಟರಲ್ಲಿ ಅವನ ಗುಪ್ತಚಾರರು ಫಕೀರ ಮೀರ ಕುತುಬ ಉಲ್ ಆಲಮನು ಸೈನ್ಯ ತೆಗೆದುಕೊಂಡು ನವಾಬನ ಸಹಾಯಕ್ಕೆ ಬರುವ ಸುದ್ದಿಯನ್ನು ಹೇಳಿದರು. ಆಗ ಗಣೇಶನಾರಾಯಣನು ಇನ್ನು ತಡಮಾಡಿದರೆ ತಾನು ನವಾಬನ ಮತ್ತು ಫಕೀರನ ಸೈನ್ಯದ ನಡುವೆ ಸಿಕ್ಕು ಗಾಸಿಯಾಗಬೇಕಾದೀತೆಂದು ತಿಳಿದು, ನಾಳೆ ಬೆಳಗಾಗುವದರೊಳಗೆ ಕಿಲ್ಲೆಯನ್ನು ಕೈವಶ ಮಾಡಿಕೊಳ್ಳಲೇಬೇಕೆಂದು ನಿರ್ಧರಿಸಿ, ಆನೆಗಳನ್ನು ತರಿಸಿದನು. ರಾಜಾ ಗಣೇಶನಾರಾಯಣನ ಹತ್ತರ ಬಲಿಷ್ಠವಾದ ಆನೆಗಳಿದ್ದವು. ಅವನು ಅವುಗಳಿಗೆ ಸೆರೆ ಕುಡಿಸಿ ಕಿಲ್ಲೆಯ ಬಾಗಿಲಿಗೆ ಹಿಂದಿನಿಂದ ಅಪ್ಪಳಿಸುವಂತೆ ಮಾಡಿಸಿದನು. ಆನೆಗಳ ಹೊಡೆತಕ್ಕೆ ಬಾಗಿಲುಗಳು ಲಿಕಿಲಿಕಿಯಾಗಿ ಕೀಲಗಳು ಸಡಿಲವಾದವು. ಅದರಿಂದ ಕಿಲ್ಲೆಯ ಮಹಾದ್ವಾರವು ಮುರಿದು ಒಳಗೆ ಹೋಗಲು ಆಸ್ಪದ ದೊರೆಯಿತು. ಆ ಸಪ್ಪಳದಿಂದ ನಶೆರಿತನು ಗಾಬರಿಯಾಗಿ ಕಿಲ್ಲೆಯ ಗೋಡೆಯ ಮೇಲೆ ನಿಂತು ನೋಡಹತ್ತಲು, ಕೋಟೆಯ ೨ನೇ ಸುತ್ತಿನ ಹತ್ತರ ಇಬ್ರಾಹಿಮಖಾನನಿಗೂ ಗಣೇಶನಾರಾಯಣನಿಗೂ ಬಲವಾದ ಯುದ್ಧವು ನಡೆದಿತ್ತು. ಹಿಂದುಗಳು ಎಷ್ಟು ವೀರತನವನ್ನು ತೋರಿಸಿದರೂ ಮುಂದೆ ಹೋಗುವದಾಗಲಿಲ್ಲ. ಆಗ ಗಣೇಶನಾರಾಯಣನು ಹಿಂದುಗಳನ್ನು ಕುರಿತು—"ನನ್ನ ಪ್ರಿಯ ಹಿಂದು

ಗಳೇ, ಈ ಸ್ವಲ್ಪ ಜನ ಪಠಾಣರ ಸಂಹಾರ ಮಾಡಿದರೆ ತೀರಿತು. ಗೌಡ ಸಿಂಹಾಸನವು ನಿಮ್ಮದೇ'' ಎಂದು ಉತ್ಸಾಹ ಕೊಟ್ಟನು. ಆಗ ಇಬ್ರಾಹಿಮನು—ಮುಸಲ್ಮಾನ ಬಂಧುಗಳೇ, ನಿಮಗೆ ಹಿಂದೆ ಹೋಗಲು ಮಾರ್ಗವಿಲ್ಲ. ನೋಡಿರಿ, ಕೋಟೆಯ ಬಾಗಿಲು ಬಂದು ಮಾಡಲ್ಪಟ್ಟಿದೆ; ಆದ್ದರಿಂದ ಮುಂದಿರುವ ಹಿಂದುಗಳ ಸಂಹಾರ ಮಾಡದ ಹೊರತು ನಿಮಗೆ ಅನ್ಯ ಮಾರ್ಗವಿಲ್ಲ. ಈಗ ನಿಮಗೆ ಮರಣವು ಅಥವಾ ಜಯವು ಎರಡರಲ್ಲೊಂದು ಆಗಲೇಬೇಕಾಗಿದೆ. ಓಡಿ ಹೋಗಿ ಜೀವ ಉಳಿಸಿಕೊಳ್ಳಲು ಶಕ್ಯವಿಲ್ಲ. ಕಾರಣ ನಿಮ್ಮ ಶಕ್ತಿಯನ್ನು ಪಯೋಗಿಸಿರಿ, ಎಂದು ಹೇಳುತ್ತಿದ್ದನು.

ಎರಡೂ ಸೈನ್ಯಗಳ ನಡುವೆ ಘನಘೋರ ಯುದ್ಧವು ನಡೆಯಿತು. ಇಬ್ರಾಹಿಮಖಾನನ್ನು ಕೊಲ್ಲದ ಹೊರತು ಯುದ್ಧವು ಮುಗಿಯುವದಿಲ್ಲವೆಂದು ಗಣೇಶನಾರಾಯಣನು ಭಾವಿಸಿದನು. ನಂತರ ಅವನು ಇಬ್ರಾಹಿಮಖಾನನ ಎದುರಿಗೆ ಹೋಗಿ—''ಖಾನಸಾಹೇಬ, ನಾನು ದೇವೀಕೋಟೆಯ ಯುದ್ಧದಲ್ಲಿ ದೇವಿಯ ಗುಡಿಯ ಮುಂದೆ ಮಾಡಿದ ಪ್ರತಿಜ್ಞೆಯು ತಮಗೆ ಗೊತ್ತಿರುವದಷ್ಟೇ" ಎಂದನು.

ಇಬ್ರಾಹಿಮ—''ಏನು ಪ್ರತಿಜ್ಞೆ ಮಾಡಿರುವಿರಿ?''

ಗಣೇಶ—''ನಿಮ್ಮನ್ನು ಕೊಲ್ಲದೆ ನಾನು ಸಾಯುವದಿಲ್ಲವೆಂದು"

ಇಬ್ರಾ—''ಅಲ್ಲಿ ನೀವು ತೋರಿಸಿದ ಉದಾರ ಗುಣಕ್ಕೆ ಮೋಹಿತನಾಗಿ ನಾನು ಅದನ್ನು ಮರೆತಿದ್ದೆನು.''

ಗಣೇ—ಖಾನಸಾಹೇಬ, ಈಗ ನಮ್ಮಿಬ್ಬರ ಶಕ್ತಿಯ ಪರೀಕ್ಷೆಯಾಗಲಿ, ಎಂದು ಇಬ್ರಾಹಿಮನ ಮೇಲೆ ಏರಿ ಹೋದನು.

ಇಬ್ರಾ—ರಾಜಾ, ಆ ಯುದ್ಧವು ದೇವಿಯ ಗುಡಿಯ ಸಲುವಾಗಿ ಇತ್ತು; ಆದರೆ ಈಗ ರಾಜ್ಯದ ಸಲುವಾಗಿರುವದು.

ಗಣೇ—ಖಾನಸಾಹೇಬ, ರಾಜ್ಯವು ನಮಗೆ ಬೇಕಾಗಿಲ್ಲ. ನೀವು ಹಿಂದೂ ಜನರ ಧನ-ಮಾನ-ಧರ್ಮಗಳ ನಾಶದ ಪ್ರಯತ್ನವನ್ನು ಮಾಡಹತ್ತಿದ್ದರಿಂದ ನಾವು ಅವುಗಳ ರಕ್ಷಣೆಯ ಸಲುವಾಗಿ ಈಗ ಯುದ್ಧಕ್ಕೆ ನಿಂತಿರುವೆವು. ಇದರ ಮೇಲಿಂದ ದೇವತೆಗಳು ಬಲಿಷ್ಠರೋ ರಾಕ್ಷಸರು ಬಲಿಷ್ಠರೋ ನೀವೇ ಹೇಳಿರಿ, ಎಂದನು.

ಅಷ್ಟರಲ್ಲಿ ಇಬ್ರಾಹಿಮನ ಹೊಡತದಿಂದ ಗಣೇಶನಾರಾಯನ ಖಡ್ಗವು ತುಂಡಾಗಿ ಬಿತ್ತು. ಆಗ ಇಬ್ರಾಹಿಮನು—"ರಾಜಾ, ನೋಡು; ಯಾರು ದೇವತೆಗಳು?" ಎಂದನು. ಆಗ ಗಣೇಶನಾರಾಯಣನು ತನ್ನ ಶೂಲವನ್ನು ಎತ್ತಿ—"ಇಬ್ರಾಹಿಮ, ಇದರಿಂದ ನೀನು ಪಾರಾದರೆ ಪಠಾಣರಲ್ಲಿ ಶೂರರಿರುವರೆಂದು ತಿಳಿಯುವೆನೆ"ಂದು ಒತ್ತರದಿಂದ ಇಬ್ರಾಹಿಮನ ಮೇಲೆ ಒಗೆದನು. ಇಬ್ರಾಹಿಮನು ರಕ್ಷಣೆ ಮಾಡಿಕೊಳ್ಳಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಅದು ಅವನ ವಕ್ಷಸ್ಥಳವನ್ನು ಭೇದಿಸಲು, ಅವನು ನೆಲಕ್ಕೆ ಬಿದ್ದನು. ಕೂಡಲೆ ಪಠಾಣರ ಸೈನ್ಯವು ದಾರಿ ಸಿಕ್ಕ ಕಡೆಗೆ ಓಡಹತ್ತಿತು. ಹಿಂದುಗಳು ಜಯಜಯಕಾರವನ್ನು ಮಾಡಹತ್ತಿದರು!

ನಶೀರಿತನು ಕಿಲ್ಲೆಯ ಗೋಡೆಯ ಮೇಲೆ ನಿಂತು ಇದನ್ನೆಲ್ಲ ನೋಡಿದನು. ಇನ್ನು ಪಠಾಣರಿಗೆ ಜಯವು ಅಸಾಧ್ಯವೆಂದು ತಿಳಿದು ಆತನು ಕೆಳಗೆ ಬಂದು—"ಇನ್ನೇಕೆ ಈ ರಾಜಮುಕುಟವು?" ಎಂದು ಅದನ್ನು ಬಿಸುಟಿ, ಮೀನಾರಖಾನನ ಶೋಧ ಮಾಡಿಸಲು, ಅವನು ಸುರಂಗ ಮಾರ್ಗದಿಂದ ಓಡಿ ಹೋಗಿರುವದಾಗಿ ತಿಳಿಯಿತು. ಆಗ ನವಾಬನು ಕೈಯಲ್ಲಿ ಖಡ್ಗವನ್ನು ತಕ್ಕೊಂಡು ಬಾಗಿಲಿಗೆ ಬಂದನು. ಅಸಂಖ್ಯ ಹಿಂದೂ ಜನರು ಅರಮನೆಯ ಕಡೆಗೆ ಬರುತ್ತಿದ್ದರು. ಅವರನ್ನು ಎದುರಿಸಲು ಒಬ್ಬ ಪಠಾಣನೂ ಇದ್ದಿಲ್ಲ. ಎಲ್ಲರೂ ಓಡಿ ಹೋಗಿದ್ದರು. ಆಗ ಬೇಡಿಯ ತುಂಡುಗಳನ್ನು ಕೈಕಾಲುಗಳಲ್ಲಿ ಜೋತಾಡಿಸುತ್ತ ನಿರಾಯುಧನಾಗಿ ಬರಿಗಾಲಿನಿಂದಿದ್ದ ಒಬ್ಬ ವೃದ್ಧ ಪಠಾಣನು ಹಿಂದೂ ಜನರೆದುರಿಗೆ ಓಡಿ ಹೋಗುತ್ತಿದ್ದನು; ಮತ್ತು ಅವನು—"ಎಲೈ ವೀರ ಪಠಾಣರೇ, ಯಾವನು ಶತ್ರುಗಳನ್ನು ಕೊಂದು ಸಾಯುವನೋ ಅವನಿಗೆ ಸ್ವರ್ಗವು ದೊರೆಯುವದು. ವೀರ ಸ್ವರ್ಗ ಬೇಕಾದವರು ನನ್ನ ಸಂಗಡ ಬನ್ನಿರಿ, ಎಂದು ಒದರುತ್ತ ನಡೆದಿದ್ದನು.

ಈ ಪ್ರಕಾರ ಓಡುತ್ತ ಹೊರಟವನು ಜೋನಾಬಖಾನನು. ಮೂರ್ಖನಾದ ನಶೀರಿತನು ಅವನನ್ನು ಕಾರಾಗೃಹದಲ್ಲಿರಿಸಿದ್ದನು. ಹಿಂದುಗಳು ದುರ್ಗದ್ವಾರವನ್ನು ಮುರಿದು ದುರ್ಗವನ್ನು ವಶ ಮಾಡಿಕೊಂಡ ಸುದ್ದಿಯನ್ನು ಜೋನಾಬಖಾನನು ಸೆರೆಮನೆಯಲ್ಲಿ ಕೇಳಿ, ಆವೇಶದಿಂದ ತನ್ನ ಕೈಕಾಲುಗಳ ಬೇಡಿಗಳನ್ನು ಮುರಕೊಂಡು ಹಿಂದೂ ಜನರನ್ನು ಎದುರಿಸಲಿಕ್ಕೆ ಹೊರಟಿದ್ದನು.

ಜೋನಾಬಖಾನನ ಆವೇಶವನ್ನು ನೋಡಿ ಓಡುವ ಪಠಾಣರು ನಿಂತರು. ಆದರೆ ಅವನನ್ನು ಅನುಸರಿಸಲಿಲ್ಲ. ಆಗ ನಶೆರಿತನು ತನ್ನ ಪಠಾಣ ಸೈನಿಕರನ್ನು ಕುರಿತು—"ಸೈನಿಕರೇ, ನೀವು ಓಡಿ ಹೋಗುವದೆಲ್ಲಿಗೆ? ನಾಲ್ಕೂ ದಿಕ್ಕಿನಲ್ಲಿ ಹಿಂದುಗಳು ಆಕ್ರಮಣ ಮಾಡಿರುವರು. ಓಡಿ ಹೋಗಲು ಸ್ಥಳವಿಲ್ಲ. ಓಡಿ ಹೋಗುವಾಗ ಹಿಂದುಗಳ ಕೈಯಿಂದ ಮರಣ ಹೊಂದುವದಕ್ಕಿಂತ ಯುದ್ಧ ಮಾಡಿ ಮರಣ ಹೊಂದುವದೇ ಲೇಸು. ಕಾರಣ ಜೋನಾಬಖಾನನ ಹಿಂದೆ ನಡೆಯಿರಿ" ಎಂದು ಹೇಳಲು, ಪಠಾಣರು ಜೋನಾಬಖಾನನ ಹಿಂದೆ ನಡೆದರು. ನವಾಬನೂ ಅವನ ಹಿಂದೆ ಹೊರಟನು. ಜೋನಾಬಖಾನನು ಹೋಗುವಾಗ ಒಬ್ಬ ಹಿಂದುವನ್ನು ಆಕ್ರಮಿಸಿ, ಅವನ ಖಡ್ಗವನ್ನು ಕಸಿದುಕೊಂಡು ಮುಂದೆ ನಡೆದನು. ಆಗ ನವಾಬನ ಅಪ್ಪಣೆಯ ಪ್ರಕಾರ ಇಬ್ಬರು ಪಠಾಣರು ಜೋನಾಬಖಾನನ ಕೈಕಾಲುಗಳಲ್ಲಿ ಜೋತಾಡುತ್ತಿದ್ದ ಬೇಡಿಯ ತುಂಡುಗಳನ್ನು ಬಿಚ್ಚಿದರು. ನಶೆರಿತನು ತನ್ನ ಖಡ್ಗವನ್ನು ಜೋನಾಬಖಾನನ ಕೈಯಲ್ಲಿ ಕೊಟ್ಟು—"ಜೋನಾಬಖಾನ ಸೇನಾಪತಿಯೇ, ನೀನು ನನಗೆ ತಂದೆಯ ಸಮಾನನು. ಮಗನ ಅಪರಾಧವನ್ನು ಕ್ಷಮಿಸೆ"ಂದನು.

ಜೋನಾಬಖಾನನಿಗೆ ನವಾಬನ ಮಾತಿನ ಕಡೆಗೆ ಲಕ್ಷ್ಯವಿದ್ದಿಲ್ಲ. ಅವನು ವೇಗದಿಂದ ಹಿಂದುಗಳ ಕಡೆಗೆ ಸಾಗಿದ್ದನು; ಆದರೆ ಅಸಂಖ್ಯ ಹಿಂದುಗಳೆದುರಿಗೆ ಅವನೊಬ್ಬನೇ ಏನು ಮಾಡುವನು? ಸ್ವಲ್ಪ ಹೊತ್ತಿನಲ್ಲಿ ಅವನ ಖಡ್ಗವು ಮುರಿದುಬಿತ್ತು. ಆಗ ಜೋನಾಬಖಾನನು ಒಬ್ಬ ಹಿಂದೂ ಸೈನಿಕನ ಕೈಯೊಳಗಿನ ಪರಶುವನ್ನು ಕಸಿದುಕೊಂಡು, ಹಿಂದೂ ಜನರ ಸಂಹಾರವನ್ನು ನಡೆಯಿಸಿದನು. ಚಿಗರೆಗಳ ಹಿಂಡಿನಲ್ಲಿ ಹುಲಿಯು ಹೊಕ್ಕಂತಾಯಿತು! ಅವನ ವೀರಾವೇಶಕ್ಕೆ ವೀರ ಯದುನಾರಾಯಣನೂ ದಿವಾಣ ನರಸಿಂಹನೂ ಹಿಂಜರಿದರು.

ಗಣೇಶನಾರಾಯಣನು ದೂರದಿಂದ ಜೋನಾಬಖಾನನ ಶೂರತನವನ್ನು ನೋಡಿ ಆನೆಯ ಮೇಲಿಂದ ಅವನೆದುರಿಗೆ ಬಂದನು; ಮತ್ತು ಅವನನ್ನು ಕುರಿತು— "ಸೇನಾಪತಿಸಾಹೇಬ, ನಾವು ಮನಸ್ಸು ಮಾಡಿದ್ದರೆ ಈ ಪೂರ್ವದಲ್ಲಿಯೇ ನಿಮ್ಮನ್ನು ಕೊಲ್ಲುತ್ತಿದ್ದೆವು; ಆದರೆ ನಿಮ್ಮಂಥ ಶೂರರು

ಸಿರಸ್ತ್ರಧಾರಿಗಳಿದ್ದಾಗ ಕೊಲ್ಲುವದು ವೀರಧರ್ಮವಲ್ಲವೆಂದು ಬಿಟ್ಟಿರುವೆವು. ನೀವು ಈ ಕವಚ-ಖಡ್ಗವನ್ನು ಸ್ವೀಕರಿಸಿರಿ" ಎಂದು ಕೊಡಹೋದನು.

ಜೋನಾಬಖಾನನು—"ಗಣೇಶನಾರಾಯಣ, ಶತ್ರುಗಳಿಂದ ದಾನವನ್ನು ಸ್ವೀಕರಿಸುವ ರೂಢಿಯು ನಮ್ಮಲ್ಲಿಲ್ಲ. ಕಾರಣ ನಾನು ಅವುಗಳನ್ನು ಸ್ವೀಕಾರ ಮಾಡುವದಿಲ್ಲ. ನಿನಗೆ ಸಾಧ್ಯವಿದ್ದರೆ ನನ್ನ ಸಂಹಾರವನ್ನು ಮಾಡಿ ನಿನ್ನ ಮಾರ್ಗವನ್ನು ನಿಷ್ಕಂಟಕ ಮಾಡಿಕೋ," ಎಂದನು.

ಗಣೇ—ಅಸ್ತ್ರಹೀನನೂ ನಗ್ನದೇಹವುಳ್ಳವನೂ ಆದ ವೀರನನ್ನು ಕೊಲ್ಲುವದು ಪೌರುಷವಲ್ಲ.

ಜೋನಾ—ಬರೇ ಗರ್ವದ ಮಾತುಗಳಲ್ಲಿ ಪೌರುಷವಿರುವದಿಲ್ಲ.

ಕೂಡಲೆ ಗಣೇಶನಾರಾಯಣನು ಆನೆಯಿಂದ ಇಳಿದು, ಖಡ್ಗವನ್ನು ಬಿಟ್ಟು ಒರೇ ಕುಠಾರವನ್ನು ತಕ್ಕೊಂಡು ಅವನಿಗೆದುರಾದನು. ಜೋನಾಬಖಾನನ ಶರೀರಕ್ಕೆ ಅನೇಕ ಗಾಯುಗಳಾಗಿ ರಕ್ತವು ಸೋರುತ್ತಿತ್ತು. ಗಣೇಶನಾರಾಯಣನ ದೇಹವು ಕವಚದಿಂದ ರಕ್ಷಿತವು. ಆಗ ಗಣೇಶನಾರಾಯಣನು ತನ್ನ ಕವಚವನ್ನೂ ಶಿರಸ್ತ್ರಾಣವನ್ನೂ ತೆಗೆದು ಯುದ್ಧಕ್ಕೆ ನಿಂತನು.

ಹಿಂದು-ಮುಸಲ್ಮಾನರೀರ್ವರೂ ಈ ಯುದ್ಧವನ್ನು ನೋಡಹತ್ತಿದರು. ಅವರಿಬ್ಬರಂಥ ರಣಶೂರರು ಆಗ ಬಂಗಾಲದಲ್ಲಿ ಯಾರೂ ಇದ್ದಿಲ್ಲ. ಈ ಯುದ್ಧವು ಕ್ಷಣದಲ್ಲಿ ಮುಗಿಯಿತು; ಯಾಕಂದರೆ ದಣಿದಂಥ ಜೋನಾಬಖಾನನ ಕುಠಾರವು ಮುರಿದು ನೆಲಕ್ಕೆ ಬಿತ್ತು. ಆಗ ಜೋನಾಬಖಾನನು ಸುತ್ತಲೂ ನೋಡಿದನು. ಅವನಿಗೆ ಅಸ್ತ್ರವನ್ನು ಕೊಡಲು ಒಬ್ಬ ಮುಸಲ್ಮಾನನೂ ಇದ್ದಿಲ್ಲ. ಸಮೀಪದಲ್ಲಿ ಯಾವ ಶಸ್ತ್ರಗಳೂ ಕಾಣಿಸಲಿಲ್ಲ. ಅವನು ನಿರಾಶನಾಗಿ ಕಿಲ್ಲೆಯ ಕಡೆಗೆ ನೋಡಲು, ಪಠಾಣರ ಪತಾಕೆಯು ಇನ್ನೂ ಕಿಲ್ಲೆಯ ಮೇಲೆ ಹಾರಾಡುತ್ತಿತ್ತು. ಆಗ ಗಣೇಶನಾರಾಯಣನು ಜೋನಾಬಖಾನನ್ನು ಕುರಿತು:—"ಮಿತ್ರಾ, ಜೋನಾಬಖಾನ, ಭಾಯೀ, ಈ ಕುಠಾರವನ್ನು ಹಿಡಿ" ಎಂದನು.

ಜೋನಾಬಖಾನನು ಗಣೇಶನಾರಾಯಣನ ಕೈಯೊಳಗಿನ ಕುಠಾರವನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಆಗ ಗಣೇಶನಾರಾಯಣನು ತನ್ನ ಎರಡೂ ಕೈಗಳನ್ನು ಮಡಚಿ ಎದೆಯ ಮೇಲಿಟ್ಟುಕೊಂಡು:—"ಬಂಧೂ, ಜೋನಾಬಖಾನ, ನನ್ನ ಸಂಹಾರಮಾಡು. ನನ್ನ ಮರಣದಿಂದ ಒಂದು

ಕ್ಷಣವಾದರೂ ನಿನ್ನ ಮನಸ್ಸಿಗೆ ಸಮಾಧಾನವಾಗಲಿ. ಅದೇ ನನಗೆ ಆನಂದವೆ''ಂದನು.

ಜೋನಾಬಖಾನನು ಆ ಕುಠಾರವನ್ನು ಗಟ್ಟಿಯಾಗಿ ಎದೆಗೆ ಅವಚಿಕೊಂಡು ಗಣೇಶನಾರಾಯಣನ ಕಡೆಗೆ ಸುಮ್ಮನೆ ನೋಡಹತ್ತಿದನು. ಅವನ ಎರಡೂ ಕಣ್ಣುಗಳೊಳಗಿಂದ ಒಂದೇಸಮನೆ ನೀರು ಸುರಿಯಹತ್ತಿತ್ತು. ಬಾಯಿಂದ ಒಂದೂ ಮಾತಿಲ್ಲ. ನಂತರ ಜೋನಾಬನು ಮತ್ತೊಮ್ಮೆ ಮುಸಲ್ಮಾನ ಪತಾಕೆಯ ಕಡೆಗೆ ನೋಡಿದನು. ನಂತರ ಎಚ್ಚರದಪ್ಪಿ ನೆಲಕ್ಕೆ ಬಿದ್ದನು!

## ( ೪೧ )

ಅಂದು ಸೂರ್ಯಾಸ್ತವಾಗುವದರೊಳಗೆ ಫಿರೋಜಾಬಾದ ಪಟ್ಟಣದ ಕಿಲ್ಲೆಯ ಮೇಲೆ ಹಿಂದೂ ಪತಾಕೆಯು ಶೋಭಿಸಹತ್ತಿತು. ಮನೋಹರನು ಕಿಲ್ಲೆಯ ಉತ್ತರಕ್ಕಿರುವ ಅಡವಿಯಲ್ಲಿದ್ದನು. ಕೋಟೆಯ ಕಡೆಗೆ ಅವನ ಲಕ್ಷ್ಯವಿತ್ತು.

ಕಿಲ್ಲೆಯೊಳಗಿಂದ ಪಠಾಣರಿಗೆ ಓಡಿ ಹೋಗಲಿಕ್ಕೆ ಈ ಉತ್ತರದ ಅಡವಿಯ ಹೊರತು ಬೇರೆ ಸುರಕ್ಷಿತ ಮಾರ್ಗವಿದ್ದಿಲ್ಲ. ಕಾರಣ ಮನೋಹರನು ಓಡಿ ಹೋಗುವ ಪಠಾಣರ ಸಲುವಾಗಿ ಈ ಅಡವಿಯಲ್ಲಿದ್ದನು. ಅವನು ಕಳ್ಳರದೊಂದು ಗುಂಪಿನ ಮುಖ್ಯಸ್ಥನಾದ ಕಾಲೀಚರಣನೆಂಬುವನಿಗೆ ಲಂಚವನ್ನು ಕೊಟ್ಟು, ಅವನನ್ನು ತನ್ನ ಸಹಾಯಕ್ಕೆ ಕರೆದುಕೊಂಡಿದ್ದನು.

ಸ್ವಲ್ಪ ಹೊತ್ತಿನಲ್ಲಿ ನಶೆರಿತಶಹನು ತನ್ನ ಕುದುರೆಯನ್ನೋಡಿಸುತ್ತ ಮನೋಹರನು ಕುಳಿತ ಕಡೆಗೆ ಬರಹತ್ತಿದನು. ಸ್ವಲ್ಪ ಮುಂದೆ ಬಂದ ಬಳಿಕ ಮನೋಹರನಿಗೆ ನವಾಬನ ಪರಿಚಯವು ಹತ್ತಿತು. ಆಗ ಅವನು ಬಿಲ್ಲಿಗೆ ಬಾಣವನ್ನು ಹೂಡಿ ನವಾಬನ ಕಡೆಗೆ ಹೊಡೆಯಲು, ಆ ಬಾಣವು ನವಾಬನಿಗೂ ಕುದುರೆಗೂ ಬಡಿಯದೆ, ನವಾಬನ ಹತ್ತರವೇ ಹಾದು ಒಂದು ಗಿಡಕ್ಕೆ ಬಡಿಯಿತು. ಆಗ ನಶೆರಿತನು ಗಾಬರಿಯಾಗಿ ಕುದುರೆಯನ್ನು ನಿಲ್ಲಿಸಿ, ನಾಲ್ಕೂ ಕಡೆಗೆ ನೋಡಹತ್ತಿದನು. ಅಷ್ಟರಲ್ಲಿ ಮತ್ತೊಂದು ಬಾಣವು ಬಂದು ನಶೆರಿತನ ಕುದುರೆಯ ಹಣೆಯನ್ನು ಸೀಳಲು ಕುದುರೆಯು ನೆಲಕ್ಕೆ ಬಿತ್ತು.

ಆಗ ನಶೆರಿತನು ತನ್ನ ಖಡ್ಗವನ್ನು ಒರೆಯಿಂದ ಹಿರಿದುಕೊಂಡು ನಿಂತು ನಾಲ್ಕುದಿಕ್ಕಿಗೆ ದಿಟ್ಟಿಸಿ ನೋಡಲು, ದೂರದಲ್ಲಿ ಒಬ್ಬ ಬಾಲಕನು ಬಿಲ್ಲಿಗೆ ಬಾಣವನ್ನು ಹೂಡಿ ಹೊಡೆಯುತ್ತಿದ್ದನು. ಆಗ ನವಾಬನಿಗೆ ಮನೋಹರನ ಪರಿಚಯವು ಹತ್ತಿತು. ಕೂಡಲೆ ನಶೆರಿತನು ಕ್ರೋಧದಿಂದ:- "ವಿಶ್ವಾಸಘಾತುಕಿಯಾದ ಮನೋ, ಇನ್ನೆಲ್ಲಿಗೆ ಹೋಗುವಿ?" ಎಂದು ಅವನ ಕಡೆಗೆ ಓಡಿದನು. ಆಗ ಮನೋಹರನು ದೃಢಸ್ವರದಿಂದ:-"ನವಾಬ, ಒಂದು ಹೆಜ್ಜೆಯನ್ನು ಸಹ ಮುಂದಿಡದೆ ನಿಂತಲ್ಲಿಯೆ ನಿಲ್ಲು; ಇಲ್ಲದಿದ್ದರೆ ಅದರ ಫಲವನ್ನು ಅನುಭವಿಸುವಿ" ಎನ್ನಲು, ನವಾಬನು ಅವನ ಮಾತಿಗೆ ಕಿವಿಗೊಡದೆ ಹಾಗೆಯೇ ಮುಂದೆ ಸಾಗಲು, ಮನೋಹರನ ಒಂದು ಬಾಣವು ನಶೆರಿತನ ಬಲಗೈಗೆ ತಾಕಿ ಅವನ ಖಡ್ಗವು ನೆಲಕ್ಕೆ ಬಿತ್ತು. ಕೂಡಲೆ ಮನೋಹರನು ಮುಂದೆ ಬಂದು ಅವನ ಖಡ್ಗವನ್ನು ತೆಗೆದುಕೊಂಡನು. ನವಾಬನು ಗಾಬರಿಯಾಗಿ ಸುತ್ತಲೂ ನೋಡಲು, ಅವನಿಗೆ ಸಹಾಯ ಮಾಡುವವರು ಅಲ್ಲಿ ಯಾರೂ ಇದ್ದಿಲ್ಲ. ಆಗ ಅವನು ಮನೋಹರನ ಕಡೆಗೆ ಟಕಮಕವೆಂದು ನೋಡಹತ್ತಿದನು.

ಆಗ ಮನೋಹರನು:—"ನವಾಬ, ನಾನು ಯಾರೆಂಬುದು ಗುರುತು ಹತ್ತುವದೇ?" ಎಂದನು.

ನಶೆರಿತನು (ದೈನ್ಯದಿಂದ)—"ಮನೋ, ನಾನು ನಿನ್ನ ಎಲ್ಲ ಅಪರಾಧಗಳನ್ನು ಕ್ಷಮಿಸಿರುವೆನು. ನನ್ನನ್ನು ಹೋಗಗೊಡು."

ಮನೋ—"ನಾನು ಮನೋಹರನಲ್ಲ."

ನಶೆ—"ಹಾಗಾದರೆ ನೀನು ಯಾರು?"

ಮನೋ—"ನಾನು ಮಂದಾಕಿನಿಯು."

ನಶೆರಿತ—"ನೀನು ಹೆಂಗಸೆ? ಇದು ಸುಳ್ಳು."

ಮನೋಹರ—"ಹಾಗಾದರೆ ಸ್ವಲ್ಪ ತಡೆ: ಆದರೆ ಓಡಿ ಹೋಗುವ ಪ್ರಯತ್ನವನ್ನು ಮಾತ್ರ ಸರ್ವಥಾ ಮಾಡಬೇಡ. ಮಾಡಿದಲ್ಲಿ ಇನ್ನೊಂದೇ ಬಾಣವು ನಿನ್ನ ಜೀವಹರಣಮಾಡುವದೆ"ಂದು ಹೇಳಿ, ಮೈಯೊಳಗಿನ ಅಂಗಿ, ಜಾಕೀಟು ಹಾಗೂ ಇಜಾರ ಮತ್ತು ತಲೆಗೆ ಸುತ್ತಿದ ಪೇಟಾವನ್ನು ಬಿಚ್ಚಲು ಒಳಗೆ ಸಂಪೂರ್ಣ ಸ್ತ್ರೀ ವೇಷವಿದ್ದು, ತಲೆಗೆ ಸುತ್ತಿದ ಉದ್ದ ಪೇಟಾದಿಂದ ಅವಳ ಕೂದಲುಗಳು ಮುಚ್ಚಿದ್ದವು. ನವಾಬನು ವಿಸ್ಮಿತನಾದನು. ತಾನು

ಈ ಸ್ತ್ರೀರೂಪವನ್ನು ಎಲ್ಲಿಯೋ ನೋಡಿದಂತೆ ಆತನಿಗೆ ಭಾಸವಾಯಿತು; ಆದರೆ ಎಲ್ಲಿ ಎಂಬದು ಮಾತ್ರ ಆತನಿಗೆ ನೆನಪಾಗಲಿಲ್ಲ.

ಮಂದಾಕಿನಿಯು ಬಿಲ್ಲನ್ನೂ ಖಡ್ಗವನ್ನೂ ಕೆಳಗಿಡದೆ:—''ನಶೆರಿತ ಶಹಾ, ಈಗ ನನ್ನ ಗುರುತು ಹತ್ತಲಿಲ್ಲವೇ? ಈ ವೇಷವನ್ನು ಎಲ್ಲಿಯಾದರೂ ನೋಡಿದ ಸ್ಮರಣೆಯಾಗುವದೇ? ಈ ನನ್ನ ಹರಕ ಸೀರೆ-ಕುಪ್ಪಸಗಳು ನಿನಗೆ ನಿನ್ನ ಹಿಂದಿನ ಕೃತಿಯ ಸ್ಮರಣೆಯನ್ನು ಮಾಡಿ ಕೊಡುವದಿಲ್ಲವೇ? ನವಾಬ, ಹಿಂದಕ್ಕೊಂದು ದಿವಸ ಇದೇ ಪ್ರಕಾರ ಸೂರ್ಯಾಸ್ತ ಸಮಯದಲ್ಲಿ ಕಾಲಿಂದೀನದಿಯ ದಂಡೆಯ ಮೇಲೆ ನಿನ್ನ ಮಿತ್ರನಾದ ಪಾಪಕರ್ಮಿ ಕಿಶೋರಿಮೋಹನನನ್ನು ಕೂಡಿಕೊಂಡು ನನ್ನ..''

ನವಾಬನು ನಡುವೇ ಬಾಯಿಹಾಕಿ:—''ಗುರುತು ಹತ್ತಿತು. ನೀನು ಅವಳೇ ಏನು?'' ಎಂದನು.

ಮಂದಾಕಿನಿ:—''ಹೌದು; ನಾನೇ ಅವಳು. ನದಿಯಲ್ಲಿ ನೂಕಿ ಕೊಂದ ಆ ವೃದ್ಧ ಬ್ರಾಹ್ಮಣನ ಪುತ್ರಿಯು ನಾನೇ!! ಎಲೈ, ಮದಾಂಧ ನಾದ ಸುಲ್ತಾನನೇ, ಹಿಂದೂ ಸ್ತ್ರೀಯರ ಪಾತಿವ್ರತ್ಯವೆಂದರೆ ಆಟದ ಪದಾರ್ಥವೆಂದು ಭಾವಿಸಿ, ನೀನು ನನ್ನ ಸತೀತ್ವಭಂಗದ ಪ್ರಯತ್ನ ಮಾಡಿದೆ. ಆದೇ ನೀನು ಈಗ ಆ ಕ್ಷುದ್ರ ಅಬಲೆಯಾದ ಬಾಲಿಕೆಯ ಎದು ರಿಗೆ ನಿಂತಿರುವೆ. ನಿನ್ನ ಜೀವನದ ಫಲಿತವು ಈಗ ಅವಳ ಕೈಯಲ್ಲಿರುವದು. ತಿಳಿಯಿತೇ?'' ಎಂದಳು.

ನಶೆರಿತನು—''ಮಂದಾಕಿನೀ, ನಾನು ಆಗ ನಿನ್ನ ಮಾನಹಾನಿಯ ಪ್ರಯತ್ನವನ್ನು ಮಾತ್ರ ಮಾಡಿರುವೆನು.'' ಮಂದಾಕಿನಿಯ ಧೈರ್ಯ, ಶಾಂತಿ, ಗಂಭೀರತೆಗಳೆಲ್ಲವೂ ಅಳಿದು, ಅವಳು ಹೆಣ್ಣು ಹುಲಿಯಂತೆ ಗರ್ಜಿ ಸುತ್ತ—''ಪ್ರಯತ್ನವನ್ನಷ್ಟೇ ಮಾಡಿದ್ದೆಯಲ್ಲವೇ? ನೀಚಾ! ನನ್ನ ತಂದೆ ಯನ್ನು ನದಿಯಲ್ಲಿ ನೂಕಿ ಕೊಂದದ್ದು ಪ್ರಯತ್ನವೇ!! ನೀನು ನನ್ನ ದೇಹ ವನ್ನು ಸ್ಪರ್ಶ ಮಾಡಿದ್ದರಿಂದ ನನ್ನ ಭಾವಿತ ಪತಿಯು (ಗೊತ್ತು ಮಾಡಿದ ಗಂಡನು) ನನ್ನನ್ನು ನಿರಾಕರಿಸಿದನು. ಅದರಿಂದ ನನ್ನ ಇಡೀ ಆಯುಷ್ಯ ವನ್ನೇ ಹಾಳು ಮಾಡಿದೆ!! ಹೀಗಿದ್ದು, ನಾನು ಪೂರ್ಣ ಅಪರಾಧವನ್ನು ಮಾಡಿಲ್ಲವೆಂದು ಬೊಗಳುತ್ತೀಯಾ?''

ನಶೆ—ಮನೋಹರ; ಅಲ್ಲ ಮಂದಾಕಿನೀ, ನನ್ನನ್ನು ಕ್ಷಮಿಸು.

ಮಂದಾಕಿನಿ—ಕ್ಷಮೆ ಎಂಬ ಶಬ್ದವೇ ನನಗೆ ಗೊತ್ತಿಲ್ಲ. ನಾನು ನನ್ನ ತಂದೆಯ ಮೃತಶರೀರವನ್ನು ಮುಟ್ಟಿ ನನ್ನ ಹಾಗೂ ಹಿಂದೂ ಕುಲಕಲಂಕನಾದ ಆ ಕಿಶೋರಿಮೋಹನನ ಸರ್ವನಾಶ ಮಾಡುವ ಪ್ರತಿಜ್ಞೆಯನ್ನು ಮಾಡಿರುತ್ತೇನೆ. ನೋಡು! ನೋಡು!! ನೋಡು!!! ಇದೇ ನನ್ನ ಜೀವನದ ಅಂತಿಮ ಧ್ಯೇಯವು! ಎಂದಂದು, ಕಾಲೀಚರಣನನ್ನು ಕೂಗಿದಳು.

ಕೂಡಲೆ ಕಾಲೀಚರಣನು ಬಂದನು. ಅವನು ಮನಸ್ಸಿನಲ್ಲಿ:—"ನಾನು ಈಗ ಇವಳಿಗೆ ಸಹಾಯ ಮಾಡುವದಕ್ಕಿಂತ ನವಾಬನಿಗೆ ಸಹಾಯವನ್ನು ಮಾಡಿದರೆ ಹೆಚ್ಚು ಲಾಭವಾಗುವದೆ"ಂದು ಯೋಚಿಸಹತ್ತಿದನು. ಇದಲ್ಲದೆ ಇಡೀ ಗೌಡರಾಜ್ಯದ ಸುಲ್ತಾನನ ಮೇಲೆ ಕೈ ಮಾಡುವ ಸಾಹಸವು ಅವನಿಗಾಗಲಿಲ್ಲ. ಮಂದಾಕಿನಿಯು ನವಾಬನ ಕೈಕಾಲುಗಳನ್ನು ಕಟ್ಟಲು ಮೇಲಿಂದ ಮೇಲೆ ಆಜ್ಞೆಗಳನ್ನು ಮಾಡಿದರೂ ಕಾಲೀಚರಣನು ಸುಮ್ಮನಿದ್ದನು. ಆಗ ಮಂದಾಕಿನಿಯು ನಿರುಪಾಯಳಾಗಿ, ಕಡೆಯ ಉಪಾಯವೆಂದು ತ್ರಿಪುರಾದೇವಿಯು ಕೊಟ್ಟಿದ್ದ ಗಣೇಶನಾರಾಯಣನ ಹೆಸರು ಕೆತ್ತಿದ ಉಂಗುರವನ್ನು ಅವನಿಗೆ ತೋರಿಸಿದಳು; ಕಾಲೀಚರಣನಿಗೆ ಓದು-ಬರಹ ಬರುತ್ತಿತ್ತು. ಅವನು ಗಣೇಶನಾರಾಯಣನ ಹೆಸರಿನ ಉಂಗುರವನ್ನು ನೋಡಿದ ಕೂಡಲೆ ವಿನಯದಿಂದ ಅದಕ್ಕೆ ನಮಸ್ಕಾರವನ್ನು ಮಾಡಿ—"ಏನಪ್ಪಣೆ?" ಎಂದು ಮಂದಾಕಿನಿಯನ್ನು ಕೇಳಿದನು.

ನವಾಬ—"ಕಾಲೀಚರಣ, ನಿನಗೆ ಬೇಕಾದಷ್ಟು ಹಣ ಕೊಡುವೆನು. ಜಹಗೀರುಗಳನ್ನು ಕೊಡುವೆನು, ನನ್ನನ್ನು ಇಲ್ಲಿಂದ ಪಾರು ಮಾಡು." ಎಂದನು.

ಕಾಲೀಚರಣ—ನವಾಬಸಾಹೇಬ, ನಿಮ್ಮ ಹಣಕ್ಕಿಂತ ನನಗೆ ಹಿಂದೂ ರಾಜನ ಅಪ್ಪಣೆಯು ಹೆಚ್ಚು ಬೆಲೆಯುಳ್ಳದ್ದು, ಎಂದು ಹೇಳಿ, ಮುಂದೆ ಬಂದು ಅವನ ಕೈ-ಕಾಲುಗಳನ್ನು ಕಟ್ಟಿದನು.

ನವಾಬ—ಮಂದಾಕಿನೀ ನನ್ನನ್ನು ಕೊಲ್ಲಬೇಡ.

ಮಂದಾಕಿನಿ—ಕೊಲ್ಲಬೇಕಾಗಿದ್ದರೆ ಆ ಕೆಲಸವನ್ನು ಎಂದೋ ಮಾಡುತ್ತಿದ್ದೆನು.

ನವಾಬ—ಹಾಗಾದರೆ ನನ್ನನ್ನು ತೆಗೆದುಕೊಂಡು ಏನು ಮಾಡುವಿ?

ಮಂದಾ—ಅದು ಇನ್ನು ಮೇಲೆ ನಿನಗೇ ತಿಳಿಯುವದು.

ಮಂದಾಕಿನಿಯು ಅವನನ್ನು ಹೊರಿಸಿಕೊಂಡು ಕಿಶೋರಿಮೋಹನನ ಉಪವನಕ್ಕೆ ಬಂದಳು. ಆ ಸುಂದರವಾದ ಉಪವನವು ಅಗ್ನಿಯ ಜ್ವಾಲೆಯಿಂದ ವಿದ್ರೂಪವಾಗಿತ್ತು. ಅದು ನವಾಬನನ್ನು ನೋಡಿ—"ನವಾಬ, ನನ್ನ ಈ ಅಮಂಗಲಕ್ಕೆ ನೀನೇ ಕಾರಣನು" ಎಂದು ಹೇಳುವದೆಂಬಂತೆ ಭಾಸವಾಗಹತ್ತಿತು. ನವಾಬನು ಮನಸ್ಸಿನಲ್ಲಿ:-"ಈ ಉಪವನವು ಹಿಂದ ಕ್ಕೊಮ್ಮೆ ನನ್ನ ಕ್ರೀಡಾಭೂಮಿಯಾಗಿತ್ತು: ಈಗ ಇದೇ ನನ್ನ ವಧಸ್ಥಾನವಾಗುವದೋ ಏನೋ?" ಎಂದು ಭಾವಿಸಿ:—"ಮಂದಾಕಿನಿ, ನಿನಗೆ ಇದರ ಹೊರತು ಅನ್ಯ ಸ್ಥಳವು ಇದ್ದಿಲ್ಲವೇ? ಇಲ್ಲಿಯೇ ನನ್ನ ವಧಮಾಡುವಿಯೇನು?" ಎಂದನು.

ಮಂದಾಕಿನಿ—ಇಲ್ಲ; ನಾನು ನಿನ್ನನ್ನು ಕೊಲ್ಲುವದಿಲ್ಲ. ಪೃಥ್ವಿಯ ಹೊಟ್ಟೆಯಲ್ಲಿ ಏನಿರುವದೆಂಬುದನ್ನು ನೋಡಲಿಕ್ಕೆ ಇಲ್ಲಿಯ ಹಾಳು ಭಾವಿಯಲ್ಲಿ ನಿನ್ನನ್ನು ಕಳಿಸುತ್ತೇನೆ. ಪಿಶಾಚಿಯಾದ ಸುಲ್ತಾನನೇ, ಹಿಂದಕ್ಕೆ ನೀನೂ ಕಿಶೋರಿಮೋಹನನೂ ಕೂಡಿ ದಿವಾಣ ನರಸಿಂಹನನ್ನು ಆ ಹಾಳು ಭಾವಿಯಲ್ಲಿ ಇಟ್ಟಿದ್ದಿರಲ್ಲವೇ? ಈಗ ನಿನ್ನನ್ನು ಅಲ್ಲಿಡುತ್ತೇನೆ. ಅಲ್ಲಿ ನಿನಗೆ ಸೂರ್ಯ-ಚಂದ್ರರ ದರ್ಶನವೂ ಹವೆಯೂ ಬೆಳಕೂ ದೊರೆಯಲಾರವು. ಇದು ವರೆಗೆ ನೀವು ಅಲ್ಲಿ ಸೆರೆಯಿಟ್ಟು ಮೃತ ಹೊಂದಿದವರ ಅಸ್ಥಿಪಂಜರಗಳೇ ನಿನ್ನ ಸಹಚರರು; ಆದರೆ ಅಲ್ಲಿ ನಿನ್ನನ್ನು ಉಪವಾಸ ಕೊಲ್ಲುವದಿಲ್ಲ. ನನ್ನ ಅನುಚರರು ನಿನಗೆ ದಿನಾಲು ಆಹಾರವನ್ನು ಚಲ್ಲುವರು, ಎಂದು ಹೇಳಿ, ಮೊದಲೇ ಸಿದ್ಧಮಾಡಿಟ್ಟ ತೊಟ್ಟಿಲದಲ್ಲಿ ಕೂಡಿಸಿ, ಅವನ ಕೈಕಾಲುಗಳ ಬಂಧನವನ್ನು ಬಿಚ್ಚಿಸಿ, ಹಗ್ಗವನ್ನು ಬಿಚ್ಚಿ, ಅವನನ್ನು ಒಳಗೆ ಬಿಡಹತ್ತಿದಳು. ಆಗ ನವಾಬನು ಎರಡೂ ಕೈಗಳನ್ನು ಜೋಡಿಸಿ:—"ಮಂದಾಕಿನೀ, ನಾನು ನಿನ್ನನ್ನು ನನ್ನ ಸಿಂಹಾಸನದ ಮೇಲೆ ಕೂಡಿಸಿ ನಿನ್ನ ಸೇವೆಯನ್ನು ಮಾಡುವೆನು. ನನ್ನನ್ನು ಕ್ಷಮಿಸು" ಎಂದು ಬೇಡಿಕೊಳ್ಳಹತ್ತಿದನು.

ಮಂದಾಕಿನಿ—"ಪಿಶಾಚಿಗೆ ಕ್ಷಮೆಯೇ!! ಕಾಲಿಂದೀ ನದಿಯ ದಂಡೆಯ ಮೇಲೆ ನಿನ್ನನ್ನು ನಾನೆಷ್ಟು ವಿಧವಾಗಿ ಬೇಡಿಕೊಂಡೆನು? ಆಗ ನಿನಗೆ ಸ್ವಲ್ಪವಾದರೂ ದಯೆ ಹುಟ್ಟಿತೆ? ನಿರ್ದಯನಾದ ನವಾಬನೇ,

ನನಗೂ ಈಗ ದಯೆಹುಟ್ಟುವಂತಿಲ್ಲ. ನಾನು ಸೇಡು ತೀರಿಸಿಕೊಳ್ಳತಕ್ಕವಳೇ. ಸೇಡು! ಸೇಡು!! ಅದೇ ನನ್ನ ಕುಲದೇವರು.

ಬರಬರುತ್ತ ನವಾಬನು ಬಾವಿಯೊಳಗೆ ಹೋಗಹತ್ತಿದನು. ಮುಂದೆ ಹೋದ ಹಾಗೆ ಅಂಧಕಾರವು ಹೆಚ್ಚಾಗಿ ಏನೂ ಕಾಣಿಸದ ಹಾಗಾಯಿತು. ನವಾಬನ ಸ್ವರವು ಸಹ ಮೇಲಕ್ಕೆ ಸ್ಪಷ್ಟವಾಗಿ ಕೇಳಿಸದ ಹಾಗಾಯಿತು. ಮಂದಾಕಿನಿಯು ಬೆಳತನಕ ಆ ಬಾವಿಯ ದಂಡೆಯಮೇಲೆ ಕುಳಿತು, ಅಂದಿನ ರಾತ್ರಿಯನ್ನು ಕಳೆದಳು.

ಕಿರಣಬಾಲೆಯು ಭಾಗೀರಥಿ ನದಿಯ ದಂಡೆಯ ಮೇಲೆ ಒಂದು ನಿರ್ಜನ ಪ್ರದೇಶದಲ್ಲಿ ಗುಡಿಸಲವನ್ನು ಹಾಕಿಕೊಂಡು ಕಿಶೋರಿಮೋಹನ ನೊಡನೆ ಇರಹತ್ತಿದಳು. ಅವಳು ಪ್ರತಿದಿನ ಸಮೀಪದ ಹಳ್ಳಿಗಳಿಗೆ ಹೋಗಿ ಭಿಕ್ಷೆ ಮಾಡಿಕೊಂಡು ಬಂದು ಪತಿಯೊಡನೆ ಕಾಲಹರಣ ಮಾಡುತ್ತಿದ್ದಳು.

ಒಂದು ದಿವಸ ಮುಂಜಾನೆ ಕಿಶೋರಿಮೋಹನನು ಹೆಂಡತಿಗೆ:— "ಕಿರಣ, ನಿನಗೆ ನಿನ್ನ ತಂದೆಯ ಮನೆಗೆ ಹೋಗುವ ಇಚ್ಛೆಯು ಹುಟ್ಟುವ ದಿಲ್ಲವೇ ?" ಎಂದನು.

ಕಿರಣ—"ಇಲ್ಲ."

ಕಿಶೋರಿ—ಅಲ್ಲಿದ್ದರೆ ನಿನಗೆ ಭಿಕ್ಷೆ ಬೇಡುವ ಪ್ರಸಂಗವು ಬರುವದಿಲ್ಲ.

ಕಿರಣ—ಅಲ್ಲಿದ್ದು ಶ್ರೀಮಂತಿಕೆಯನ್ನು ಅನುಭವಿಸುವದಕ್ಕಿಂತ ಇಲ್ಲಿಯ ಭಿಕ್ಷಾನ್ನವೇ ಶ್ರೇಷ್ಠವು.

ಕಿಶೋರಿ—ಅಲ್ಲಿಗೆ ಹೋಗುವ ಮನಸ್ಸಿಲ್ಲದಿದ್ದರೆ ರಾಜಧಾನಿಗೆ ಹೋಗೋಣ ನಡೆ.

ಕಿರಣ—ಮತ್ತೆ ಅಲ್ಲಿಗೇಕೆ?

ಕಿಶೋರಿ—ನಶೆರಿತನು ಈಗ ಗೌಡದ ನವಾಬನಲ್ಲ; ಗಣೇಶನಾರಾಯಣನು ಅರಸನಾಗಿರುವನಂತೆ. ಹಿಂದುವಾದ ಅವನು ನಮಗೆ ಸಹಾಯ ಮಾಡಲಿಕ್ಕಿಲ್ಲವೇ?

ಕಿರಣ—ಬೇಡಿದವರಿಗೆ ಸಹಾಯ ಮಾಡಲಿ. ನಮಗೆ ಆತನ ಸಹಾಯದ ಆವಶ್ಯಕತೆಯಿಲ್ಲ.

ಕಿಶೋರಿ—ನೀನು ಭಿಕ್ಷೆ ಬೇಡುವದನ್ನು ನೋಡಿ ನನಗೆ ಬಹಳ ವ್ಯಸನವಾಗುತ್ತದೆ. ನನ್ನನ್ನು ಲಗ್ನ ಮಾಡಿಕೊಂಡದ್ದಕ್ಕೆ ಇದೇ ಸುಖವೇನು?

ಕಿರಣ—ಹಾಗೆನ್ನಬೇಡಿರಿ. ನಾನು ಈಗ ಅನುಭವಿಸುವ ಸುಖವು ದೇವತೆಗಳಿಗೂ ಕೂಡ ದುರ್ಲಭವು.

ಕಿಶೋರಿಮೋಹನನು ನಿರುತ್ತರನಾಗಿ ಸುಮ್ಮನಾದನು. ನಂತರ:— “ಕಿರಣ, ಒಂದು ಪದವನ್ನು ಅನ್ನು” ಎಂದನು. ಆಗ ಕಿರಣಬಾಲೆಯು:— “ನಾನು ನದಿಗೆ ಹೋಗಿ ಮುಖವನ್ನು ತೊಳೆದುಕೊಂಡು ಬರುವೆನೆ”ಂದು ನದಿಗೆ ಹೋದಳು. ಆಗ ನದಿಯ ಹತ್ತಿರ ಒಂದು ಸಣ್ಣ ನಾವು ಇತ್ತು. ಇಂದಿನ ವರೆಗೆ ಅಲ್ಲಿಗೆ ನದಿಯಲ್ಲಿ ನಾವು-ಹರಗೋಲುಗಳು ಒಮ್ಮೆ ಸಹ ಬಂದಿದ್ದಿಲ್ಲ. ಅದನ್ನು ನೋಡಿ ಕಿರಣಳು:—ಇಲ್ಲಿಗೆ ಯಾರು ಬಂದಿರ ಬಹುದು? ಎಂದು ಯೋಚಿಸುತ್ತ ನದಿಯಿಂದ ತಿರುಗಿ ಬಂದು ಪತಿಯ ಮುಂದೆ ಚೈತನ್ಯದಾಸರ ಒಂದು ಪದವನ್ನು ಅಂದಳು. ಅಷ್ಟರಲ್ಲಿ ನಾಲ್ಕು ತಾಸು ಹೊತ್ತಾಗಲು, ಅವಳು ಪತಿಗೆ:–“ಭಿಕ್ಷೆಗೆ ಹೋಗಿ ಬರುವನೆ”ಂದಳು. ಆಗ ಕಿಶೋರಿಮೋಹನನು:—ಪ್ರಿಯೇ, ಇಂದು ಯಾಕೋ ನನ್ನ ಮನಸ್ಸಿಗೆ ಸೊಗಸಿಲ್ಲ. ಕಾರಣ ಭಿಕ್ಷೆಗೆ ಹೋಗಬೇಡವೆಂದನು. ಅದಕ್ಕೆ ಅವಳು: “ಮನೆಯಲ್ಲಿ ಏನೂ ಇಲ್ಲ. ಕಾರಣ ಇಂದು ಬೇಗನೆ ಬರುವೆನೆ”ಂದು ಹೇಳಿ ಹೊರಟಳು.

ಕಿಶೋರಿಮೋಹನನು ಭಾಗೀರಥಿಯ ಕಲಕಲ ನಾದವನ್ನೂ ಪಕ್ಷಿಗಳ ಕಿಲಿ-ಕಿಲಾಟವನ್ನೂ ಕೇಳುತ್ತ ಕುಳಿತನು. ಇಂದು ಅವನ ಮನಸ್ಸಿಗೆ ಸೊಗಸಿಲ್ಲ. ಹಿಂದಿನ ಸಂಗತಿಗಳು ಒಂದೊಂದೇ ನೆನಪಾಗಹತ್ತಿದವು. ಆಗ ಅವನ ಹತ್ತರ ಗಿಡದ ಮೇಲಿರುವ ಒಂದು ಪಕ್ಷಿಯು ಒಂದೇ ಸವನೆ ಒದರ ಹತ್ತಿತು. ಅದರ ಒದರುವಿಕೆಯ ಮೇಲಿಂದ ಅದು ಸಂಕಟದಲ್ಲಿದ್ದಂತೆ ಭಾಸವಾಗುತ್ತಿತ್ತು. ಆಗ ಕಿಶೋರಿಮೋಹನನು ಗಟ್ಟಿಯಾಗಿ:–ದೇವರ ಈ ಸೃಷ್ಟಿಯಲ್ಲಿ ಈ ಪಕ್ಷಿಗಳಿಗೂ ಕೂಡ ಸುಖವಿರಬಾರದೇ? ಎಂದನು.

ಅಷ್ಟರಲ್ಲಿ ಕಿಶೋರಿಮೋಹನನ ಹತ್ತಿರದಿಂದಲೇ ಯಾರೋ ಒಬ್ಬರು:-

“ಇಷ್ಟು ಸುಖದಲ್ಲಿದ್ದರೂ ಕೂಡ ನಿನ್ನ ಮನಸ್ಸಿಗೆ ಸಮಾಧಾನ ವಿಲ್ಲವೆ?” ಎಂಬ ಸ್ವರವು ಕೇಳಬಂತು. ಕಿಶೋರಿಮೋಹನನು ಆಶ್ಚರ್ಯ ದಿಂದ ಆ ಸ್ವರವು ಕೇಳಬಂದ ದಿಕ್ಕಿಗೆ ಮೋರೆಯನ್ನು ತಿರುವಿ:–“ಇದೇನು, ಇದು ಯಾರ ಕಂಠಸ್ವರವು? ಮನೋಹರನ ಸ್ವರವು. ಮನೋಹರ, ನೀನು ಯಾವಾಗ ಬಂದೆ?” ಎಂದನು.

ಆಗ ಮನೋಹರನು ಮುಂದೆ ಬಂದು:—"ನಾನು ಯಾರೆಂಬುದನ್ನು ಹಿಂದಿನಿಂದ ಹೇಳುವೆನು." ಈಗ ನಿನಗಿರುವ ದುಃಖವೇನು? ಎಂದನು.

ಕಿಶೋರಿ—ಮನೂ, ನನ್ನ ದುಃಖವನ್ನೆಷ್ಟಂತ ಹೇಳಲಿ? ನಾನು ನನ್ನ ಸರ್ವಸ್ವವನ್ನೂ ಕಳಕೊಂಡು ಕಂಗಾಲನಾಗಿರುವೆನು. ನಿನಗೆ ಎಲ್ಲವೂ ಗೊತ್ತಿರುವದಲ್ಲವೆ?

ಮನೋಹರ—ನೀನು ಸರ್ವಸ್ವವನ್ನು ಕಳೆದುಕೊಂಡರೂ ಅದಕ್ಕಿಂತ ಹೆಚ್ಚು ಬೆಲೆಯುಳ್ಳ ರತ್ನವನ್ನು ಹೊಂದಿರುವಿ.

ಕಿಶೋರಿ—ನೀನು ನನ್ನ ಹೆಂಡತಿಯಾದ ಕಿರಣಬಾಲೆಯ ವಿಷಯವಾಗಿ ಹೇಳುತ್ತಿರುವಿಯಲ್ಲವೇ? ಮನೂ, ಅವಳು ರತ್ನವೇ ಸರಿ; ಆದರೆ..

ಮನೋ—ಮೂರ್ಖಾ, ಮತ್ತೆ ಆದರೆ ಎನ್ನುವಿಯಲ್ಲ? ಯಾವನಿಗೆ ಕಿರಣಬಾಲೆಯಂಥ ಪತ್ನಿಯು ಸಿಗುವಳೋ, ಅವನಿಗೆ ಸರ್ವ ಸುಖಗಳೂ ದೊರೆತಹಾಗೆಯೇ. ಇರಲಿ. ಈಗ ನಾನು ನಿನ್ನ ಆ ಸುಖವನ್ನು ಮಣ್ಣು ಪಾಲು ಮಾಡಲು ಬಂದಿರುವೆನು.

ಕಿಶೋರಿ—ಏನು, ನಿನ್ನ ಕಡೆಯಿಂದ ನನ್ನ ಅಹಿತವೇ? ಮನೋಹರ, ಶಕ್ಯವಿಲ್ಲ.

ಮನೋ—ನಾನು ಮನೋಹರನಲ್ಲ; ಮಂದಾಕಿನಿಯು. ಬಹು ದಿವಸಗಳ ಪೂರ್ವದಲ್ಲಿ ಒಂದು ದಿವಸ ಸೂರ್ಯಾಸ್ತ ಸಮಯದಲ್ಲಿ ಕಾಲಿಂದೀ ನದಿಯ ದಂಡೆಯ ಮೇಲೆ ನಶಿರಿತಶಹನೂ ನೀನೂ ಕೂಡಿ ಒಬ್ಬ ಬ್ರಾಹ್ಮಣ ವೃದ್ಧನನ್ನು ನದಿಯಲ್ಲಿ ನೂಕಿ ಒಬ್ಬ ಚಿಕ್ಕ ಬಾಲಿಕೆಯ ಪಾತಿವ್ರತ್ಯಭಂಗ ಮಾಡಲು ಪ್ರಯತ್ನಿಸಿದುದು ನಿನ್ನ ಸ್ಮರಣೆಯಲ್ಲಿರುವದೇ? ಅವಳೇ ನಾನು. ನನ್ನ ಹೆಸರು ಮಂದಾಕಿನಿಯು. ಮುಂದೆ ನನ್ನ ಪತಿಯು ನನ್ನನ್ನು ನಿರಾಕರಿಸಲು, ನಾನು ಮನೋಹರನೆಂದು ಹೆಸರಿಟ್ಟುಕೊಂಡು ನಿನ್ನಂಥ ನಾಯಿಯ ಮನೆಯಲ್ಲಿ ಚಾಕರಿಗೆ ನಿಂತೆನು. ತಿಳಿಯಿತೇ? ಪಾಪೀ!! ನೀನು ನನ್ನ ಈ ಜೀವನದ ಸುಖವನ್ನೇ ಮಣ್ಣುಪಾಲು ಮಾಡಿದ ಕಾರಣ, ನಿನ್ನ ಪ್ರತಿಯೊಂದು ಕಾರ್ಯಗಳನ್ನು ಕೆಡಿಸಿ ನಿನ್ನ ಜೀವನವನ್ನು ಸಂಕಟ ಸಮುದ್ರದಲ್ಲಿ ನೂಕಲು ಸಿದ್ಧಳಾದೆನು. ಈಗ ನಿನ್ನ ಈ ದುರವಸ್ಥೆಗೆ ನಾನೇ ಕಾರಣಳು. ಇನ್ನೂ ಬಹು ವಿಧವಾಗಿ ನಿನ್ನನ್ನು ಪೀಡಿಸಬೇಕಾಗಿದೆ. ನೀನು ಈಗ

ಅನುಭವಿಸುವ ಸ್ವರ್ಗಸುಖವನ್ನು ಮಣ್ಣುಪಾಲು ಮಾಡುವೆನು. ಏಳು, ಸಿದ್ಧನಾಗು, ಎಂದನು.

ಕಿಶೋರಿ—ಮನೋಹರ, ಅಲ್ಲ ಮಂದಾಕಿನೀ, ನನ್ನನ್ನು ಕ್ಷಮಿಸು; ನಾನು ಪಾಪಿಯು.

ಮನೋ—ಕ್ಷಮೆಯೇ? ಕ್ಷಮೆಯೆಂದರೇನೆಂಬ ಕಲ್ಪನೆಯು ಕೂಡ ನನಗಿಲ್ಲ. ನೋಡು-ನೋಡು, ಇದೇ ನನ್ನ ಮೋಕ್ಷವು; ಸ್ವರ್ಗಸುಖವು; ಎಂದು ಅಂದು, ಸಂಗಡ ಬಂದ ಅಂಬಿಗರಿಗೆ ಸಂಜ್ಞೆಯನ್ನು ಮಾಡಲು, ಅವರು ಅವನನ್ನು ಎತ್ತಿಕೊಂಡು ನದಿಯ ಹತ್ತರವಿದ್ದ ಹರಗೋಲಿನಲ್ಲಿ ಇಳಿಸಿದರು.

ನಾವಿಕರು ಸ್ವಲ್ಪ ಮುಂದೆ ಹೋಗಿ ಹಿಂದಿರುಗಿ ನೋಡಲು ಒಬ್ಬ ಸ್ತ್ರೀಯಳು ನಾವೆಯ ಕಡೆಗೆ ಲಕ್ಷ್ಯವಿಟ್ಟು ನದಿಯ ದಂಡೆಯಗುಂಟ ಬರುತ್ತಿದ್ದಳು. ಅವಳು—"ನಾವಿಕರೇ, ನಿಮ್ಮ ಕಾಲಿಗೆ ಬೀಳುತ್ತೇನೆ, ನನ್ನ ಪತಿಯನ್ನು ಬಿಟ್ಟುಬಿಡಿರಿ. ಅವನು ಕುಂಟನು, ಕುರುಡನು; ನಿಮಗೆ ಅವನಿಂದ ಪ್ರಯೋಜನವೇನು? ದಯಮಾಡಿ ಅವನನ್ನು ಬಿಡಿರಿ, ಎಂದು ದೀನಸ್ವರದಿಂದ ಬೇಡಿಕೊಳ್ಳುತ್ತಿದ್ದಳು.

ಕಿಶೋರಿಮೋಹನನು ಆ ನಾವೆಯಲ್ಲಿ ಕುಳಿತುಕೊಂಡು ಗಟ್ಟಿಯಾಗಿ—"ಕಿರಣ, ನಾನು ಯಾವ ಕಾಲಸರ್ಪವನ್ನು ಮನೆಯಲ್ಲಿ ಅನ್ನ ಹಾಕಿ ಬೆಳೆಸಿದ್ದೆನೋ, ಆ ರಾಕ್ಷಸಿಯಾದ ಮನೋಹರ, ಅಲ್ಲ ಮಂದಾಕಿನಿಯು ನನ್ನನ್ನು ಎಲ್ಲಿಗೋ ಒಯ್ಯುವಳು, ಎಂದು ಚೀರಿದನು.

ಆಗ ಕಿರಣಬಾಲೆಯು ಆಶ್ಚರ್ಯದಿಂದ—ಏನು, ಮನೋಹರನೇ? ಮನೋಹರನು ನನ್ನ ಜೀವದ ಗೆಳತಿಯು. ನನ್ನ ತಾಯಿ, ಅಕ್ಕ, ತಂಗಿ ಸರ್ವ ಬಳಗವೂ ಅವಳೇ. ಈಗ ನಾನು ದಿನಾಲು ಊಟ ಮಾಡುವಾಗ್ಗೆ ಅವಳ ಹೆಸರಿನಿಂದ ಅನ್ನವನ್ನು ಸ್ವೀಕರಿಸುವೆನು, ಎಂದು ನಾವಿನ ತೀರ ಸಮೀಪಕ್ಕೆ ಬಂದಳು.

ನಿಜವಾಗಿಯೂ ನಾವಿನಲ್ಲಿ ತನ್ನ ಪತಿಯ ಹತ್ತರ ಮನೋಹರನು ತನ್ನ ನಿಜವಾದ ಸ್ತ್ರೀರೂಪದಿಂದ ನಿಂತಿದ್ದನು. ಆಗ ಕಿರಣಳಿಗೆ ಏನೂ ತಿಳಿಯಲಿಲ್ಲ. ಅವಳು ಒಮ್ಮೆ ಗಟ್ಟಿಯಾಗಿ ಕಣ್ಣು ಮುಚ್ಚಿ ನಂತರ ಕಣ್ಣು

ತೆರೆದು ಅವನ ಕಡೆಗೆ ನೋಡಿ—"ಮಂದಾಕಿನಿ! ಅಕ್ಕಾ!! ನೀನು ಇದು ವರೆಗೆ ಎಷ್ಟೋ ವಿಪತ್ತುಗಳಿಂದ ನನ್ನನ್ನು ರಕ್ಷಿಸಿರುವೆ. ತಾಯಿ, ಈಗ ಮತ್ತೆ ಯಾವ ವಿಪತ್ತಿನಿಂದ ನನ್ನನ್ನು ಪಾರು ಮಾಡಲಿಕ್ಕೆ ಬಂದಿರುತ್ತೀ?" ಎಂದಳು.

ಮಂದಾಕಿನಿಯು ಯಾವ ಉತ್ತರವನ್ನೂ ಕೊಡಲಿಲ್ಲ. ಕೆಳಗೆ ಮುಖ ವನ್ನು ಮಾಡಿ ನದಿಯನ್ನು ನಿರೀಕ್ಷಿಸಿದಳು. ಅಲ್ಲಿ ಅವಳ ತಂದೆಯ ಮೃತ ಶರೀರವು ಅವಳಿಗೆ ಕಾಣಿಸಲಿಲ್ಲ. ಆಗ ಆಕಾಶದ ಕಡೆಗೆ ಮುಖವೆತ್ತಿ ನೋಡಿದಳು. ಅಲ್ಲಿಯೂ ತಂದೆಯ ಪ್ರತಿಬಿಂಬವು ಕಾಣಿಸಲಿಲ್ಲ. ಕೂಡಲೆ ಅವಳು ಎದುರಿಗಿದ್ದ ಕಿರಣಳ ಕಡೆಗೆ ನೋಡಿದಳು. ಮಂದಾಕಿನಿಯ ಎರಡೂ ಕಣ್ಣೊಳಗಿಂದ ನೀರು ತಾನೇ ತಾನಾಗಿ ಹೋಗ ಹತ್ತಿದವು.

ಎಲ್ಲವೂ ಸ್ತಬ್ಧವು; ನಾಲ್ಕೂ ದಿಕ್ಕಿನಲ್ಲಿ ರೋದನವು. ಆಗ ನದಿಯೂ, ಗಿಡ-ಬಳ್ಳಿಗಳೂ, ಪೃಥ್ವೀ, ಆಕಾಶ, ಸೂರ್ಯ-ಚಂದ್ರರು ಸಹ ಅಳುವಂತೆ ಭಾಸವಾಯಿತು. ಮಂದಾಕಿನಿಯು ಯಾವ ದಿಕ್ಕಿಗೆ ಮುಖ ತಿರುಗಿಸಿದರೂ ಅಲ್ಲಿ ರೋದನವೇ ಅವಳಿಗೆ ಕಾಣಿಸಿತು. ಆಗ ಅವಳು—"ಹಾಯ್! ಸೇಡು! ಸೇಡು!!" ಆದರೆ ಕಿರಣಬಾಲೆಯ ಪಾತಿವ್ರತ್ಯದ ಮುಂದೆ ಆ ತಾಮಸೀ ಭಾವನೆಯು ನಾಶವಾಯಿತು. ಬಳಿಕ ಅವಳು ಕ್ರುದ್ಧ ಸ್ವರದಿಂದ—ತಂಗೀ, ಕಿರಣ, ನಿನ್ನ ಪಾತಿವ್ರತ್ಯದ ಮುಂದೆ ನನ್ನ ಸೇಡಿನ ಭಾವನೆಯು ನಿರ್ಮೂಲ ವಾಯಿತು. ನೀನು ಸ್ತ್ರೀಯರಲ್ಲಿ ರತ್ನವು. ದೇವರು ನಿನಗೆ ಅಖಂಡ ಕಲ್ಯಾಣ ಮಾಡಲಿ. ಕಿಶೋರಿಮೋಹನ, ನನಗೆ ಪರಮೇಶ್ವರನು ಸ್ವರ್ಗ ಸುಖವನ್ನು ಕೊಟ್ಟಿದ್ದರೂ ನಾನು ಸೇಡು ತೀರಿಸಿಕೊಳ್ಳದೆ ಬಿಡುತ್ತಿದ್ದಿಲ್ಲ; ಆದರೆ—ಆದರೆ ಸ್ತ್ರೀಯರ ಪಾತಿವ್ರತ್ಯದ ಮಹಿಮೆಯನ್ನು ಅವರೇ ಬಲ್ಲರು. ನಿನ್ನನ್ನು ಕ್ಷಮಿಸಿರುವೆನು, ಎಂದು ನಾವೆಯೊಳಗಿಂದ ನದಿಯಲ್ಲಿ ಹಾರಿ ಕೊಂಡಳು. ಆಗ ನಾವಿಕರು ನಾವನ್ನು ದಂಡೆಗೆ ತಂದರು.

ಕಿಶೋರಿಮೋಹನ-ಕಿರಣಬಾಲೆಯರು ಗುಡಿಸಲವನ್ನು ಹಾಕಿಕೊಂಡು ಬಹು ದಿವಸ ಅಲ್ಲಿಯೇ ಇದ್ದರು. ಇಬ್ಬರೂ ಹಗಲುರಾತ್ರಿ ನದಿಯ ದಂಡೆಯ ಮೇಲೆ ಕುಳಿತು, ಮಂದಾಕಿನಿಯ ಮಾರ್ಗ ನಿರೀಕ್ಷಿಸುತ್ತಿದ್ದರು.

\+ \+ \+ \+ \+ \+ \+

ನಶೆರಿತನು ಮುಂದೆ ಬಂಗಾಲದ ನವಾಬನಾದನು. ಆತನಿಗೂ ಆತನ ಮಲತಮ್ಮನಾದ ಅಜಿಮನಿಗೂ ಆ ಪಟ್ಟಣದ ಸಲುವಾಗಿ ರಣಸಂಗ್ರಾಮ ವಾಯಿತು. ಅದರಲ್ಲಿ ಬಂಗಾಲದೊಳಗಿನ ಯುವಸರೆಲ್ಲ ಧರ್ಮಾಭಿಮಾನದಿಂ ನಶೆರಿತನ ಪಕ್ಷವನ್ನೂ ಹಿಂದುಗಳು ಹಿಂದು-ಮುಸಲ್ಮಾನರನ್ನು ಸಮಭಾ ದಿಂದ ನೋಡುತ್ತಿದ್ದ ಅಜೀಮನ ಪಕ್ಷವನ್ನೂ ವಹಿಸಿದ್ದರು. ಹಿಂದುಗ ಮುಂದಾಳುವು ಗಣೇಶನಾರಾಯಣನೇ ಇದ್ದನೆಂದು ಬೇರೆ ಹೇಳಲಿಕ್ಕೆ ಬೇ

ಯುದ್ಧದಲ್ಲಿ ದೈವಗತಿಯ ಮೂಲಕ ನಶೆರಿತನೂ ತೀರಿಕೊಂಡನು ಅಜೀಮನೂ ತೀರಿಕೊಂಡನು. ಅದರಿಂದ ಆ ಪಟ್ಟಕ್ಕೆ ಪುರುಷ ಬಾಧ್ಯಸ್ಥರೇ ಉಳಿಯಲಿಲ್ಲ. ಅಜಿಮನಿಗೆ ಒಬ್ಬಳೇ ಒಬ್ಬ ಮಗಳಿದ್ದಳು. ನಶೆರಿತನಿಗೆ ಸಂತಾನವೇ ಆಗಿರಲಿಲ್ಲ. ಅಜಿಮನ ಆ ಮಗಳ ಗರ್ಭದಲ್ಲಿ ಹುಟ್ಟಿ ಬರುವ ಶಿಶುವೇ ಬಂಗಾಲದ ನವಾಬನಾಗಬೇಕಾಯಿತು.

ಹೀಗೆ ಆ ಸಿಂಹಾಸನವು ಬರಿದಾಗಿದ್ದರೂ ಗಣೇಶನಾರಾಯಣನು ಅದನ್ನು ಆಕ್ರಮಿಸಲಿಲ್ಲ; ಆರೋಹಿಸಲಿಲ್ಲ. ತಾನು ಭಾವೀ ನವಾಬನ ಪ್ರತಿನಿಧಿಯಂತೆ ರಾಜ್ಯಕಾರಭಾರ ನಡಿಸಹತ್ತಿದನು. ಇದಲ್ಲವೆ ಹಿಂದು ಗಳಲ್ಲಿಯ ಶ್ರೇಷ್ಠತ್ವವು ?

## ಸಂಪೂರ್ಣಂ

# ನಮ್ಮ ಕೆಲವು ಉತ್ತಮ ಪುಸ್ತಕಗಳು.

**ಐತಿಹಾಸಿಕ**

ಅಲ್ಲಾಹೊ ಅಕಬರ ೧೦ ಆಣೆ. ಅಡವುಟ್ಟ ಸಿಪಾಯಿ ೬ ಆಣೆ. ಅಮಾತ್ಯ ರಾಕ್ಷಸ ೬ ಆ. ಆತ್ಮಬಲಿ ೧ ರೂ. ಉಗ್ರಸಂಕಲ್ಪ ೧೪ ಆ. ಉತ್ತಮ ನಾಯಕ ೧೨ ಆ. ಕರುಣಕ್ಕಾ ೨ ರೂ. ಗಜಪತಿ ಸಾಮ್ರಾಟಿಗೆಹರಣ ೧-೪-೦ ಚಾಲುಕ್ಯರ ಅಭ್ಯುದಯ ೧ ರೂ. ಚೋದ್ಯಪುರದ ಜೋಜಿಗರಾಯ ೨ ರೂ. ಜಕಣಾಚಾರ್ಯ ೧೪ ಆ. ತಾಯಿನಾಡು ೧ ರೂ. ದೈವ ಸಂಕಲ್ಪ ೧೪ ಆ. ದಳವಾಯಿ ಸಾತನಾಮಿ ೪ ಆ. ನರವೀರ ಕಾಶೀಮ ೧-೪-೦. ನೇತಾಜಿ ೧೨ ಆ. ಪತಿತೋದ್ಧರಣ ೪ ಆ. ಪ್ರಾಣದಾನ ೩ ಆ. ಪರಮೇಶ್ವರ ೬ ಆ. ಪರಿಣಾಮ ೧-೪-೦. ಪಾಣಿಗ್ರಹಣ ೪ ಆ. ಫಿರಂಗಿಗಳ ಉತ್ಪಾತ ೧ ರೂ. ಬಲಿದಾನ ೧-೪-೦. ಮಾತೃಭೂಮಿಗಾಗಿ ೩ ಆ. ರಾಣೀ ಅರುಣಕುಮಾರಿ ೧ ರೂ ವಡಗಾಂವದ ವಿಜಯ ೧-೪-೦. ರಕ್ತಸಿಂಚನ ೨ ಆ. ವಿಮಲಾ ೧೦ ಆಣೆ. ವೀರಕಾಂತಾ ೧೦ ಆ. ವೀರಕುಮಾರಿ ಕನಕಲತೆ ೩ ಆ. ವೀರರಾಜ ವಿಜಯ ೧೨ ಆ. ಶಕ್ತಿಮಯಿ ೧ ರೂ. ಶೌರ್ಯಸಂಜೀವನ ೧೪ ಆ ಸಿರಾಜಉದ್ದೌಲ ೧-೮-೦. ಸ್ವಾಧೀನ ಜೀವನ ೨-೮-೦. ಸೂರ್ಯಾಸ್ತ ೧೨ ಆ. ಸೂರ್ಯಗ್ರಹಣ ೧೨ ಆ ಹಂಸಾ ೧-೪-೦. ಹಿಂದೂ-ಮುಸಲ್ಮಾನರ ಐಕ್ಯ ೩ ಆಣೆ.

(ಈ ಕೆಳಗಿನ ಪುಸ್ತಕಗಳು ಅಚ್ಚಿನಲ್ಲಿವೆ.)

೧. ಅಮಾತ್ಯನಂದಿನಿ, ೨. ಊರ್ಮಿಳೆ, ೩. ಕಂಕಣಚೋರ, ೪. ಗೆಲುವಿನಕತ್ತಿ ೫. ಚದುರೆ, ೬. ತುಳಸೀದಾಸ, ೭. ಪ್ರಾರಬ್ಧ ಪ್ರಹಾರ, ೮. ಪರಾವರ್ತನ ೯. ಭಯಂಕರ ಶೇಷು, ೧೦. ಭಾಗ್ಯೋದಯ, ೧೧. ಸತ್ಯಮೇವ ಜಯತೆ ೧೨. ಸ್ವರಾಜ್ಯ ಸೋಪಾನ.

**ಭಿ. ಪ. ಕಾಳೆ,**

ಶ್ರೀ ಶೇಷಾಚಲ ಗ್ರಂಥಮಾಲೆ,

೩೦೦ ಮಂಗಳಪೇಟ, ಧಾರವಾಡ

---

ಮುದ್ರಕರು:—

**ಶೇ. ಗೋ. ಕುಲಕರ್ಣಿ**